ಇಡೀ ಜಗತ್ತಿನ ಒಂದು ಭಾಷೆ ಒಂದು ಸಂಸ್ಕೃತಿಯ ಅಗತ್ಯತೆಯನ್ನು ಪ್ರತಿಪಾದಿಸಿರುವ ಗ್ಲೋಬಲೀಕರಣವು, ಸಾವಿರಾರು ವರ್ಷಗಳ ಸಮೃದ್ಧ ಸಾಹಿತ್ಯ ಚರಿತ್ರೆಯನ್ನು ಹೊಂದಿರುವ ಜನ ಭಾಷೆಗಳ ಕತ್ತು ಹಿಸುಕುವ ಹುನ್ನಾರ ನಡೆಸಿದೆ ಎಂಬ ಭಯ ಜನಭಾಷೆಗಳಿಗೆ ಕಾಡಲಾರಂಬಿಸಿದೆ. ಇದಕ್ಕೆ ಪುಷ್ಟಿ ಕೊಡುವಂತೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಖಾನೆಗಳು ಇಂಗ್ಲಿಷ್ ಭಾಷೆ ಬಲ್ಲವರನ್ನು ಮಾತ್ರ ತಮ್ಮ ಅಂಗಳಕ್ಕೆ ಬಿಟ್ಟುಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿದವು. ಜನ ಭಾಷೆಗಳಲ್ಲಿ ಶಿಕ್ಷಣ ಪಡೆದವರನ್ನು ಅಸ್ಪೃಶ್ಯರಂತೆ ಕಂಡು ತಮ್ಮ ವ್ಯಾಪ್ತಿಯಿಂದ ಹೊರಗಿಡುವ ಸಂಚನ್ನು ಮಾಡತೊಡಗಿದವು. ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವುದು ದೊಡ್ಡ ಅಪರಾಧ ಎಂದು ಬಿಂಬಿಸಲಾಯಿತು. ಶಿ ಕ್ಷಣ, ಆರೋಗ್ಯ, ಆಡಳಿತ, ನ್ಯಾಯಾಂಗ, ತಾಂತ್ರಿಕ, ಸಮೂಹ ಮಾಧ್ಯಮ ಕ್ಷೇತ್ರಗಳಲ್ಲೆಲ್ಲ ಆಂಗ್ಲ ಭಾಷೆಯ ಮೆರೆದಾಟ ಅಧಿಕಗೊಂಡು ಜನಭಾಷೆಗಳು ಕೀಳೆಂಬ ಭಯವನ್ನು ಬಿತ್ತಲಾಯಿತು. ಶ್ರೀಮಂತ ರಾಷ್ಟ್ರಗಳು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ,ಸಾಂಸ್ಕೃತಿಕ, ಔನ್ಯತ್ಯವನ್ನು ಸಾಧಿಸಿದ ಬಳಿಕ ಜಾಗತೀಕರಣವನ್ನು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಹೇರಲು ಮುಂದಾದ ಸಂದರ್ಭದ ವೇಳೆಗೆ, ಬಹುತೇಕ ತೃತೀಯ ರಾಷ್ಟ್ರಗಳು ಈ ಎಲ್ಲಾ ರಂಗಗಳಲ್ಲೂ ಪೂರ್ಣ ಪ್ರಮಾಣದ ಪ್ರಗತಿ ಸಾಧಿಸಿರಲಿಲ್ಲ. ಅಷ್ಟೇ ಏಕೆ ಜಾಗತೀಕರಣದಿಂದ ತಮ್ಮ ರಾಷ್ಟ್ರಗಳಿಗೆ ಯಾವ ಪ್ರಯೋಜನಗಳಿವೆ, ಎಂಬುದರ ಪರಿವೆಯೇ ಇಲ್ಲದೆ ಜನಭಾಷೆಗಳ ಆಗರದಂತಿದ್ದ ಬಹುತೇಕ ರಾಷ್ಟ್ರಗಳು ಪ್ರಬಲ ಒತ್ತಡದ ನಡುವೆ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದವು. ಭಾರತದಂತಹ ರಾಷ್ಟ್ರಗಳಲ್ಲಿ ವಿವಿಧ ಭಾಷೆ, ಧರ್ಮ, ರಾಜಕಾರಣ, ಜೀವನ ವಿಧಾನ, ಸಾಂಸ್ಕೃತಿಕ, ವೈವಿಧ್ಯತೆ, ಆರ್ಥಿಕ ವಿನ್ಯಾಸಗಳಿದ್ದು ಅವು ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡೂ ಐಕ್ಯತೆಯನ್ನು ಸಾಧಿಸಿದ್ದವು. ಕನ್ನಡ ಭಾಷಾ ಕುಲವೂ ಇದೇ ಬಗೆಯ ಸಂರಚನೆಗಳನ್ನು ಒಳಗೊಳ್ಳುವ ಮೂಲಕ ಮೂಲ ಸಾಂಸ್ಕೃತಿಕ ಧಾರೆ ಹಾಗೂ ಪೂರಕ ಸಾಂಸ್ಕೃತಿಕ ಧಾರೆಗಳ ಸಂಗಮವಾಗಿ ತನ್ನ ಸಮಾಜೋಧಾರ್ಮಿಕ, ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ವರ್ತಿಸುತ್ತಿದೆ. ಈ ಬಗೆಯ ಬಹು ಸಾಂಸ್ಕೃತಿಕ ಪರಿಸರದ ಮೂಲ ಕಾಳಜಿಯು ಎಲ್ಲ ಧಾರೆಗಳ ಅಸ್ಮಿತೆಗೂ ಸಮಾನ ಅವಕಾಶವನ್ನು ಒದಗಿಸುವ ವಿಶಾಲತ್ವವನ್ನು ಅಂತರ್ಗತ ಮಾಡಿಕೊಂಡಿದ್ದಾಗಿದೆ. ಸಂಗಮವಾಗಿ ಗ್ಲೋಬಲೀಕರಣವು ಏಕ ಭಾಷೆ, ಏಕ ಸಂಸ್ಕೃತಿ, ಏಕ ಆರ್ಥಿಕತೆ, ವಿನ್ಯಾಸಗಳಿಗೆ ಇಂಬುಕೊಡುವ ಮೂಲಕ ವಿಭಿನ್ನ ಭಾಷಿಕ ಸಾಂಸ್ಕೃತಿಕ ಚಲನಶೀಲತೆಗೆ ಪೆಟ್ಟು ಕೊಡುವ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ.

ಪಾಶ್ಚಿಮಾತ್ಯ ಚಿಂತನೆ ಯಾವತ್ತೂ ಏಕಭಾಷೆಯ ಕಡೆ ತುಡಿಯತ್ತ ಬಂದಿದೆಯೆನ್ನುವುದೂ ಅಷ್ಟೆ ಗಮನಾರ್ಹ. ಅದು ವರ್ಣ, ಧರ್ಮ, ಮತ್ತು ರಾಷ್ಟ್ರೀಯ ಪರಿಕಲ್ಪನೆಗಳ ಜತೆ ಮಿಳಿತವಾದಾಗ ಭಯಂಕರವಾದ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ಏಕ ಭಾಷೆ, ಏಕ ವರ್ಣ, ಏಕ ಧರ್ಮ ,ಏಕ ರಾಷ್ಟ್ರ, ಎನ್ನುವ ಪರಿಪೂರ್ಣ ಏಕತೆ ದೇವರಿಗೆ ಸವಾಲೆಸೆದಂತೆ ಇದು ಎಷ್ಟು ಘೋರ ಎನ್ನುವುದನ್ನು ನಾಝಿಸಂ ನಮಗೆ ತೋರಿಸಿಕೊಟ್ಟಿದೆ. ಭಾಷಾ ವೈವಿಧ್ಯ ರಾಷ್ಟ್ರದ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂಬ ಕಲ್ಪನೆಯೊಂದು ಪಾಶ್ಚಾತ್ಯರಲ್ಲಿ ತೀರಾ ಈಚಿನವರೆಗೆ ಇತ್ತು. ಮಾತ್ರವಲ್ಲ ಮಗುವೊಂದು ಚಿಕ್ಕಂದಿನಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತರೆ ಅದರ ಬೌದ್ಧಿಕ ವಿಕಸನ ಕುಂಠಿತಗೊಳ್ಳುತ್ತದೆ. ಎಂಬ ಮನೋವಿಜ್ಞಾನ ಕೂಡಾ ಈ ಏಕ ಭಾಷಾ ಸೂತ್ರದ ಹಿಂದೆ ಸ್ವಲ್ಪಕಾಲ ಕೆಲಸ ಮಾಡಿದ್ದಿದೆ. ಈ ಇವೆರಡೂ ಕಲ್ಪನೆಗಳೂ ಆಧಾರರಹಿತ ಎನ್ನುವುದು ಈಗಿನ ತಿಳಿವಳಿಕೆ. ಇಂಥ ಸಂದರ್ಭದಲ್ಲಿ ಜನಭಾಷೆಗಳು ಹೇಳ ಹೆಸರಿಲ್ಲದೆ ಕಣ್ಮರೆ ಆಗುವುದು ಖಂಡಿತ. ಕೇವಲ ಮೌಖಿಕ ಪರಂಪರೆಯಲ್ಲಿರುವ ಮಾತ್ರ ಅಸ್ತಿತ್ವದಲ್ಲಿರುವ ಭಾಷೆಗಳು ಯಜಮಾನ ಭಾಷೆಗಳ ಎದುರಿನಲ್ಲಿ ತಲೆಯೆತ್ತಿ ನಿಲ್ಲಲಾಗದೆ ವಂಶನಾಶಕ್ಕೆ ಸಲ್ಲುವುದನ್ನು ಇಲ್ಲಿ ಮನಗಾಣಬಹುದು.

ಯಾವುದೇ ಸಾಮ್ರಾಜ್ಯ ಚಕ್ರಾಧಿಪತ್ಯ ಕಟ್ಟಬೇಕಾದರೆ ಏಕರೂಪದ ಧರ್ಮ ಇರಬೇಕು. ಏಕ ರೂಪದ ಆಚರಣಾ ವ್ಯವಸ್ಥೆ ಇರಬೇಕು. ಈ ಕಾರಣದಿಂದಲೇ ಎಲ್ಲ ಸಾಮ್ರಾಜ್ಯಗಳು ಅವು ಯಾವುದೇ ಸಿದ್ಧಾಂತಕ್ಕೆ ಸೇರಿದವುಗಳಾಗಲಿ ಬಲಾತ್ಕಾರದಿಂದಲಾದರೂ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಏಕರೂಪತೆ ತರಲು ಹವಣಿಸುತ್ತವೆ. ಭಿನ್ನ ರೂಪಗಳ ನಿರಾಕರಣೆ ಸಾಮಾಜಿಕ ಸ್ಥಿರತೆಯ ರೂಪತಾಳುತ್ತವೆ. ಎಂದು "ಡಾ.ಡಿ.ಆರ್.ನಾಗರಾಜ್" ರವರು ಜಾಗತೀಕರಣದಿಂದ ಜನಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ಕುರಿತು ತಮ್ಮ ಆತಂಕವನ್ನು ಮಂಡಿಸುತ್ತಾರೆ. ವರ್ತಮಾನದ ಜಾಗತಿಕ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗ್ರಹಿಸಿದರೆ ಇಂದು ನಾವು ಎದುರಿಸುತ್ತಿರುವ ಗ್ಲೋಬಲೀಕರಣವು ಏಕಭಾಷಿಕ ಸಾಮ್ರಾಜ್ಯ ಕಟ್ಟಲು ಹೊಂಚು ಹಾಕುತ್ತಿರುವ ಎಲ್ಲ ಲಕ್ಷಣಗಳು ಗೋಚರಿಸುತ್ತವೆ. ಚಕ್ರಾಧಿಪತ್ಯದ ವಿಕಾರ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ರೂಪವಾದ ಸರ್ವಾಧಿಕಾರವು ತನ್ನ ನಿರ್ದೇಶನಗಳನ್ನು ನೀಡುವಂತೆ, ಜಾಗತೀಕರಣವು ಇಡೀ ಜಗತ್ತಿಗೆ ತನ್ನ ಪರಮಾಧಿಕಾರವನ್ನು ಪ್ರಕಟಮಾಡುತ್ತಿದೆ. ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಪರಮ ಅಧಿಕಾರ ಮತ್ತು ಪರಮ ವಿಧೇಯಕಗಳೆಂಬ ಎರಡು ನೆಲೆಗಳು ಅಸ್ತಿತ್ವದಲ್ಲಿರುವದರಿಂದ ಸಂವೇದನೆ ಮತ್ತು ಸೃಜನಶೀಲ ಪ್ರಕ್ರಿಯೆಗೆ ಸವಾಲಾಗಿ ಪರಿಣಮಿಸುತ್ತದೆ. ಜಾಗತೀಕರಣವನ್ನು ನಾವು ಒಪ್ಪಿಕೊಂಡ ಬಳಿಕ ಪರಮ ವಿಧೇಯರಾಗಿ ನಮಗೆ ತಪ್ಪು ಎಂದು ಗೊತ್ತಿರುವುದನ್ನೂ ಒಪ್ಪಿಕೊಳ್ಳುತ್ತಿರುವ ಪರಿಣಾಮವಾಗಿ ಭಾಷಿಕ ಸವಾಲುಗಳನ್ನು ಎದುರಿಸುವ ಅನಿವಾರ್ಯತೆಗೆ ಒಳಗಾಗಿದ್ದೇವೆ. ಏಕ ಭಾಷೆಯನ್ನು ಒಪ್ಪಿಕೊಳ್ಳುವ ಧಾವಂತಕ್ಕೆ ಬಿದ್ದವರಂತೆ ಜಗತ್ತಿನ ಮೂರನೆಯ ರಾಷ್ಟ್ರಗಳು ತೋರುತ್ತಿವೆ. ಆದರೆ ಇದು ಎಂಥ ಘೋರ ಪರಿಣಾಮವನ್ನುಂಟುಮಾಡಿ ಜನಭಾಷೆಗಳನ್ನು ಜೀವಂತವಾಗಿರುವಾಗಲೇ ಅದೃಶ್ಯ ಮಾಡುತ್ತದೆ ಎಂಬುದನ್ನು ನೆನೆದರೆ ದಿಗಿಲಾಗುತ್ತದೆ. ಕೇವಲ ಏಕ ಭಾಷೆ, ಏಕಮತ, ಏಕಪಕ್ಷ, ಎಂಬಂಥ ಪರಿಪೂರ್ಣ ಐಕ್ಯತೆಯ ಜಗತ್ತನ್ನು ಕಲ್ಪಿಸಿ ನೋಡಿ ಅದು ಕಾಗದದಲ್ಲಿ ಕೊರೆದಂಥ ಚಪ್ಪಟೆ ಜಗತ್ತಾಗಿರುತ್ತದೆ. ಅದರಲ್ಲಿನ ಮನುಷ್ಯರು ಕುರಿಗಳಂತೆ ಜೀವಿಸುತ್ತಾರೆ. ಅವರು ತಮ್ಮೆಲ್ಲಾ ವಿಮರ್ಶಾ ಪ್ರಜ್ಞೆಯನ್ನು ಕಳೆದುಕೊಂಡಿರುತ್ತಾರೆ. ಆದ್ದರಿಂದ ಅಲ್ಲಿ ಯಾವ ಬೆಳವಣಿಗೆಯೂ ಸಾಧ್ಯವಾಗದು. ವಿಮರ್ಶಾ ಪ್ರಜ್ಞೆ ರೂಪಗೊಳ್ಳುವುದಕ್ಕೆ ಭಿನ್ನತೆಯ ಅರಿವು ಅತ್ಯಗತ್ಯ.

ಜನ ಭಾಷೆಗಳು ಭಾಷಿಕ ಕುಲದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಔದ್ಯೋಗಿಕ ಅಂತರ್ ಸಂಬಂಧಗಳ ಗಣಿಯಾಗಿರುತ್ತದೆ. ಇದು ತಾಯಿ ಮಕ್ಕಳ ಕರುಳು ಬಳ್ಳಿಯ ಸಂಬಂಧದಂತೆ ಮಮತಾಮಯಿಯಾದುದು. ಜಾಗತೀಕರಣವು ಇಂಥ ಬಾಂಧವ್ಯದ ಕರುಳು ಸಂಬಂಧವನ್ನು ಕಡಿಯುವ ವ್ಯಕ್ತಿ ಕೇಂದ್ರಿತ ಸೌಕ್ಯ ಪ್ರತಿಪಾದಕವಾಗಿದ್ದು ಸಮಾಜಕಂಟಕವಾಗಿ ಪರಿಣಮಿಸಿದೆ. ಗ್ಲೋಬಲೀಕರಣವು ಜನಭಾಷಾ ಕುಲಗಳ ಮೇಲೆ ಹಲ ಬಗೆಯ ಆತಂಕಗಳನ್ನು ನಿರ್ಮಾಣ ಮಾಡಿವೆ. ಅವು ಭಾಷೆಯೊಡನೆ ಬೆಸೆದುಕೊಂಡು ಭಾವನಾತ್ಮಕ ಸಂಬಂಧಗಳಿಗೆ ಬದುಕಿನ ಹಲವಾರು ಕ್ಷೇತ್ರಗಳನ್ನು ಭಾಷೆಯ ಮೂಲಕ ಒಳಗೊಳ್ಳುವ ಅಸ್ಮಿತೆಗೆ ಒಡ್ಡಿರುವ ಆಘಾತಗಳಾಗಿ ಎದುರಾಗುತ್ತಿವೆ. ಜಾಗತೀಕರಣದಿಂದಾಗಿ ಜನಭಾಷೆಗಳು ಭಾಷಿಕ ಕುಲಗಳು ಎದುರಿಸುತ್ತಿರುವ ಆತಂಕಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಜನಭಾಷೆಗಳ ಅಸ್ಮಿತೆಯನ್ನು ಅಲ್ಲಗಳೆಯುವುದು.
2. ಭಾಷಿಕ ಅಸಮಾನತೆಯನ್ನು ಪೋಷಿಸಿ ಜನಭಾಷೆಯನ್ನು ಕೊಲ್ಲುವುದು.
3. ಇಂಗ್ಲೀಷ ಬಲ್ಲವರು ದಣಿಗಳಾಗಿ, ಜನಭಾಷೆಗಳನ್ನಾಡುವ ಜನರನ್ನು ಕೀಳಾಗಿಸಿ, ಅವರನ್ನು ನವಜೀತಗಾರರನ್ನಾಗಿ ಕಾಣುವುದು.
4. ಶೈಕ್ಷಣಿಕವಾಗಿ ಜನಭಾಷೆಗಳನ್ನು ತಲೆ ಎತ್ತದಂತೆ ಮಾಡುತ್ತಿರುವುದು.
5. ಬೃಹತ್ ಉದ್ಯಮದ ವಾರಸುದಾರರಿಗೆ ಮಣೆ ಹಾಕಿ, ಸಣ್ಣ ಗುಡಿಕೈಗಾರಿಕೆಗಳ ಕತ್ತು ಹಿಸುಕುವ ಮೂಲಕ ಜನಭಾಷಾಕುಲದ ಬದುಕನ್ನು ಛಿದ್ರಗೊಳಿಸುವುದು.
6. ಕೃಷಿ ಮೂಲ ಜನಭಾಷಿಕ ಕುಲಗಳಿಗೆ ಕಂಟಕವನ್ನು ತಂದೊಡ್ಡಿ ಅವರಲ್ಲಿ ಆತ್ಮಸ್ಥೈರ್ಯವನ್ನು ಕುಗ್ಗಿಸಿ, ಭಯವನ್ನುಬಿತ್ತಿ, ಅವರ ಬದುಕಿಗೆ ಸಂಚಕಾರವನ್ನು ತಂದೊಡ್ಡುವುದು.
7. ಗ್ರಾಮ: ನಗರಗಳ ನಡುವೆ ದೊಡ್ಡ ಕಂದಕ ನಿರ್ಮಾಣ, ಅಸಮಾನತೆಯ ಪೋಷಣೆ.
8. ಪ್ರತಿಭೆಯ ಹೆಸರಿನಲ್ಲಿ ಸಾಮಾಜಿಕ ನ್ಯಾಯ ನಿರಾಕರಣೆ. ಸಾಮಾಜಿಕ ಶ್ರೇಣಿಕರಣ ನಿರ್ಮಾಣ.
9. ಔದ್ಯೋಗಿಕ ಭದ್ರತೆಯ ನಿರಾಕರಣೆ, ಗುತ್ತಿಗೆ ನೀತಿ ಜಾರಿಯಿಂದ ಮಧ್ಯವರ್ತಿಗಳ ಉದರ ಪೋಷಣೆ.
10. ಬಂಡವಾಳ ಶಾಹಿಯ ಕ್ರೂರತೆಗೆ ರಾಜಕಾರಣವನ್ನು ಅಸ್ಥಿರಗೊಳಿಸಿ, ರಾಷ್ಟ್ರದ ಪರಿಕಲ್ಪನೆಯನ್ನೆ ಅಳಿಸಿಹಾಕುವ ಆತಂಕ ನಿರ್ಮಾಣ.

ಜನಭಾಷೆಗಳ ಅಸ್ಮಿತೆಯನ್ನೇ ಪ್ರಶ್ನಿಸುವ ಜಾಗತೀಕರಣವು ನವ ವಸಾಹತೀಕರಣ ವ್ಯೆವಸ್ಥೆಯನ್ನು ಅಳವಡಿಸಿಕೊಂಡಿರುವುದರಿಂದ ಯಾರು ಅಪರಾಧಿ ಸ್ಥಾನದಲ್ಲಿ ಗೋಚರಿಸದಂತಾಗಿದೆ. ವಸಾಹತು ಆಡಳಿತದಲ್ಲಿ ನೇರವಾಗಿ ನಾವು ನಮ್ಮ ಶೋಷಕರನ್ನು ಗುರುತಿಸುವ ಅವಕಾಶವಿತ್ತು. ಈಗ ಈ ಪರಿಸ್ಥಿತಿಗೆ ಕಾರಣರಾದವರು ಯಾರು? ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತಿದೆ. ನವವಸಾಹತೀಕರಣ ಯಾರ ನಿಯಂತ್ರಣಕ್ಕೂ ಒಳಗಾಗಿಲ್ಲದ ಮುಕ್ತ ವಾತಾವರಣವನ್ನು ನಿರ್ಮಿಸಿದೆ. ಎಂದು ಭಾವಿಸಿದರೂ ರಾಷ್ಟ್ರಗಳ ಕಾನೂನುಗಳೆಲ್ಲವೂ. ಗ್ಯಾಟ್‌ನ ಒಪ್ಪಂದದ ನಿಯಂತ್ರಣದಲ್ಲೇ ರೂಪುಗೊಳ್ಳುತ್ತಿರುವುದರಿಂದ. ನಮ್ಮನ್ನು ಆಳುವವರೇ ಕಾನೂನು ಮಾಡುವುದರಿಂದ ನಮ್ಮವರೇ ನಮಗೆ ಶತ್ರುಗಳಾಗಿ ಕಂಡುಬರುತ್ತಿದ್ದಾರೆ. ಜನಭಾಷೆಗಳನ್ನಾಡುವ ಜನರ ಶೈಕ್ಷಣಿಕ ಹಕ್ಕನ್ನು ಕಸಿದುಕೊಳ್ಳುವ ಪ್ರಕ್ರಿಯೆಯಲ್ಲಿ ಜಾಗತೀಕರಣವು ಪ್ರಧಾನ ಪಾತ್ರವನ್ನು ವಹಿಸಿದೆ. ಶಿಕ್ಷಣವನ್ನು ಸೇವಾ ವಲಯದಿಂದ ಉದ್ಯಮ ವಲಯಕ್ಕೆ ವರ್ಗಾಯಿಸಿದ ಪರಿಣಾಮವಾಗಿ, ಉದ್ಯಮದ ಎಲ್ಲಾ ತಂತ್ರಗಳೂ ಶಿಕ್ಷಣ ಕ್ಷೇತ್ರದಲ್ಲಿ ಪ್ರಯೋಗಗೊಂಡವು. ಬಂಡವಾಳ ತೊಡಗಿಸಿ ಜಾಹೀರಾತುಗಳಿಂದ ಶಿಕ್ಷಣ ಸಂಸ್ಥೆಗಳು ಆಕರ್ಷಕವಾಗತೊಡಗಿದಾಗ ಸಹಜವಾಗಿಯೇ ಜನಭಾಷೆಗಳನ್ನಾಡುವ ಮಂದಿ ತಾವಾಗಿಯೇ ತಮ್ಮ ಮಾತೃಭಾಷೆಗಳಿಂದ ದೂರ ಸರಿದು ಆಂಗ್ಲ ಭಾಷೆಯ ತೆಕ್ಕೆಗೆ ಒಳಗಾದರು.

ಜಾಗತೀಕರಣವು ಜನಭಾಷೆಗಳು ಕಣ್ಮರೆಯಾಗಲು ಉತ್ತೇಜನ ನೀಡುವ ಮೂಲಕ ಭಾಷಾಕುಲಗಳಲ್ಲಿ ಆತಂಕವನ್ನು ನಿರ್ಮಾಣ ಮಾಡಿದೆ. ಭಾರತವು ಭಾಷಿಕ ವೈವಿಧ್ಯತೆಯನ್ನು ಹೊಂದಿರುವ ಜಗತ್ತಿನ ಪ್ರಮುಖ ರಾಷ್ಟ್ರವಾಗಿದ್ದು ಅದು ಜಾಗತೀಕರಣದಿಂದಾಗಿ ಹಿಂದೆ ಸರಿಯುತ್ತಿದೆ. ವಸಾಹತು ಕಾಲಘಟ್ಟದಲ್ಲಿ ಭಾರತದ ಭಾಷಾಕುಲಗಳ ಸಮೀಕ್ಷೆಯನ್ನು 1898 ರಲ್ಲಿ "ಸರ್.ಜಿ.ಎ.ಗ್ರಿಯರ್ಸನ್" ಭಾಗಶ: ನಡೆಸಿದರು. 1961ರ ಜನಗಣತಿಯ ಸಂದರ್ಭದಲ್ಲಿ ಜನಭಾಷೆಗಳ ಸಮೀಕ್ಷೆಯನ್ನೂ ಕೈಗೊಳ್ಳಲಾಯಿತು. 1576 ಮಾತೃಭಾಷೆಗಳನ್ನು ಆಗ ಗುರುತಿಸಲಾಯಿತು. 2001ರ ಜನಗಣತಿಯು 1365 ಮಾತೃಭಾಷೆಗಳನ್ನು ಮಾತ್ರ ಪಟ್ಟಿ ಮಾಡಿತು. ಇದು ಭಾಷಾಕುಲಗಳ ಆತಂಕದ ಅಂಶವನ್ನು ಎತ್ತಿ ತೋರಿಸುತ್ತದೆ. ಇದು ಜಾಗತೀಕರಣದ ಕರಾಳಮುಖವಾಗಿದೆ. ಭಾಷೆಗಳ ಕಣ್ಮರೆಯು ಆ ಭಾಷಾಕುಲಗಳ ಕಣ್ಮರೆಯಾಗಿಯೂ ಕಂಡು ಬರುವುದರಿಂದ ಭಾಷೆಗಳ ಅಸ್ಮಿತೆಯೇ ನಾಶವಾತ್ತದೆ.

ಜನಭಾಷೆಯ ಸಾಂಸ್ಕೃತಿಕ ಚಹರೆಗಳು ಅಳಿಯದೆ ಉಳಿಯಬೇಕಾದರೆ ಜನಭಾಷಾ ಪ್ರೇಮಿಗಳೆಲ್ಲ ಮೊದಲು ಐಕ್ಯತೆಯನ್ನು ಸಾಧಿಸುವುದು ಅನಿವಾರ್ಯ. ಭಾರತದ ಮಟ್ಟಿಗೆ ನೋಡಿದರೂ ಜಗತ್ತಿನ ಯಾವ ರಾಷ್ಟ್ರದಲ್ಲೂ ಕಂಡು ಬರದಷ್ಟು ಭಾಷಿಕ ವೈವಿಧ್ಯತೆ ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಭಾಷಿಕ ಪ್ರಬೇಧಗಳಿವೆ. ಅವುಗಳನ್ನು ಉಳಿಸಿ ಕೊಳ್ಳಬೇಕೆಂಬ ತುಡಿತವಿರುವ ಬುಡಕಟ್ಟು ಸಮುದಾಯಗಳು ರಾಜ್ಯಗಳ ರೂಪ ಪಡೆದುಕೊಂಡಿರುವ ಭಾಷಿಕ ಕುಲಗಳು ಒಂದೇ ವೇದಿಕೆಗೆ ಬಂದು ವಿಶ್ವ ಸಮುದಾಯಕ್ಕೆ ತಮ್ಮ ಭಾಷಿಕ ಚಹರೆಗಳನ್ನು ಉಳಿಸಿ ಎಂದು ಗಟ್ಟಿಯಾಗಿ ಹೇಳಬೇಕಾಗಿದೆ. ಜಾಗತೀಕರಣದ ಪರಿಣಾಮವಾಗಿ ಬಲಿಷ್ಠವಾಗಿ ಬೆಳೆದಿರುವ ಮಾಧ್ಯಮಗಳ ಮೂಲಕ ವಿಶ್ವಸಂಸ್ಥೆ, ವಿಶ್ವವ್ಯಾಪಾರ ಸಂಸ್ಥೆಗಳಿಗೆ ಭಾಷೆಗಳ ಅಳಿವಿನ ಆತಂಕವನ್ನು ಮನದಟ್ಟುಮಾಡಿಕೊಡಬೇಕು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಭಾರತ ಸರ್ಕಾರವು ಈ ಕುರಿತು ವಿಶ್ವದ ಇತರ ರಾಷ್ಟ್ರಗಳ ಸಹಕಾರವನ್ನು ಪಡೆದು ಜನಭಾಷೆಗಳ ಅಸ್ತಿತ್ವವನ್ನು ಉಳಿಸುವ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು. ಭಾರತ ಸರ್ಕಾರವು ಜನಭಾಷೆಗಳ ಉಳಿವಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ವಿಶ್ವದ ಇತರ ರಾಷ್ಟ್ರಗಳಿಗೆ ಮಾದರಿಯಾಗಬೇಕಾಗಿದೆ. ಒಕ್ಕೂಟ ಸರ್ಕಾರವು ಮಾತೃಭಾಷಾ ಮಾಧ್ಯಮದ ಶಿಕ್ಷಣವನ್ನು ಕಡ್ಡಾಯ ಮಾಡುವ ಉದ್ದೇಶಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕು. ಜನಭಾಷೆಗಳ ಹಿತರಕ್ಷಣೆಯು ಇಪ್ಪತ್ತೊಂದನೆಯ ಶತಮಾನದ ಪ್ರಮುಖ ಅಂಶವಾಗಬೇಕು. ಇದು ಚಳವಳಿಯೋಪಾದಿಯಲ್ಲಿ ಸಾಗಿದಾಗ ಮಾತ್ರ ಜನಭಾಷೆಗಳಿಗೆ ಉಳಿಗಾಲ. ಇಲ್ಲದಿದ್ದರೆ ಜಾಗತೀಕರಣವೆಂಬ ರಕ್ಕಸನ ಹಸಿವಿನ ಉದರಕ್ಕೆ ಜನಭಾಷೆಗಳು ಆಹಾರವಾಗುವ ಅಪಾಯವಿದೆ.

ಗ್ರಂಥ ಋಣ:

1. ಡಾ.ಜಿ. ರಾಮಕೃಷ್ಣ.–ಇಂದಿನ ಬಂಡವಾಳಶಾಹಿ ಮತ್ತು ಗಾಂಧೀಜಿ ಚಿಂತನೆ.
2. ಡಾ, ಕೆ.ವಿ.ತಿರುಮಲೇಶ್––ಭಾಷೆಯೂ ಲೋಕ ಸೌಂದರ್ಯವೂ.
3. ಹಿಸ್ಟರಿ ಆಫ್ ಗ್ಲೋಬಲೈಸೇಷನ್, ವಿಕಿಪೀಡಿಯಾ.
4. ಡಾ.ವಿ.ಚಂದ್ರಶೇಖರ ನಂಗಲಿ––ಡಿಜಿಟಲ್ ಯುಗದಲ್ಲಿ ಕನ್ನಡ ಜಗತ್ತು: ಹೊಸ ಸವಾಲುಗಳು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

AI ಯುಗದಲ್ಲಿ ಡಿಜಿಟಲ್ ರೂಪಾಂತರ: ಆಡಳಿತ, ನೀತಿಗಳು ಮತ್ತು ದೃಷ್ಟಿಕೋನಗಳು

Shashanka Hadimani
Lecturer, Department of Political Science
KLE 's Shri Mrityunjaya College of arts & Commerce, Dharwad
E Mail ID : shashankalh@gmail.com

Manuscript ID:
JRD -2026-180518
ISSN: 2230-9578
Volume 18
Issue 5(IV)
Pp. 78-80
April- 2026
Submitted: 10 Apr. 2026
Revised: 22 Apr.2026
Accepted: 10 May. 2026
Published: 31 May. 2026

ಕೃತಕ ಬುದ್ಧಿಮತ್ತೆ (Artificial Intelligence - AI) ಇಂದು ಕೇವಲ ಒಂದು ತಾಂತ್ರಿಕ ಪದವಾಗಿ ಉಳಿದಿಲ್ಲ; ಅದು ಜಾಗತಿಕ ನಾಗರಿಕತೆಯ ಮುಂದಿನ ಹಂತವನ್ನು ನಿರ್ಧರಿಸುವ ಶಕ್ತಿಯಾಗಿ ಹೊರಹೊಮ್ಮಿದೆ. 21ನೇ ಶತಮಾನದ ಈ ಡಿಜಿಟಲ್ ಕ್ರಾಂತಿಯು ಆಡಳಿತದ ಸ್ವರೂಪ, ನೀತಿ ನಿರೂಪಣೆ ಮತ್ತು ಮಾನವ ದೃಷ್ಟಿಕೋನಗಳನ್ನು ಆಮೂಲಾಗ್ರವಾಗಿ ಬದಲಿಸುತ್ತಿದೆ.

ರಾಜ್ಯಶಾಸ್ತ್ರ ಮತ್ತು AI: *ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಬದಲಾವಣೆಗಳು*

1. ಸಾರ್ವಭೌಮತ್ವ ಮತ್ತು ಡಿಜಿಟಲ್ ಗಡಿಗಳು (Sovereignty and Digital Borders)

ಸಾಂಪ್ರದಾಯಿಕ ರಾಜ್ಯಶಾಸ್ತ್ರದಲ್ಲಿ 'ಸಾರ್ವಭೌಮತ್ವ' ಎಂದರೆ ಭೌಗೋಳಿಕ ಗಡಿಗಳ ರಕ್ಷಣೆ. ಆದರೆ ಂಖ ಯುಗದಲ್ಲಿ "ಡಿಜಿಟಲ್ ಸಾರ್ವಭೌಮತ್ವ" (Digital Sovereignty) ಉದಯಿಸಿದೆ.

ದತ್ತಾಂಶದ ಮೇಲೆ ನಿಯಂತ್ರಣ: ದೇಶದ ನಾಗರಿಕರ ದತ್ತಾಂಶ (ಆಚಿಣಚಿ) ಎಲ್ಲಿ ಸಂಗ್ರಹವಾಗುತ್ತದೆ ಮತ್ತು ಅದನ್ನು ಯಾರು ನಿಯಂತ್ರಿಸುತ್ತಾರೆ ಎಂಬುದು ರಾಷ್ಟ್ರೀಯ ಭದ್ರತೆಯ ವಿಷಯವಾಗಿದೆ.

ತಾಂತ್ರಿಕ ವಸಾಹತುಶಾಹಿ: ದೊಡ್ಡ ಟೆಕ್ ಕಂಪನಿಗಳು ಸಣ್ಣ ರಾಷ್ಟ್ರಗಳ ರಾಜಕೀಯದ ಮೇಲೆ ಪ್ರಭಾವ ಬೀರುವುದು ಹೊಸ ಮಾದರಿಯ ಸವಾಲಾಗಿದೆ.

2. ಪ್ರಜಾಪ್ರಭುತ್ವ ಮತ್ತು "ಅಲ್ಗಾರಿದಮಿಕ್ ಆಡಳಿತ" (Algorithmic Governance)

ಆಧುನಿಕ ರಾಜ್ಯವು ಈಗ 'ಅಲ್ಗಾರಿದಮ್‌ಗಳ' ಮೂಲಕ ಕಾರ್ಯನಿರ್ವಹಿಸುತ್ತಿದೆ. ಇದು ಪ್ರಜಾಪ್ರಭುತ್ವದ ಮೇಲೆ ಎರಡು ರೀತಿಯ ಪ್ರಭಾವ ಬೀರುತ್ತದೆ:

ನೇರ ಪ್ರಜಾಪ್ರಭುತ್ವದ ಸಬಲೀಕರಣ: ಸಾಮಾಜಿಕ ಜಾಲತಾಣಗಳು ಮತ್ತು ಡಿಜಿಟಲ್ ವೇದಿಕೆಗಳ ಮೂಲಕ ನಾಗರಿಕರು ನೇರವಾಗಿ ಸರ್ಕಾರದ ನೀತಿಗಳ ಬಗ್ಗೆ ಪ್ರತಿಕ್ರಿಯಿಸಬಹುದು. ಇದು 'ಜನಪ್ರತಿನಿಧಿಗಳ' ಮಧ್ಯಸ್ಥಿಕೆಯನ್ನು ಕಡಿಮೆ ಮಾಡುತ್ತದೆ.

ಅಭಿಪ್ರಾಯ ರೂಪಿಸುವಿಕೆ: AI ಮೂಲಕ ಜನರ ಆಲೋಚನೆಗಳನ್ನು ವಿಶ್ಲೇಷಿಸಿ (ಖಜಟಿಣಟಜಟಿಣಚಿಟ ಂಟಿಚಿಟಥಿ), ಚುನಾವಣೆಗಳ ಮೇಲೆ ಪ್ರಭಾವ ಬೀರುವುದು ಪ್ರಜಾಪ್ರಭುತ್ವಕ್ಕೆ ಇರುವ ದೊಡ್ಡ ಬೆದರಿಕೆ.

3. ಸಾಮಾಜಿಕ ನ್ಯಾಯ ಮತ್ತು ವಿತರಣಾ ರಾಜಕೀಯ :

ಜಾನ್ ರಾಲ್ಸ್‌ನಂತಹ ತತ್ವಜ್ಞಾನಿಗಳು ಹೇಳುವ 'ಸಾಮಾಜಿಕ ನ್ಯಾಯ'ವನ್ನು ಜಾರಿಗೊಳಿಸಲು ಂಖ ಈಗ ಬಳಕೆಯಾಗುತ್ತಿದೆ.

ಸಂಪನ್ಮೂಲಗಳ ಹಂಚಿಕೆ: ಯಾರು ನಿಜವಾದ ಫಲಾನುಭವಿಗಳು ಎಂಬುದನ್ನು ಂಖ ಪತ್ತೆಹಚ್ಚುತ್ತದೆ (ಉದಾಹರಣೆಗೆ ಭಾರತದ DBT - Direct Benefit Transfer ವ್ಯವಸ್ಥೆ). ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿ, ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯ ತಲುಪುತ್ತಿದೆ.

ಡಿಜಿಟಲ್ ಅಸಮಾನತೆ: ತಂತ್ರಜ್ಞಾನ ತಿಳಿದವರು ಮತ್ತು ತಿಳಿಯದವರ ನಡುವಿನ ಕಂದಕವು (Digital Divide) ಸಮಾಜದಲ್ಲಿ ಹೊಸ ವರ್ಗ ಸಂಘರ್ಷಕ್ಕೆ ಕಾರಣವಾಗಬಹುದು ಎಂದು ರಾಜ್ಯಶಾಸ್ತ್ರಜ್ಞರು ಎಚ್ಚರಿಸುತ್ತಿದ್ದಾರೆ.

4. ನೀತಿ ರೂಪಿಸುವಿಕೆ (Policy Making) ಮತ್ತು ಮುನ್ಸೂಚನೆ

ಹಿಂದೆ ನೀತಿಗಳನ್ನು ರೂಪಿಸುವಾಗ ಐತಿಹಾಸಿಕ ಅಂಕಿಅಂಶಗಳನ್ನು ಬಳಸಲಾಗುತ್ತಿತ್ತು. ಈಗ ಂಖ ಮೂಲಕ "ಮುನ್ಸೂಚನಾ ವಿಶ್ಲೇಷಣೆ" (Predictive Analytics) ಸಾಧ್ಯವಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
Shashanka Hadimani, Lecturer, Department of Political Science, KLE 's Shri Mrityunjaya College of arts & Commerce, Dharwad

How to cite this article:
Hadimani, S. (2026). AI ಯುಗದಲ್ಲಿ ಡಿಜಿಟಲ್ ರೂಪಾಂತರ: ಆಡಳಿತ, ನೀತಿಗಳು ಮತ್ತು ದೃಷ್ಟಿಕೋನಗಳು. Journal of research & development, 18(5(IV)), *78–80. https://doi.org/10.5281/zenodo.20990823*

Quick Response Code:
Website: https://jrdrvb.org/
DOI: 10.5281/zenodo.20990823
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಅಪರಾಧ ತಡೆಗಟ್ಟುವಿಕೆ (Predictive Policing), ಬರಗಾಲದ ಮುನ್ಸೂಚನೆ ಅಥವಾ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಮೊದಲೇ ಅಂದಾಜಿಸಿ ಸರ್ಕಾರಗಳು 'ಪೂರ್ವಭಾವಿ ನೀತಿ'ಗಳನ್ನು (Proactive Policies) ರೂಪಿಸಲು ಸಾಧ್ಯವಾಗುತ್ತಿದೆ.

5. ಸವಾಲುಗಳು: ಕಣ್ಗಾವಲು ರಾಜ್ಯ (Surveillance State)

ಮಿಚೆಲ್ ಫೂಕೋರಂತಹ ಚಿಂತಕರು ಹೇಳುವ 'ಶಿಸ್ತು ಮತ್ತು ಶಿಕ್ಷೆ'ಯ ಪರಿಕಲ್ಪನೆಯು ಂಖ ಮೂಲಕ ತೀವ್ರಗೊಳ್ಳಬಹುದು.

ಸರ್ಕಾರಗಳು ಫೇಶಿಯಲ್ ರೆಕಗ್ನಿಷನ್ (Facial Recognition) ಮತ್ತು ದತ್ತಾಂಶ ವಿಶ್ಲೇಷಣೆಯ ಮೂಲಕ ನಾಗರಿಕರ ಮೇಲೆ ನಿರಂತರ ನಿಗಾ ಇಡುವುದು ವೈಯಕ್ತಿಕ ಸ್ವಾತಂತ್ರ್ಯದ ಹರಣಕ್ಕೆ ಕಾರಣವಾಗಬಹುದು. ಇದು 'ಲಿಬರಲ್ ಡೆಮಾಕ್ರಸಿ'ಗೆ ಒಡ್ಡುತ್ತಿರುವ ಸವಾಲಾಗಿದೆ.

ಪ್ರಮುಖ ಅಂಶಗಳ

ಪರಿಕಲ್ಪನೆ	ಸಾಂಪ್ರದಾಯಿಕ ರೂಪ	AI ಯುಗದ ರೂಪ
ಅಧಿಕಾರ (Power)	ಮಿಲಿಟರಿ ಮತ್ತು ಆರ್ಥಿಕ ಶಕ್ತಿ	ದತ್ತಾಂಶ ಮತ್ತು ತಾಂತ್ರಿಕ ಶಕ್ತಿ
ಆಡಳಿತ (Admin)	ಕೆಂಪು ಪಟ್ಟಿ ಮತ್ತು ವಿಳಂಬ	ತಕ್ಷಣದ ಸ್ಪಂದನೆ (Real-time)
ಪ್ರಜೆ (Citizen)	ಮತದಾರ ಮಾತ್ರ	ದತ್ತಾಂಶ ನೀಡುವವರು ಮತ್ತು ಬಳಕೆದಾರ
ಕಾನೂನು (Law)	ಭೌತಿಕ ಸಂವಿಧಾನ	ಡಿಜಿಟಲ್ ಹಕ್ಕುಗಳು ಮತ್ತು ಎಥಿಕ್ಸ್

1. **ಆಡಳಿತದಲ್ಲಿ AI:**

ಪಾರದರ್ಶಕತೆ ಮತ್ತು ದಕ್ಷತೆಯ ಹೊಸ ಹಾದಿ : ಸಂಪ್ರದಾಯಿಕ ಆಡಳಿತ ವ್ಯವಸ್ಥೆಯು ಕೆಂಪು ಪಟ್ಟಿ (ಖಜಜ ಖಿಚಿಠಿಜ), ವಿಳಂಬ ಮತ್ತು ಪಾರದರ್ಶಕತೆಯ ಕೊರತೆಯಿಂದ ಬಳಲುತ್ತಿತ್ತು. ಆದರೆ ಂಖ ಅಳವಡಿಕೆಯು ಈ ಸವಾಲುಗಳಿಗೆ ಪರಿಣಾಮಕಾರಿ ಪರಿಹಾರಗಳನ್ನು ನೀಡುತ್ತಿದೆ.

ದತ್ತಾಂಶ ಆಧಾರಿತ ನಿರ್ಧಾರಗಳು (Data-Driven Decisions): ಸರ್ಕಾರಗಳು ಈಗ ಕೇವಲ ಊಹೆಗಳ ಮೇಲೆ ಯೋಜನೆಗಳನ್ನು ರೂಪಿಸುತ್ತಿಲ್ಲ. ಬದಲಾಗಿ, ಬೃಹತ್ ದತ್ತಾಂಶಗಳನ್ನು (ಐರ ಆಚಿಣಚಿ) ವಿಶ್ಲೇಷಿಸಿ, ಎಲ್ಲಿ ಅತಿ ಹೆಚ್ಚು ಅಗತ್ಯವಿದೆಯೋ ಅಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಂಖ ಸಹಕಾರಿಯಾಗಿದೆ.

ಇ–ಆಡಳಿತದಿಂದ ಎಐ–ಆಡಳಿತಕ್ಕೆ (From E -Govt to AI-Gov): ನಾಗರಿಕ ಸೇವೆಗಳ ವಿತರಣೆಯಲ್ಲಿ ಚಾಟ್‌ಬಾಟ್‌ಗಳು ಮತ್ತು ವರ್ಚುವಲ್ ಅಸಿಸ್ಟೆಂಟ್‌ಗಳು 24/7 ಲಭ್ಯವಿರುತ್ತವೆ. ಇದರಿಂದ ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದು ತಪ್ಪಿದೆ.

ಭ್ರಷ್ಟಾಚಾರ ನಿಯಂತ್ರಣ: ಆರ್ಥಿಕ ವಹಿವಾಟುಗಳಲ್ಲಿನ ಅಕ್ರಮಗಳನ್ನು ಪತ್ತೆಹಚ್ಚಲು ಂಖ ಅಲ್ಗಾರಿದಮ್‌ಗಳು ಅತ್ಯಂತ ವೇಗವಾಗಿ ಕೆಲಸ ಮಾಡುತ್ತವೆ, ಇದು ಆಡಳಿತದಲ್ಲಿ ಉತ್ತರದಾಯಿತ್ವವನ್ನು ಹೆಚ್ಚಿಸುತ್ತದೆ.

ನೀತಿಗಳು ಮತ್ತು ನಿಯಮಾವಳಿಗಳು (Policies and Regulations)

ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತಿರುವಾಗ, ಅದನ್ನು ನಿಯಂತ್ರಿಸುವ ಕಾನೂನುಗಳು ಅಷ್ಟೇ ವೇಗವಾಗಿ ರೂಪಿತವಾಗಬೇಕಿದೆ. AI ಯುಗದಲ್ಲಿ ನೀತಿ ನಿರೂಪಕರು ಎದುರಿಸುತ್ತಿರುವ ಪ್ರಮುಖ ಅಂಶಗಳು ಇಲ್ಲಿವೆ:

ದತ್ತಾಂಶ ಗೌಪ್ಯತೆ (Data Privacy): ಪ್ರತಿಯೊಬ್ಬ ನಾಗರಿಕನ ವೈಯಕ್ತಿಕ ಮಾಹಿತಿ ಸುರಕ್ಷಿತವಾಗಿರುವುದು ಅತ್ಯಗತ್ಯ. ಭಾರತದ 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆ' (ಆಕಆಕ ಂಛಿಣ) ಈ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ.

ನೈತಿಕ AI (Ethical AI): AI ವ್ಯವಸ್ಥೆಗಳು ಪಕ್ಷಪಾತವಿಲ್ಲದೆ (Unbiased) ಕೆಲಸ ಮಾಡಬೇಕು. ಉದಾಹರಣೆಗೆ, ಉದ್ಯೋಗ ನೇಮಕಾತಿ ಅಥವಾ ಸಾಲ ನೀಡುವ ಪ್ರಕ್ರಿಯೆಯಲ್ಲಿ ಂಖ ಯಾವುದೇ ಜಾತಿ, ಧರ್ಮ ಅಥವಾ ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡದಂತೆ ನೋಡಿಕೊಳ್ಳಲು ಕಠಿಣ ನೀತಿಗಳ ಅಗತ್ಯವಿದೆ.

ಜಾಗತಿಕ ಸಹಕಾರ: AI ಗೆ ಯಾವುದೇ ಭೌಗೋಳಿಕ ಗಡಿಗಳಿಲ್ಲ. ಆದ್ದರಿಂದ, ಸೈಬರ್ ಭದ್ರತೆ ಮತ್ತು ತಾಂತ್ರಿಕ ಮಾನದಂಡಗಳಿಗಾಗಿ ಅಂತರಾಷ್ಟ್ರೀಯ ಮಟ್ಟದ ಒಪ್ಪಂದಗಳು ಇಂದಿನ ತುರ್ತು ಅಗತ್ಯವಾಗಿವೆ.

3. ಉದ್ಯೋಗ ಮಾರುಕಟ್ಟೆ ಮತ್ತು ಆರ್ಥಿಕ ದೃಷ್ಟಿಕೋನ

AI ಎಂದರೆ ಉದ್ಯೋಗಗಳನ್ನು ಕಿತ್ತುಕೊಳ್ಳುವ 'ಯಂತ್ರ' ಎಂಬ ಭಯ ಸಮಾಜದಲ್ಲಿದೆ. ಆದರೆ ವಾಸ್ತವದ ದೃಷ್ಟಿಕೋನ ಸ್ವಲ್ಪ ಭಿನ್ನವಾಗಿದೆ:

ವಿಭಾಗ	ಬದಲಾವಣೆ	ದೃಷ್ಟಿಕೋನ
ಉದ್ಯೋಗಗಳು	ಪುನರಾವರ್ತಿತ ಕೆಲಸಗಳ ಆಟೊಮೇಷನ್	ಹೊಸ ತಾಂತ್ರಿಕ ಉದ್ಯೋಗಗಳ ಸೃಷ್ಟಿ
ಕೌಶಲ್ಯ	ಹಳೆಯ ಕೌಶಲ್ಯಗಳ ಅಪ್ರಸ್ತುತತೆ	'ಅಪ್–ಸ್ಕಿಲ್ಲಿಂಗ್' (Up-skilling) ಅನಿವಾರ್ಯ
ಉತ್ಪಾದಕತೆ	ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ	ಆರ್ಥಿಕ ಬೆಳವಣಿಗೆಯಲ್ಲಿ ವೇಗ

ದೃಷ್ಟಿಕೋನ: ನಾವು ಕೆಲಸ ಮಾಡುವ ವಿಧಾನ ಬದಲಾಗುತ್ತದೆಯೇ ಹೊರತು ಕೆಲಸ ಇಲ್ಲದಂತಾಗುವುದಿಲ್ಲ. ಮಾನವನ ಸೃಜನಶೀಲತೆ ಮತ್ತು AI ನ ವೇಗ ಜೊತೆಗೂಡಿದರೆ ಅತ್ಯುತ್ತಮ ಫಲಿತಾಂಶ ಸಾಧ್ಯ.

4. ಸಮಾಜ ಮತ್ತು ಶಿಕ್ಷಣದ ಮೇಲಿನ ಪ್ರಭಾವ

ಶಿಕ್ಷಣ ಕ್ಷೇತ್ರದಲ್ಲಿ AI ಕ್ರಾಂತಿಕಾರಿ ಬದಲಾವಣೆ ತರುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ 'ವೈಯಕ್ತಿಕ ಕಲಿಕಾ ಯೋಜನೆ'ಗಳನ್ನು (Personalized Learning) AI ಸಿದ್ಧಪಡಿಸಬಲ್ಲದು. ಇದು ಶಿಕ್ಷಣವನ್ನು ಹೆಚ್ಚು ಪ್ರಜಾಪ್ರಭುತ್ವೀಕರಣಗೊಳಿಸುತ್ತದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಆದರೆ, 'ಡಿಜಿಟಲ್ ವಿಭಜನೆ' (Digital Divide) ಒಂದು ದೊಡ್ಡ ಸವಾಲಾಗಿದೆ. ಗ್ರಾಮೀಣ ಭಾಗದ ಜನರಿಗೆ ಮತ್ತು ಬಡವರಿಗೆ ಈ ತಂತ್ರಜ್ಞಾನ ಸಿಗದಿದ್ದರೆ, ಸಮಾಜದಲ್ಲಿ ಅಸಮಾನತೆ ಹೆಚ್ಚಾಗಬಹುದು. ಆದ್ದರಿಂದ, ಡಿಜಿಟಲ್ ಮೂಲಸೌಕರ್ಯ ಎಲ್ಲರಿಗೂ ಸಿಗುವಂತಾಗುವುದು ಸರ್ಕಾರದ ದೃಷ್ಟಿಕೋನವಾಗಬೇಕು.

5. ಸವಾಲುಗಳು ಮತ್ತು ಭವಿಷ್ಯದ ಹಾದಿ

AI ಯುಗವು ಸುಗಮವಾಗಿರಲು ಈ ಕೆಳಗಿನ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಿದೆ:

ಡೀಪ್ ಫೇಕ್ (Deepfakes): ಸುಳ್ಳು ಮಾಹಿತಿ ಮತ್ತು ನಕಲಿ ವಿಡಿಯೋಗಳ ಹಾವಳಿ ತಡೆಯುವುದು.

ಸೈಬರ್ ದಾಳಿ: ಹೆಚ್ಚು ಡಿಜಿಟಲೀಕರಣಗೊಂಡಷ್ಟೂ ಸೈಬರ್ ದಾಳಿಯ ಅಪಾಯ ಹೆಚ್ಚು.

ಮಾನವೀಯ ಸ್ಪರ್ಶದ ಕೊರತೆ: ಆಡಳಿತವು ಕೇವಲ ಯಾಂತ್ರಿಕವಾಗಬಾರದು; ಅಲ್ಲಿ ಸಹಾನುಭೂತಿ ಮತ್ತು ಮಾನವೀಯ ವಿವೇಚನೆ ಇರಬೇಕು.

ತಂತ್ರಜ್ಞಾನವು ಕೇವಲ ಆಡಳಿತದ ಸಾಧನವಾಗಿರದೆ, 'ಅಧಿಕಾರ' ಮತ್ತು 'ರಾಜ್ಯ'ದ ಪರಿಕಲ್ಪನೆಯನ್ನೇ ಹೇಗೆ ಬದಲಾಯಿಸುತ್ತಿದೆ ಎಂಬುದು ಮುಖ್ಯವಾಗುತ್ತದೆ.

AI ಯುಗದಲ್ಲಿ ಡಿಜಿಟಲ್ ರೂಪಾಂತರವು ಕೇವಲ ತಾಂತ್ರಿಕ ಬದಲಾವಣೆಯಲ್ಲ, ಅದು ಒಂದು ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಪರಿವರ್ತನೆ. ನಾವು ತಂತ್ರಜ್ಞಾನವನ್ನು ಹೇಗೆ ಬಳಸುತ್ತೇವೆ ಎಂಬುದರ ಮೇಲೆ ನಮ್ಮ ಭವಿಷ್ಯ ನಿರ್ಧಾರವಾಗುತ್ತದೆ. ಸರಿಯಾದ ನೀತಿಗಳು, ಪಾರದರ್ಶಕ ಆಡಳಿತ ಮತ್ತು ಮಾನವ ಕೇಂದ್ರಿತ ದೃಷ್ಟಿಕೋನಗಳನ್ನು ಅಳವಡಿಸಿಕೊಂಡರೆ, ೦೩ ಯುಗವು ಭಾರತವನ್ನು ಜಾಗತಿಕ ನಾಯಕನನ್ನಾಗಿ ಮಾಡುವಲ್ಲಿ ಸಂಶಯವಿಲ್ಲ. ನಾವು ತಂತ್ರಜ್ಞಾನಕ್ಕೆ ದಾಸರಾಗದೆ, ಅದರ ಯಜಮಾನರಾಗಿ ಮುನ್ನಡೆಯಬೇಕಿದೆ.

ರಾಜ್ಯಶಾಸ್ತ್ರದ ದೃಷ್ಟಿಯಲ್ಲಿ, ಡಿಜಿಟಲ್ ರೂಪಾಂತರವು ಕೇವಲ ಆಡಳಿತ ಸುಧಾರಣೆಯಲ್ಲ; ಇದು ರಾಜ್ಯ ಮತ್ತು ಪ್ರಜೆಯ ನಡುವಿನ ಸಂಬಂಧವನ್ನು ಮರು ವ್ಯಾಖ್ಯಾನಿಸುತ್ತಿದೆ. ತಂತ್ರಜ್ಞಾನವು ಜನಕಲ್ಯಾಣಕ್ಕೆ ಪೂರಕವಾಗುವಂತೆ "ನೈತಿಕ ಚೌಕಟ್ಟು" (Ethical Framework) ರೂಪಿಸುವುದು ಇಂದಿನ ರಾಜಕೀಯ ವ್ಯವಸ್ಥೆಯ ಮುಂದಿರುವ ಅತಿದೊಡ್ಡ ಜವಾಬ್ದಾರಿಯಾಗಿದೆ.

"ತಂತ್ರಜ್ಞಾನವು ಕೇವಲ ಒಂದು ಸಾಧನ, ಆದರೆ ಅದನ್ನು ಬಳಸುವ ಮಾನವನ ಉದ್ದೇಶವೇ ಮುಖ್ಯ."

References

1. "The Age of AI: And Our Human Future" – *Henry A. Kissinger, Eric Schmidt, and Daniel Huttenlocher.*
2. "The Costs of Connection" – *Nick Couldry and Ulises A. Mejias.*
3. "21 Lessons for the 21st Century" – *Yuval Noah Harari.*
4. "Digital India: Reflections and Practice" – *Edited by Arpan Kumar Kar et al.*
5. "Governance in the Era of AI" (OECD Reports)
6. ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆ ವರದಿಗಳು
7. 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆ–2023' (DPDP Act 2023)

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ತುಮಕೂರು ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಒಂದು ಅವಲೋಕನ

ಡಾ. ಶಶಿಕಮಾರ್ ಬಿ ಎಸ್,
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮದರ್ಜೆ ಕಾಲೇಜು– ತಿಪಟೂರು

Manuscript ID:
JRD -2026-180519
ISSN: 2230-9578
Volume 18
Issue 5(IV)
Pp. 81-84
April- 2026
Submitted: 10 Apr. 2026
Revised: 25 Apr.2026
Accepted: 12 May. 2026
Published: 31 May. 2026

ಭಾರತದ ಸ್ವತಂತ್ರ ಹೋರಾಟದ ಪುಟಗಳನ್ನು ತೆರೆದರೆ ನಮಗೆ ಕಾಣುವುದು ಬ್ರಿಟಿಷರ ವಿರುದ್ಧ ಸಾರಿದ ಯುದ್ಧಗಳು, ಎದುರಿಸಿದ ಸವಾಲುಗಳು, ನಡೆಸಿದ ಸಾಹಸಮಯ ಘಟನೆಗಳು, ಅನುಭವಿಸಿದ ಹಿಂಸೆ ಅವಮಾನಗಳು, ಅನುಭವಿಸಿದ ಸಾವು–ನೋವುಗಳಿಂದ ಕೂಡಿದ ಘಟನೆಗಳಾಗಿವೆ. ಭಾರತದಲ್ಲಿ ಗಾಂಧೀಜಿಯವರು ತಮ್ಮ ಅಹಿಂಸಾತ್ಮಕ ಕ್ರಮಗಳ ಮೂಲಕ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಆರಂಭಿಸಿದ ಸ್ವತಂತ್ರ ಚಳುವಳಿಯು ತನ್ನದೇ ಆದ ಹೋರಾಟಗಳ ಮೂಲಕ ಭಾರತಕ್ಕೆ ಬ್ರಿಟಿಷ್ ಆಡಳಿತದಿಂದ ಮುಕ್ತಿ ದೊರಕಿಸಿಕೊಟ್ಟ ಕೀರ್ತಿ ಮಹಾತ್ಮರಿಗೆ ಸಲ್ಲುತ್ತದೆ.

ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ 1920 ರಿಂದ 1947ರ ಕಾಲಾವಧಿಯನ್ನು ಗಾಂಧಿಯುಗವೆಂದು ಗುರುತಿಸಲಾಗುತ್ತದೆ. ಈ ಕಾಲಾವಧಿಯಲ್ಲಿ ಗಾಂಧೀಜಿಯವರು ರಾಷ್ಟ್ರೀಯ ಹೋರಾಟಕ್ಕೆ ಜನಂದೋನದ ಸ್ಪರ್ಶ ನೀಡಿದರು ಈ ಅವಧಿಯಲ್ಲಿ ಅಸಹಕಾರ, ಅಹಿಂಸ ನೀತಿ, ಉಪವಾಸ ಸತ್ಯಾಗ್ರಹ, ಕಾನೂನು ಭಂಗದಂತಹ ಕ್ರಮಗಳ ಮೂಲಕ ಭಾರತೀಯರಿಗೆ ಸಂಪೂರ್ಣ ಸ್ವಾತಂತ್ರವನ್ನು ದೊರಕಿಸಿ ಕೊಡುವುದೇ ಅವರ ಚಳುವಳಿಗಳ ಮುಖ್ಯ ಉದ್ದೇಶವಾಗಿತ್ತು.

1919ರಲ್ಲಿ ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ರೌಲತ್ ಕಾಯ್ದೆಯ ವಿರುದ್ಧ ಹೋರಾಡಲು ಜನತೆಯನ್ನ ಪ್ರೇರೇಪಿಸಿತು. ಇದೇ ವರ್ಷ ಜರುಗಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ವಿರುದ್ಧ ಹೋರಾಡಲು ಗಾಂಧೀಜಿಯವರ ನಾಯಕತ್ವದಲ್ಲಿ ಹೋರಾಟ ಆರಂಭವಾಗಿ, ದೇಶದ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮಹಿಳೆಯರೂ ಒಳಗೊಂಡಂತೆ ಅಖಿಲ ಭಾರತ ಮಟ್ಟದ ಅಸಹಕಾರ ಚಳುವಳಿಯನ್ನು 1920–22 ರಲ್ಲಿ ಸಂಘಟಿಸಿದರು. ಆದರೆ ಈ ಅಸಹಕಾರ ಚಳುವಳಿಯು ಉತ್ತರಪ್ರದೇಶದಲ್ಲಿ ಜರುಗಿದ ಚೌರ ಚೌರಿ ಹಿಂಸಾತ್ಮಕ ಘಟನೆಯ ತರುವಾಯ ಗಾಂಧೀಜಿಯವರು ಈ ಚಳುವಳಿಯನ್ನು ಹಿಂಪಡೆದರು. ತದನಂತರ 1930–34 ರಲ್ಲಿ ಕಾನೂನು ಭಂಗ ಚಳುವಳಿಯ ಮೂಲಕ ಉಪ್ಪಿನ ಸತ್ಯಾಗ್ರಹದಂತಹ ಹೋರಾಟವನ್ನು ಹಮ್ಮಿಕೊಂಡಿದ್ದರು.

ಎರಡನೇ ಜಾಗತಿಕ ಯುದ್ಧದ ಸಮಯದಲ್ಲಿ (1939–45) ಭಾರತೀಯರ ಬೆಂಬಲವನ್ನ ಪಡೆಯುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರವು ಸ್ಟಾಫೋರ್ಡ್ ಕ್ರಿಪ್ಸ್ ರವ ಅಧ್ಯಕ್ಷತೆಯಲ್ಲಿ ಕ್ರಿಪ್ಸ್ ಆಯೋಗವನ್ನು ಸಂಧಾನಕ್ಕಾಗಿ ಕಳುಹಿಸಿತು. ಆದರೆ ಈ ಆಯೋಗವು ಭಾರತೀಯರ ಬೆಂಬಲವನ್ನ ಪಡೆಯುವಲ್ಲಿ ಯಶಸ್ಸು ಕಾಣಲಿಲ್ಲ. ಇದೇ ಸಮಯದಲ್ಲಿ ಗಾಂಧೀಜಿಯವರು ಬ್ರಿಟಿಷ್ ದಾಸ್ಯದ ಸಂಕೋಲೆಯಿಂದ ಭಾರತೀಯರನ್ನು ಮುಕ್ತಗೊಳಿಸಲು 'ಮಾಡು ಇಲ್ಲವೇ ಮಡಿ' ಎಂಬ ಘೋಷಣೆಯೊಂದಿಗೆ ಕ್ವಿಟ್ ಇಂಡಿಯಾ ಚಳುವಳಿ ಅಥವಾ ಭಾರತ ಬಿಟ್ಟು ತೊಲಗಿ ಎಂಬ ಚಳುವಳಿಗೆ ಕರೆಯನ್ನು ನೀಡಿದರು. ಇದರ ಪರಿಣಾಮವಾಗಿ ದೇಶದ ಮೂಲೆ ಮೂಲೆಯಲ್ಲಿ ಜನತೆ ಸಕ್ರಿಯವಾಗಿ ಚಳುವಳಿಯಲ್ಲಿ ಭಾಗವಹಿಸಿದರು. ಇದರ ಪ್ರಭಾವವು ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯಲ್ಲೂ ಸಹ ಪ್ರತಿಧ್ವನಿಸಿತು.

ಕ್ವಿಟ್ ಇಂಡಿಯಾ ಚಳುವಳಿಯ ಹಿನ್ನೆಲೆ :– 1939–45 ರ ನಡುವಿನ ದ್ವಿತೀಯ ಮಹಾಯುದ್ಧಕ್ಕೆ ಭಾರತೀಯರ ನೆರವನ್ನು ಗಳಿಸಿಕೊಳ್ಳಲು ಬ್ರಿಟಿಷ್ ಸರ್ಕಾರ ಸ್ಟಾಪರ್ಡ್ ಕ್ರಿಪ್ಸ್ ನೇತೃತ್ವದಲ್ಲಿ ಒಂದು ಆಯೋಗವನ್ನು ಸಂಧಾನಕ್ಕಾಗಿ ಭಾರತಕ್ಕೆ ಕಳುಹಿಸಿತು, ಆದರೆ ಭಾರತದೊಂದಿಗಿನ ಸಂಧಾನ ಸಭೆ ವಿಫಲವಾಯಿತು. ಹೀಗಾಗಿ ಭಾರತೀಯರಿಗೆ ಬ್ರಿಟಿಷರ ವಿರುದ್ಧ ಹೋರಾಟ ಅನಿವಾರ್ಯವಾಯಿತು. ಅದರಂತೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಗಾಂಧೀಜಿಯವರ ನಾಯಕತ್ವದಲ್ಲಿ ತುರ್ತು ಸಭೆಯನ್ನು 1942 ಆಗಸ್ಟ್ 7 ಮತ್ತು 8 ರಂದು ಬೊಂಬಾಯಿಯಲ್ಲಿ ಸೇರಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಅಂತಿಮ ಹೋರಾಟಕ್ಕೆ ಸಿದ್ದರಾಗಬೇಕೆಂದು ಕರೆ ನೀಡಿತು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಶಶಿಕಮಾರ್ ಬಿ ಎಸ್, ಇತಿಹಾಸ ಸಹಾಯಕ ಪ್ರಾಧ್ಯಾಪಕರು,ಸರ್ಕಾರಿ ಪ್ರಥಮದರ್ಜೆ ಕಾಲೇಜು– ತಿಪಟೂರು

How to cite this article:
ಡಾ. ಶಶಿಕಮಾರ್ ಬಿ ಎಸ್,. (2026). *ತುಮಕೂರು ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಒಂದು ಅವಲೋಕನ*
Journal of Research & Development, 18(5(IV)), 81–84. https://doi.org/10.5281/zenodo.20992106

Quick Response Code:
Website:
https://jrdrvb.org/
DOI:
10.5281/zenodo.20992106
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಗಾಂಧೀಜಿಯವರು ಈ ಅಧಿವೇಶನದಲ್ಲಿ ಮಾತನಾಡುತ್ತಾ ಬ್ರಿಟಿಷರ ಸಂಕೋಲೆಯಲ್ಲಿ ಬಂದಿತರಾಗಿರುವ ಭಾರತೀಯರನ್ನು ಮುಕ್ತಗೊಳಿಸಲು ಇಡಿ ದೇಶದ ಜನತೆ ಬ್ರಿಟಿಷರ ವಿರುದ್ಧ ಹೋರಾಡುವ ಅಗತ್ಯತೆ ಇದೆ, ಬ್ರಿಟಿಷರಿಗೆ ಭಾರತ ಬಿಟ್ಟು ತೊಲಗಿ ಎಂಬ ಎಚ್ಚರಿಕೆಯನ್ನು ನೀಡಿ ದೇಶದ ಜನತೆಗೆ ಮಾಡು ಇಲ್ಲವೇ ಮಡಿ ಎಂಬ ಆಹ್ವಾನ ನೀಡಿದರು. ಈ ಕರೆಯು ಇಡೀ ದೇಶದಾದ್ಯಂತ ಜನತೆಯನ್ನು ಹೋರಾಟಕ್ಕೆ ಪ್ರೇರೇಪಿಸಿ ಇದು ಚಲೇಜಾವ್ ಅಥವಾ ಕ್ವಿಟ್ ಇಂಡಿಯಾ ಚಳುವಳಿ ಎಂದು ಪ್ರಸಿದ್ಧಿ ಪಡೆಯಿತು.

ದೇಶದಾದ್ಯಂತ ಆರಂಭವಾದ ಈ ಚಳುವಳಿಯನ್ನು ಹತೋಟಿಯಲ್ಲಿಡಲು ಬ್ರಿಟಿಷ್ ಸರ್ಕಾರ ಆಗಸ್ಟ್ 9 ರಂದು ಗಾಂಧೀಜಿಯವರು ಸೇರಿದಂತೆ ದೇಶದ ಎಲ್ಲಾ ಪ್ರಮುಖ ನಾಯಕರುಗಳನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ವನ್ನು ನ್ಯಾಯಬಾಹಿರ ಸಂಸ್ಥೆಯೆಂದು ಘೋಷಿಸಿ, ದೇಶದಾದ್ಯಂತ ಇದ್ದ ಕಾಂಗ್ರೆಸ್ ಕಚೇರಿಗಳಿಗೆ ಬೀಗಮುದ್ರೆ ಹಾಕಿಸಲಾಯಿತು. ಜೊತೆಗೆ ದೇಶದಾದ್ಯಂತ ಜನತೆ ಸಾರ್ವಜನಿಕ ಸಭೆಗಳನ್ನು ಸೇರಲು, ಮೆರವಣಿಗೆಗಳನ್ನು ನಡೆಸದಂತೆ ನಿರ್ಬಂಧ ವಿಧಿಸಲಾಯಿತು. ಈ ಸಮಯದಲ್ಲಿ ರಾಷ್ಟ್ರಮಟ್ಟದ ಪ್ರಮುಖ ನಾಯಕರಿಲ್ಲದ ಕಾರಣಕ್ಕೆ ಹೋರಾಟವು ಹಿಂಸಾರೂಪ ಪಡೆಯಿತು, ಹೀಗಾಗಿ ಸ್ವಾತಂತ್ರ್ಯ ಪ್ರೇಮಿಗಳು ಕ್ವಿಟ್ ಇಂಡಿಯಾ ಹೋರಾಟದಿಂದಾಗಿ ಸಹಸ್ರಾರು ಮಂದಿ ಬಂಧನಕ್ಕೆ ಒಳಗಾಗಬೇಕಾಯಿತು, ನೂರಾರು ಚಳುವಳಿಗಾರರು ಬ್ರಿಟಿಷರ ಗುಂಡೇಟಿಗೆ ಬಲಿಯಾಗಬೇಕಾಯಿತು.

ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ ;– ಗಾಂಧೀಜಿಯವರು ಬೊಂಬಾಯಿಯಲ್ಲಿ ಕರೆ ನೀಡಿದ ಕ್ವಿಟ್ ಇಂಡಿಯಾ ಚಳುವಳಿಯ ನಿರ್ಣಯ ಸಭೆಯಲ್ಲಿ ಕರ್ನಾಟಕದಿಂದ ಹಾಜರಾಗಿದ್ದ ಆರ್ ಆರ್ ದಿವಾಕರ್, ವೀರಣ್ಣಗೌಡ ಪಾಟೀಲ, ಎಂ ಪಿ ಪಾಟೀಲ್ ಮುಂತಾದವರು ಭಾಗಿಯಾಗಿದ್ದರು. ಇವರು ಗಾಂಧೀಜಿಯವರು ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೂಚಿಸಿದಂತೆ ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ನಡೆಸುವ ರೂಪುರೇಷೆಗಳನ್ನು ಸಿದ್ಧಪಡಿಸಿದರು ಈ ಪ್ರಕಾರ ;–

- ಬ್ರಿಟಿಷ್ ಸರ್ಕಾರದ ಎಲ್ಲಾ ಕಾಯ್ದೆಗಳನ್ನು ಧಿಕ್ಕರಿಸುವುದು.
- ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಹೊರಬರುವುದು.
- ಸರ್ಕಾರಿ ಸೇವೆಯಲ್ಲಿರುವವರು ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದು.
- ರೈತರು ಸರ್ಕಾರಕ್ಕೆ ತೆರಿಗೆ ಸಲ್ಲಿಸದಿರುವುದು.
- ಕಾರ್ಮಿಕರು ಮುಷ್ಕರಗಳಲ್ಲಿ ಭಾಗವಹಿಸುವುದು.
- ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ನ್ಯಾಯವಾದಿಗಳು ಭಾಗವಹಿಸದಿರುವುದು.
- ಅಂಚೆ ಮತ್ತು ತಂತಿಗಳನ್ನು ತುಂಡರಿಸುವುದು.
- ಬ್ರಿಟಿಷ್ ಶಾಸನಸಭೆಗಳ ಸದಸ್ಯತ್ವವನ್ನು ತೊರೆಯುವುದು. ಈ ರೀತಿಯ ಇನ್ನು ಹಲವು ಕಾರ್ಯಕ್ರಮಗಳ ಯೋಜನೆ ರೂಪಿಸಲಾಯಿತು.

ಹಳೆ ಮೈಸೂರು ಪ್ರಾಂತ್ಯದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ತೀವ್ರಗೊಳಿಸುವಲ್ಲಿ ನಿಟ್ಟೂರು ಶ್ರೀನಿವಾಸರಾವ್, ರಾಮಚಂದ್ರರಾವ್, ಎಚ್ ಆರ್ ವೆಂಕಟರಮಣಯ್ಯ, ಎಚ್ ಎಸ್ ಸೀತಾರಾಮ, ಕಮಲಾದೇವಿ ಚಟ್ಟೋಪಾಧ್ಯಾಯ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಮುಂತಾದವರು ಪ್ರಮುಖ ಪಾತ್ರವಹಿಸಿದ ನಾಯಕರುಗಳು.

ತುಮಕೂರು ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ:–

ಕರ್ನಾಟಕದ 31 ಜಿಲ್ಲೆಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆಯು ಇತಿಹಾಸ ಪೂರ್ವ ಕಾಲದಿಂದಲೂ ತನ್ನ ಚರಿತ್ರೆಯನ್ನು ಹೊಂದಿದೆ. ನಾಲ್ಕನೇ ಆಂಗ್ಲೋ–ಮೈಸೂರು ಕದನದ(1799) ನಂತರ ತುಮಕೂರು ಜಿಲ್ಲೆಯು ಮೈಸೂರು ಒಡೆಯರ ರಾಜಮನೆತನಕ್ಕೆ ಹಸ್ತಾಂತರಿಸಿತು. ಭಾರತದ ಸ್ವತಂತ್ರ ಚಳುವಳಿಯಲ್ಲಿ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ಎಲ್ಲ ಚಳುವಳಿಯಲ್ಲೂ ತುಮಕೂರು ಜಿಲ್ಲೆಯಲ್ಲಿನ ಹೋರಾಟವನ್ನು ಗುರುತಿಸಬಹುದಾಗಿದೆ.

1923 ರಲ್ಲಿ ಆರಂಭವಾದ ತುಮಕೂರು ಜಿಲ್ಲಾ ಕಾಂಗ್ರೆಸ್ ಶಾಖೆಯು 1947ರವರೆಗೆ ವಿವಿಧ ಹೋರಾಟಗಳಲ್ಲಿ ಭಾಗವಹಿಸಿದ್ದನ್ನು ಗುರುತಿಸಬಹುದಾಗಿದೆ. ಗಾಂಧೀಜಿಯವರು ಕರೆ ನೀಡಿದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ತುಮಕೂರು ಜಿಲ್ಲೆಯ ತುಮಕೂರು, ಮಧುಗಿರಿ, ಕೊರಟಗೆರೆ, ಗುಬ್ಬಿ, ಪಾವಗಡ, ಕುಣಿಗಲ್, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ ಭಾಗಗಳಲ್ಲಿ ಹಲವು ಪ್ರಭಾವ ಬೀರುವಂತಹ ಹೋರಾಟಗಳು ನಡೆದಿವೆ. ಬ್ರಿಟಿಷ್ ಸರ್ಕಾರವು 1942 ಆಗಸ್ಟ್ 9ರಂದು ಕಾಂಗ್ರೆಸ್ಸಿನ ಎಲ್ಲಾ ಜಿಲ್ಲಾ ವ್ಯಾಪ್ತಿಯ ಚಟುವಟಿಕೆಗಳನ್ನು ನಿಷೇಧಿಸುವಂತೆ ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಆದೇಶ ನೀಡಿತು. ಈ ಪ್ರಕಾರ ತುಮಕೂರು ಜಿಲ್ಲಾಧಿಕಾರಿಯೂ ಜಿಲ್ಲೆಯ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಕಾನೂನುಬಾಹಿರ ಸಂಸ್ಥೆಗಳೆಂದು ಘೋಷಿಸಿ, ಸರ್ಕಾರದ ವಿರುದ್ಧ ಮೆರವಣಿಗೆಗಳನ್ನು ಸಭೆಗಳನ್ನು ಕರಪತ್ರಗಳನ್ನು ಹಂಚುವುದನ್ನು ನಿಷೇಧಿಸಿತು. ಆದರೆ ಈ ಆದೇಶಕ್ಕೆ ಕಿವಿಗೊಡದ ತುಮಕೂರು ಜಿಲ್ಲಾ ಕಾಂಗ್ರೆಸ್ ತುಮಕೂರು ಜಿಲ್ಲೆಯಲ್ಲಿ ಆಗಸ್ಟ್ 9 ರಂದು ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಯಿತು. ಚಳುವಳಿ ಆರಂಭದಿಂದಲೂ ಜಿಲ್ಲೆಯ ಪ್ರಮುಖ ನಾಯಕರದ ಆರ್ ಎಸ್ ಆರಾಧ್ಯದವರು, ನಂಜಪ್ಪನವರು, ಕೆ ವಿ ಸುಬ್ರಹ್ಮಣ್ಯ ಸ್ವಾಮಿಯವರು ಸೇರಿದಂತೆ ಮುಂತಾದ ನಾಯಕರು ಜಿಲ್ಲೆಯಲ್ಲಿನ ರೈತರು, ಕಾರ್ಮಿಕರು, ವರ್ತಕರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಸೇರಿದಂತೆ ಎಲ್ಲಾ ಜನರಿಗೆ ಹೋರಾಟದಲ್ಲಿ ಭಾಗಿಯಾಗುವಂತೆ ಕರೆ ನೀಡಿದಾಗ ಜಿಲ್ಲೆಯ ಎಲ್ಲಾ ಜನತೆ ಸಕ್ರಿಯವಾಗಿ ಹೋರಾಟದಲ್ಲಿ ಭಾಗವಹಿಸಿದ್ದರು.

ಎಸ್ ಆರ್ ಆರಾಧ್ಯರವರು ಜಿಲ್ಲೆಯಲ್ಲಿ ಭೂಗತ ಚಟುವಟಿಕೆಗಳಲ್ಲಿ ತೊಡಗಿದ್ದು ಮುಗಿಲು, ಕ್ರಾಂತಿ, ಬೆಂಕಿ ಎಂಬ ಗುಪ್ತ ಪತ್ರಿಕೆಗಳ ಮೂಲಕ ಕರಪತ್ರಗಳನ್ನು ಹಂಚಿ ಸುದ್ದಿ ಸಮಾಚಾರಗಳನ್ನು ಜಿಲ್ಲೆಯಾದ್ಯಂತ ತಲುಪಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು ಇವರನ್ನು ಹಿಡಿದು ಸರ್ಕಾರಕ್ಕೆ ಒಪ್ಪಿಸಿದರೆ ಬಹುಮಾನ ನೀಡುವ ಪ್ರಕಟಣೆಯನ್ನು ಜಿಲ್ಲಾಧಿಕಾರಿಗಳು ಹೊರಡಿಸಿದ್ದರು. 1942ಆಗಸ್ಟ್ 13 ಮತ್ತು 14 ರಂದು ನಗರದಲ್ಲಿ ಎಂ ವಿ ರಾಮರಾವ್ ನೇತೃತ್ವದಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಸುಮಾರು 500 ಮಂದಿ ಭಾಗವಹಿಸಿದ್ದರು. ಈ ಸಭೆಯಲ್ಲಿ ತುಮಕೂರು ಜಿಲ್ಲಾಧಿಕಾರಿಯು ಜಾರಿಗೊಳಿಸಿರುವ ನಿಷೇಧಾಜ್ಞೆಯನ್ನು ಖಂಡಿಸಲಾಯಿತು. ಹಾಗೂ ಬ್ರಿಟಿಷ್ ಸರ್ಕಾರಕ್ಕೆ ಜನತೆಯ ಮೇಲೆ ಕಾನೂನು ಕ್ರಮ ಜರುಗಿಸುವ ಯಾವುದೇ ನೈತಿಕ ಹಕ್ಕು ಸರ್ಕಾರಕ್ಕಿಲ್ಲ, ನಮ್ಮ ಹೋರಾಟವನ್ನು ಯಾವುದೇ ವಿದೇಶಿ ಆಡಳಿತದಿಂದ ನಿಯಂತ್ರಿಸಲು ಸಾಧ್ಯವಿಲ್ಲ, ಬ್ರಿಟಿಷರು ಭಾರತದಿಂದ ಕೂಡಲೇ ತೊಲಗಬೇಕು ಮತ್ತು ಗಾಂಧೀಜಿಯವರು ನೀಡಿದ್ದ 13

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಅಂಶಗಳ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಈ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು. 15 ಆಗಸ್ಟ್ 1942 ರಂದು ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ಅಡಿಯಲ್ಲಿ ಎಂ ವಿ ರಾಮರಾವ್ ರನ್ನು ಬಂಧಿಸಲಾಯಿತು. ಆಗಸ್ಟ್ 18 ರಂದು ಶೇಷಮ್ಮ ಸುಬ್ರಹ್ಮಣ್ಯ ಸ್ವಾಮಿಯವರ ನೇತೃತ್ವದಲ್ಲಿ ನಗರದ ಹೆಣ್ಣು ಮಕ್ಕಳ ಶಾಲೆಯ ಮುಂದೆ 150 ವಿದ್ಯಾರ್ಥಿಗಳ ಸಭೆ ಮತ್ತು ಮೆರವಣಿಗೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಆರ್ ಎಸ್ ಆರಾಧ್ಯರವರ ಕರೆಯಂತೆ ಜಿಲ್ಲೆಯ ವಿದ್ಯಾರ್ಥಿಗಳು ಜಿಲ್ಲೆಯಾದ್ಯಂತ ಶಾಲಾ–ಕಾಲೇಜುಗಳನ್ನು ಬಹಿಷ್ಕರಿಸಿ ಹೋರಾಟಗಾರರೊಂದಿಗೆ ಸೇರಿಕೊಂಡು ಮೆರವಣಿಗೆ, ಸಭೆಗಳಲ್ಲಿ ಭಾಗಿಯಾಗಿ ಸಕ್ರಿಯವಾಗಿ ಚಳುವಳಿಯಲ್ಲಿ ತೊಡಗಿದರು. ಆಗಸ್ಟ್ 12 ರಂದು ತುಮಕೂರು ನಗರದ ಇಂಟರ್ ಮೀಡಿಯಟ್ ಕಾಲೇಜಿನ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ತಮ್ಮ ಪ್ರತಿಭಟನೆ ವ್ಯಕ್ತಪಟಿಸಿದರು. ವಿದ್ಯಾರ್ಥಿಗಳು ವಿದೇಶಿ ವಸ್ತುಗಳನ್ನು ಸುಡುವ, ತಮ್ಮ ಸಮವಸ್ತ್ರಗಳನ್ನು ತ್ಯಜಿಸುವ ಮೂಲಕ ಬೆಂಬಲ ವ್ಯಕ್ತಪಡಿಸಿದರು, ನಗರದಾದ್ಯಂತ ಮೆರವಣಿಗೆ ನೆಡೆಸಿ ದ್ಯಾರ್ಥಿಗಳು ಬ್ರಿಟಿಷ್ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ನಗರದ ಅಂಗಡಿ ಮುಂಗಟ್ಟುಗಳನ್ನು ಮುಚ್ಚುವಂತೆ ಒತ್ತಾಯಿಸಿದರು. ಜಯದೇವ ಹಾಸ್ಟಲ್ ನಲ್ಲಿ ಸುಮಾರು 100 ವಿದ್ಯಾರ್ಥಿಗಳು ಸಭೆ ಸೇರಿ ಕೈ ಬರಹದ ಕ್ರಾಂತಿ ಕರಪತ್ರವನ್ನು ಮುದ್ರಿಸಿ ನಗರದಾದ್ಯಂತ ಹಂಚಿದರು. ತುಮಕೂರಿನ ಕೆಲವು ವಿದ್ಯಾರ್ಥಿಗಳು ಕ್ಯಾತ್ಸಂದ್ರದಿಂದ ಬೆಂಗಳೂರಿನವರೆಗೆ ಟಿಕೆಟ್ ರಹಿತವಾಗಿ ರೈಲಿನಲ್ಲಿ ಪ್ರಯಾಣ ಮಾಡಿದರು. ತುಮಕೂರಿನಿಂದ ತಿಪಟೂರಿಗೆ ಸುಮಾರು 100 ವಿದ್ಯಾರ್ಥಿಗಳು ಟಿಕೆಟ್ ರಹಿತವಾಗಿ ರೈಲಿನಲ್ಲಿ ಪ್ರಯಾಣ ಮಾಡಿದರು. ತಿಪಟೂರಿನಲ್ಲಿ ಆಗಸ್ಟ್ 15 ರಂದು ಸುಮಾರು 200 ವಿದ್ಯಾರ್ಥಿಗಳು ಬ್ರಿಟಿಷ್ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ನಗರದ ಅಂಗಡಿ ಮುಂಗಟ್ಟುಗಳನ್ನು ಮುಚ್ಚುವಂತೆ ಒತ್ತಾಯಿಸಿದರು. ಹಾಗೆಯೇ ಹಳೇಪಾಳ್ಯ, ಕರಡಿ ಮುಂತಾದ ಗ್ರಾಮಗಳಲ್ಲಿ ಸೇಂದಿ ಅಂಗಡಿಗಳನ್ನು ಸುಟ್ಟು ಹಾಕಿದರು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದರು. ಆಗಸ್ಟ್ 18 ರಂದು ಮಾರನಗೆರೆ ಸಿದ್ದಪ್ಪನವರು ಹುತಾತ್ತರಾದಾಗ ಗೂಡ್ಸ್ ಶಡ್ಡಿಗೆ ಬೆಂಕಿಹಾಕಿದರು. ಹೀಗಾಗಿ ಹಲವು ವಿದ್ಯಾರ್ಥಿಗಳು ದಸ್ತಗಿರಿಯ ಶಿಕ್ಷೆ ಅನುಭವಿಸಬೇಕಾಯಿತು.

ಆಗಸ್ಟ್ 9ರಂದು ಮಧುಗಿರಿಯಲ್ಲಿ ಕೆ ಹೆಂಜೇರಪ್ಪ, ಮಾಲಿಮರಿಯಪ್ಪನವರು ಗಾಂಧೀಜಿಯವರ ಬಂಧನ ವಿರೋಧಿಸಿ ಮತ್ತು ಬ್ರಿಟಿಷ್ ಸರ್ಕಾರದ ನೀತಿಗಳನ್ನ ಖಂಡಿಸಿ ನಡೆಸಿದ ಮೆರವಣಿಗೆಯಲ್ಲಿ ಬಂಧಿತರಾದರು. ರೇವಣ್ಣ, ರುದ್ರಯ್ಯ, ವೆಂಕಟರಾಮ, ರಾಮಕೃಷ್ಣ ಶೆಟ್ಟಿ, ಶ್ರೀಕಂಠ ಶಾಸ್ತ್ರಿ, ಸೀತಾರಾಮ ಸಿಂಗ್, ನಂಜಯ್ಯ ಶೆಟ್ಟಿ ಮುಂತಾದವರು ಮಧುಗಿರಿಯಲ್ಲಿ ಚಳುವಳಿಯ ನಾಯಕತ್ವ ವಹಿಸಿದ್ದ ಪ್ರಮುಖ ನಾಯಕರಾಗಿದ್ದರು. ತಾಲೂಕಿನಲ್ಲಿ ನಿಟ್ಟರಹಳ್ಳಿ, ಕೊಡಿಗೆನಹಳ್ಳಿ, ಬೈರೇನಹಳ್ಳಿ, ಬ್ಯಾಲ, ಕನಕನಾಯಕನಹಳ್ಳಿ ಪ್ರಮುಖ ಹೋರಾಟ ಕೇಂದ್ರಗಳಾಗಿದ್ದವು.

ಕೊರಟಗೆರೆಯಲ್ಲಿ ಎಸ್ ಆರ್ ವೀರಶೆಟ್ಟರು, ಆರ್ ಚೆನ್ನಿಗರಾಮಯ್ಯ, ಎಂ ಎಸ್ ಹನುಮಂತರಾವ್, ನಂಜಪ್ಪ, ಪ್ರಹ್ಲಾದ ರಾವ್‌ರವರು ತಾಲೂಕಿನಾದ್ಯಂತ ಪ್ರಚಾರ ಸಭೆ, ಮೆರವಣಿಗೆ, ಮಧ್ಯದ ಅಂಗಡಿಗಳ ಮುಂದೆ ಪಿಕೇಟಿಂಗ್ ನಡೆಸುವ ಮೂಲಕ ಬ್ರಿಟಿಷರ ಆಡಳಿತದ ವಿರುದ್ಧ ಸಿಡಿದೆದ್ದರು. ತೋವಿನಕೆರೆ, ತುಂಬಾಡಿ, ಶೆಟ್ಟಿಕೆರೆ, ವಡ್ಡಗೆರೆ, ಪೋತಗಾನಹಳ್ಳಿ, ಅಕ್ಕಿರಾಂಪುರ, ತೀಥಾ ಗ್ರಾಮಗಳು ಪ್ರಮುಖ ಹೋರಾಟ ಕೇಂದ್ರಗಳಾಗಿದ್ದವು.

ತಿಪಟೂರಿನಲ್ಲಿ ಎಸ್ ಆರ್ ಮಲ್ಲಪ್ಪ, ವಿಶ್ವನಾಥ ಶೆಟ್ಟಿ, ಎನ್ ರಂಗಪ್ಪನವರು ಆಗಸ್ಟ್ 13ರಂದು ಗಾಂಧೀಜಿಯವರ ಬಂಧನ ವಿರೋಧಿಸಿ ಮತ್ತು ಬ್ರಿಟಿಷ್ ಸರ್ಕಾರದ ನೀತಿಗಳನ್ನ ಖಂಡಿಸಿ ನಡೆಸಿದ ಮೆರವಣಿಗೆಯಲ್ಲಿ ಭಾಗಿಯಾಗಿ ಮಧ್ಯದ ಅಂಗಡಿಗಳ ಮುಂದೆ ಪಿಕೇಟಿಂಗ್ ನಡೆಸುವ ಮೂಲಕ ಬ್ರಿಟಿಷರ ಆಡಳಿತದ ವಿರುದ್ಧ ಸಿಡಿದೆದ್ದು ದಸ್ತಗಿರಿಯಾದರು. ಆಗಸ್ಟ್ 18 ರಂದು ತಿಪಟೂರಿನಲ್ಲಿ ಬಾರಿ ಗಲಾಟೆ ಉಂಟಾಗಿ ತಿಪಟೂರು ರೈಲು ನಿಲ್ದಾಣ ಜಕಂಗೊಂಡಿತು. ನಗರದ ರೈಲ್ವೆ ನಿಲ್ದಾಣದಲ್ಲಿ ಗೂಡ್ಸ್ ಶೆಡ್ಡಿಗೆ ಬೆಂಕಿ ಇಡುವ ಪ್ರಕರಣ ಜರುಗಿದ ಘಟನೆಯಲ್ಲಿ ಮಾರಣಗೆರೆ ಸಿದ್ದಪ್ಪ ಮತ್ತು ತುಮಕೂರಿನ ಸುಂದರ ರಾಜ ಎಂಬುವರಿಗೆ ಗುಂಡು ತಗಲಿ ಗಾಯಗೊಂಡರು. ಈ ಘಟನೆಯಲ್ಲಿ ಮಾರಣಗೆರೆ ಸಿದ್ದಪ್ಪನವರು ಮರಣ ಹೊಂದಿದರು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್ ಡಿ ರಾಮಸ್ವಾಮಿ, ಎಸ್ ಲಿಂಗಪ್ಪ, ವಿಶ್ವನಾಥ ಶೆಟ್ಟಿ, ನಂಜಪ್ಪ, ಮಲ್ಲಪ್ಪ ಗಂಗಯ್ಯ ಮುಂತಾದವರನ್ನು ಬಂಧಿಸಲಾಯಿತು.

ಗುಬ್ಬಿ ತಾಲೂಕಿನಲ್ಲಿ ಪ್ರಚಾರ ಸಭೆ, ಮೆರವಣಿಗೆ, ರಸ್ತೆ ತಡೆಗಳ ಕಾರ್ಯಗಳ ನಾಯಕತ್ವವನ್ನು ಗಟ್ಟಿ ರೇವಣ್ಣ, ಮಲ್ಲಪ್ಪ, ಅಡವಿಶಯ, ಗೋಪಾಲಯ್ಯನವರು ವಹಿಸಿದ್ದು, ತಾಲ್ಲೂಕಿನಾದ್ಯಂತ ಜಿಲ್ಲಾಕಾಂಗ್ರೇಸ್ ನಾಯಕತ್ವದಲ್ಲಿ ಚಳುವಳಿ ನಡೆಯಿತು. ಚಿಕ್ಕನಾಯಕನಹಳ್ಳಿಯಲ್ಲಿ ಲಿಂಗದೇವರು, ಹನುಮಂತ ರಾವ್, ಶ್ರೀನಿವಾಸ ಮೂರ್ತಿ, ಸೀತಪ್ಪ, ಗೋಪಾಲ ಶೆಟ್ಟಿ ಮುಂತಾದವರ ನಾಯಕತ್ವದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಕ್ವಿಟ್ ಇಂಡಿಯಾ ಚಳುವಳಿಗೆ ಬೆಂಬಲ ಸೂಚಿಸಿರುವುದನ್ನು ಗುರುತಿಸಬಹುದು. ಪಾವಗಡದಲ್ಲಿ ನಂಜಪ್ಪ, ವೆಂಕಟೇಶ ಗುಪ್ತ, ನಂಜುಂಡ ರಾವ್, ನರಸಿಂಘರಾವ್, ಗೋವಿಂದಪ್ಪನವರ ನೇತೃತ್ವದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಸಕ್ರಿಯವಾಗಿ ಆಯೋಜಿಸಲಾಯಿತು.

ಆಗಸ್ಟ್ 22ರಂದು ತುಮಕೂರಿನ ಜಿಲ್ಲೆಯ ಗ್ರಾಮಗಳಾದ ಕೆಸ್ತೂರು, ದೇವಲಾಪುರ, ಆಗಲಗುಂಟೆ, ಹೊನ್ನುಡಿಕೆ ಗ್ರಾಮಗಳಲ್ಲಿ ಮಧ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ಮತ್ತು ಹೆಂಡ ತುಂಬಿದ ಮಡಕೆಗಳನ್ನು ನಾಶ ಮಾಡುವ ಕಾರ್ಯ ನಡೆಯಿತು. ಶಿರಾರಸ್ತೆಯಲ್ಲಿ ದೂರವಾಣಿ ತಂತಿಗಳನ್ನು ಕತ್ತರಿಸುವಾಗ ಕೆಲವು ಯುವಕರು ಪೊಲೀಸರ ಕೈಗೆ ಸಿಕ್ಕಿ ಬಿದ್ದರು. ವೆಂಕಟಚಲಯ್ಯ, ಹನುಮಂತಯ್ಯ, ಎ ಎಲ್ ನರಸಿಂಹಯ್ಯ, ಲಕ್ಷ್ಮೀನರಸಿಂಹಯ್ಯ, ವ್ಯಾಸಚಾರ್, ಶ್ರೀನಿವಾಸ ಆಚಾರ್ ಇವರನ್ನು ಡಿಫೆನ್ಸ್ ಆಫ್ ಇಂಡಿಯಾ ಕಾಯ್ದೆಯ ನಿಯಮಗಳಂತೆ ಬಂಧಿಸಲಾಯಿತು.

ಒಟ್ಟಾರೆ ಇಡೀ ತುಮಕೂರು ಜಿಲ್ಲೆಯು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಹೋರಾಟದಲ್ಲಿ ತೊಡಗಿರುವುದನ್ನು ಗುರುತಿಸಬಹುದಾಗಿದ್ದು ಬ್ರಿಟಿಷ್ ಸರ್ಕಾರ ಎಷ್ಟೇ ನಿಷೇಧಾಜ್ಞೆಗಳನ್ನು ಜಾರಿಗೆ ತಂದರು ಜಿಲ್ಲೆಯ ಹಲವು ಭಾಗಗಳಲ್ಲಿ ತೀವ್ರವಾದ ಚಳುವಳಿಗಳು ನಡೆದವು. ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಸಭೆ, ಮೆರವಣಿಗೆ, ಮಧ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್‌ಗಳು ಹೆಚ್ಚಾಗಿ ನಡೆದವು. ಈ ಚಳುವಳಿಯಲ್ಲಿ ಒಟ್ಟಾರೆ 2117 ಅಪರಾಧಗಳನ್ನು ಉಲ್ಲೇಖಿಸಿದ್ದು 3504 ಜನರನ್ನು ಬಂಧಿಸಲಾಗಿತ್ತು. ತುಮಕೂರು ಜಿಲ್ಲೆಯಲ್ಲಿ ಮುಸ್ಲಿಂ ಲೀಗಿನ ಕರೆಗೆ ಓಗೊಟ್ಟ ಮುಸ್ಲಿಮರು ಚಳುವಳಿಯಿಂದ ದೂರ ಉಳಿದಿದ್ದರು. ಚಳುವಳಿಯ ಕಾವು 1942 ಡಿಸೆಂಬರ್ ವೇಳೆಗೆ ಕಡಿಮೆಯಾಯಿತು. ಈ ಸಂದರ್ಭದಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಮುಷ್ಕರದಿಂದ ಹಿಂದೆ ಸರಿದಿದ್ದು ಚಳುವಳಿಯ ಹಿನ್ನೆಡೆಗೆ ಕಾರಣವಾಯಿತು. ಬ್ರಿಟಿಷರು ತಮ್ಮ ನಿರ್ದಾಕ್ಷಿಣ್ಯ ಮತ್ತು ಕಠಿಣ ಕ್ರಮಗಳ ಮೂಲಕ ಚಳುವಳಿಯನ್ನು ಬಹುಬೇಗ ಹತ್ತಿಕ್ಕಿದರು. ಆದರು ಈ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಚಳುವಳಿ ಭಾರತದಲ್ಲಿ ಬ್ರಿಟಿಷರ ಸರ್ಕಾರದ ಆಡಳಿತದ ಬೇರುಗಳನ್ನೇ ಅಲ್ಲಾಡಿಸಿತು. ಇನ್ನು ಮುಂದೆ ಭಾರತವನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಖಚಿತಪಡಿಸಿತು. ಬ್ರಿಟಿಷ್ ಸರ್ಕಾರದ ಪೋಸ್ಟ್ ಆಫೀಸ್ ಮತ್ತು ಪೋಸ್ಟ್ ಪೆಟ್ಟಿಗೆಗಳ ಧ್ವಂಸ, ರೈಲು ಹಳಿಗಳ ಧ್ವಂಸ, ಸರ್ಕಾರಿ ಕಚೇರಿಗಳ ಮೇಲೆ ದಾಳಿ ಮುಂತಾದ ಕಾರ್ಯಕ್ರಮಗಳಿಂದ ಸರ್ಕಾರಿ ಯಂತ್ರಕ್ಕೆ ದೊಡ್ಡ ಪೆಟ್ಟು ಬಿತ್ತು. ಈ ಹೋರಾಟದಲ್ಲಿ ಅನೇಕ ಜನ ತಮ್ಮ ಆಸ್ತಿಪಾಸ್ತಿ ಕಳೆದುಕೊಂಡರು, ಮತ್ತೆ ಕೆಲವರು ಕಾರಾಗೃಹ ಬಂಧನದಿಂದಾಗಿ ತಮ್ಮ ಮಕ್ಕಳಿಗೆ ತಿನ್ನಲು ಅನ್ನವು ಸಿಗದಂತಹ ದುಸ್ಥಿತಿಗೆ ಬರುವುದರ ಅರಿವಿದ್ದರು ಚಳುವಳಿಯಲ್ಲಿ ಭಾಗಿಗಳಾಗಿ ಜಿಲ್ಲೆಯ ಕಾರಾಗೃಹಕ್ಕೆ ಒಳಗಾಗಬೇಕಾಯಿತು ಇದು ಜಿಲ್ಲೆಯ ಜನರ ತ್ಯಾಗದ ಮನೋಭಾವವನ್ನು ಸೂಚಿಸುತ್ತದೆ. ಒಟ್ಟಾರೆ ಕ್ವಿಟ್ ಇಂಡಿಯಾ ಚಳುವಳಿಯು ತುಮಕೂರು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಆಯೋಜನೆಗೊಂಡು ನೆಡೆಯಿತು ಎಂಬುದನ್ನು ಗುರುತಿಸಬಹುದಾಗಿದೆ.

ಗ್ರಂಥಾವಲೋಕನ

1. ತುಮಕೂರು ಜಿಲ್ಲಾಧಿಕಾರಿಗಳು ಮೈಸೂರು ಸರ್ಕಾರದ ಮುಖ್ಯಕಾರ್ಯದರ್ಶಿಗೆ ಕಳುಹಿಸಿರುವ ಗೌಪ್ಯ ವರಧಿಗಳು–1942
2. ತುಮಕೂರು ಜಿಲ್ಲಾಪೋಲೀಸ್ ಅಧಿಕಾರಿಗಳು ತುಮಕೂರು ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುವ ಗೌಪ್ಯ ವರಧಿಗಳು–1942–43, ತುಮಕೂರು ಜಿಲ್ಲೆ.
3. ಭಾಸ್ಕರಪ್ಪ ಸಿ ಎನ್, 1981, ತುಮಕೂರು ಜಿಲ್ಲಾ ದರ್ಶನ, ತುಮಕೂರು, ಟೈಮ್ಸ್ ಪಬ್ಲಿಕೇಷನ್.
4. ಚಂದ್ರಶೇಖರ್ ಎಸ್, 2000, ವಸಾಹತುಷಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ಹಂಪಿ, ಪ್ರಸಾರರಂಗ, ಕನ್ನಡ ವಿಶ್ವವಿದ್ಯಾನಿಲಯ.
5. ಹಾಲಪ್ಪ ಜಿ ಎಸ್,(ಸಂ), 1964, ಹಿಸ್ಟರಿ ಆಫ್ ಪ್ರಿಡಂಮೂಮೆಂಟ್ ಇನ್ ಕರ್ನಾಟಕ, ಸಂಪುಟ 2, ಮೈಸೂರು.
6. ಸೂರ್ಯನಾಥ್ ಕಾಮತ್, 1992, ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ, ಹುಬ್ಬಳ್ಳಿ ಮತ್ತು ಬೆಂಗಳೂರು, ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ.
7. ನಾಗರತ್ನಮ್ಮ ಎಸ್, 2009, ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ, ಬೆಂಗಳೂರು, ದೇಸಿ ಪುಸ್ತಕಮಾಲೆ.
8. ನಾಗರತ್ನಮ್ಮ ಎಸ್ ಮತ್ತು ನರಸಿಂಹಮೂರ್ತಿ ಎಚ್ ಕೆ, 2013, ತುಮಕೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು, ಬೆಂಗಳೂರು, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್.
9. ಶ್ರೀರಂಗ, 1969, ನಲವತ್ತೆರಡರ ಚಲೇಜಾವ್ ಚಳುವಳಿ, ಬೆಂಗಳೂರು, ಪುರೋಗಾಮಿ ಸಾಹಿತ್ಯ ಪ್ರಕಾಸನ.
10. ವೀರತಪ್ಪ ಕೆ, 1977, ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ, ಬೆಂಗಳೂರು, ವಿಜಯರವಿ ಪ್ರಕಾಶನ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಬದಲಾಗುತ್ತಿರುವ ಸ್ವರೂಪ: ಒಂದು ಸಮಾಜಶಾಸ್ತ್ರೀಯ ಅಧ್ಯಯನ.

ಡಾ. ಸುರೇಶ ಸಂಕಣ್ಣವರ. ಎಸ್
ಸಮಾಜಶಾಸ್ತ್ರ ಅತಿಥಿ ಉಪನ್ಯಾಸಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ
Email- Sureshsankannavar16@gmail.com

Manuscript ID:
JRD -2026-180520
ISSN: 2230-9578
Volume 18
Issue 5(IV)
Pp. 85-87
April- 2026
Submitted: 10 Apr. 2026
Revised: 25 Apr.2026
Accepted: 12 May. 2026
Published: 31 May. 2026

ಸಾರಾಂಶ (Abstract)

ಈ ಅಧ್ಯಯನವು ಭಾರತೀಯ ಸಮಾಜದ ಮೂಲಾಧಾರವಾದ ಕುಟುಂಬ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ರಚನಾತ್ಮಕ ಮತ್ತು ಕಾರ್ಯಾತ್ಮಕ ಬದಲಾವಣೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಶತಮಾನಗಳಿಂದಲೂ ಭಾರತೀಯ ಸಂಸ್ಕೃತಿಯ ಗುರುತಾಗಿದ್ದ 'ಅವಿಭಕ್ತ ಕುಟುಂಬ' ವ್ಯವಸ್ಥೆಯು ಇಂದು ಜಾಗತೀಕರಣ, ನಗರೀಕರಣ, ಕೈಗಾರಿಕೀಕರಣ ಮತ್ತು ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ 'ವಿಭಕ್ತ ಕುಟುಂಬ' ಮಾದರಿಯಲ್ಲಿ ವೇಗವಾಗಿ ಪರಿವರ್ತನೆಗೊಳ್ಳುತ್ತಿದೆ. ಈ ಸಂಶೋಧನೆಯು ಕುಟುಂಬದ ಗಾತ್ರದಲ್ಲಿನ ಕುಸಿತ, ಸಾಂಪ್ರದಾಯಿಕ 'ಕರ್ತೃ' ಅಧಿಕಾರ ಬದಲಾವಣೆ, ಮಹಿಳೆಯರ ಆರ್ಥಿಕ ಸಬಲೀಕರಣದಿಂದ ಬದಲಾದ ಕುಟುಂಬದ ಶ್ರೇಣಿ ವ್ಯವಸ್ಥೆ ಮತ್ತು ಮದುವೆಯ ಸ್ವರೂಪದಲ್ಲಿನ ಬದಲಾವಣೆಗಳನ್ನು ಕುರಿತು ಚರ್ಚಿಸುತ್ತದೆ. ಅಧ್ಯಯನದ ಫಲಿತಾಂಶಗಳ ಪ್ರಕಾರ, ಕುಟುಂಬದ ಸದಸ್ಯರ ನಡುವಿನ ಭಾವನಾತ್ಮಕ ಸಂಬಂಧಗಳು ತಾಂತ್ರಿಕ ಯುಗದಲ್ಲಿ ಹೊಸ ಸ್ವರೂಪ ಪಡೆಯುತ್ತಿವೆ. ಆದಾಗ್ಯೂ, ಭಾರತೀಯ ಕುಟುಂಬ ವ್ಯವಸ್ಥೆಯು ಪಾಶ್ಚಾತ್ಯ ಮಾದರಿಯನ್ನು ಪೂರ್ಣವಾಗಿ ಅಳವಡಿಸಿಕೊಳ್ಳದೆ, ತನ್ನದೇ ಆದ ಸಾಂಸ್ಕೃತಿಕ ಬೇರುಗಳೊಂದಿಗೆ ಆಧುನಿಕತೆಗೆ ತೆರೆದುಕೊಳ್ಳುತ್ತಿದೆ ಎಂಬುದು ಈ ಅಧ್ಯಯನದ ಪ್ರಮುಖ ಸಾರವಾಗಿದೆ.

ಪ್ರಮುಖ ಪದಗಳು: *ಕುಟುಂಬ ವ್ಯವಸ್ಥೆ, ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ, ನಗರೀಕರಣ, ಸಾಮಾಜಿಕ ಬದಲಾವಣೆ*

ಪೀಠಿಕೆ

ಭಾರತೀಯ ಕುಟುಂಬ ವ್ಯವಸ್ಥೆಯು ಕೇವಲ ಒಂದು ಸಾಮಾಜಿಕ ರಚನೆಯಲ್ಲ, ಅದು ನಮ್ಮ ಸಂಸ್ಕೃತಿಯ ಜೀವನಾಡಿ. ಕುಟುಂಬವು ಸಮಾಜದ ಮೂಲ ಘಟಕ. ಭಾರತೀಯ ಸಮಾಜದಲ್ಲಿ 'ಅವಿಭಕ್ತ ಕುಟುಂಬ' ವ್ಯವಸ್ಥೆಯು ಶತಮಾನಗಳಿಂದಲೂ ಅಸ್ತಿತ್ವದಲ್ಲಿ ಇರುವದನ್ನು ಕಾಣುತ್ತೇವೆ. ಆದರೆ ಇತ್ತೀಚಿನ ದಶಕಗಳಲ್ಲಿ ಕೈಗಾರಿಕೀಕರಣ, ನಗರೀಕರಣ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯು ರೂಪಾಂತರಗೊಳ್ಳುತ್ತಿದೆ. ಕುಟುಂಬವು ಮಾನವ ಸಮಾಜದ ಅತ್ಯಂತ ಪ್ರಾಚೀನ ಮತ್ತು ಮೂಲಭೂತ ಸಾಮಾಜಿಕ ಸಂಸ್ಥೆಯಾಗಿದೆ. ಭಾರತೀಯ ಸಮಾಜದ ಸಂದರ್ಭದಲ್ಲಿ ಕುಟುಂಬವು ಕೇವಲ ವ್ಯಕ್ತಿಗಳ ಸಮೂಹವಲ್ಲ, ಅದು ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಸಂಗಮವಾಗಿದೆ. ಸಾಂಪ್ರದಾಯಿಕವಾಗಿ ಭಾರತವು 'ಅವಿಭಕ್ತ ಕುಟುಂಬ' ವ್ಯವಸ್ಥೆಗೆ ಜಗತ್ಪ್ರಸಿದ್ಧಯನ್ನು ಪಡೆದಿದೆ. ಇಲ್ಲಿ ಮೂರು ಅಥವಾ ನಾಲ್ಕು ತಲೆಮಾರಿನ ಜನರು ಒಂದೇ ಸೂರಿನಡಿ ವಾಸಿಸುತ್ತಾ, ಒಂದೇ ಅಡುಗೆ ಮನೆಯ ಆಹಾರ ಸೇವಿಸುತ್ತಾ, ಸಾಮಾನ್ಯ ಆಸ್ತಿ ಮತ್ತು ಧಾರ್ಮಿಕ ವಿಧಿವಿಧಾನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ 21ನೇ ಶತಮಾನದ ಜಾಗತೀಕರಣ, ತಾಂತ್ರಿಕ ಪ್ರಗತಿ, ನಗರೀಕರಣ ಮತ್ತು ಶಿಕ್ಷಣದ ಪ್ರಭಾವದಿಂದಾಗಿ ಈ ಸಾಂಪ್ರದಾಯಿಕ ಚೌಕಟ್ಟು ವೇಗವಾಗಿ ಬದಲಾಗುತ್ತಿದೆ. ಭಾರತೀಯ ಸಮಾಜದಲ್ಲಿ ಸಾಂಪ್ರದಾಯಿಕವಾಗಿದ್ದ 'ಅವಿಭಕ್ತ ಕುಟುಂಬ' ವ್ಯವಸ್ಥೆಯು ಇಂದು ಆಧುನಿಕತೆಯ ಪ್ರಭಾವದಿಂದ 'ವಿಭಕ್ತ' ಮತ್ತು 'ವಿಸ್ತೃತ' ಕುಟುಂಬಗಳಾಗಿ ರೂಪಾಂತರಗೊಳ್ಳುತ್ತಿರುವುದು ಒಂದು ಪ್ರಮುಖ ಸಾಮಾಜಿಕ ಪ್ರಕ್ರಿಯೆಯಾಗಿದೆ. ಈ ಬದಲಾವಣೆಯು ಕೇವಲ ಕುಟುಂಬದ ಗಾತ್ರದಲ್ಲಿ ಮಾತ್ರವಲ್ಲದೆ, ಕುಟುಂಬದ ಸದಸ್ಯರ ನಡುವಿನ ಸಂಬಂಧಗಳು, ಅಧಿಕಾರ ಹಂಚಿಕೆ ಮತ್ತು ಮೌಲ್ಯ ವ್ಯವಸ್ಥೆಯಲ್ಲೂ ಕಂಡುಬರುತ್ತಿದೆ. ಈ ಬದಲಾವಣೆಯು ಸಮಾಜಶಾಸ್ತ್ರೀಯವಾಗಿ ಅತ್ಯಂತ ಕುತೂಹಲಕಾರಿ ಅಧ್ಯಯನವಾಗಿದೆ. ಇದು ಆಧುನಿಕತೆಯತ್ತ ಭಾರತದ ಹೆಜ್ಜೆಯನ್ನು ಸೂಚಿಸುತ್ತದೆಯಾದರೂ, ಅದರೊಂದಿಗೆ ಒಂಟಿತನ, ಹಿರಿಯರ ನಿರ್ಲಕ್ಷ್ಯದಂತಹ ಸಾಮಾಜಿಕ ಸವಾಲುಗಳನ್ನೂ ಹೊತ್ತು ತಂದಿದೆ. ಭಾರತೀಯ ಕುಟುಂಬ ವ್ಯವಸ್ಥೆಯು ಸಂಪೂರ್ಣವಾಗಿ ನಾಶವಾಗುತ್ತಿಲ್ಲ, ಬದಲಿಗೆ ಹೊಸ ಕಾಲಕ್ಕೆ ತಕ್ಕಂತೆ ತನ್ನನ್ನು ತಾನು 'ಮರುರೂಪಿಸಿಕೊಳ್ಳುತ್ತಿದೆ' ಎಂಬುದು ಇಲ್ಲಿ ಗಮನಾರ್ಹ ಅಂಶವಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಸುರೇಶ ಸಂಕಣ್ಣವರ. ಎಸ್ಸಮಾಜಶಾಸ್ತ್ರ ಅತಿಥಿ ಉಪನ್ಯಾಸಕರು,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ

How to cite this article:
ಡಾ. ಸುರೇಶ ಸಂಕಣ್ಣವರ. ಎಸ್ (2026). ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಬದಲಾಗುತ್ತಿರ ಸ್ವರೂಪ: ಒಂದು ಸಮಾಜಶಾಸ್ತ್ರೀಯ ಅಧ್ಯಯನ. Journal of Research & Development, 18(5(IV)), 85–87.
https://doi.org/10.5281/zenodo.20992488

Quick Response Code:
Website:
https://jrdrvb.org/
DOI:
10.5281/zenodo.20992488
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಅಧ್ಯಯನದ ಉದ್ದೇಶಗಳು

1. ಸಾಂಪ್ರದಾಯಿಕ ಅವಿಭಕ್ತ ಕುಟುಂಬ ವ್ಯವಸ್ಥೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು.
2. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಬದಲಾಗಲು ಇರುವ ಕಾರಣಗಳನ್ನು ಪತ್ತೆಹಚ್ಚುವುದು.
3. ಕುಟುಂಬದ ಸದಸ್ಯರ ನಡುವಿನ ಸಂಬಂಧ ಮತ್ತು ಅಧಿಕಾರ ಹಂಚಿಕೆಯಲ್ಲಿನ ಬದಲಾವಣೆಗಳನ್ನು ಅಭ್ಯಸಿಸುವುದು.
4. ಮಹಿಳೆಯರ ಆರ್ಥಿಕ ಸ್ವತಂತ್ರ ಕುಟುಂಬದ ಮೇಲೆ ಬೀರುತ್ತಿರುವ ಪ್ರಭಾವವನ್ನು ತಿಳಿಯುವುದು.
5. ಬದಲಾಗುತ್ತಿರುವ ವ್ಯವಸ್ಥೆಯಲ್ಲಿ ವೃದ್ಧರು ಮತ್ತು ಮಕ್ಕಳ ಸ್ಥಿತಿಗತಿಗಳನ್ನು ವಿಶ್ಲೇಷಿಸುವುದು.

ಸಾಂಪ್ರದಾಯಿಕ ಅವಿಭಕ್ತ ಕುಟುಂಬದ ಸ್ವರೂಪ

ಸಾಂಪ್ರದಾಯಿಕ ಭಾರತೀಯ ಸಮಾಜದ ಬೆನ್ನೆಲುಬಾದ ಅವಿಭಕ್ತ ಕುಟುಂಬ (Joint Family) ವ್ಯವಸ್ಥೆಯು ಕೇವಲ ಒಂದು ವಾಸಸ್ಥಳವಲ್ಲ, ಅದು ಪರಸ್ಪರ ಪ್ರೀತಿ, ಹಂಚಿಕೆ ಮತ್ತು ಸಾಮಾಜಿಕ ಭದ್ರತೆಯ ಒಂದು ದೊಡ್ಡ ಕವಚವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅವಿಭಕ್ತ ಕುಟುಂಬವು ಪ್ರಬಲವಾಗಿತ್ತು. ಇರಾವತಿ ಕಾರ್ವೆ ಅವರಂತಹ ಸಮಾಜಶಾಸ್ತ್ರಜ್ಞರು ಅವಿಭಕ್ತ ಕುಟುಂಬದ ಕುರಿತು ಅವರ ಅಧ್ಯಯನದ ಪ್ರಕಾರ, "ಒಂದೇ ಅಡುಗೆ ಮನೆ, ಒಂದೇ ಸೂರಿನಡಿ ವಾಸ, ಸಾಮಾನ್ಯ ಆಸ್ತಿ ಮತ್ತು ಸಾಮಾನ್ಯ ಪೂಜಾ ವಿಧಿಗಳಲ್ಲಿ ಪಾಲ್ಗೊಳ್ಳುವ ರಕ್ತಸಂಬಂಧಿಗಳ ಗುಂಪೇ ಅವಿಭಕ್ತ ಕುಟುಂಬ" ಎಂದು ಹೇಳಿದ್ದಾರೆ. ಸಾಂಪ್ರದಾಯಿಕ ಅವಿಭಕ್ತ ಕುಟುಂಬವು ಕೇವಲ ಒಂದು ವಾಸಸ್ಥಳವಲ್ಲ, ಅದೊಂದು ಸುಸಂಘಟಿತ ಸಾಮಾಜಿಕ ಮತ್ತು ಆರ್ಥಿಕ ಘಟಕವಾಗಿತ್ತು. ಇಲ್ಲಿ ಕುಟುಂಬದ ಹಿರಿಯ ಪುರುಷ 'ಕರ್ತೃ' ಆಗಿರುತ್ತಿದ್ದನು ಮತ್ತು ಅವನ ಆಜ್ಞೆಯೇ ಅಂತಿಮವಾಗಿರುತ್ತಿತ್ತು. ಇದು ವ್ಯಕ್ತಿಗಿಂತ ಸಮೂಹಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುವ ವ್ಯವಸ್ಥೆಯಾಗಿತ್ತು. ಅವಿಭಕ್ತ ಕುಟುಂಬವು "ಎಲ್ಲರಿಗಾಗಿ ಒಬ್ಬ, ಒಬ್ಬನಿಗಾಗಿ ಎಲ್ಲರೂ" ಎಂಬ ತತ್ವದ ಮೇಲೆ ನಡೆಯುವ ಸುಂದರ ವ್ಯವಸ್ಥೆಯಾಗಿದೆ.

ವಿಭಕ್ತ ಕುಟುಂಬಗಳ ಉಗಮ ಮತ್ತು ಬದಲಾವಣೆಯ ಪ್ರೇರಕಗಳು

ಸಮಾಜಶಾಸ್ತ್ರೀಯವಾಗಿ ವಿಭಕ್ತ ಕುಟುಂಬಗಳು ಉಗಮವು ಸಮಾಜದ ರಚನೆಯಲ್ಲಿ ಸಂಭವಿಸಿದ ಒಂದು ಮಹತ್ವದ ಬದಲಾವಣೆಯಾಗಿದೆ. ಅವಿಭಕ್ತ ಕುಟುಂಬವು ವಿಘಟನೆಗೊಂಡು ವಿಭಕ್ತ ಕುಟುಂಬವಾಗಿ ಬದಲಾಗಲು ಪ್ರಮುಖವಾಗಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕಾರಣಗಳಾಗಿವೆ. ಕೈಗಾರಿಕಾ ಕ್ರಾಂತಿಯ ನಂತರ ಉದ್ಯೋಗ ಮತ್ತು ಆರ್ಥಿಕ ಸ್ವತಂತ್ರದ ಹಂಬಲದಿಂದಾಗಿ ಬೃಹತ್ ಗಾತ್ರದ ಕುಟುಂಬಗಳು ಸಣ್ಣದಾಗಿ ಒಡೆಯಲು ಆರಂಭಿಸಿದವು. ನಗರಗಳಲ್ಲಿ ವಾಸಸ್ಥಳದ ಅಭಾವ ಮತ್ತು ಜೀವನ ವೆಚ್ಚದ ಹೆಚ್ಚಳದಿಂದಾಗಿ ಕೇವಲ ಪತಿ, ಪತ್ನಿ ಮತ್ತು ಅವಿವಾಹಿತ ಮಕ್ಕಳನ್ನೊಳಗೊಂಡ 'ವಿಭಕ್ತ ಕುಟುಂಬ'ಗಳು ಅನಿವಾರ್ಯವಾದವು. ಕೈಗಾರಿಕೀಕರಣ ಪ್ರಭಾವದಿಂದ ಕೃಷಿ ಆಧಾರಿತ ಜೀವನ ಪದ್ಧತಿಯು ಕೈಗಾರಿಕಾ ಆಧಾರಿತವಾಗಿ ಜೀವನ ವಿಧಾನದ ಬದಲಾವಣೆಗೆ ಕಾರಣವಾಯಿತು ಜನರು ಕೆಲಸ ಹುಡುಕುತ್ತಾ ಕಾರ್ಖಾನೆಗಳಿರುವ ನಗರಗಳಿಗೆ ವಲಸೆ ಹೋದರು. ಇದರಿಂದ ಹಳ್ಳಿಯಲ್ಲಿದ್ದ ದೊಡ್ಡ ಕುಟುಂಬಗಳು ಚದುರಿಹೋದವು. ಇದರಿಂದ ನಗರಗಳು ಜನಸಂಖ್ಯೆ ಹೆಚ್ಚಾಗಿ ನಗರೀಕರಣ ಉಂಟಾಗಿ ನಗರಗಳಲ್ಲಿನ ಸೀಮಿತ ವಾಸಸ್ಥಳ ದೊಡ್ಡ ಕುಟುಂಬಗಳಿಗೆ ಆಶ್ರಯ ನೀಡಲು ಅಸಮರ್ಥವಾದವು. ಇದು ಸಹಜವಾಗಿಯೇ ಸಣ್ಣ ಕುಟುಂಬಗಳ ರಚನೆಗೆ ಕಾರಣವಾಯಿತು.

ಆಧುನಿಕ ಶಿಕ್ಷಣವು ವ್ಯಕ್ತಿಗಳಲ್ಲಿ ವೈಚಾರಿಕತೆ ಮತ್ತು ಸ್ವತಂತ್ರ ಆಲೋಚನೆಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಹಿರಿಯರ ಸಾಂಪ್ರದಾಯಿಕ ನಿರ್ಧಾರಗಳಿಗಿಂತ ಸ್ವಂತ ನಿರ್ಧಾರಗಳಿಗೆ ಶಿಕ್ಷಣವಂತ ಯುವಪೀಳಿಗೆ ಆದ್ಯತೆ ನೀಡತೊಡಗಿತು. ಮಹಿಳೆಯರು ಶಿಕ್ಷಣ ಪಡೆದು ಉದ್ಯೋಗಸ್ಥರಾದಂತೆ, ಅವರು ಆರ್ಥಿಕವಾಗಿ ಸ್ವತಂತ್ರರಾದರು. ಇದು ಸಾಂಪ್ರದಾಯಿಕ ಕುಟುಂಬದ ಕಟ್ಟುಪಾಡುಗಳಿಂದ ಹೊರಬಂದು ತಮ್ಮದೇ ಆದ ಸಣ್ಣ ಸಂಸಾರವನ್ನು ನಡೆಸುವ ಇಚ್ಛೆಯನ್ನು ಹೆಚ್ಚಿಸಿತು. ಆಧುನಿಕ ಜೀವನಶೈಲಿಯಲ್ಲಿ ವೈಯಕ್ತಿಕ ಅಭಿವೃದ್ಧಿ, ಖಾಸಗಿತನ ಮತ್ತು ಸ್ವತಂತ್ರ ಜೀವನಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು. ಇದು ಸಮೂಹ ಜೀವನದ ಹಿಡಿತವನ್ನು ಸಡಿಲಗೊಳಿಸಿತು. ಹಿಂದೂ ಉತ್ತರಾಧಿಕಾರ ಕಾಯ್ದೆಯಂತಹ ಕಾನೂನುಗಳು ಆಸ್ತಿಯಲ್ಲಿ ಸಮಾನ ಹಕ್ಕನ್ನು ನೀಡಿದ್ದು, ಕುಟುಂಬದ ಆಸ್ತಿ ವಿಭಜನೆಗೆ ದಾರಿಯಾಯಿತು. ಭಾರತೀಯ ಕುಟುಂಬ ವ್ಯವಸ್ಥೆಯು ಇಂದು ಸಂಕೀರ್ಣವಾದ ಹಂತದಲ್ಲಿದೆ. ಅವಿಭಕ್ತ ಕುಟುಂಬದ ಮೌಲ್ಯಗಳು ಕ್ಷೀಣಿಸುತ್ತಿದ್ದರೂ, ಭಾವನಾತ್ಮಕವಾಗಿ ಭಾರತೀಯರು ಇಂದಿಗೂ ಕುಟುಂಬದೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ. ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ಕುಟುಂಬದ ಸ್ವರೂಪ ಬದಲಾಗುವುದು ಸಹಜ. ಆದರೆ ಈ ಬದಲಾವಣೆಯ ನಡುವೆಯೂ ಹಿರಿಯರ ಅನುಭವ ಮತ್ತು ಮಕ್ಕಳ ಮುಗ್ಧತೆ ಎರಡನ್ನೂ ಗೌರವಿಸುವ ಸಮತೋಲಿತ ಕುಟುಂಬ ವ್ಯವಸ್ಥೆಯು ಇಂದಿನ ಅಗತ್ಯವಾಗಿ ಬೇಕಾಗಿದೆ.

ಕುಟುಂಬದಲ್ಲಿ ಅಧಿಕಾರ ಮತ್ತು ಪ್ರಜಾಪ್ರಭುತ್ವೀಕರಣ

ಕುಟುಂಬವು ಸಮಾಜದ ಅತ್ಯಂತ ಮೂಲಭೂತ ಘಟಕ. ಕಾಲಕ್ಕೆ ತಕ್ಕಂತೆ ಕುಟುಂಬದ ಸ್ವರೂಪ ಮತ್ತು ಆಚರಣೆಗಳಲ್ಲಿ ಮಹತ್ತರ ಬದಲಾವಣೆಗಳಾಗುತ್ತಿವೆ. ಹಿಂದೆ ಶ್ರೇಣೀಕೃತ ವ್ಯವಸ್ಥೆಯನ್ನು ಹೊಂದಿದ್ದ ಕುಟುಂಬಗಳು ಇಂದು ಪ್ರಜಾಪ್ರಭುತ್ವೀಕರಣದ ಹಾದಿಯಲ್ಲಿವೆ. ಹಳೆಯ ಸಂಪ್ರದಾಯಗಳ ಸ್ಥಾನದಲ್ಲಿ 'ಸಮಾನತೆ' ಮತ್ತು 'ವೈಯಕ್ತಿಕ ಸ್ವಾತಂತ್ರ್ಯ' ಪ್ರಮುಖ ಸ್ಥಾನ ಪಡೆದಿವೆ. ಹಿಂದೆ ಕುಟುಂಬವು ಶ್ರೇಣೀಕೃತ ವ್ಯವಸ್ಥೆಯನ್ನು ಹೊಂದಿತ್ತು. ಆದರೆ ಆಧುನಿಕ ಕುಟುಂಬಗಳಲ್ಲಿ 'ಸಮಾನತೆ'ಯ ತತ್ವ ಅಡಗಿದೆ. ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಈ ಹಿಂದೆ ಕೇವಲ 'ಕರ್ತೃ' ಮಾತ್ರ ನಿರ್ಧಾರ ತೆಗೆದುಕೊಳ್ಳುತ್ತಿದ್ದನು. ಈಗ ಪತಿ–ಪತ್ನಿ ಇಬ್ಬರೂ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಇದನ್ನು ಸಮಾಜಶಾಸ್ತ್ರದಲ್ಲಿ 'ಸಮಾನಾಂತರ ಕುಟುಂಬ' (Egalitarian Family) ಎನ್ನಲಾಗುತ್ತದೆ.

ವಿಭಕ್ತ ಕುಟುಂಬದಲ್ಲಿನ ಮಕ್ಕಳಿಗೂ ಈಗ ತಮ್ಮ ಶಿಕ್ಷಣ, ಉದ್ಯೋಗ ಮತ್ತು ಸಂಗಾತಿಯನ್ನು ಆರಿಸಿಕೊಳ್ಳುವಲ್ಲಿ ಹೆಚ್ಚಿನ ಸ್ವಾತಂತ್ರ್ಯ ದೊರೆಯುತ್ತಿದೆ. ಕುಟುಂಬ ವ್ಯವಸ್ಥೆಯಲ್ಲಿ ಅತಿ ದೊಡ್ಡ ಬದಲಾವಣೆ ತಂದಿರುವುದು ಮಹಿಳೆಯರ ಆರ್ಥಿಕ ಸಬಲೀಕರಣ. ಇತ್ತೀಚಿನ ದಿನಗಳಲ್ಲಿ ಪತಿ–ಪತ್ನಿ ಇಬ್ಬರೂ ದುಡಿಯುವ ಕುಟುಂಬಗಳು ಹೆಚ್ಚುತ್ತಿವೆ. ಇದರಿಂದ ಕುಟುಂಬದ ಆರ್ಥಿಕ ಮಟ್ಟ ಸುಧಾರಿಸಿದೆ. ಕುಟುಂಬ ವ್ಯವಸ್ಥೆಯಲ್ಲಿ ಬದಲಾದ ಪಾತ್ರಗಳನ್ನು ನಾವು ಗಮನಿಸಬಹುದು. ಮಹಿಳೆ ಮನೆಯ ಹೊರಗೆ ಕೆಲಸಕ್ಕೆ ಹೋಗುತ್ತಿರುವುದರಿಂದ, ಪುರುಷರು ಕೂಡ ಮನೆಯ ಕೆಲಸಗಳಲ್ಲಿ ಮತ್ತು ಮಕ್ಕಳ ಪಾಲನೆಯಲ್ಲಿ ಕೈಜೋಡಿಸುತ್ತಿದ್ದಾರೆ. ಇದು ಲಿಂಗ ಸಮಾನತೆಯತ್ತ ಸಮಾಜವನ್ನು ಕೊಂಡೊಯ್ಯುತ್ತಿದೆ. ವಿವಾಹದ ಸ್ವರೂಪದಲ್ಲಿಯೂ ಪರಿವರ್ತನೆಗಳಾಗುತ್ತಿವೆ. ಹೆಚ್ಚಿನ ಶಿಕ್ಷಣ, ಉದ್ಯೋಗ ಹಾಗೂ ಜೀವನಶೈಲಿಯಲ್ಲಿನ ಬದಲಾವಣೆಯಿಂದಾಗಿ ವಿವಾಹದ ವಯಸ್ಸು ಹೆಚ್ಚಾಗಿದೆ. ಆದರೂ ಕುಟುಂಬದ ಬುನಾದಿಯೇ ವಿವಾಹವಾಗಿದೆ. ಇತ್ತೀಚಿನ ದಿನಗಳಲ್ಲಿ ಅಂತರ್ಜಾತಿ ವಿವಾಹಗಳು, ಪ್ರೇಮ ವಿವಾಹಗಳು ಮತ್ತು ನಗರಗಳಲ್ಲಿ 'ಲಿವಿಂಗ್–ಇನ್' (Living-in relationship) ಸಂಬಂಧಗಳಂತಹ ಹೊಸ ಮಾದರಿಗಳು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕಾಣಿಸಿಕೊಳ್ಳುತ್ತಿವೆ. ಮತ್ತೊಂದೆಡೆ, ಕುಟುಂಬದ ಸದಸ್ಯರ ನಡುವಿನ ಸಹನೆ ಕಡಿಮೆಯಾಗುತ್ತಿರುವುದು ಮತ್ತು ವೈಯಕ್ತಿಕ ಘನತೆಗೆ ಹೆಚ್ಚಿನ ಒತ್ತು ನೀಡುತ್ತಿರುವುದರಿಂದ ವಿಚ್ಛೇದನಗಳ ಸಂಖ್ಯೆಯೂ ಏರುತ್ತಿದೆ.

ಕುಟುಂಬದ ಬದಲಾವಣೆ ವೃದ್ಧರು ಮತ್ತು ಮಕ್ಕಳ ಮೇಲೆ ಪ್ರಭಾವ

ಹಳೆಯ ಕುಟುಂಬ ವ್ಯವಸ್ಥೆಯಲ್ಲಿ ಹಿರಿಯರು ಮನೆಯ 'ನಿರ್ಧಾರಕರು' ಮತ್ತು 'ಮಾರ್ಗದರ್ಶಕರು' ಆಗಿದ್ದರು. ಆದರೆ ಇಂದಿನ ಬದಲಾದ ಸ್ವರೂಪ ಅವರಿಗೆ ಸವಾಲಾಗಿ ಪರಿಣಮಿಸಿದೆ ಮಕ್ಕಳು ಉದ್ಯೋಗಕ್ಕಾಗಿ ನಗರಗಳಿಗೆ ಅಥವಾ ವಿದೇಶಗಳಿಗೆ ವಲಸೆ ಹೋಗುವುದರಿಂದ, ಹಿರಿಯರು ತಮ್ಮ ಹಳ್ಳಿಗಳಲ್ಲಿ ಅಥವಾ ಪಟ್ಟಣಗಳಲ್ಲಿ ಒಂಟಿಯಾಗುತ್ತಿದ್ದಾರೆ. ಇದು ಅವರಲ್ಲಿ ಮಾನಸಿಕ ಖಿನ್ನತೆಗೆ ಕಾರಣವಾಗುತ್ತಿದೆ. ವಯಸ್ಸಾದ ಕಾಲದಲ್ಲಿ ದೈಹಿಕ ಶಕ್ತಿ ಕುಂದಿದಾಗ ಆರೈಕೆ ಮಾಡಲು ಮನೆಯಲ್ಲಿ ಯಾರೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದಾಗಿ ವೃದ್ಧಾಶ್ರಮಗಳ ಸಂಸ್ಕೃತಿ ಅನಿವಾರ್ಯವಾಗುತ್ತಿದೆ. ಮೊದಲೆಲ್ಲಾ ಮನೆಯ ಆರ್ಥಿಕ ಮತ್ತು ಸಾಮಾಜಿಕ ನಿರ್ಧಾರಗಳು ಹಿರಿಯರ ಕೈಯಲ್ಲಿದ್ದವು. ಈಗಿನ ಆಧುನಿಕ ಕುಟುಂಬಗಳಲ್ಲಿ ಯುವ ಪೀಳಿಗೆಯೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದರಿಂದ, ಹಿರಿಯರು ತಾವು 'ಅಪ್ರಸ್ತುತ' ಎಂಬ ಭಾವನೆಗೆ ಒಳಗಾಗುತ್ತಿದ್ದಾರೆ. ಮೊಮ್ಮಕ್ಕಳೊಂದಿಗೆ ಸಮಯ ಕಳೆಯುವ ಮತ್ತು ಸಂಸ್ಕೃತಿಯನ್ನು ವರ್ಗಾಯಿಸುವ ಅವಕಾಶಗಳು ಕಡಿಮೆಯಾಗುತ್ತಿವೆ.

ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಕುಟುಂಬವು ಮೊದಲ ಪಾಠಶಾಲೆಯಾಗಿದೆ. ಕುಟುಂಬದ ಸ್ವರೂಪ ಬದಲಾದಂತೆ ಮಕ್ಕಳ ಬೆಳವಣಿಗೆಯಲ್ಲೂ ವ್ಯತ್ಯಾಸಗಳಾಗುತ್ತಿವೆ. ಅವಿಭಕ್ತ ಕುಟುಂಬದಲ್ಲಿ ಅಜ್ಜ–ಅಜ್ಜಿಯರು ಕಥೆಗಳ ಮೂಲಕ ನೈತಿಕ ಮೌಲ್ಯಗಳನ್ನು ಕಲಿಸುತ್ತಿದ್ದರು. ಈಗಿನ ವಿಭಕ್ತ ಕುಟುಂಬದಲ್ಲಿ ಮಕ್ಕಳು ಇವುಗಳಿಂದ ವಂಚಿತರಾಗುತ್ತಿದ್ದಾರೆ. ಮನೆಯಲ್ಲಿ ಹೆಚ್ಚು ಜನರಿದ್ದಾಗ ಮಗು ಹಂಚಿಕೊಳ್ಳುವುದು, ಸಹಕರಿಸುವುದು ಮತ್ತು ಹೊಂದಾಣಿಕೆಯನ್ನು ಬೇಗ ಕಲಿಯುತ್ತಿತ್ತು. ಈಗಿನ 'ಒಂದೇ ಮಗು' ಅಥವಾ ಸಣ್ಣ ಕುಟುಂಬಗಳಲ್ಲಿ ಮಕ್ಕಳು ಹೆಚ್ಚು ಹಠಮಾರಿಗಳಾಗುವ ಅಥವಾ ಒಂಟಿಯಾಗಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇತ್ತಿಚಿನ ದಿನಗಳಲ್ಲಿ ಮಕ್ಕಳು ತಾಂತ್ರಿಕ ಅವಲಂಬನೆಯ ಮೇಲೆ ಹೆಚ್ಚಾಗುತ್ತವೆ, ಪೋಷಕರಿಬ್ಬರೂ ಉದ್ಯೋಗಕ್ಕೆ ಹೋಗುವ ಕುಟುಂಬಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇಲ್ಲದಿದ್ದಾಗ ಮಕ್ಕಳು ಮೊಬೈಲ್, ಟಿವಿ ಅಥವಾ ವಿಡಿಯೋ ಗೇಮ್ಗಳಿಗೆ ದಾಸರಾಗುತ್ತಿದ್ದಾರೆ. ಇದು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ವಿಭಕ್ತ ಕುಟುಂಬಗಳಲ್ಲಿ ಪೋಷಕರ ಸಂಪೂರ್ಣ ನಿರೀಕ್ಷೆಗಳು ಒಬ್ಬ ಅಥವಾ ಇಬ್ಬರು ಮಕ್ಕಳ ಮೇಲೆಯೇ ಇರುವದರಿಂದ ಇದು ಮಕ್ಕಳಲ್ಲಿ ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತಿದೆ.

ತಂತ್ರಜ್ಞಾನ ಮತ್ತು ವರ್ಚುವಲ್ ಕುಟುಂಬಗಳು

ಆಧುನಿಕ ಭಾರತೀಯ ಕುಟುಂಬವು ಇಂದು ಕೇವಲ ನಾಲ್ಕು ಗೋಡೆಗಳ ಮಧ್ಯೆ ವಾಸಿಸುವ ಸದಸ್ಯರಿಗೆ ಸೀಮಿತವಾಗಿಲ್ಲ. ಇಂಟರ್ನೆಟ್ ಮತ್ತು ಸ್ಮಾರ್ಟ್ಫೋನ್ಗಳು ಕುಟುಂಬದ ವ್ಯಾಖ್ಯಾನವನ್ನೇ ಬದಲಿಸಿವೆ. ಇಂದಿನ ಕುಟುಂಬ ವ್ಯವಸ್ಥೆಯ ಮೇಲೆ ತಂತ್ರಜ್ಞಾನದ ಪ್ರಭಾವ ಅಪಾರ. ಒಂದೇ ಮನೆಯಲ್ಲಿ ನಾಲ್ಕು ಜನರಿದ್ದರೂ ಪ್ರತಿಯೊಬ್ಬರೂ ತಮ್ಮ ಮೊಬೈಲ್ ಫೋನ್ಗಳಲ್ಲಿ ಬ್ಯುಸಿಯಾಗಿರುತ್ತಾರೆ. ಇದನ್ನು 'ಸಂವಹನದ ಕೊರತೆ' ಎಂದು ಕರೆಯಬಹುದು. ಆದರೆ, ದೂರದಲ್ಲಿರುವ ಸಂಬಂಧಿಕರೊಂದಿಗೆ ವಿಡಿಯೋ ಕಾಲ್ ಮೂಲಕ ಸಂಪರ್ಕದಲ್ಲಿರುವುದು ಒಂದು ರೀತಿಯ 'ವರ್ಚುವಲ್ ಅವಿಭಕ್ತ ಕುಟುಂಬ'ದ ಭಾವನೆಯನ್ನು ನೀಡುತ್ತಿದೆ. ತಂತ್ರಜ್ಞಾನವು ಭಾರತೀಯ ಕುಟುಂಬಗಳಿಗೆ "ವರ ಮತ್ತು ಶಾಪ" ಎರಡೂ ಹೌದು. ಇದು ದೂರವಿರುವವರನ್ನು ಹತ್ತಿರ ತಂದಿದೆ, ಆದರೆ ಹತ್ತಿರವಿರುವವರನ್ನು ಭಾವನಾತ್ಮಕವಾಗಿ ದೂರ ಮಾಡಿದೆ. ಭವಿಷ್ಯದಲ್ಲಿ ಭಾರತೀಯ ಕುಟುಂಬವು ಕೇವಲ ರಕ್ತಸಂಬಂಧದ ಆಧಾರದ ಮೇಲೆ ಮಾತ್ರವಲ್ಲದೆ, 'ಡಿಜಿಟಲ್ ಬಾಂಡಿಂಗ್' ಆಧಾರದ ಮೇಲೂ ಗುರುತಿಸಿಕೊಳ್ಳಲಿದೆ.

ಉಪಸಂಹಾರ

ಭಾರತೀಯ ಕುಟುಂಬ ವ್ಯವಸ್ಥೆಯು ಇಂದು 'ಪರಿವರ್ತನೆಯ ಹಂತ'ದಲ್ಲಿದೆ. ಅವಿಭಕ್ತ ಕುಟುಂಬಗಳು ಮಾಯವಾಗುತ್ತಿದ್ದರೂ, ಅವುಗಳ ಸ್ಥಾನದಲ್ಲಿ ವಿಭಕ್ತ ಕುಟುಂಬಗಳು ಹೊಸ ಮೌಲ್ಯಗಳೊಂದಿಗೆ ಬೆಳೆಯುತ್ತಿವೆ. ಬದಲಾವಣೆಯು ಅನಿವಾರ್ಯವಾದರೂ, ಭಾರತೀಯ ಸಂಸ್ಕೃತಿಯ ಸಾರವಾದ ಪ್ರೀತಿ, ಸಹಕಾರ ಮತ್ತು ಪರಸ್ಪರ ಗೌರವವನ್ನು ಉಳಿಸಿಕೊಳ್ಳುವುದು ಅವಶ್ಯಕ. ಆಧುನಿಕ ಕುಟುಂಬಗಳು ಕೇವಲ ವಾಸದ ಮನೆಗಳಾಗದೆ, ಸದಸ್ಯರ ಮಾನಸಿಕ ಮತ್ತು ಭಾವನಾತ್ಮಕ ವಿಕಸನಕ್ಕೆ ಪೂರಕವಾದ ತಾಣಗಳಾಗಬೇಕು. ಭಾರತೀಯ ಕುಟುಂಬ ವ್ಯವಸ್ಥೆಯು ಸಂಪೂರ್ಣವಾಗಿ ನಾಶವಾಗುತ್ತಿಲ್ಲ, ಬದಲಾಗಿ ರೂಪಾಂತರ ಹೊಂದುತ್ತಿದೆ. ರಕ್ತಸಂಬಂಧದ ಬಾಂಧವ್ಯಗಳು ಇಂದಿಗೂ ಬಲವಾಗಿದ್ದರೂ, ಜೀವನಶೈಲಿ ಮತ್ತು ಆದ್ಯತೆಗಳು ಬದಲಾಗಿವೆ. ಈ ಬದಲಾವಣೆಯು ವ್ಯಕ್ತಿಗತ ಬೆಳವಣಿಗೆ, ಆರ್ಥಿಕ ಸ್ವಾವಲಂಬನೆ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಧನಾತ್ಮಕ ಅಂಶಗಳಾದರೆ, ಸಂಬಂಧಗಳ ನಡುವಿನ ಬಿರುಕು ಮತ್ತು ಸಾಮಾಜಿಕ ಭದ್ರತೆಯ ಕೊರತೆ ಋಣಾತ್ಮಕ ಅಂಶಗಳಾಗಿವೆ. ಬದಲಾಗುತ್ತಿರುವ ಈ ಸ್ವರೂಪದಲ್ಲಿ ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ.

ಗ್ರಂಥಋಣ (References)

1. ಇರಾವತಿ ಕಾರ್ವೆ (Irawati Karve): ಅವರ 'Kinship Organization in India' ಪುಸ್ತಕದಲ್ಲಿ ಭಾರತೀಯ ಕುಟುಂಬದ ರಚನೆ ಮತ್ತು ಅವಿಭಕ್ತ ಕುಟುಂಬದ ವ್ಯಾಖ್ಯಾನವನ್ನು ನೀಡಿದ್ದಾರೆ.
2. ಎಮ್. ಎನ್. ಶ್ರೀನಿವಾಸ್ (M.N. Srinivas): ಇವರು ಭಾರತೀಯ ಸಮಾಜದಲ್ಲಿನ 'ಸಂಸ್ಕೃತೀಕರಣ' ಮತ್ತು 'ಪಾಶ್ಚಾತ್ಯೀಕರಣ'ವು ಕುಟುಂಬದ ಮೇಲೆ ಹೇಗೆ ಪ್ರಭಾವ ಬೀರುತ್ತಿವೆ ಎಂಬುದನ್ನು ವಿವರಿಸಿದ್ದಾರೆ.
3. ಕೆ. ಎಮ್. ಕಪಾಡಿಯಾ (K.M. Kapadia): ಅವರ 'Marriage and Family in India' ಕೃತಿಯು ಭಾರತೀಯ ವಿವಾಹ ಮತ್ತು ಕುಟುಂಬ ವ್ಯವಸ್ಥೆಯ ಐತಿಹಾಸಿಕ ಬದಲಾವಣೆಗಳನ್ನು ತಿಳಿಸುತ್ತದೆ.
4. ಐ. ಪಿ. ದೇಸಾಯಿ (I.P. Desai): 'Some Aspects of Family in Mahuva' ಎಂಬ ಗ್ರಂಥದಲ್ಲಿ ಕುಟುಂಬದ ಸ್ವರೂಪ ಬದಲಾದರೂ ಭಾವನಾತ್ಮಕ ಒಕ್ಕೂಟ ಹೇಗೆ ಉಳಿದಿದೆ ಎಂದು ವಿಶ್ಲೇಷಿಸಿದ್ದಾರೆ.
5. ಸಮಾಜಶಾಸ್ತ್ರ ಪಠ್ಯಪುಸ್ತಕಗಳು: ಕರ್ನಾಟಕ ಪದವಿ ಪೂರ್ವ ಮತ್ತು ಪದವಿ ಶಿಕ್ಷಣದ ಸಮಾಜಶಾಸ್ತ್ರ ಪಠ್ಯಪುಸ್ತಕಗಳು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ತತ್ವಪದ ಸಾಹಿತ್ಯದಲ್ಲಿ ಮಾನವ ಜೀವನ ದರ್ಶನ

ಮೋಹನ ಕುಮಾರ ಎಚ್.ಆರ್
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ತಿಪಟೂರು, ತುಮಕೂರು ಜಿಲ್ಲೆ –572201
Email- mohankumarhr1983@gmail.com

Manuscript ID:
JRD -2026-180521
ISSN: 2230-9578
Volume 18
Issue 5(IV)
Pp. 88-91
April- 2026
Submitted: 10 Apr. 2026
Revised: 25 Apr.2026
Accepted: 12 May. 2026
Published: 31 May. 2026

ತತ್ವಪದಗಳು ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಇವು ಕೇವಲ ಹಾಡುಗಳಾಗಿರದೆ ಬದುಕಿನ ಪರಮ ಸತ್ಯವನ್ನು, ಆಧ್ಯಾತ್ಮಿಕ ಚಿಂತನೆಯನ್ನು ಮತ್ತು ಸಾಮಾಜಿಕ ಕಳಕಳಿಯನ್ನು ಸರಳವಾದ ಭಾಷೆಯಲ್ಲಿ ಹೇಳುವ ವೈಚಾರಿಕ ಚಿಂತನೆಗಳಾಗಿವೆ ಎಂದು ಹೇಳಬಹುದು. 'ತತ್ವ' ಎಂದರೆ ಸತ್ಯ, ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ 'ಪದ' ಎಂದರೆ ಹಾಡು, ಹದಗೊಂಡ ಶಬ್ದ ಎಂಬ ಅರ್ಥ ಇದೆ. ಪರಮಾತ್ಮನಿಗೆ ಸಂಬಂಧಿಸಿದ ಸತ್ಯವನ್ನು, ಸಿದ್ಧಾಂತವನ್ನು ಹಾಡಿನ ರೂಪದಲ್ಲಿ ಅಭಿವ್ಯಕ್ತಿ ಮಾಡುವುದನ್ನು ತತ್ವಪದ ಎಂದು ಕರೆಯುತ್ತಾರೆ. ಲೌಕಿಕ ಜೀವನದ ನಶ್ವರತೆ ಮತ್ತು ಪಾರಮಾರ್ಥಿಕ ಸತ್ಯವನ್ನು ಜನಸಾಮಾನ್ಯರಿಗೆ ಅವರದೇ ಆದ ಭಾಷೆಯಲ್ಲಿ ನಾಡಿನಾದ್ಯಂತ ಹಾಡಿ ಹರಡುವ ಕೆಲಸವನ್ನು ಮಾಡಿದ್ದು ಈ ತತ್ವಪದಗಳು. ಸರಳವಾದ ಭಾಷೆಯ ಬಳಕೆ, ರೂಪಕಗಳ ಬಳಕೆ, ಸಮಾನತೆಯ ಸಂದೇಶ, ಗುರುವಿನ ಮಹಿಮೆ, ಸಾಮಾಜಿಕ ಕಳಕಳಿ, ಜ್ಞಾನದ ಮಹತ್ವ, ಜಾತಿಯತೆ, ಮೂಢನಂಬಿಕೆ ಮತ್ತು ಡಾಂಭಿಕತೆಯ ವಿಡಂಬನೆ ಇವುಗಳ ಪ್ರಮುಖ ಲಕ್ಷಣಗಳಾಗಿವೆ. ತತ್ವಪದಕಾರರು ಜಾತಿ, ಮತ, ಪಂಥ, ವರ್ಣ, ವರ್ಗ, ವಸಾಹತುಶಾಹಿಗಳನ್ನು ಮೀರಿ ಬೆಳೆದು ನಿಲ್ಲುತ್ತಾರೆ. ಆದ್ದರಿಂದ ಇವರು ನಮಗೆ ಸಾಂಸ್ಕೃತಿಕವಾಗಿ ಮುಖ್ಯರಾಗುತ್ತಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹುಟ್ಟಿದ ತತ್ವಪದ ಸಾಹಿತ್ಯಕ್ಕೆ ತನ್ನದೇ ಆದ ಶ್ರೀಮಂತ ಪರಂಪರೆಯಿದೆ. ತತ್ವಪದ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದ್ದು 18–19ನೆಯ ಶತಮಾನದಲ್ಲಿ ಎಂದು ಹೇಳಬಹುದಾಗಿದೆ. ತತ್ವಪದಕಾರರು ರಚಿಸಿದ ಈ ಸಾಹಿತ್ಯಕ್ಕೆ ತತ್ವಪದ ಸಾಹಿತ್ಯ, ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದು ಕರೆಯುತ್ತಾರೆ. ಏಕತಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಇವುಗಳನ್ನು ಹಾಡುವುದರಿಂದ ಸ್ವರ ವಚನಗಳೆಂದು ಕರೆಯಬಹುದು.

ಮುಪ್ಪಿನ ಷಡಕ್ಷರಿ, ಮೈಲಾರದ ಬಸವಲಿಂಗ ಶರಣರು, ಚಿದಾನಂದ ಅವಧೂತರು, ರಾಮಪುರದ ಬಕ್ಕಪ್ಪ, ಹಾಗಲವಾಡಿ ಮದ್ವೀರೆ, ನಿಂಬರಗಿ ಮಹಾರಾಜರು, ಶಂಕರಾನಂದರು, ಸಾರವಾಡ ಚಿಕ್ಕಪ್ಪಯ್ಯ, ಕೂಡಲೂರು ಬಸವಲಿಂಗ ಶರಣರು, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶರಣರು, ಶಿಶುನಾಳ ಶರೀಫರು, ಕಡಕೋಳ ಮಡಿವಾಳಪ್ಪ ಮೊದಲಾದವರು ಕನ್ನಡ ಸಾಹಿತ್ಯ ತತ್ವಪದ ಪರಂಪರೆಯಲ್ಲಿ ಪ್ರಮುಖರಾಗಿದ್ದಾರೆ.

ತತ್ವಪದಗಳಲ್ಲಿ ಮಾನವ ಜೀವನದ ದರ್ಶನವನ್ನು ನಾವು ಕಾಣಬಹುದಾಗಿದೆ.

ಕಡಕೋಳ ಮಡಿವಾಳಪ್ಪನವರ ಒಂದು ತತ್ವಪದ ಮನುಷ್ಯ ಸಂಬಂಧಗಳನ್ನು ಕುರಿತು ಹೀಗೆ ಹೇಳಿದೆ.

ಗಡಗಿ ತೊಳೆದು ಅಡಗಿ ಮಾಡಮ್ಮ! ತನುವೆಂಬ
ಗಡಗಿ ತೊಳೆದು ಅಡಗಿ ಮಾಡಮ್ಮ

ಅನುಭಾವದಡುಗೆಯ ಮಾಡಿ ಎಡಿಯ ಮಾಡಮ್ಮ
ದೇವರಿಗೆಡೆಯ ಮಾಡಿ ಗಂಡಗುಣಿಸಮ್ಮಾ

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಮೋಹನ ಕುಮಾರ ಎಚ್.ಆರ್' ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಿಪಟೂರು, ತುಮಕೂರು ಜಿಲ್ಲೆ –572201

How to cite this article:
ಮೋಹನ ಕುಮಾರ ಎಚ್.ಆರ್ *(2026). ತತ್ವಪದ ಸಾಹಿತ್ಯದಲ್ಲಿ ಮಾನವ ಜೀವನ ದರ್ಶನ .Journal of Research & Development, 18(5(IV)), 88–91. https://doi.org/10.5281/zenodo.20992740*

Quick Response Code:
Website: https://jrdrvb.org/
DOI: 10.5281/zenodo.20992740
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕರ್ಮವೆಂಬ ಜೋಳ ಬೀಸವ್ವ । ನೀ
ಧರ್ಮ ಜರಡಿಯಿಂದ ಹಿಟ್ಟ ಸೋಸವ್ವ

ನಿರ್ಮಳಾತ್ಮ ನೀರ ಹಾಕವ್ವಾ । ನೀ
ನೇಮದಿಂದ ಕಣಕ ನಾದವ್ವಾ

ಇಲ್ಲಿ ಕಡಕೋಳ ಮಡಿವಾಳಪ್ಪನವರು ದೇಹವನ್ನು ಗಡಿಗೆಗೂ, ಅನುಭಾವವನ್ನು ಅಡಿಗೆಗೂ ಹೋಲಿಸಿದ್ದಾರೆ. ಈ ಅನುಭಾವದ ಅಡಿಗೆಯನ್ನು ಮಾಡಲು ಕರ್ಮವೆಂಬ ಜೋಳವನ್ನು ಬೀಸಬೇಕಾಗಿದೆ. ಆ ಹಿಟ್ಟನ್ನು ಧರ್ಮವೆಂಬ ಜರಡಿಯಿಂದ ಸೋಸಿ, ಅದಕ್ಕೆ ನಿರ್ಮಲವಾದ ಆತ್ಮವೆಂಬ ನೀರನ್ನು ಹಾಕಿ, ನೇಮದಿಂದ ಆಕಣಕವನ್ನು ನಾದಬೇಕಿದೆ. ನಾದಿ ಇದುವರೆಗೂ ಸಂಚಿತವಾದ ಹಂಚನ್ನು ತೊಳೆಯಬೇಕಿದೆ. ಅದನ್ನು ಜ್ಞಾನವೆಂಬ ಅಗ್ನಿಯ ಮೂಲಕ ಪರರೊಟ್ಟಿ ಬೇಯಿಸಬೇಕು ಎನ್ನುವಲ್ಲಿ ನಾವು ಅರ್ಥಪೂರ್ಣವಾದ ಅನುಭಾವವನ್ನು ಕಾಣಬಹುದಾಗಿದೆ.
ಕಡಕೋಳ ಮಡಿವಾಳಪ್ಪನವರ ಮತ್ತೊಂದು ತತ್ವಪದ 'ಯಾವುದು ಮುಡಿಚಟ್ಟು' ಮುಟ್ಟಿನ ಬಗ್ಗೆ ಮತ್ತು ಮನುಷ್ಯನ ಹುಟ್ಟಿನ ಬಗ್ಗೆ ಹೇಳಲಾಗಿದೆ.

ಮುಡಿಚಟ್ಟಿನೊಳು ಬಂದು ಮುಟ್ಟಿ ತಟ್ಟಿ ಅಂತೀರಿ
ಮುಡಿಚಟ್ಟಿ ಯಾವುದು ಎಲ್ಲಾದ್ಹೇಳಣ್ಣ
ಮುಟ್ಟಾದ ಮೂರು ದಿನಕ ಹುಟ್ಟಿ ಬಂದಿರಿ ನೀವು
ಮುಡಿಚಟ್ಟ ಎಲ್ಲಾದ್ಹೇಳಣ್ಣ

ತೊಗಲೊಳು ತೊಗಲ್ಹೊಕ್ಕು ತಗಲಿ ಬಂದವ ನೀನು
ತಗಲ ಮಾತಾಡುವರೇನಣ್ಣ
ಇದರ ಬಗೆಯ ತಿಳಿಯದೆ ಒಗದು ಮಾತಾಡಿದರೇ
ನಗೆಗೇಡು ಕಾಣುತಾದಣ್ಣ

ಈ ತತ್ವಪದದಲ್ಲಿ ಮುಟ್ಟಿನ ಬಗ್ಗೆ ನಮ್ಮ ಸಮಾಜದಲ್ಲಿ ಮತ್ತು ಜನರಲ್ಲಿ ಇರುವಂತಹ ಕೀಳು ಭಾವನೆ ಮತ್ತು ಮೈಲಿಗೆ ಎನ್ನುವ ಭಾವನೆಯನ್ನು ಅಳಿಸಿಹಾಕುವ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಮುಟ್ಟು ಕೀಳಲ್ಲ ಅದು ಜೀವಿಯ ಉಗಮಕ್ಕೆ ಕಾರಣವಾಗುವ ಸಂಗತಿಯಾಗಿದೆ. ಇಡೀ ಮಾನವ ಕುಲದ ಉಗಮಕ್ಕೆ ಕಾರಣವಾದುದು ಇದೇ ಆಗಿದೆ ಎಂದು, ಇದನ್ನು ಮೈಲಿಗೆ ಎಂದು ಕೀಳಾಗಿ ಕಾಣುವವರನ್ನು ವೈಚಾರಿಕವಾಗಿ ಪ್ರಶ್ನಿಸುತ್ತಾರೆ. ಜೊತೆಗೆ ಮನುಷ್ಯನ ದೇಹಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಈ ತತ್ವಪದದಲ್ಲಿ ಪ್ರಸ್ತಾಪ ಮಾಡುತ್ತಾರೆ.

ಬಾಲಲೀಲಾ ಮಹಾಂತ ಶಿವಯೋಗಿಗಳ 'ಅವರವರ ಭಾವಕ್ಕೆ' ಎಂಬ ತತ್ವಪದದಲ್ಲಿ ಮನುಷ್ಯನ ಭಕ್ತಿ, ಭಾವ, ಆಚರಣೆಗಳ ಬಗ್ಗೆ ಹೇಳಲಾಗಿದೆ.

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ

ಇರುವೊಂದು ಕನ್ನಡಿಯ ನೂರಾರು ಜನ ಪಿಡಿಯೆ
ಸರಳವಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಮತಭೇದವರು ದುರ್ಮತಿಯಿಂದ ಯತಿವರೆಗೆ
ಸ್ತುತಿನಿಂದೆ ಮಾಡಿದರೆ ಅವರಿಗೆ ತಿರುಗುವವು
ಯತಿವರನು ತಾ ನನ್ನ ಪಥದಲ್ಲಿ ಇರುವನು
ಕ್ಷಿತಿಯ ಜನರ ಪಾಪಪುಣ್ಯ ಫಲ ಪರೀಕ್ಷೆ

ಕುಲಛಲವ ಹಿಡಿದಿರುವ ಕಲುಕು ಮನದವರಲ್ಲಿ
ತಿಳಿವಳಿಕೆ ಶಿವ ಚಂದ್ರನು ಕಾಣುವ ಪರಿಯೆಂತು
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ
ಸಲೆ ಮಹಂತಲಿಂಗ ಚಿತ್ಸೂರ್ಯ ಕಾಣುವನು.

ಈ ತತ್ವಪದದಲ್ಲಿ ಅವರವರ ಭಕ್ತಿ ಮತ್ತು ಭಾವಕ್ಕೆ ಅನುಗುಣವಾಗಿ ಧಾರ್ಮಿಕ ಆಚರಣೆಗಳಿರುತ್ತವೆ. ಇರುವ ಒಂದು ಕನ್ನಡಿಯನ್ನು ನೂರಾರು ಜನ ಹಿಡಿದು ನೋಡಿದರು ಸಹ ಅವರವರ ರೂಪವೇ ಕಾಣುವಂತೆ ಹರಿಯ ಭಕ್ತರಿಗೆ ಹರಿಯು, ಹರನ ಭಕ್ತರಿಗೆ ಹರನು ಕಾಣಿಸುವನು. ಮನುಷ್ಯರು ಏನನ್ನು ಭಾವಿಸುವರೋ ಅದೇ ತೋರುವುದು. ಮತ ಭೇದ ಹೊಂದಿದವರು ಕೆಟ್ಟ ಬುದ್ಧಿಯಿಂದ ಯತಿಯನ್ನು ಸ್ತುತಿ, ನಿಂದೆ ಮಾಡಿದರೆ ಅವುಗಳು ಅವರಿಗೆ ಹಿಂದಿರುಗುತ್ತವೆಯೇ ಹೊರತು, ಯತಿ ಮಾತ್ರ ತನ್ನ ದಾರಿಯಲ್ಲಿ ತಾನಿರುವನು. ಕುಲಛಲವ ಹಿಡಿದಿರುವ ಕದಡಿದ ಮನದವರಲ್ಲಿ ತಿಳಿವಳಿಕೆ, ಶಿವ, ಚಂದ್ರನು ಕಾಣುವ ಬಗೆ ಹೇಗೆ? ಕುಲಛಲವ ಅನತಿಗಳೆದ ತಿಳಿಯಾದ ಮನಸ್ಸಿನವರಲ್ಲಿ ಮಹಂತಲಿಂಗನು ಕಾಣುವನು ಎಂದಿದ್ದಾರೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಗೋನುವಾರ ಬಡೇಸಾಬ ಅವರ 'ಕುಲವಂತನೇ ನೀನು' ಎನ್ನುವ ತತ್ವಪದದಲ್ಲಿ ಕುಲವನ್ನು ಕುರಿತು ಹಲವು ಪ್ರಶ್ನೆಗಳನ್ನು ಎತ್ತುವ ಮೂಲಕ ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರಾಕರಿಸುವುದನ್ನು ಕಾಣಬಹುದಾಗಿದೆ.

ಕುಲವಂತನೇ ನೀನು ಎಲೋ ಪರಮಾನಂದ
ಕುಲಹೀನನೇ ನಾನು ಹೇಳಿಲವೊ ಸ್ವಾಮಿ

ಹೊಲೆಯ ಪೆದ್ದಯ್ಯಗೆ ಒಲಿದವನ ಆಳಾದಿ
ಕುಲದಿ ಮಾದಿಗಳಯ್ಯನ ಮನೆಲುಂಡಿ
ಚೆಲುವ ಕೂಸಿನ ಕೊರತೆ ನಲಿಸಿದಿ ಬಲು ಹಿತದಿ
ಮಲಿನ ಸೀರೆಯನ್ನು ನಿನ್ನ ತಲೆಗೆ ಸುತ್ತಿಕೊಂಡೆ

ಡೊಂಬಿತಿಯ ಗುಡಿಸಿಲಲಿ ಸಂಭ್ರಮದಿ ಮಲಗಿದಿ
ಶಂಭೋ ಕುಣಿದಲೋ ಕುಂಬಾರಗೊಲಿದಿ
ಬೆಂಬಲಿಸಿ ತಿರುಗಿದಿ ಭಕ್ತರ ಪೊಂದಿ
ಇಂಬು ಸುಡುಗಾಡು ನಿನಗೆ ಅಂಬುಧರನೆ

ಹುಲಿ ಚರ್ಮ ಹಾಸಿದಿ ಹೊಲೆ ಚರ್ಮವುಟ್ಟಿರುವಿ
ತಲೆಬುರುಡೆ ಕೊರಳಿಗೆ ಮಾಲೆ ಧರಿಸಿರುವಿ
ಎಲೊ ದೇವ ಇನಿತಿರ್ದು ಕುಲವನೆಣಿಸುವಿ
ಒಲಿದು ಬಂದವರಿಗೆ ಶ್ರೀರಾಮನಾಗುವಿ

ಕುಲವಂತನೇ ನೀನು, ನಾನು ಕುಲಹೀನನೆ ಹೇಳು ಸ್ವಾಮಿ ಎಂದು ಪ್ರಶ್ನಿಸಿದ್ದಾರೆ. ಹೊಲೆಯನಾದ ಪೆದ್ದಯ್ಯನಿಗೆ ಒಲಿದು ಆಳಾದವನು ನೀನು, ಮಾದಿಗಳಯ್ಯನ ಮನೆಯಲಿ ಉಂಡವನು ನೀನು, ಡೊಂಬಿತಿಯ ಗುಡಿಸಿಲಿನಲಿ ಸಂಭ್ರಮದಿಂದ ಮಲಗಿದವನು ನೀನು. ಕುಂಬಾರನಿಗೆ ಒಲಿದವನು ನೀನು, ಸುಡುಗಾಡಿನಲ್ಲಿ ವಾಸಿಸುವನು ನೀನು, ಹುಲಿ ಚರ್ಮವ ಹಾಸಿರುವ, ಚರ್ಮವನು ಹುಟ್ಟಿರುವ, ತಲೆ ಬುರುಡೆಯನ್ನು ಕೊರಳಿಗೆ ಮಾಲೆಯಾಗಿ ಧರಿಸಿರುವ ದೇವ ಎನ್ನುವ ಮೂಲಕ ಜಾತಿಯನ್ನು, ಕುಲವನ್ನು ನಿರಾಕರಿಸುತ್ತಾರೆ.

ಕರ್ನಾಟಕದ ಕಬೀರರೆಂದು ಪ್ರಸಿದ್ಧಿಯಾದ ಸಂತ ಶಿಶುನಾಳ ಶರೀಫರು ಕನ್ನಡ ಸಾಹಿತ್ಯ ಲೋಕದಲ್ಲಿ ಅಜರಾಮರರು. ತತ್ವಪದ ಪ್ರಕಾರದಲ್ಲಿ ತಮ್ಮ ಸಾಹಿತ್ಯ ರಚನೆ ಮಾಡಿ ಅಪರ ಜನಮನ್ನಣೆ ಗಳಿಸಿದ ಸಂತರಾಗಿದ್ದಾರೆ.

ಬಲ್ಲವರಾದರೆ ಹೇಳರಿ ತಿಳದು
ಮುಲ್ಲಾನ ಮಸೀದಿ ಎಲ್ಲಿತ್ತೋ
ಗುಲ್ಲು ಮಾಡಿ ಗುದ್ದಾಡಿ ಅಲಾವಿಗೆ
ಚೆಲ್ಲ ಓದಿಸೋದು ಎಲ್ಲಿತ್ತೋ

ಶಿಶುನಾಳ ಶರೀಫರು ಸಾಂಸ್ಥಿಕ ಧರ್ಮವನ್ನು ಮತ್ತು ಅದರ ಸ್ಥಾವರ ಸಂಕೇತಗಳನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಭಕ್ತಿ ಎಂಬುದು ಖಾಸಗಿ ಸಂಗತಿಯಾಗಿದ್ದು, ಭಕ್ತಿಯ ಅಭಿವ್ಯಕ್ತಿಗೆ ಯಾವುದೇ ಭಾಷೆ ಮತ್ತು ಶಾಸ್ತ್ರಗಳ ಬಂಧನವಿಲ್ಲವೆಂದು ಹೇಳುತ್ತಾರೆ.

ಹುಚ್ಚು ನಾಯಿ ಬಂದು ಕಚ್ಚುತಿಹುದು ತಂಗಿ
ಎಚ್ಚರದಲಿ ದಾರಿ ಹಿಡಿದು ನಡಿ

ಇಲ್ಲಿ ಶರೀಫರು ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಕುರಿತು ಹುಚ್ಚುನಾಯಿ ಎಂದು ಹೇಳುತ್ತಿದ್ದಾರೆ. ಇವುಗಳ ಬಗ್ಗೆ ಮನುಷ್ಯ ಬಹಳ ಎಚ್ಚರವನ್ನು ವಹಿಸಬೇಕೆಂದು ಹೇಳಿದ್ದಾರೆ. ಇದರ ಮಿತಿ ಮೀರಿದ ವರ್ತನೆ ಪುರಾಣಗಳ ನಾಯಕರುಗಳನ್ನು ಸಹ ಬಾಧಿಸಿದೆ. ಹಾಗಾಗಿ ಬದುಕಿನಲ್ಲಿ ಎಚ್ಚರದಿಂದ ನಡೆಯಬೇಕೆಂದು ಹೇಳಿದ್ದಾರೆ.

ಶತ್ರುವಲ್ಲವು ಹೊನ್ನು ಹೆಣ್ಣು ಮಣ್ಣು
ತಿಳಿದರೆ ಅವು ಮೂರು ಗುರು ಕೊಟ್ಟ ಕಣ್ಣು
ಜುಟ್ಟಾಗಬಾರದೊ ಹಣ ನಿನ್ನ ತಲೆಗೆ
ಮೆಟ್ಟಾಗಬೇಕೋ ಕಾಲಿನ ಅಡಿಗೆ

ಹೊನ್ನು, ಹೆಣ್ಣು, ಮಣ್ಣು ಇವುಗಳನ್ನು ಮನುಷ್ಯನನ್ನು ಹಾಳು ಮಾಡುವ ಸಂಗತಿಗಳೆಂದು ಭಾವಿಸುತ್ತಾರೆ. ಆದರೆ ಶರೀಫರು ಇವುಗಳು ಶತ್ರುಗಳಲ್ಲ ಅವುಗಳನ್ನು ಸರಿಯಾಗಿ ತಿಳಿದರೆ ಅವು ಗುರುವು ಕೊಟ್ಟ ಕಣ್ಣುಗಳೆಂದು ಹೇಳುತ್ತಾರೆ. ಹಣ ನಮ್ಮ ತಲೆಗೆ ಜುಟ್ಟಾಗಬಾರದು ಅದು ನಮ್ಮ ಕಾಲಿನ ಮೆಟ್ಟಾಗಬೇಕೆಂದು ಹೇಳುವ ಮೂಲಕ ಅವುಗಳನ್ನು ನಮ್ಮ ಬದುಕಿನಲ್ಲಿ ಹೇಗೆ ಬಳಸಿಕೊಳ್ಳಬೇಕೆಂದು ತಿಳಿಸುತ್ತಾರೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಮೂಕನಾಗಿರಬೇಕೋ ಜಗದೊಳು
ಜೋಕ್ಯಾಗಿರಬೇಕೋ
ಕಾಕು ಕುಹಕರ ಸಂಗ ನೂಕಿರಬೇಕೋ
ಲೋಕೇಶನೊಳಗೇಕಾಗಿರಬೇಕೋ

ಎನ್ನುವಲ್ಲಿ ಈ ಜಗತ್ತಿನಲ್ಲಿ ನಾವು ಹೇಗೆ ಬದುಕಬೇಕು ಎನ್ನುವುದನ್ನು ಹೇಳಲಾಗಿದೆ. ಮೂಕನಾಗಿರಬೇಕು ಎಂದರೆ ಶಾಂತವಾಗಿರಬೇಕು. ಶಾಂತಿಯಿಂದ ವಿವೇಚನೆ ಮಾಡಿ ಪರಿಸ್ಥಿತಿಯನ್ನು ಅರಿತು ಬದುಕು ನಡೆಸಬೇಕು ಎಂದಿದ್ದಾರೆ. ಲೋಕದ ಡೊಂಕನ್ನು ತಿದ್ದಲು ಹೋಗುವ ಬದಲು ನಮ್ಮ ಅಂತರಂಗದ ಮನವನ್ನು ಶುದ್ಧಗೊಳಿಸಿಕೊಳ್ಳಲು ಮೂಕನಂತೆ ಇರಬೇಕೆಂದು ಹೇಳಿದ್ದಾರೆ.

ಸೋರುತಿಹುದು ಮನಿಯ ಮಾಳಿಗಿ, ಅಜ್ಞಾನದಿಂದ
ಸೋರುತಿಹುದು ಮನಿಯ ಮಾಳಿಗಿ
ಎನ್ನುವ ತತ್ವಪದದಲ್ಲಿ ಅಜ್ಞಾನದಿಂದ ಆಗುವ ಅನಾಹುತಗಳನ್ನು ಕುರಿತು ಮಾತನಾಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ತತ್ವಪದಗಳು ಕೇವಲ ಹಾಡುಗಳಲ್ಲ. ಅವುಗಳು ಬದುಕಿನ ದರ್ಶನವನ್ನು ಮಾಡಿಸುವ, ಬದುಕಿಗೆ ಮಾರ್ಗದರ್ಶನವನ್ನು ಮಾಡುವ ದಿವ್ಯ ಮಂತ್ರಗಳು ಎನ್ನಬಹುದು. ಸಂಕೀರ್ಣವಾದ, ಕ್ಲಿಷ್ಟವಾದ ವೇದ ಮತ್ತು ಉಪನಿಷತ್ತುಗಳ ಸಾರವನ್ನು ಜನಸಾಮಾನ್ಯರ ನುಡಿಯಲ್ಲಿ, ಅತ್ಯಂತ ಸರಳವಾದ ಭಾಷೆಯಲ್ಲಿ, ಜನಸಾಮಾನ್ಯರಿಗೆ ಕಟ್ಟಿಕೊಟ್ಟ ಕೀರ್ತಿ ಈ ತತ್ವಪದಕಾರರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಪರಂಪರೆಗೆ ತತ್ವಪದಕಾರರು ನೀಡಿರುವ ಕೊಡುಗೆ ಅಮೋಘವಾದುದು. ಹಾಗಾಗಿ ಇಂದಿಗೂ ಸಹ ತತ್ವಪದಕಾರರು ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎನ್ನಬಹುದು.

ಪರಾಮರ್ಶನ ಗ್ರಂಥಗಳು

1) ತತ್ವಪದಕಾರರು – ರಹಮತ್ ತರೀಕೆರೆ ಲೇಖನ
2) ಅನುಭಾವ ಸಾಂಸ್ಕೃತಿಕ ಹುಡುಕಾಟ – ಡಾ. ಬಸವರಾಜ ಕಲ್ಗುಡಿ
3) ಗುರು ಶಿಷ್ಯರ ತತ್ವಪದಗಳು – ಸಂ. ಡಾ. ವಿಜಯಶ್ರೀ ಸಬರದ
4) ತತ್ವಪದ ಪ್ರವೇಶಿಕೆ – ಸಂ. ರಹಮತ್ ತರೀಕೆರೆ ಮತ್ತು ಅರುಣ್ ಜೋಳದ ಕೂಡ್ಲಿಗಿ
5) ತತ್ವಪದ ಸಾಹಿತ್ಯ – ಡಾ. ಸುರೇಶ ಹನಗಂಡಿ
6) ಬೋಧ ಒಂದೇ ಬ್ರಹ್ಮನಾದ ಒಂದೇ – ಡಾ. ಮಂಜುಳಾ ಮಲ್ಹಾರಿ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಅಂತರರಾಷ್ಟ್ರೀಯ ಸಂಬಂಧಗಳ ಮೇಲೆ ಆಳವಾದ ರಾಜ್ಯ ಅಥವಾ ನೆರಳು ಸರ್ಕಾರ ಪರಿಣಾಮಗಳು

(Impacts of Deep State or Shadow Government on International Relations)

ಡಾ.ರಾಮಣ್ಣ.ಜಿ.ಟಿ
ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ
ಸರ್ಕಾರಿ ಪ್ರಥಮ ದರ್ಜೆಕಾಲೇಜು, ದಾವಣಗೆರೆ–577004

Manuscript ID:
JRD -2026-180522
ISSN: 2230-9578
Volume 18
Issue 5(IV)
Pp. 92-95
April- 2026
Submitted: 14 Apr. 2026
Revised: 25 Apr.2026
Accepted: 12 May. 2026
Published: 31 May. 2026

ಸಾರಾಂಶ

ಆಳವಾದ ರಾಜ್ಯದ ಪರಿಕಲ್ಪನೆಯು ತೀವ್ರ ರಾಜಕೀಯ ಚರ್ಚೆಯ ವಿಷಯವಾಗಿದೆ. ಕೆಲವರು ಇದನ್ನು ನಿಜವಾದ ಅಪಾಯಕಾರಿ ಘಟಕವೆಂದು ನೋಡುತ್ತಾರೆ ಮತ್ತು ಇತರರು ಇದನ್ನು ಸಾರ್ವಜನಿಕ ಸಂಸ್ಥೆಗಳನ್ನು ಅಪಖ್ಯಾತಿಗೊಳಿಸಲು ರೂಪಿಸಲಾದ ಪಿತೂರಿ ಸಿದ್ಧಾಂತವೆಂದು ನೋಡುತ್ತಾರೆ. ಇದು ವಿಶೇಷವಾಗಿ ಚುನಾಯಿತರಲ್ಲದ ಸರ್ಕಾರಿ ಅಧಿಕಾರಿಗಳು ಮತ್ತು ಕೆಲವೊಮ್ಮೆ ಖಾಸಗಿ ಸಂಸ್ಥೆಗಳು (ಹಣಕಾಸು ಸೇವೆಗಳು ಮತ್ತು ರಕ್ಷಣಾ ಕೈಗಾರಿಕೆಗಳಲ್ಲಿರುವಂತೆ) ಸರ್ಕಾರಿ ನೀತಿಯ ಮೇಲೆ ಪ್ರಭಾವ ಬೀರಲು ಮತ್ತು ಜಾರಿಗೆ ತರಲು ಕಾನೂನುಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ರಹಸ್ಯ ಜಾಲ. ಇಂತಹ ಜಾಲ ಒಂದು ರಾಷ್ಟ್ರದ ಸರ್ಕಾರವನ್ನು ಅಸ್ಥಿರಗೊಳಿಸಿ ತಾನು ಹೇಳಿದಂತೆ ಕೇಳುವ ಸರ್ಕಾರವನ್ನು ರಚಿಸುವುದರ ಮೂಲಕ ತನ್ನ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುತ್ತದೆ. ಇದರಿಂದ ಎಚ್ಚೆತ್ತುಕೊಂಡು ಸರ್ಕಾರವನ್ನು ಅಸ್ಥಿರಗೊಳಿಸುವ ವ್ಯವಸ್ಥೆಯ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ರಾಷ್ಟ್ರದ ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳು ಹಾಳಾಗುವುದರ ಮೂಲಕ ರಾಷ್ಟ್ರದಲ್ಲಿ ಅಸಮಾನತೆಗಳು, ದಂಗೆಗಳು ಮೊದಲಾದ ಘಟನೆಗಳು ಘಟಿಸುವುದರ ಮೂಲಕ ಇಡೀ ರಾಷ್ಟ್ರ ಅಧೋಗತಿಗೆ ಇಳಿಯಬಹುದು. ಈ ನಿಟ್ಟಿನಲ್ಲಿ ಈ ಲೇಖನದಲ್ಲಿ ಆಳವಾದ ರಾಜ್ಯ ಎಂದರೇನು? ಅದರಿಂದಾಗುವ ಪರಿಣಾಮಗಳೇನು? ಭಾರತವು ಯಾವ ಅಪಾಯಕ್ಕೆ ಒಡ್ಡಿಕೊಂಡಿದೆ ಎಂಬುದನ್ನು ಗುರುತಿಸುವ ಮತ್ತು ತಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಚರ್ಚಿಸಲಾಗಿದೆ.

ಕೀ ನೋಟ್: *ಆಳವಾದ ರಾಜ್ಯ, ಸರ್ಕಾರಿ ನೀತಿ, ಅಂತರರಾಷ್ಟ್ರೀಯ ಸಂಬಂಧ*

ಪೀಠಿಕೆ

ಪ್ರಸ್ತುತ ರಾಷ್ಟ್ರ ರಾಜ್ಯ ವ್ಯವಸ್ಥೆ ದ್ವಿ–ಧ್ರುವೀಕರಣ ಮತ್ತು ಏಕ ಧ್ರುವೀಕರಣದಿಂದ ಬಹುಧ್ರುವೀಕರಣದತ್ತ ಸಾಗಿದ್ದು, ಪ್ರಬಲ ರಾಷ್ಟ್ರಗಳು ಇದನ್ನು ಸಹಿಸದಂತಾಗಿದೆ. ಇದರಿಂದ ಜಗತ್ತಿನ ಮೇಲೆ ತಮ್ಮ ನಿಯಂತ್ರಣ ತಪ್ಪುತ್ತದೆ ಎನ್ನುವ ಮನೋಭಾವನೆಯನ್ನು ಹೊಂದಿದ್ದು, ಪ್ರಬಲ ರಾಷ್ಟ್ರಗಳಾಗಿ ಹೊರಹೊಮ್ಮುವ ರಾಷ್ಟ್ರಗಳನ್ನು ನಿಯಂತ್ರಿಸಲು ಹೊಸ ಅಸ್ತ್ರವನ್ನು ಕಂಡುಕೊಂಡಿವೆ. ಅದುವೇ ಆಳವಾದ ರಾಜ್ಯ. ಆಳವಾದ ರಾಜ್ಯ ಎಂದರೆ ಪ್ರಜಾಪ್ರಭುತ್ವದ ಮೂಲಕ ಚುನಾಯಿತರಾದ ಸರ್ಕಾರಿ ಅಧಿಕಾರಿಗಳ ನಿಯಂತ್ರಣಕ್ಕೆ ಸಿಗದೆ, ತೆರೆಮರೆಯಲ್ಲಿ ಕಾರ್ಯನಿರ್ವಹಿಸುವ ಗುಪ್ತಚರ, ಮಿಲಿಟರಿ ಅಥವಾ ಅಧಿಕಾರಿಶಾಹಿಯ ಜಾಲ. ಇದು ದೇಶದ ನೈಜ ನೀತಿಗಳನ್ನು ನಿರ್ಧರಿಸುವ ನೆರಳು ಸರ್ಕಾರದಂತೆ ಕಾರ್ಯನಿರ್ವಹಿಸುತ್ತದೆ. ಈ ಗುಪ್ತ ಪ್ರಭಾವವು ಸಾಮಾನ್ಯವಾಗಿ ಅಧಿಕೃತ ರಾಜತಾಂತ್ರಿಕತೆಯನ್ನು ದುರ್ಬಲಗೊಳಿಸುತ್ತದೆ. ವಿದೇಶಿ ಸಂಬಂಧಗಳನ್ನು ಅಡ್ಡಿಪಡಿಸುತ್ತದೆ ಮತ್ತು ಮಿತ್ರ ರಾಷ್ಟ್ರಗಳು ತಮ್ಮದೇ ಆದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುವಂತೆ ಒತ್ತಾಯಿಸಬಹುದು. ಉದಾಹರಣೆಗೆ ಉಕ್ರೇನ್ ಯುದ್ಧದ ಸಮಯದಲ್ಲಿ ನ್ಯಾಟೊ ಹೊಂದಾಣಿಕೆ.

ಆಳವಾದ ರಾಜ್ಯ ಪರಿಕಲ್ಪನೆ

ಇದು ಚುನಾಯಿತ ನಾಯಕತ್ವಕ್ಕೆ ಪ್ರತಿಕ್ರಿಯಿಸದ ಸರ್ಕಾರದೊಳಗೆ ಕಾರ್ಯನಿರ್ವಹಿಸುವ, ಸಾಮಾನ್ಯವಾಗಿ ಸೈದ್ಧಾಂತಿಕ ಗುಪ್ತ ಶಕ್ತಿಯ ರಚನೆಯಾಗಿದೆ. ಇದು "ಡೆರಿನ್ ಡೆವ್ಲೆಟ್" ಎಂಬ ಪದವು ಟರ್ಕಿಯಲ್ಲಿ ಹುಟ್ಟಿಕೊಂಡಿತು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ರಾಮಣ್ಣ.ಜಿ.ಟಿ, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಸರ್ಕಾರಿ ಪ್ರಥಮ ದರ್ಜೆಕಾಲೇಜು, ದಾವಣಗೆರೆ–577004

How to cite this article:
ರಾಮಣ್ಣ.ಜಿ.ಟಿ. (2026). ಅಂತರರಾಷ್ಟ್ರೀಯ ಸಂಬಂಧಗಳ ಮೇಲೆ ಆಳವಾದ ರಾಜ್ಯ ಅಥವಾ ನೆರಳು ಸರ್ಕಾರ ಪರಿಣಾಮಗಳು . Journal of Research & Development, 18(5(IV)), 92–95. https://doi.org/10.5281/zenodo.20992913

Quick Response Code:
Website: https://jrdrvb.org/
DOI: 10.5281/zenodo.20992913
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಆದರೆ ವಿಶೇಷವಾಗಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 2016ರ ಚುನಾವಣೆಯ ನಂತರ ಟ್ರಂಪ್ ಆಡಳಿತದ ವಿರುದ್ಧ ಎಫ್‌ಬಿಐ, ಸಿಐಎ ಮತ್ತು ಇತರ ಫೆಡರಲ್ ಏಜೆನ್ಸಿಗಳನ್ನು ಒಳಗೊಂಡ ಪರಿತೂರಿಯನ್ನು ಸೂಚಿಸಲು ಸಂಪ್ರದಾಯವಾದಿ–ಒಲವಿನ ಮಾಧ್ಯಮಗಳು ಮತ್ತು ರಾಜಕಾರಣಿಗಳು ಇದನ್ನು ಬಳಸಿಕೊಂಡಿದ್ದಾರೆ. ಭಾರತದಲ್ಲಿ ಪ್ರಜಾಪ್ರಭುತ್ವದ ಮಾನದಂಡಗಳಿಗೆ ವಿರುದ್ಧವಾಗಿ ವರ್ತಿಸುವ ಮಿಲಿಟರಿಯೇತರ ಭದ್ರತಾ ಸ್ಥಾಪನೆಯನ್ನು ವಿವರಿಸಲು ವಿಮರ್ಶಕರು ಈ ಪದವನ್ನು ಬಳಸಿದ್ದಾರೆ.

ಈ ಪರಿಕಲ್ಪನೆಯು ತೀವ್ರ ರಾಜಕೀಯ ಚರ್ಚೆಯ ವಿಷಯವಾಗಿದೆ. ಕೆಲವರು ಇದನ್ನು ನಿಜವಾದ ಅಪಾಯಕಾರಿ ಘಟಕವೆಂದು ನೋಡುತ್ತಾರೆ. ಇತರರು ಇದನ್ನು ಸಾರ್ವಜನಿಕ ಸಂಸ್ಥೆಗಳನ್ನು ಅಪಖ್ಯಾತಿಗೊಳಿಸಲು ರೂಪಿಸಲಾದ ಪಿತೂರಿ ಸಿದ್ಧಾಂತವೆಂದು ನೋಡುತ್ತಾರೆ.

ಡೇವಿಡ್ ರೋಥ್‌ಕೋಫ್ ಆಳವಾದ ಸ್ಥಿತಿಯ ಶಕ್ತಿಯು ಅನುಭವ, ಜ್ಞಾನ, ಸಂಬಂಧಗಳು, ಒಳನೋಟ, ಕರಕುಶಲತೆ, ವಿಶೇಷ ಕೌಶಲ್ಯಗಳು, ಸಂಪ್ರದಾಯಗಳು ಮತ್ತು ಹಂಚಿಕೆಯ ಮೌಲ್ಯಗಳಿಂದ ಬರುತ್ತದೆ. ಈ ಉದ್ದೇಶಿತ ಗುಣಲಕ್ಷಣಗಳು ಒಟ್ಟಾಗಿ ಹೆಸರಿಲ್ಲದ ಅಧಿಕಾರಿಗಳನ್ನು ಯಾರಿಗೂ ಹೊಣೆಗಾರನಲ್ಲದ ಸೂಪರ್ ಸರ್ಕಾರವನ್ನಾಗಿ ಮಾಡುತ್ತದೆ. ಎಂದಿದ್ದಾರೆ.

ಜಾನ್ ಐಬ್ನರ್ ಟರ್ಕಿಯ "ಆಳವಾದ ರಾಜ್ಯ"ದಿಂದ ನಿರ್ವಹಿಸಲ್ಪಡುವ ಅಪರಾಧ ಹಂತ– ರಾಜ್ಯದೊಳಗಿನ ಪ್ರಬಲ ಅಂಶಗಳು, ವಿಶೇಷವಾಗಿ ಮಿಲಿಟರಿ ಮತ್ತು ಭದ್ರತಾ ಸೇವೆಗಳು, ಹಿಂಸಾತ್ಮಕ ಉಗ್ರಗಾಮಿ ಗುಂಪುಗಳೊಂದಿಗೆ, ಜೊತೆಗೆ ರಾಜಕೀಯೇತರ ಅಪರಾಧ ಭೂಗತ ಲೋಕದೊಂದಿಗೆ ಸೇರಿ, ದೇಶದ ಆಡಳಿತ ಗಣ್ಯರ ರಾಜಕೀಯ ಹಿತಾಸಕ್ತಿಯಲ್ಲಿ ವಿಶೇಷ, ಕಾನೂನುಬಾಹಿರ ಕಾರ್ಯಾಚರಣೆಗಳನ್ನು ಕೈಗೊಳ್ಳುವ ಅಪಾರದರ್ಶಕ ಭೂಗತ ಲೋಕ ಎಂದು ಕರೆದಿದ್ದಾರೆ.

ಆಳವಾದ ರಾಜ್ಯದ ಕಾರ್ಯನಿರ್ವಹಣೆ

ಆಡಳಿತ ಬದಲಾವಣೆ: ಸ್ಟೀಫನ್ ಕಿಂಜರ್ ಅವರ ಗ್ರಂಥ 'ಓವರ್‌ಥ್ರೋ' ದಲ್ಲಿ ವಿವರಿಸಿರುವಂಥೆ ಬಹು ಖಂಡಗಳಲ್ಲಿ ಅಮೆರಿಕ ನಡೆಸಿದ ಶತಮಾನದ ಆಡಳಿತ ಬದಲಾವಣಗೆ ಕಾರ್ಯಾಚರಣೆಗಳನ್ನು ವಿವರಿಸುತ್ತದೆ. ಉದಾಹರಣೆಗೆ, ಬಾಂಗ್ಲಾದೇಶದ ಶೇಖ್ ಹಸೀನಾ ಆಡಳಿತವನ್ನು ತೆಗೆದುಹಾಕಲು ಅಮೆರಿಕದ ಆಳ ರಾಜ್ಯದ ಮೇಲೆ ಆರೋಪ ಹೊರಿಸಲಾಗುತ್ತಿದೆ.

ಚಿಂತಕರ ಚಾವಡಿಗಳು: ಚಿಂತಕರ ಚಾವಡಿಗಳು ಸರ್ಕಾರೇತರ ಸಂಸ್ಥೆಗಳು ಮತ್ತು ಪಕ್ಷಪಾತದ ಮಾಧ್ಯಮಗಳ ಬಳಕೆಯು ಸರ್ಕಾರಗಳು ಬೆಂಬಲಿಸುವ ರಾಜಕೀಯ ಬದಲಾವಣೆಗಳಿಗೆ ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ. ಉದಾಹರಣೆಗೆ, ಜಾರ್ಜಿಯಾ (2003, ಉಕ್ರೇನ್ (2004) ಮತ್ತು ಕಿರ್ಗಿಸ್ತಾನ್ (2005) ನಲ್ಲಿನ ವರ್ಣ ಕ್ರಾಂತಿಗಳು. ಇಂತಹ ವರ್ಣ ಕ್ರಾಂತಿಗಳು ಒಂದು ಆಡಳಿತವನ್ನು ಅಪಖ್ಯಾತಿಗೊಳಿಸುವ ಮತ್ತು ಬದಲಾಯಿಸುವ ಗುರಿಯನ್ನು ಹೊಂದಿರುವ ನಿರಾಯುಧ ಸಾರ್ವಜನಿಕ ದಂಗೆಯನ್ನು ಸಂಘಟಿಸಿದವು.

ಸಂಘರ್ಷ ಮತ್ತು ಯುದ್ಧಗಳು: ಆಳವಾದ ರಾಜ್ಯದಲ್ಲಿ ಕೆಲವು ರಾಷ್ಟ್ರಗಳು ರಾಷ್ಟ್ರಗಳ ನಡುವೆ ಸಂಘರ್ಷವನ್ನು ಹುಟ್ಟುಹಾಕುವುದರ ಮೂಲಕ ತಮ್ಮ ರಾಷ್ಟ್ರದ ಕಂಪನಿಗಳ ಮೂಲಕ ಲಾಭವನ್ನು ಮಾಡಿಕೊಡುವ ಉದ್ದೇಶವನ್ನು ಹೊಂದಿರುತ್ತವೆ. ಉದಾಹರಣೆಗೆ ಲಾಕ್‌ಹೀಡ್ ಮಾರ್ಟಿನ್, ರೇಥಿಯಾನ್, ಬೋಯಿಂಗ್ ಮತ್ತು ನಾರ್ತ್ರೋಪ್ ಗ್ರಮ್ಮನ್‌ನಂತಹ ರಕ್ಷಣಾ ಕಂಪನಿಗಳು ಶಸ್ತ್ರಾಸ್ತ್ರಗಳು, ಮುದ್ದುಗುಂಡುಗಳು ಮತ್ತು ಮಿಲಿಟರಿ ತಂತ್ರಜ್ಞಾನದ ಪೂರೈಕೆಯಿಮದ ಭಾಗಿ ಲಾಭ ಪಡೆಯುತ್ತವೆ. ಕಾರ್ಪೊರೇಟ್‌ಗಳು ತಮ್ಮ ಹಿತಾಸಕ್ತಿಗಳನ್ನು ಅನುಸರಿಸುವುದರ ಮೂಲಕ ರಾಷ್ಟ್ರಗಳನ್ನು ಯುದ್ಧದಲ್ಲಿ ಮುಳುಗಿಸುತ್ತವೆ. ಇದರಿಂದಾಗಿ ಅವುಗಳ ಶಸ್ತ್ರಾಸ್ತ್ರಗಳ ಬೇಡಿಕೆ ಹೆಚ್ಚಾಗುತ್ತದೆ.

ಆರ್ಥಿಕ ಪ್ರಭಾವ: ಆಸಕ್ತಿ ದೇಶಗಳು ವ್ಯವಹಾರಗಳಿಗೆ ಅನುಕೂಲಕರವಾದ ಮಾರುಕಟ್ಟೆ ಪ್ರವೇಶ ಮತ್ತು ನಿಯಂತ್ರಕ ಚೌಕಟ್ಟುಗಳಿಗಾಗಿ ಲಾಬಿ ನಡೆಸುತ್ತವೆ. ಉದಾಹರಣೆಗೆ ಡಬ್ಲುಟಿಓ ವ್ಯಾಪಾರ ಮಾತುಕತೆಗಳಲ್ಲಿ ದೇಶಗಳು ತಮ್ಮ ಕೃಷಿ ಮಾರುಕಟ್ಟೆಗಳನ್ನು ಆಮದು ಮಾಡಿಕೊಂಡ ಉತ್ಪನ್ನಗಳಿಗೆ ತೆರೆಯುವಂತೆ ಒತ್ತಡ ಹೇರುವುದು. ಸೋವಿಯತ್ ಒಕ್ಕೂಟದ ಪತನದ ನಂತರ, ಹಿಂದಿನ ಸೋವಿಯತ್ ರಾಜ್ಯಗಳು ಮತ್ತು ಲ್ಯಾಟಿನ್ ಅಮೇರಿಕನ್ ಕಮ್ಯುನಿಸ್ಟ್ ದೇಶಗಳು ಸರ್ಕಾರಿ ಸ್ವಾಮ್ಯದ ಆರ್ಥಿಕತೆಗಳಿಂದ ಮುಕ್ತ ಮಾರುಕಟ್ಟೆ ಆರ್ಥಿಕತೆಗೆ ಸ್ಥಳಾಂತರಗೊಂಡವು.

ಕಣ್ಗಾವಲು: ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆ ಏಷ್ಯಾ ಮತ್ತು ಆಫ್ರಿಕಾದಾಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಣ್ಗಾವಲು ನಡೆಸಿದೆ ಎಂದು ಎಡ್ವರ್ಡ್ ಸ್ನೋಡೆನ್ ಬಹಿರಂಗಪಡಿಸಿದರು.

ಮಾಧ್ಯಮ ಮತ್ತು ನಿರೂಪಣೆ: ಪಾಶ್ಚಿಮಾತ್ಯ ಮಾಧ್ಯಮಗಳ ವರದಿಗಳು ಭಾರತದಲ್ಲಿನ ಕೆಲವು ಸಮಸ್ಯೆಗಳನ್ನು ತಪ್ಪಾಗಿ ನಿರೂಪಿಸಿ ಮಾನವ ಹಕ್ಕುಗಳ ಮೇಲೆ ಸರ್ಕಾರದ ಮೇಲೆ ಒತ್ತಡ ಹೇರುತ್ತವೆ. ಉದಾಹರಣೆಗೆ ಅಮ್ನೆಸ್ಟಿ ಇಂಟರ್ನ್ಯಾಷನಲ್ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯದ ಕಾನೂನುಗಳನ್ನು ಭಾರತ ಸರ್ಕಾರ ಅಳವಡಿಸಿಕೊಂಡಿದೆ ಎಂದು ಆರೋಪಿಸಿದೆ.

ನಾಗರಿಕ ಸಮಾಜ ಚಳುವಳಿಗಳು: ಮಾನವ ಹಕ್ಕುಗಳು ಅಥವಾ ಹವಾಮಾನ ಬದಲಾವಣೆಯ ಹೆಸರಿನಲ್ಲಿ ಭಾರತದ ಕಲ್ಲಿದ್ದಲು ಮತ್ತು ಇಂಧನ ಯೋಜನೆಗಳ ವಿರುದ್ಧ ಗ್ರೀನ್‌ಪೀಸ್ ಇಂಡಿಯಾದಹಂತಹ ನಾಗರಿಕ ಸಮಾಜ ಗುಂಪುಗಳಿಗೆ ಹಣಕಾಸು ಒದಗಿಸುವುದರ ಮೂಲಕ ರೈತರ ಚಳುವಳಿಯಲ್ಲಿ ಅವರು ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ. ಗುಪ್ತಚರ ಬ್ಯೂರೋ ವರದಿಯೊಮದು ಗ್ರೀನ್‌ಪೀಸ್‌ನಂತಹ "ವಿದೇಶಿ ಅನುದಾನಿತ" ಎನ್‌ಜಿಒಗಳು ಜಿಡಿಪಿ ಬೆಳವಣಿಗೆಯ ಮೇಲೆ 2–3% ರಷ್ಟು ನಕಾರಾತ್ಮಕ ಪರಿಣಾಮ ಬೀರಿವೆ ಎಂದು ಆರೋಪಿಸಿದೆ.

ಅಂತರರಾಷ್ಟ್ರೀಯ ಸಂಬಂಧಗಳ ಮೇಲೆ ಪ್ರಮುಖ ಪರಿಣಾಮಗಳು

ಆಡಳಿತ ಬದಲಾವಣೆಗಳು ಮತ್ತು ವಿದೇಶಿ ಹಸ್ತಕ್ಷೇಪ: ರಾಜ್ದದ ಆಳುವ ಅಂಶಗಳು, ಉದ್ದೇಶಿತ ದೇಶಗಳಲ್ಲಿ ಆಡಳಿತ ವಿರೋಧಿ ಭಾವನೆಗಳನ್ನು ಮತ್ತು ಆಡಳಿತ ಬದಲಾವಣೆಯನ್ನು ಪ್ರಚೋದಿಸಲು ವಿರೋಧ ಗುಂಪುಗಳನ್ನು ಸಂಘಟಿಸುವುದು, ಬೆಂಬಲಿಸುವುದು ಮತ್ತು ಹಣಕಾಸು ಒದಗಿಸುವುದರ ಮೂಲಕ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸುತ್ತವೆ. ಉದಾಹರಣೆಗೆ ಬಾಂಗ್ಲಾದಲ್ಲಿನ ಶೇಖ್‌ಹಸೀನಾ ಸರ್ಕಾರ.

ಆರ್ಥಿಕ ವಿಧಾನಗಳ ಮೂಲಕ ಅಸ್ಥಿರಗೊಳಿಸುವಿಕೆ: ಈ ಜಾಲಗಳು ಆರ್ಥಿಕತೆಯನ್ನು ಅಸ್ಥಿರಗೊಳಿಸಲು ಮತ್ತು ನೀತಿ ಬದಲಾವಣೆಗಳನ್ನು ಒತ್ತಾಯಿಸಲು ಬ್ಯಾಂಕುಗಳನ್ನು ಮುರಿಯುವುದು ಅಥವಾ ಆರ್ಥಿಕ ಬಿಕ್ಕಟ್ಟುಗಳಿಗೆ ಕೊಡುಗೆ ನೀಡುವಂತಹ ಹಣಕಾಸಿನ ಘಟನೆಗಳನ್ನು ಕುಶಲತೆಯಿಂದ ನಿರ್ವಹಿಸುತ್ತವೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸರ್ಕಾರೇತರ ಸಂಸ್ಥೆಗಳು ಮತ್ತು ಲೋಕೋಪಕಾರದ ಮೂಲಕ ಪ್ರಭಾವ: ಓಪನ್ ಸೊಸೈಟಿ ಫೌಂಡೇಶನ್‌ನಂತಹ ಸಂಸ್ಥೆಗಳನ್ನು ಭಾರತ, ರಷ್ಯಾ ಮತ್ತು ಚೀನಾದಂತಹ ರಾಷ್ಟ್ರಗಳಲ್ಲಿ ದೇಶೀಯ ನೀತಿಗಳನ್ನು ನಿಯಂತ್ರಿಸಲು ಆಳ ರಾಜ್ಯವು ಬಳಸುವ ಸಾಧನವಾಗಿ ಉಲ್ಲೇಖಿಸಲಾಗಿದೆ.

ಸಾರ್ವಭೌಮ ವಿದೇಶಾಂಗ ನೀತಿಯ ಅಧೀನತೆ: ನ್ಯಾಟೋ ದೇಶಗಳು ಸಾಮಾನ್ಯವಾಗಿ ವಾಷಿಂಗ್ಟನ್‌ನ ನಿರ್ದೇಶನಗಳನ್ನು ಅನುಸರಿಸುವುದನ್ನು ಗಮನಿಸಲಾಗುತ್ತದೆ. ಇದು ಅಮೆರಿಕ ಆಳ ರಾಜ್ಯವು ಇತರರಿಗೆ ಕ್ರಮಗಳನ್ನು ನಿರ್ದೇಶಿಸುವ ಶ್ರೇಣಿಯನ್ನು ಸೂಚಿಸುತ್ತದೆ.

ಸೈದ್ಧಾಂತಿಕ ನಿಯಂತ್ರಣ: ಆಳವಾದ ರಾಜ್ಯವು ತನ್ನ ಕಾರ್ಯಸೂಚಿಯನ್ನು ಪೂರೈಸಲು ಬಂಡವಾಳಶಾಹಿ ಮತ್ತು ಕಮ್ಯುನಿಸ್ಟ್ ಸಿದ್ಧಾಂತಗಳನ್ನು ಬಳಸಿಕೊಂಡು ಕುಶಲತೆಯಿಮದ ವರ್ತಿಸುತ್ತದೆ ಎಂದು ನಂಬಲಾಗಿದೆ. ಆದರೆ ಜಾಗತಿಕ ನೀತಿಗಳನ್ನು ಜಾರಿಗೆ ತರಲು ಅಮೆರಿಕ, ನ್ಯಾಟೋ, ಡಬ್ಲ್ಯೂಹೆಚ್ಓ ಮತ್ತು ಐಎಂಎಫ್‌ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳುತ್ತದೆ. ಈ ಚಟುವಟಿಕೆಗಳು ಸಾಮಾನ್ಯವಾಗಿ "ನೆರಳು" ವಿದೇಶಾಂಗ ನೀತಿಗೆ ಕಾರಣವಾಗುತ್ತವೆ, ಅಲ್ಲಿ ಅಧಿಕೃತ, ಸಾರ್ವಜನಿಕ–ಮುಖಿ ಸರ್ಕಾರವು ಬೇರೂರಿವ, ಆಯ್ಕೆಯಾಗದ ಮತ್ತು ಹೆಚ್ಚಾಗಿ ಅಂತರರಾಷ್ಟ್ರೀಯ ಜಾಲದಿಂದ ಕುಶಲತೆಯಿಂದ ನಿಯಂತ್ರಿಸಲ್ಪಡುತ್ತವೆ.

ಅನುದಾನಿತ ಸರ್ಕಾರೇತರ ಸಂಸ್ಥೆಗಳ ವಿರುದ್ಧ ಭಾರತದ ಹೋರಾಟ

2016 ರಿಂದ ಭಾರತ ಸರ್ಕಾರವು ವಿದೇಶಿ ಅನುದಾನಿತ ಸರ್ಕಾರೇತರ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳ ಮೇಲೆ ನಿರಂತರ ದಮನ ಕಾರ್ಯಾಚರಣೆ ನಡೆಸುತ್ತಿದೆ. ಕಾರಣ ಸರ್ಕಾರೇತರ ಸಂಸ್ಥೆಗಳು ಅದರಲ್ಲೂ. ಜಾರ್ಜ್ ಸೊರೊಸ್ ಅವರ ಓಪನ್ ಸೊಸೈಟಿ ಫೌಂಡೇಶನ್, ಪಿಯರೆ ಒಮಿಡ್ಯಾರ್ ಅವರ ಒಮಿಡ್ಯಾರ್ ನೆಟ್‌ವರ್ಕ್ ಮತ್ತು ಹೆನ್ರಿ ಫೋರ್ಡ್ ಅವರ ಮಗ ಸ್ಥಾಪಿಸಿದ ದಿ ಫೋರ್ಡ್ ಫೌಂಡೇಶನ್ ನಂತಹ ಸರ್ಕಾರೇತರ ಸಂಸ್ಥೆಗಳು ಹಚ್ಚಾಗಿ ಮಾನವ ಹಕ್ಕುಗಳು, ಬಡತನ ನಿರ್ಮೂಲನೆ, ಶಿಕ್ಷಣ ಮತ್ತು ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಕೇಂದ್ರೀಕರಿಸುವುದರ ಮೂಲಕ ಬಾಂಗ್ಲಾದಲ್ಲಿ ನಡೆದಂತೆ ಭಾರತದಲ್ಲೂ ರಕ್ತರಹಿತ ಯುದ್ಧಗಳನ್ನು ನಡೆಸಬಹುದು, ಸಾಮೂಹಿಕ ಪ್ರತಿಭಟನೆಗಳನ್ನು ಆಯೋಜಿಸಬಹುದು ಮತ್ತು ಅನಾನುಕೂಲ ನಾಯಕರನ್ನು ಉರುಳಿಸಬಹುದು. ಇತರ ರಾಷ್ಟ್ರಗಳ ಸಾರ್ವಭೌಮತ್ವವನ್ನು ಲೆಕ್ಕಿಸದೆ ತನ್ನ ಇಚ್ಛೆಯಂತೆ ಅವ್ಯವಸ್ಥೆ ಮತ್ತು ಅರಾಜಕತೆಯನ್ನು ಸೃಷ್ಟಿಸುತ್ತಿದ್ದವು. ಭಾರತ ಎಷ್ಟೇ ಕ್ರಮಗಳನ್ನು ಕೈಗೊಂಡರೂ ಈ ಸಂಸ್ಥೆಗಳು FCRA ನಿಯಮಗಳನ್ನು ತಪ್ಪಿಸುವ ಮೂಲಕ ಭಾರತಕ್ಕೆ ಹಣವನ್ನು ಹರಿಸುವುದನ್ನು ಮುಂದುವರೆಸಿವೆ. ಈ ಮೂರು ಪ್ರತಿಷ್ಠಾನಗಳನ್ನು ಭಾರತ ಸರ್ಕಾರವು ಮೊದಲೇ ವೀಕ್ಷಣಾ ಪಟ್ಟಿಯಲ್ಲಿ ಇರಿಸಿದೆ, ಆಂದರೆ ಅವುಗಳ ನಿಧಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದರೆ ಮಾತ್ರ ಅವು ದಾನ ಮಾಡಬಹುದು.

ಈ ನಿರ್ಬಂಧಗಳಿಗೆ ಪ್ರತಿಕ್ರಿಯೆಯಾಗಿ, ಮೇಲಿನ ಮೂರು ಸಂಸ್ಥೆಗಳು ಹೊಸ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಿವೆ. ಅವು ಹಣಕಾಸನ್ನು ಒದಗಿಸುವ ಮತ್ತು ಮಧ್ಯವರ್ತಿ ಸಂಸ್ಥೆಗಳ ಪದರಗಳನ್ನು ರಚಿಸುವ ಮೂಲಕ ಹಣವನ್ನು ಹರಿಸುತ್ತವೆ. ಹೀಗಾಗಿ ಪರಿಶೀಲನೆಯನ್ನು ತಪ್ಪಿಸುತ್ತವೆ. ಈ ಪ್ರತಿಷ್ಠಾನಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಹಣಕಾಸು ಪಡೆಯುವ ಈ ಎನ್.ಜಿ.ಓ ಜಾಲವು ಎರಡು ಮುಖ್ಯ ಉದ್ದೇಶಗಳನ್ನು ಹೊಂದಿವೆ. ಅವುಗಳೆಂದರೆ ಒಂದು ಭಾರತ ಸರ್ಕಾರವನ್ನು ವಿರೋಧಿಸುವ ಚಟುವಟಿಕೆಗಳನ್ನು ಬೆಂಬಲಿಸುವುದು. ಎರಡನೆಯದಾಗಿ ಭಾರತ ಸರ್ಕಾರವನ್ನು ಟೀಕಿಸುವ ಮಾಧ್ಯಮ ಸಂಸ್ಥೆಗಳಿಗೆ ಪ್ರಾಯೋಜಕತ್ವ ಮತ್ತು ಹಣಕಾಸು ಒದಗಿಸುವುದು.

2022 ರಲ್ಲಿ ಲೋಕಸಭೆಯಲ್ಲಿ ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ್ ರೈ ಹೇಳಿಕೆಯ ಪ್ರಕಾರ, 2017ಮತ್ತು 2021 ರ ನಡುವೆ, 6,677 ಎನ್‌ಜಿಒಗಳ ವಿದೇಶಿ ಕೊಡುಗೆ (ನಿಯಂತ್ರಣ) ಕಾಯ್ದೆ (ಎಫ್‌ಸಿಆರ್‌ಎ) ಪರವಾನಗಿಗಳನ್ನು ರದ್ದುಗೊಳಿಸಲಾಗಿದೆ. ಹೆಚ್ಚುವರಿಯಾಗಿ, 2011 ಮತ್ತು 2019 ರ ನಡುವೆ, ಕೇಂದ್ರ ಗೃಹ ಸಚಿವಾಲಯವು 19,000ಕ್ಕೂ ಹೆಚ್ಚು ಸ್ವಯಂಸೇವಾ ಸಂಸ್ಥೆಗಳ ನೋಂದಣಿಗಳನ್ನು ರದ್ದುಗೊಳಿಸಿದೆ.

ಭಾರತ ಆಳವಾದ ರಾಜ್ಯದ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳು

ರಾಷ್ಟ್ರೀಯ ಭದ್ರತಾ ಜಾಗೃತಿ: ಚಿಂತಕರ ಚಾವಡಿಗಳು, ಮಾಧ್ಯಮಗಳು ಮತ್ತು ನಾಗರಿಕ ಸಮಾಜ ಚಳುವಳಿಗಳ ಮೂಲಕ ದೇಶೀಯ ರಾಜಕೀಯದ ಮೇಲೆ ಪ್ರಭಾವ ಬೀರುವ ವಿದೇಶಿ ಪ್ರಯತ್ನಗಳನ್ನು ಎದುರಿಸಲು ರಾಷ್ಟ್ರೀಯ ಭದ್ರತಾ ಜಾಗೃತಿಯನ್ನು ಹೆಚ್ಚಿಸಬೇಕು.

ಮಾಧ್ಯಮದ ಮೂಲಕ ಬಲವಾದ ಪ್ರತಿ–ನಿರೂಪಣೆ: ಭಾರತದ ರಕ್ಷಣಾ ಪಡೆಗಳ ನೈತಿಕತೆಯನ್ನು ಕಾಪಾಡಲು ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ಎತ್ತಿ ಹಿಡಿಯಲು ಸಾಮಾಜಿಕ ಮಾಧ್ಯಮದಲ್ಲಿ ಬಲವಾದ ಪ್ರತಿ–ನಿರೂಪಣೆಯ ಮಹತ್ವವನ್ನು ಹೆಚ್ಚಿಸಬೇಕು.

ಸ್ಥಳೀಯ ಚಿಂತಕರ ಚಾವಡಿಗಳು: ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸಲು ಮತ್ತು ಬಾಹ್ಯ ಘಟಕಗಳು ನಿರೂಪಣೆಗಳಲ್ಲಿ ಏಕಸ್ವಾಮ್ಯ ಸಾಧಿಸುವುದನ್ನು ತಡೆಯಲು ಭಾರತವು ಸ್ಥಳೀಯ ಚಿಂತಕರ ಚಾವಡಿಗಳು ಮತ್ತು ಮಾಧ್ಯಮ ವೇದಿಕೆಗಳನ್ನು ಅಭಿವೃದ್ಧಿಪಡಿಸಬೇಕು.

ರಾಜತಾಂತ್ರಿಕ ನಿಶ್ಚಿತಾರ್ಥ: ಮಿತ್ರರಾಷ್ಟ್ರಗಳ ಜಾಲವನ್ನು ನಿರ್ಮಿಸಲು ಮತ್ತು ಅಸ್ಥಿರಗೊಳಿಸುವ ಪ್ರಯತ್ನಗಳಿಂದ ತನ್ನ ರಾಜಕೀಯ ಭೂದೃಶ್ಯವನ್ನು ರಕ್ಷಿಸಲು ಭಾರತವು ಸಮಾನ ಮನಸ್ಕ ದೇಸಗಳು ಮತ್ತು ಸಂಸ್ಥೆಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಬೇಕು.

ಗುಪ್ತಚರ ದಳವನ್ನು ಬಲಪಡಿಸುವುದು: ರಾಷ್ಟ್ರದಲ್ಲಿ ರಾ ದಂತಹ ಗುಪ್ತಚರ ಸಂಸ್ಥೆಯನ್ನು ಹೆಚ್ಚು ಬಲಿಷ್ಠಗೊಳಿಸಬೇಕು ಮತ್ತು ಅತ್ಯಂತ ಆಪ್ತ ರಾಷ್ಟ್ರದ ಗುಪ್ತಚರ ದಳದೊಂದಿಗೆ ಸಮನ್ವಯ ಸಾಧಿಸಬೇಕು. ಇದರಿಂದ ರಾಷ್ಟ್ರದ ಆಳವಾದ ರಾಜ್ಯದಿಂದ ಎದುರಾಗುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು.

ಮಾಹಿತಿ ಸಾರ್ವಭೌಮತ್ವ: ಭಾರತದ ಸೈಬರ್ ಭದ್ರತೆಯನ್ನು ಬಲಪಡಿಸುವುದು ಮತ್ತು ಅದರ ಡಿಜಿಟಲ್ ಸ್ಥಳಗಳನ್ನು ನಿಯಂತ್ರಿಸುವುದು ವಿದೇಶಿ ಪ್ರಭಾವವನ್ನು ತಗ್ಗಿಸಲು ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬೇಕು. ತನ್ನದೇ ಆದ ನೇವಿಗೇಷನ್ ಬಲಪಡಿಸಬೇಕು.

ಆಕರ ಗ್ರಂಥಗಳು

1. Abramson, A. 2017. "Trump's Allies Keep Talking About the 'Deep State.' What's That?," *Time*, March 8.
2. Acemoglu, D., and J. A. Robinson. 2012. *Why Nations Fail: The Origins of Power, Prosperity, and Poverty*. Crown Currency.

3. Acemoglu, D., and J. A. Robinson. 2019. *The Narrow Corridor: States, Societies, and the Fate of Liberty*. Penguin Press.
4. Al-Rawi, A., N. K. Stewart, C. Celestini, and N. Worku. 2022. "Al-Rawi Et al. 2022. Delegitimizing the Legitimate-Dark Social Movements on Telegram.Pdf." *Global Media Journal: Canadian Edition* **14**, no. 1: 28–47.
5. Ambinder, M., and D. B. Grady. 2013. *Deep State: Inside the Government Secrecy Industry*. 1st ed. Trade Paper Press.
6. Aria, M., and C. Cuccurullo. 2017. "Bibliometrix: An R-Tool for Comprehensive Science Mapping Analysis." *Journal of Informetrics* **11**, no. 4: 959–975
7. Armbrust, W. 2017. "Trickster Defeats the Revolution: Egypt as the Vanguard of the New Authoritarianism." *Middle East Critique* **26**, no. 3: 221–239.
8. Crouch, J. P., M. J. Rozell, and M. A. Sollenberger. 2020. *The Unitary Executive Theory: A Danger to Constitutional Government*. University Press of Kansas.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಅಲಕ್ಷಿತ ವಚನಕಾರರ ವಚನಗಳಲ್ಲಿ 'ಲೋಕದೃಷ್ಟಿ'

ಡಾ. ಪಿ. ಬಿ. ಚಾರಿ
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ

Manuscript ID:
JRD -2026-180523
ISSN: 2230-9578
Volume 18
Issue 5(IV)
Pp. 96-98
April- 2026
Submitted: 13 Apr. 2026
Revised: 25 Apr.2026
Accepted: 12 May. 2026
Published: 31 May. 2026

ಕರ್ನಾಟಕದ ಸಾಹಿತ್ಯಿಕ ಇತಿಹಾಸದಲ್ಲಿ 12ನೇ ಶತಮಾನದ ವಚನಕಾರರ ಚಳುವಳಿ ಒಂದು ಅಪೂರ್ವ ಘಟನೆ. ಸಮಾಜದ ಎಲ್ಲ ವರ್ಗ, ವರ್ಣಗಳ ಜನಸಮುದಾಯವು ಒಂದೇ ಸೂರಿನಡಿಯಲ್ಲಿ ಸೇರಿ ಸಮಾಜದ ಕಲ್ಯಾಣವನ್ನು ಬಯಸಿ ನಡೆಸಿದ ಚರ್ಚೆಗಳು ಅಪಾರವಾದುದು ಮತ್ತು ಪ್ರಾಮುಖ್ಯವಾದವುಗಳಾಗಿವೆ. ಅವರು ವಚನಗಳನ್ನು ವ್ಯಕ್ತಿಕಲ್ಯಾಣ, ಸಮಾಜ ಕಲ್ಯಾಣದ ಸಲುವಾಗಿ ಜಾತಿಭ್ರಷ್ಟರ, ಸಮಾಜ ಘಾತುಕರ ವಿರುದ್ಧ ಅಸ್ತ್ರಗಳನ್ನಾಗಿ ಬಳಸಿಕೊಂಡರು.

12ನೇ ಶತಮಾನದಲ್ಲಿ ಆನಂತರವೂ ನೂರಾರು ವಚನಕಾರರು ವಚನಗಳನ್ನು ರಚಿಸಿದ್ದಾರೆ. ಅದರಲ್ಲೂ ತಳವರ್ಗದಿಂದ ಬಂದ, ಅಲಕ್ಷ್ಯಕ್ಕೆ ತಳ್ಳಲ್ಪಟ್ಟ ವಚನಕಾರರು ಅನೇಕರಿದ್ದಾರೆ. ಅವರ ವಚನಗಳು ಆಧುನಿಕ ಕಾಲಘಟ್ಟದಲ್ಲಿ ಬೆಳಕಿಗೆ ಬಾರದಿರುವುದು ಸೋಜಿಗ ಮತ್ತು ಶೋಚನೀಯವೆನಿಸುತ್ತದೆ. ಇತ್ತೀಚೀನ ವಿದ್ವಾಂಸರಿಂದ ಅಲಕ್ಷ್ಯಕ್ಕೆ ತಳ್ಳಲ್ಪಟ್ಟ ವಚನಕಾರರನ್ನು ಗುರುತಿಸಿ, ಅವರ ವಚನಗಳ ತಾತ್ವಿಕತೆಯನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಣೆಗೊಳಪಡಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಮೇಲ್ವರ್ಗದ ವಚನಕಾರರಿಗಿಂತ ತಳವರ್ಗದ ವಚನಕಾರರಲ್ಲಿ ವೈಚಾರಿಕ ಪ್ರಜ್ಞೆಯು ಎದ್ದು ತೋರುತ್ತದೆ. ಇವರ ವಚನಗಳಲ್ಲಿ ತಾತ್ವಿಕತೆಗಿಂತ ನೈತಿಕತೆಗೆ ಹಾಗೂ ಸಾಮಾಜಿಕ ಸುಧಾರಣೆಯತ್ತ ಒಲವು ಅಧಿಕವಾಗಿರುವುದು ಗೋಚರಿಸುತ್ತದೆ. ಕೆಲವು ವಚನಕಾರರಲ್ಲಿ ಬಂಡಾಯದ ಧ್ವನಿಯೂ ಅಡಗಿದೆ.

ಸಾಮಾನ್ಯವಾಗಿ ಎಲ್ಲ ಧಾರ್ಮಿಕ ಮಹಾಪುರುಷರ ಸಾಹಿತ್ಯದಲ್ಲಿ ದಯೆ, ಅಹಿಂಸೆ, ತ್ಯಾಗ, ಶಾಂತಿ ಇತ್ಯಾದಿ ಲೋಕನೀತಿ ಎದ್ದು ಕಾಣಿಸುತ್ತದೆ. ಇಂಥ ನೀತಿತತ್ವಗಳನ್ನು ಶರಣರು ಗಾಢವಾಗಿ ಪ್ರತಿಪಾದಿಸಿದ್ದಾರೆ. ಅದರಲ್ಲೂ ಅಲಕ್ಷಿತ ವಚನಕಾರರಲ್ಲಿ ಆತ್ಮವಿಮರ್ಶೆ, ಕಾಯಕನಿಷ್ಠೆ, ಲೋಕನೀತಿ, ಸಾಮಾಜಿಕ ಜೀವನ, ಧಾರ್ಮಿಕ ಸ್ವಾತಂತ್ರ್ಯ ಅಭಿವ್ಯಕ್ತಿ ಪ್ರಧಾನವಾಗಿ ಮೂಡಿಬಂದಿದೆ. ಸಾಮಾನ್ಯವಾಗಿ ಎಲ್ಲ ವಚನಕಾರರು ತಾವು ನಂಬಿದ ದೈವಾರಾಧನೆಯೊಂದಿಗೆ ಸಮಾಜ ಸುಧಾರಣೆಯನ್ನು ಬಯಸುತ್ತಾರೆ. ಈ ವರೆಗೆ ಪ್ರಸಿದ್ಧ ವಚನಕಾರರ ಅಥವಾ ಶರಣರ ವಚನಗಳಲ್ಲಿನ ಪ್ರಸಿದ್ಧ ತತ್ವಗಳನ್ನು ಹೆಚ್ಚಾಗಿ ಅಧ್ಯಯನಕ್ಕೆ ಒಳಪಡಿಸಿದ್ದು ಅದರಲ್ಲಿಯೂ ಬೆರಳೆಣಿಕೆಯಲ್ಲಿ ಕೆಳವರ್ಗದ ವಚನಕಾರರು ಸೇರಿಕೊಂಡಿದ್ದಾರೆ. ಆದರೆ ಲೋಕನೀತಿಯನ್ನು, ಸಾಮಾಜಿಕ ಬದ್ಧತೆಯನ್ನು, ಧಾರ್ಮಿಕ ತತ್ವಸಿದ್ಧಾಂತಗಳನ್ನು ಪ್ರಶ್ನಿಸಿದ, ವಿಮರ್ಶಿಸಿದ ಅನೇಕ ವಚನಕಾರರು ಅಪ್ರಸಿದ್ಧರಾಗಿಯೇ ಉಳಿದುಕೊಂಡಿದ್ದಾರೆ. ಆ ಅಪ್ರಸಿದ್ಧ ವಚನಕಾರರ ಪ್ರಸಿದ್ಧ ವಚನಗಳನ್ನು ಹೊಸ ಹೊಸ ಮಗ್ಗಲುಗಳನ್ನು ಶೋಧನೆ, ಸಂಶೋಧನೆ, ವಿಮರ್ಶೆ, ವಿಶ್ಲೇಷಣೆಗೆ ಒಳಪಡಿಸಿ 12ನೇ ಶತಮಾನದ ಶರಣರ ಚಳುವಳಿಯ ಮೂಲೋದ್ದೇಶವನ್ನು ಮತ್ತಷ್ಟು ತಿಳಿದುಕೊಳ್ಳುವುದಾಗಿದೆ.

ಅಂಬಿಗರ ಚೌಡಯ್ಯನ ಬಹಳಷ್ಟು ವಚನಗಳು ಲೋಕನೀತಿಯ ಭಂಡಾರವಾಗಿವೆ. ಸಮಾಜ ಸುಧಾರಣೆಯಾಗಬೇಕೆಂಬುದು ಎಲ್ಲ ವಚನಕಾರರ ಆಶಯವಾಗಿದೆ. ಅದರಲ್ಲೂ ಚೌಡಯ್ಯನದು ಬಂಡಾಯದ ದೋರಣೆ. ಅದಕ್ಕಾಗಿ ಅವನು ಬಗೆಬಗೆಯ ಉಪಮೆ, ರೂಪಕ, ದೃಷ್ಟಾಂತಗಳನ್ನು ಕೊಟ್ಟು ಮನಮುಟ್ಟುವಂತೆ ವಚನಗಳನ್ನು ಸರಳಭಾಷೆಯಲ್ಲಿ ನಿರೂಪಿಸುತ್ತಾನೆ.

"ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಪಿ. ಬಿ. ಚಾರಿ ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಘಟಗಿ

How to cite this article:
ಪಿ. ಬಿ. ಚಾರಿ (2026). ಅಲಕ್ಷಿತ ವಚನಕಾರರ ವಚನಗಳಲ್ಲಿ 'ಲೋಕದೃಷ್ಟಿ'. Journal of Research & Development, 18(5(IV)), 96–98. https://doi.org/10.5281/zenodo.20993111

Quick Response Code:
Website: https://jrdrvb.org/
DOI: 10.5281/zenodo.20993111
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ [ನಿಜ]ಶರಣನು"

ಮೇಲಿನ ವಚನ ಎಷ್ಟು ಸರಳವಾಗಿದೆ. ನಮ್ಮ ಬದುಕಿನ ಜಂಜಡವನ್ನು, ಜಟೀಲತೆಯ ಹಂದರವನ್ನು ನಿರೂಪಿಸುತ್ತದೆ. ಮನುಷ್ಯ ಹುಟ್ಟಿನಿಂದ ಸಾವಿನ ದಿನಗಳ ಎಣಿಕೆಯನ್ನು ಮಾಡುತ್ತಾ ಹೋಗುತ್ತಾನೆ. ಅವನ ಪಯಣ ಸಾವು ಅಥವಾ ಮೋಕ್ಷವನ್ನು ಪಡೆಯುವದಾಗಿದ್ದರೂ ತನ್ನ ದೇಹಕ್ಕೆ ಬೇಕಾದ ಆಹಾರವನ್ನು ಪಡೆಯಲು ಹಲವು ರೀತಿಯ ರೂಪ, ವೇಷಗಳಲ್ಲಿ ತಾಕಲಾಟಕ್ಕೆ ಒಳಗಾಗುತ್ತಾನೆ.

ಹೊಟ್ಟೆಗೆ ನಿತ್ಯ ಬಡತನ. ಅದು ಒಮ್ಮೆಯೂ ಪೂರ್ಣವಾಗಿ ತುಂಬಿತೆಂದು ನಿಶ್ಚಿಂತೆಯಾಗಿ ಕೂಡುವಂತಿಲ್ಲ. ಕೆಲವು ಹೊತ್ತು ಕಳೆದರೆ ಮತ್ತೆ ಹಸಿವಾಗುತ್ತದೆ. ಇದೇ ಮನುಷ್ಯನಿಗಿರುವ ಬಡತನವಾಗಿದೆ. ಈ ಬಡತನವು ಉಳ್ಳವರು ಮತ್ತು ಇಲ್ಲದವರಿಗೂ ನಿತ್ಯ ಇದ್ದೇ ಇರುತ್ತದೆ. ಇದನ್ನು ತುಂಬಿಕೊಳ್ಳುವ ಚಿಂತೆ. ಈ ಚಿಂತೆಯನ್ನು ನೀಗಿಸಿಕೊಂಡರೆ ಉಡುವ ಬಟ್ಟೆಯ ಚಿಂತೆ ಅಂದರೆ, ಮೊದಲು ದೇಹದ ಹಸಿವು ತಣಿಸಿಕೊಳ್ಳುವುದು ಮುಖ್ಯವಾಗುತ್ತದೆ. ಆನಂತರ ದೇಹವನ್ನು ಮುಚ್ಚಿಕೊಳ್ಳುವುದು. ದೇಹವನ್ನು ಮುಚ್ಚಿಕೊಂಡರೆ ಮಾತ್ರ ಸಾಲದು ಅದಕ್ಕಾಗಿ ಜತನದಿಂದ ಕಾದಿಡುವುದು. ಅಂದರೆ ಅವಶ್ಯಕತೆಗಿಂತ ಹೆಚ್ಚಿನದನ್ನು ಸಂಗ್ರಹಿಸಿಕೊಳ್ಳುವ ಚಿಂತೆ. ಈ ಚಿಂತೆ ನೀಗಿತೆನ್ನಲು ಹದಿಹರೆಯಲ್ಲಿ ಮದುವೆಯಾಗವ ಚಿಂತೆ. ಇಲ್ಲಿ ಹೆಣ್ಣು ಗಂಡನ್ನು ಮತ್ತು ಗಂಡು ಹೆಣ್ಣನ್ನು ಸೇರಿಕೊಳ್ಳುವ ಆತುರ, ಕಾತುರಗಳ ಚಿಂತೆ. ಹೀಗೆ ಸೇರಿಕೊಂಡು ದಾಂಪತ್ಯ ಜೀವನದಲ್ಲಿ ಮಕ್ಕಳು ಆಗಲಿಲ್ಲವೆಂಬ ಚಿಂತೆ, ಮಕ್ಕಳಾದರೆ ಅವರ ಭವಿಷ್ಯದ ಚಿಂತೆ, ಅವರ ಭವಿಷ್ಯವನ್ನೂ ಸಹ ನಿಶ್ಚಿಂತೆಯಿಂದ ಮಾಡಲು ಎಲ್ಲ ಸೌಕರ್ಯಗಳನ್ನು ಒದಗಿಸಿದರೂ ಆ ಸೌಕರ್ಯಕ್ಕೆ ಕೇಡಿನ (ಕಳ್ಳರ) ಚಿಂತೆ. ಎಷ್ಟೇ ಬಚ್ಚಿಟ್ಟು ರಕ್ಷಣೆ ಮಾಡಿದರೂ ಕಳ್ಳರು ಸಂಗ್ರಹಿಸಿದ ಸಂಪತ್ತನ್ನು ಕೊಳ್ಳೆಹೊಡೆದಾಗ ಅದರ ಚಿಂತೆಯಲ್ಲಿ ಸಾವು ಬರುತ್ತದೆ. ಹೀಗೆ ಒಂದರ ಹಿಂದೊಂದು ಬೆನ್ನತ್ತುವ ಚಿಂತೆಗಳ ಕಂತೆ ನಮ್ಮೀ ಬದುಕು ಎಂದು ಅಂಬಿಗರ ಚೌಡಯ್ಯ ಹೇಳುತ್ತಾನೆ. ಈ ಎಲ್ಲ ಚಿಂತೆಗಳನ್ನು ಬಿಟ್ಟು ಶಿವನ ಚಿಂತೆಯಲ್ಲಿದ್ದವರೊಬ್ಬರೂ ಕಾಣಸಿಗರು ಎಂಬ ನೋವು ಅವನಿಗಿದೆ. ಇಷ್ಟು ಸರಳವಾಗಿ ಲೋಕನೀತಿಯ ನಿರೂಪಣೆ ಈತನ ವಚನಗಳಲ್ಲಿ ಅಡಗಿದೆ.

ಈತನ ಇನ್ನೊಂದು ವಚನ–'ಗಾಳಿಯ ಹಡೆದಲ್ಲಿ ತೂರಿಕೊಳ್ಳಯ್ಯಾ, ಗಾಳಿ ನಿನ್ನಾಧೀನವಲ್ಲಯ್ಯಾ, ನಾಳೆ ತೂರಿಹೆನೆಂದಡೆ ಇಲ್ಲಯ್ಯಾ' ಎನ್ನುತ್ತಾನೆ. ಗಾಳಿ ಬಂದಾಗ ತೂರಿಕೊಳ್ಳಬೇಕು ಎಂಬ ಸಮಯಪ್ರಜ್ಞೆ ಇದೆ. ಬಹುಶಃ ಬೀಸುವ ಗಾಳಿಯ ದಿಕ್ಕು ಹಿಡಿದು ಅವನು ಹರಿಗೋಲು ನಡೆಸಿದ ವೃತ್ತಿಯ ಸ್ವಾನುಭವವೇ ಈ ವಚನ ರಚನೆಗೂ ಸ್ಫೂರ್ತಿಯಾಗಿದೆ. ಹೀಗೆ ಎಚ್ಚೆತ್ತ ಕೆಳವರ್ಗದ ವಚನಕಾರರಲ್ಲಿ ಈತ ಒಬ್ಬ ಪ್ರಾತಿನಿಧಿಕ ವ್ಯಕ್ತಿ.

ಆದಯ್ಯನು 'ಪರಸತಿ'ಯನ್ನು ಬಯಸುವವರು, 'ಭ್ರೂಣಹತ್ಯ'ಯ ಮಾಡುವವರು, 'ಸ್ತ್ರೀ ಬಾಲ ಘಾತಕ'ರು, 'ಕ್ಷಣಿಕ ಚಿತ್ತರು' ಇಹಲೋಕದಲ್ಲಿ ಸಲ್ಲರು[1] ಎಂದು ಹೇಳುತ್ತಾನೆ. "ಬಾಣತಿ ರಕ್ಕಸಿಯಾದಡೆ ಮಕ್ಕಳ ಕಾಯುವರಿನ್ನಾರಯ್ಯಾ? ಸೋಜಿಗದ ಮಾಯೆ ಸಟೆಯಪ್ಪ ಜಗವ ಪಿಡಿದಿರಲು ಆ ಜಗವನಾ ಮಾಯಾಹಸ್ತದಿಂದ ತೊಲಗಿಸುವರಿನ್ನಾರಯ್ಯಾ?"[2] ಎಂದು ಹಲಬುತ್ತಾನೆ. ಇಂಥವರು "ನೆಣದ ಕೋಣ, ರಕ್ತದ ಹುತ್ತ, ಕೀವಿನ ಬಾವಿ, ರೋಮದ ಸೀಮೆ, ತ್ವಕ್ಕಿನಿಕ್ಕೆ, ಮಾಂಸದ ವಾಸ, ಕರುಳ ತಿರುಳು, ನರದ ಕರವತಿಗೆ, ಮಲಮೂತ್ರಂಗಳ ನೆಲೆವನೆ, ಕ್ರಿಮಿಯ ಸಮಯ, ಕೀಟಕದ ಕೊಟಾರ, ಶುಕ್ಲದ ಸಾಕಾರ, ಎಲುವಿನ ಬಲುಹಿಂದಿಪ್ಪ ..."[3] ಹೇಯವಾದ ದೇಹದವರು. ಈ ದೇಹವನ್ನು 'ತನ್ನದೆಂದು ನಚ್ಚಿ ಮಚ್ಚಿ ಹೆಚ್ಚಿ ಬೆಚ್ಚಿ ಕೆಚ್ಚುಗೊಂಡೊಚ್ಚತವೋದ ಮನದವರು. ಇಂತಹವರು ಭವಕ್ಕೆ(ಲೋಕಕ್ಕೆ) ಮಾರುಹೋದವರು ಎಂದು ದೂರುತ್ತಾನೆ.

ಉರಿಲಿಂಗಪೆದ್ದಿಯು ಮನುಷ್ಯನ ಅಜ್ಞಾನ ಸಂಬಂಧಿಗಳನ್ನು ಕುರಿತು 'ಅಂತರಂಗ ಬಹಿರಂಗವೆಂದೆಂಬರು, ಆವುದು ಮುಂದು ಆವುದು ಹಿಂದೆಂದರಿಯರು...' (ವಚನ ಸಂಖ್ಯೆ 1265, ಒಂದನೆ ಸಂಪುಟ, ಪುಟ–1077) ಎಂದು ವಚನದಲ್ಲಿ ವಿವರಿಸುತ್ತಾನೆ. ಮನುಷ್ಯನು ಎರಡು ರೀತಿಯಲ್ಲಿ ತನ್ನ ಮನೋವ್ಯಾಪಾರವನ್ನು ಹೊಂದಿದ್ದಾನೆ. ಒಂದು 'ಅಂತರಂಗ' ಇನ್ನೊಂದು 'ಬಹಿರಂಗ'ವಾಗಿ ಕೈಗೊಳ್ಳುತ್ತಾನೆ. ಆದರೆ ಇವುಗಳಲ್ಲಿ ಯಾವುದು ಹಿಂದು ಯಾವುದು ಮುಂದೆಂದು ತಿಳಿಯರು. ಹೇಗೆಂದರೆ: 'ಎಳ್ಳೊಳಗಣ ಎಣ್ಣೆ ಕಲ್ಲೊಳಗಣ ಹೇಮ ಹಾಲೊಳಗಣ ತುಪ್ಪ ಕಾಷ್ಠದೊಳಗಣ ಅಗ್ನಿಯಿಪ್ಪಂತಿಪ್ಪ ಚಿನುಮಯ ಮೂರ್ತಿಯನು' ಅಂತರಂಗದೊಳಗೆ ಸ್ಥಾಪಿಸಿಕೊಂಡು ಗುರುವು ತನ್ನ ಶಿಷ್ಯನಿಗೆ ಮಸ್ತಕಮೇಲೆ ಕೈಯನ್ನು ಇಟ್ಟು, ಅವನ ಚಿತ್ತವನ್ನು ತನ್ನೆಡೆಗೆ ಸೆಳೆದುಕೊಂಡು ಸುಜ್ಞಾನಕ್ರಿಯೆಂಬ ಉಪದೇಶವನ್ನು ಮಾಡುತ್ತಾನೆ. ಹೀಗೆ ಮಾಡಿದ ಉಪದೇಶವು 'ಘಟದ ಹೊರಗಿಹ ಅನಲನು ಆ ಘಟವ ಭೇದಿಸಿ ತಜ್ಜಲವ ಹಿಡಿದು ತೆಗೆದುಕೊಂಬಂತೆ' ಮಾಡಿದ ಮಂತ್ರೋಪದೇಶವು ಸ್ಥಾಯಿಯಾಗಿ ನೆಲೆಯೂರುತ್ತದೆ ಎನ್ನುತ್ತಾನೆ. ಹಾಗೆಯೇ ಬಹಿರಂಗ ವ್ಯಾಪಾರವನ್ನು ಒಳ್ಳೆಯ ಕ್ರಿಯೆಯಿಂದ ವರ್ತಿಸಿ ಶಿವನ ಸಂಗವನ್ನು ಸೇರಬೇಕು. ಆದರೆ ಕೆಲವು 'ಜೀವ ಶಿವ ಸಂಗವಹ ಬಟ್ಟೆಯನರಿಯದೆ ಹಲವು ಬಟ್ಟೆಯಲ್ಲಿ ಹರಿವರು' ಅಂದರೆ ಲಿಂಗಾರಾಧನೆಯನ್ನು ಬಿಟ್ಟು ಅನ್ಯ ದೈವಗಳನ್ನು ಆರಾಧಿಸುವವರನ್ನು ಅಜ್ಞಾನಸಂಬಂಧಿಗಳು ಎಂದು ಕರೆಯುತ್ತಾನೆ. ಇವರು ಗುರುಗಳ ವಚನವನ್ನು ಪಾಲಿಸದೇ ಸರಿಯಾದ ಕರ್ಮವನ್ನು ಮಾಡದೆ ಜಡರಾಗಿದ್ದಾರೆ ಎಂದು ತನ್ನದೇ ನೆಲೆಯಲ್ಲಿ ಲೋಕನೀತಿಯನ್ನು ಅಭಿವ್ಯಕ್ತಿಸುತ್ತಾನೆ.

ಕೀಲಾರದ ಭೀಮಣ್ಣನು ಒಂದು ವಚನದಲ್ಲಿ ನಾನಾ ವರ್ಣದ ಗೋವುಗಳಿದ್ದರೂ, ನಾನಾ ಕೆರೆಯ ನೀರನ್ನು ಕೂಡಿದರೂ ಅವುಗಳ ಕೊಡುವ ಹಾಲಿಗೆ ಮಾತ್ರ ಒಂದೇ ಬಣ್ಣ ಎಂದೆನ್ನುವ ಈತನ ಜ್ಞಾನವು ಇಷ್ಟಕ್ಕೆ ನಿಲ್ಲುವುದಿಲ್ಲ. ದನಗಳನ್ನು ಕಾಯುವುದಷ್ಟೇ ಅಲ್ಲ ಅವುಗಳ ಪೋಷಣೆ, ಪಾಲನೆಗಳ ಬಗ್ಗೆ, ಹಾಲು ಕರೆಯುವಾಗ ಮಾಡುವ ಕಾರ್ಯಗಳ ಬಗ್ಗೆ ಜ್ಞಾನವಿರಬೇಕು ಎನ್ನುತ್ತಾನೆ. ಆ ಕುರಿತು–

"ಇಮ್ಮನ ಹತ್ತಿಯಕಾಳ ಸುರಿದು ಪಶು ಮೇವುತ್ತಿರಲಾಗಿ
ಓಮ್ಮನವ ಮೇದು ಇಮ್ಮನ ಉಳಿಯಿತು
ಅದ ಸುಮ್ಮಾನದಲ್ಲಿ ಕರೆಯ ಹೋಗಲಿಕೆ
ಅಂಡೆಯಲ್ಲಿ ಐಗುಳವ ಕರೆದು

[1] ಎಂ.ಎಂ. ಕಲಬುರ್ಗಿ (ಸಂ.), ಸಂಕೀರ್ಣ ವಚನ ಸಂಪುಟ : ಎರಡು, ವಚನ ಸಂಖ್ಯೆ 1010, ಪುಟ–1047
[2] ಎಂ.ಎಂ. ಕಲಬುರ್ಗಿ (ಸಂ.), ಸಂಕೀರ್ಣ ವಚನ ಸಂಪುಟ : ಎರಡು, ವಚನ ಸಂಖ್ಯೆ 1032, ಪುಟ–1052
[3] ಎಂ.ಎಂ. ಕಲಬುರ್ಗಿ (ಸಂ.), ಸಂಕೀರ್ಣ ವಚನ ಸಂಪುಟ : ಎರಡು, ವಚನ ಸಂಖ್ಯೆ 994, ಪುಟ–1046

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕಂದಲಲ್ಲಿ ಸುರಿಯಲಾಗಿ ಮೂಗುಳವಾಯಿತ್ತು.
ಆ ಮೂಗುಳವ ಒಲೆಯ ದೆಸೆಯಲ್ಲಿರಿಸಲಿಕೆ
ಕಾಸೂದಕ್ಕೆ ಮುನ್ನವೆ ನಾಶವಾಯಿತ್ತು.
ಇಂತೀ ಈಶ್ವರ ವಿಶ್ವಾಸದಲ್ಲಿ ಆತ್ಮ ನಿಶ್ಚಯಿಸಲಾಗಿ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗದೊಳಗಾದವನ"

ಎಂದು ಹಸುಗಳಿಗೆ ಆಹಾರವನ್ನಿಕ್ಕುವ ಅವುಗಳು ಅದನ್ನುಂಡು ತೃಪ್ತಿಗೊಂಡ ನಂತರ ಕರುಗಳನ್ನು ಬಿಟ್ಟು ಅವುಗಳು ಕುಡಿದನಂತರ ತಾನು 'ಅಂಡೆ'ಯಲ್ಲಿ ಹಾಲನ್ನು ಕರೆದು ಒಲೆಯಲ್ಲಿ ಕಾಸುವ ಪದ್ಧತಿಯನ್ನು ಹೇಳುತ್ತಾನೆ. ಹೀಗೆಯೇ ಮತ್ತೊಂದು ವಚನದ ಉತ್ತರಾರ್ಧದಲ್ಲಿ–

"ಹಾಲ ತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ
ಚಟ್ಟಿ ಹತ್ತದೆ, ಹಸುಕು ನಾರದೆ,
ಕೌರು ಏಳದೆ, ನೀರ ರಸ ತಪ್ಪಿ ಮಧುರ ರಸ ತುಂಬಿ
ಕಾಸಿ ಉಣಬಲ್ಲಡೆ ಆತನೆ ಭೋಗಿ.
ಆತ ನಿರತಿಶಯಾನುಭಾವ ಶುದ್ಧಾತ್ಮನು,
ಕಾಲಕರ್ಮವಿರಹಿತ ತ್ರಿಪುರಾತಕಲಿಂಗ ತಾನೆ"

ಎಂದಿದ್ದಾನೆ. ಇದು ಅವನ ಕಾಯಕದ ಲೋಕನೀತಿಯೂ ಹೌದು. ಹಸು ಕಾಯುವುದು ಒಂದು ಮಾತ್ರವಲ್ಲದೇ ಹಸುವಿನ ಹಾಲನ್ನು ಹೇಗೆ ಕರೆಯಬೇಕು, ಹೇಗೆ ಕಾಯಿಸಬೇಕು, ಹೇಗೆ ಭೋಗಿಸಬೇಕು ಎಂಬ ಅರಿವನ್ನು ಉಳ್ಳವನಾಗಿರಬೇಕು. ಹಾಲು ಕಾಯಿಸುವ ವೈಜ್ಞಾನಿಕ ಪದ್ಧತಿಯನ್ನು ಪ್ರಜ್ಞಾಪೂರ್ವಕವಾಗಿ ಹೇಳಿದ್ದಾನೆ.

ಗಜೇಶ ಮಸಣಯ್ಯನ ಲೋಕನೀತಿಯು ಅವನ ವಚನಗಳಲ್ಲಿ ತುಂಬಾ ಸೊಗಸಾಗಿ ವ್ಯಕ್ತವಾಗಿದೆ. ಯಾವುದೇ ಟೀಕೆ, ನಿಂದ್ಯೆ, ವ್ಯಂಗ್ಯಗಳಿಲ್ಲದ ಅವನ ಭಾಷೆಯಲ್ಲಿ ನಯ–ವಿನಯವು ತುಂಬಿದೆ. 'ಒಲಿದವರ ಕೊಲುವಡೆ ಮಸೆದ ಕೂರಲಗೇಕೆ? ಅವರನೊಲ್ಲೆನೆಂದಡೆ ಸಾಲದೆ?' (ಸಂಕೀರ್ಣ ಸಂಪುಟ–2, ವಚನ–215) ಎನ್ನುವನು. ತಾನು ಒಲಿದ ಶರಣರು ಅಗಲಿದರೆ ತುಪ್ಪದಲ್ಲಿ ಕಿಚ್ಚ ನಂದಿಸಿದಂತಾಗುವುದು. ತಾನು ಒಲಿದವರು ದೂರವಾದರೆ ಅವರ ಬಗ್ಗೆ ಸಹಾನೂಭೂತಿಯನ್ನು ತೋರುತ್ತಾನೆ. ದ್ವೇಷ, ಅಸೂಹೆ, ಕೋಪಾಟೋಪಗಳಿಂದ 'ಕೂರಲಗ'(ಚೂಪಾದ ಕತ್ತಿ)ಯಿಂದ ಕೊಲಬಾರದು ಎಂದು ತಿಳಿಹೇಳುತ್ತಾನೆ. ಸಂಸಾರವೆಂಬ ಸಾಗರದಲ್ಲಿ ಬಿದ್ದವರಿಗೆ ಸಾವು ಎಂದೂ ತಪ್ಪಿದ್ದಲ್ಲ ಎನ್ನುವ ಮಸಣಯ್ಯನು 'ಜಾತಸ್ಯ ಮರಣಂ ಆವಗೆಯೂ ತಪ್ಪದು. ಅರಿದು ಮರೆಯಬೇಡಯ್ಯಾ, ಉರಗನ ಬಾಯ ಕಪ್ಪೆಯಂತೆ ಸಂಸಾರ ಹೆರೆಗೊಳುತ್ತಿರ್ದುದಲ್ಲಾ!' (ಸಂಕೀರ್ಣ ಸಂಪುಟ–2, ವಚನ–226) ಎಂದು ಅಳುಪುತ್ತಾನೆ. ಸಾವು ಸಂಸಾರವೆಂಬ ಕಪ್ಪೆಯಾಗಿ ಹಾವಿನ ಬಾಯಿಯಲ್ಲಿ ಅಡಗಿದೆ. ಅದರ ಅಳಿವು ಉಳಿವು ನಮ್ಮ ಕೈಯೊಳಗಿಲ್ಲ ಎಂಬ ಲೋಕನೀತಿಯನ್ನು ಹೇಳಿದ್ದಾನೆ.

ಹೀಗೆ ಅನೇಕ ವಚನಕಾರರ ವಚನಗಳಲ್ಲಿ ಪ್ರಸ್ತಾಪಿಸುವ ವಿಷಯ, ವಸ್ತು, ಭಾಷೆಗಳಲ್ಲಿ ಬಹುಪಾಲು ತಾವು ಆದರ್ಶವಾಗಿಟ್ಟುಕೊಂಡವರನ್ನು ಅನುಸರಿಸಿರಿವುದನ್ನು ಕಾಣುತ್ತೇವೆ. ಬಹಳಷ್ಟು ವಚನಗಳಲ್ಲಿ ವೈವಿಧ್ಯ ಕಡಿಮೆಯಾಗಿದ್ದರೂ ಅವುಗಳಲ್ಲಿ ಸೂಕ್ಷ್ಮವಾದ ಭೇದವನ್ನು ಅರಿಯಬಹುದು. ಅದಕ್ಕೆ ಅವರವರು ಆಚರಿಸಿದ, ಅನುಭವಿಸಿದ ಅನುಭಾವಗಳೇ ಕಾರಣವೆನ್ನಬಹುದು. ಹಲವಾರು ವಚನಗಳಲ್ಲಿನ ಒಂದೆರಡು ವಾಕ್ಯಗಳನ್ನು ಇಲ್ಲವೇ ಪದಗಳನ್ನು ಬದಲಾವಣೆ ಮಾಡಿದರೆ ಆ ವಚನಗಳ ಸಾರದಲ್ಲಿ ಏಕತೆಯನ್ನು ಗುರುತಿಸಬಹುದು. ಹೀಗೆ ಅಲಕ್ಷಿತ ವಚನಾಕರರ ವಚನಗಳಲ್ಲಿ ಸಾಮೀಪ್ಯ, ಸಾದೃಶ್ಯಗಳು ಹಾಸುಹೊಕ್ಕರೂ ಅವರವರ ಭಾವಭಿನ್ನತೆಗೆ ಕೊರತೆಯಿಲ್ಲ.

ಪರಾಮರ್ಶನ ಗ್ರಂಥಗಳು

1. ಅಕ್ಕನ ವಚನಗಳು, ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, 1990
2. ಅಕ್ಕನ ವಚನಗಳು, ಸಾ.ಶಿ. ಮರುಳಯ್ಯ, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು, 1993
3. ಅಮುಗೇಯ ರಾಯಮ್ಮ ಮತ್ತು ಅಕ್ಕಮ್ಮನ ವಚನಗಳು, ಆರ್.ಸಿ. ಹಿರೇಮಠ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968
4. ಆದಯ್ಯನ ಲಘು ಕೃತಿಗಳು, ಎಂ.ಎಂ. ಕಲಬುರ್ಗಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, 1993
5. ಅಲ್ಲಮನ ವಚನಗಳು, ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, 1969
6. ಅಲ್ಲಮನ ವಚನ ಚಂದ್ರಿಕೆ, ಎಲ್. ಬಸವರಾಜು, ನಳಿನಿ ಶಂಕರ ಪ್ರಕಾಶನ, ಮೈಸೂರು, 1960
7. ಅಲ್ಲಮ ಪ್ರಭುದೇವರ ವಚನಗಳು, ಆರ್.ಸಿ. ಹಿರೇಮಠ ಮತ್ತು ಎಂ.ಎಸ್. ಸುಂಕಾಪುರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976
8. ಜೇಡರ ದಾಸಿಮಯ್ಯನ ವಚನಗಳು, ಆರ್. ರಾಚಪ್ಪ, ಓಂಕಾರ ಪ್ರಕಾಶನ, ಬೆಂಗಳೂರು, 1988
9. ಧರ್ಮ, ರಹಮತ ತರಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
10. ದೇವರ ದಾಸಿಮಯ್ಯನ ವಚನಗಳು, ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, 1978
11. ಬಸವಣ್ಣನವರ ವಚನ ಸಂಪುಟ, ಎಂ.ಎಂ.ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1993
12. ವಚನ ಸಾಹಿತ್ಯ ಸಂಗ್ರಹ, ಸಂ.ಶಿ. ಭೂಸನೂರುಮಠ, ಮೈಸೂರು ಸರ್ಕಾರ ವಿದ್ಯಾಭ್ಯಾಸ ಇಲಾಖೆ, ಸಾಹಿತ್ಯ–ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು, 1965
13. ಶರಣೆಯರ ಸೂಳ್ನುಡಿ, ಗುರುದೇವಿ ಹುಲೆಪ್ಪನವರಮಠ, ಮೇಘ ಪಬ್ಲಿಕೇಷನ್ಸ್, ಬೆಂಗಳುರು, 2016
14. ಶಿವಶರಣೆಯರ ವಚನಗಳು, ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಸಾಮಾಜಿಕ ಪ್ರಗತಿಯಲ್ಲಿ ತಂತ್ರಜ್ಞಾನದ ಪಾತ್ರ

ಅರುಣಕುಮಾರ ಹಿರೇಮಠ
ಉಪನ್ಯಾಸಕರು
ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ
ಹಾವೇರಿ ವಿಶ್ವವಿದ್ಯಾಲಯ, ಹಾವೇರಿ
Email- hirematharunkumar@gmail.com

Manuscript ID:
JRD -2026-180524
ISSN: 2230-9578
Volume 18
Issue 5(IV)
Pp. 99-101
April- 2026
Submitted: 12 Apr. 2026
Revised: 26 Apr.2026
Accepted: 12 May. 2026
Published: 31 May. 2026

ಸಾರಾಂಶ:

21 ನೇ ಶತಮಾನವು ತಂತ್ರಜ್ಞಾನ ಯುಗವೆಂದು ಪರಿಗಣಿಸಲ್ಪಟ್ಟ ನವೀನ ತಾಂತ್ರಿಕ ತಳಹದಿಯ ಮೇಲೆ ಚಲಿಸುತ್ತಿರುವ ಜೀವನ ಶೈಲಿಯಾಗಿದೆ. ಇಗಿನ ದಿನಮಾನಗಳಲ್ಲಿ ತಂತ್ರಜ್ಞಾನ ರಹಿತ ಜೀವನಶೈಲಿಯನ್ನು ಊಹಿಸಿಕೊಳ್ಳುವುದು ಕಷ್ಟಸಾಧ್ಯವಾದ ವಿಷಯವಾಗಿದೆ. ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ, ಆಡಳಿತ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಸಮಾಜದ ರಚನೆ ಮತ್ತು ಕಾರ್ಯವಿಧಾನಗಳನ್ನು ಮಹತ್ವಪೂರ್ಣವಾಗಿ ರೂಪಾಚಿತರಿಸಿದೆ. ಈ ಸಂಶೋಧನಾ ಪ್ರಭಂದದಲ್ಲಿ ಸಾಮಾಜಿಕ ಪ್ರಗತಿಯಲ್ಲಿ ಊಹಿಸಬಹುದಾದಂತಹ ತಂತ್ರಜ್ಞಾನದ ಪಾತ್ರವನ್ನು ಉಲ್ಲೇಖಿಸಲಾಗಿದೆ. ವಿಶೇಷವಾಗಿ ಸೇವೆಗಳಲ್ಲಿನ ಸುಧಾರಣೆ, ಜ್ಞಾನ ಪ್ರವೇಶಕ್ಕೆ ಉತ್ತೇಜನ, ಅಳಿವಿನಂಚಿನಲ್ಲಿರುವ ಸಮುದಾಯಗಳ ಸಬಲೀಕರಣ ಮತ್ತು ಆಡಳಿತದಲ್ಲಿ ತರಬಹುದಾದ ಪಾರದರ್ಶಕತೆ ಮೊದಲಾದ ಅಂಶಗಳನ್ನು ಈ ಮೂಲಕ ಪರಿಶೀಲಿಸಲಾಗಿದೆ. ಇದರೊಂದಿಗೆ ತಾಂತ್ರಿಕ ಅಚಿತರ, ನೈತಿಕ ಸಮಸ್ಯೆಗಳು ಮತ್ತು ತಂತ್ರಜ್ಞಾನದಿಂದ ಉಂಟಾಗುವ ಅಸಮಾನತೆಗಳಂತಹ ಸವಾಲುಗಳನ್ನು ಸಹ ಚರ್ಚಿಸಲಾಗಿದೆ. ಸಂಪೂರ್ಣ ಮತ್ತು ಮಾನವ ಕೇಂದ್ರಿತವಾದ ನೀತಿಗಳ ರಚನೆಯಿಚಿದ ತಂತ್ರಜ್ಞಾನವನ್ನು ಬಳಸಿದಾಗ ಮಾತ್ರ ಸೂಕ್ತ ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ.

ಮುಖ್ಯ ಪದಗಳು: *ತಂತ್ರಜ್ಞಾನ, ಸಾಮಾಜಿಕ ಪ್ರಗತಿ, ಸಾಮಾಜಿಕ ಬದಲಾವಣೆ, ಸಮುದಾಯ ಅಭಿವೃದ್ಧಿ*

ಪೀಠಿಕೆ:

ಆಧುನಿಕ ಸಮಾಜದಲ್ಲಿ ತಂತ್ರಜ್ಞಾನವು ಸಾಮಾಜಿಕ ಪ್ರಗತಿಯ ಪ್ರಮುಖ ಚಾಲನಾಶಕ್ತಿಯಾಗಿ ಪರಿಗಣಿಸಲ್ಪಡುತ್ತದೆ. ಶಿಕ್ಷಣ, ಮಾಹಿತಿ ಸಂವಹನ, ಆರೋಗ್ಯ, ಸಾಮಾಜಿಕ ನ್ಯಾಯ, ಆಡಳಿತ ಕ್ಷೇತ್ರಗಳಲಿ ತಂತ್ರಜ್ಞಾನವು ಸಮಾಜದ ರಚನೆ ಮತ್ತು ಕಾರ್ಯವಿಧಾನದ ಮಹತ್ವವನ್ನು ತಿಳಿಸಿದೆ.ಮಾಹಿತಿಯ ಪ್ರವೇಶವನ್ನು ಹೆಚ್ಚಿಸುವ, ಸಮಾನತೆಯನ್ನು ಉತ್ತೇಜಿಸುವ, ಸೇವೆಗಳನ್ನು ಸುಧಾರಿಸುವ ಮತ್ತು ಸಮುದಾಗಳನ್ನು ಸುಧಾರಿಸುವ ಮೂಲಕ ಸಾಮಾಜಿಕ ಪ್ರಗತಿಗೆ ವೇಗವರ್ಧಕವಾಗಿ ತಂತ್ರಜ್ಞಾನವು ಇಂದಿನ ಸಾಮಾಜಿಕ ಜೀವನದಲ್ಲಿ ಕಾರ್ಯನಿರ್ವಹಿಸುತ್ತಿದೆ. ನವೀನ ತಂತ್ರಜ್ಞಾನದ ಅವಶ್ಯಕತೆಯು ಆಧುನಿಕ ಸಮಾಜಕ್ಕೆ ಬಹುಮುಖ್ಯವಾಗಿದೆ. ಅಚಿತರ್ಜಾಲದ ಬಳಕೆಯು ಅತೀ ವೇಗವಾಗಿ ಸಾಗುತ್ತಿದೆ. ಇಂದಿನ ದಿನಗಳಲ್ಲಿ ಮೋಬೈಲ್, ಸ್ಮಾರ್ಟ್ ಫೋನ್ ಬಳಸದ ವ್ಯಕ್ತಿಗಳು ಸಿಗುವುದು ಅತೀ ವಿರಳವಾಗಿದೆ.

ಅದೇ ರೀತಿ ತಾಂತ್ರಿಕ ಪ್ರಗತಿ ಹೊಂದಲು ಬೇಕಾದ ಅವಕಾಶಗಳಿಗೂ ಹಲವಾರು ಸವಾಲುಗಳು ಎದುರಾಗುತ್ತಿವೆ. ಬೆಳೆಯುತ್ತಿರುವ ಸಮುದಾಯಗಳು, ಜನಸಂಖ್ಯಾ ಏರಿಕೆ, ಮೂಲಭೂತ ಸೌಲಭ್ಯಗಳ ಒದಗಿಸುವಿಕೆ ಇಂತಹ ಹಲವು ಸವಾಲುಗಳೊಂದು ತಂತ್ರಜ್ಞಾನವು ಸಮಾಜದಲ್ಲಿ ದಾಪುಗಾಲು ಹಾಕುತ್ತಿದೆ.

ಉದ್ದೇಶಗಳು:

1. ಸಮಾಜದ ಪ್ರಗತಿಯಲ್ಲಿ ತಂತ್ರಜ್ಞಾನದ ಬಳಕೆಯ ಉಪಯೋಗವನ್ನು ತಿಳಿಯುವುದು.
2. ವಿವಿಧ ತಂತ್ರಜ್ಞಾನಗಳ ಆವಿಷ್ಕಾರಗಳ ಮೇಲೆ ಬೆಳಕು ಚೆಲ್ಲುವುದು.
3. ತಂತ್ರಜ್ಞಾನಗಳ ಬಳಕೆಯಿಂದ ಎದುರಾಗುವ ವಿವಿಧ ಸವಾಲುಗಳ ಕುರಿತಾಗಿ ಚರ್ಚಿಸುವುದು.
4. ತಂತ್ರಜ್ಞಾನದ ಬಳಕೆಯಲ್ಲಿ ಸಾಮಾಜಿಕವಾಗಿ ಉಂಟಾಗುವ ಸಮಸ್ಯೆಗಳನ್ನು ವಿಶ್ಲೇಷಿಸುವುದು.
5. ಆಧುನಿಕ ಸಮಾಜಕ್ಕೆ ತಂತ್ರಜ್ಞಾನದಿಂದಾಗುವ ಉಪಯೋಗಗಳ ಕುರಿತು ಅರಿವು ಮೂಡಿಸುವುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಅರುಣಕುಮಾರ ಹಿರೇಮಠ ಉಪನ್ಯಾಸಕರು ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ ಹಾವೇರಿ ವಿಶ್ವವಿದ್ಯಾಲಯ, ಹಾವೇರಿ

How to cite this article:
ಅರುಣಕುಮಾರ ಹಿರೇಮಠ *(2026). ಸಾಮಾಜಿಕ ಪ್ರಗತಿಯಲ್ಲಿ ತಂತ್ರಜ್ಞಾನದ ಪಾತ್ರ Journal of Research & Development, 18(5(IV)), 99–101. https://doi.org/10.5281/zenodo.20993249*

Quick Response Code:
Website:
https://jrdrvb.org/
DOI:
10.5281/zenodo.20993249
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ತಂತ್ರಜ್ಞಾನದ ಅರ್ಥ:

ತಂತ್ರಜ್ಞಾನ ಎಂಬುದು ಪ್ರಾಯೋಗಿಕವಾದ ಗುರಿಗಳನ್ನು ತಲುಪಲು ಪರಿಕಲ್ಪನಾತ್ಮಕ ಜ್ಞಾನದ ಅನ್ವೇಷಣೆಯಾಗಿದೆ. ವಿಶೇಷವಾಗಿ ಪುನರ್ ಉತ್ಪಾದಕ ರೀತಿಯಲ್ಲಿ, ತಂತ್ರಜ್ಞಾನವೆಂಬ ಪದವು ವಸ್ತುಗಳು ಅಥವಾ ಯಂತ್ರಗಳಂತಹ ಸ್ಪಷ್ಟ ಸಾಧನಗಳು ಮತ್ತು ಸಾಫ್ಟವೇರ್ ಗಳಂತಹ ಅಮೂರ್ತ ಸಾಧನಗಳನ್ನು ಒಳಗೊಂಡಂತೆ ಅಂತಹ ಪ್ರಯತ್ನಗಳಿಂದ ಉಂಟಾಗುವ ಉತ್ಪನ್ನಗಳನ್ನು ಸಹ ಅರ್ಥೈಸಬಹುದಾಗಿದೆ.

ಸಂಶೋಧನಾ ವಿಧಾನ:

ಈ ಲೇಖನಕ್ಕೆ ಬೇಕಾದ ಸೂಕ್ತ ಮಾಹಿತಿಯನ್ನು ಮಾಧ್ಯಮಿಕ ಸಂಶೋಧನಾ ಮಾಹಿತಿಯ ಮೂಲಗಳಿಂದ ಸಂಗ್ರಹಿಸಲಾಗಿದೆ.

ಈ ಅಧ್ಯಯನವು ಮಾಧ್ಯಮಿಕ ದತ್ತಾಂಶಗಳ ಸಹಾಯದಿಂದ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಮಾಹಿತಿಗಳನ್ನು ಒಳಗೊಂದಿರುತ್ತದೆ. ಇದರ ಕುರಿತಾಗಿ ಸೂಕ್ತ ಮಾಹಿತಿಗಳನ್ನು ಹಲವು ಪುಸ್ತಕಗಳು, ಪತ್ರಿಕಾ ಲೇಖನಗಳು ಹಾಗೂ ಅಂತರ್ಜಾಲದ ಮೂಲಗಳಿಂದ ಸಂಗ್ರಹಿಸಲಾಗಿದೆ.

ಸಾಮಾಜಿಕ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಪಾತ್ರ

1 ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನದ ಬೆಳವಣಿಗೆ

C. Digital Health Records

ಆರೋಗ್ಯ ಸಂಬಂಧಿ ದತ್ತಾಶಗಳ ಡಿಜಿಟಲೀಕರಣ. ರೋಗಿಗಳ ಹಳೆಯ ವೈದ್ಯಕೀಯ ಇತಿಹಾಸವನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹ ಮಾಡುವ್ಯದರಿಂದ ತುರ್ತು ಸಂದರ್ಭಗಳಲ್ಲಿ ಸರಿಯಾದ ಚಿಕಿತ್ಸೆ ನೀಡಲು ವೈದ್ಯರಿಗೆ ಸಹಾಯಕವಾಗುತ್ತದೆ.

ಆ. ಟೆಲಿ–ಮೆಡಿಸಿನ್ ವ್ಯವಸ್ಥೆ

ಭಾರತದಂತಹ ಬಹುಪಾಲು ಗ್ರಾಮೀಣ ಪ್ರದೇಶಗಳನ್ನು ಹೊಂದಿರುವ ದೇಶದಲ್ಲಿರುವ ದೂರದ ಹಳ್ಳಿಗಳಲ್ಲಿ ವಾಸಿಸುವ ಬಡ ಜನರೂ ಸಹ ನಗರ ಪ್ರದೇಶದಲ್ಲಿರುವ ನುರಿತ ಹಾಗೂ ಅನುಭವಿ ವೈದ್ಯರ ಜೊತೆ ವಿಡಿಯೋ–ಕಾಲ್ ಮುಖಾಂತರ ಆರೋಗ್ಯ ಸಂಬಂಧಿ ಸಮಾಲೋಚನೆ ನಡೆಸಿ ಸೂಕ್ತ ಮಾಹಿತಿಯನ್ನು ಮನೆಯಲ್ಲೇ ಕುಳಿತು ಪಡೆಯಬಹುದಾಗಿದೆ.

2 ಶಿಕ್ಷಣದ ಡಿಜಿಟಲೀಕರಣ ವ್ಯವಸ್ಥೆ

ಎ. ಇ–ಲರ್ನಿಂಗ್

ಸಾಮಾಜಿಕ ಮಾಧ್ಯಮಗಳ ಮೂಲಕ ದೇಶದ ವಿವಿಧ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳು ದೂರದ ವಿಶ್ವವಿದ್ಯಾಲಯಗಳ ನುರಿತ ಹಾಗೂ ಅನುಭವಿ ಪ್ರಾಧ್ಯಾಪಕರ ಪಠ್ಯಗಳನ್ನು ಆಲಿಸಬಹುದಾಗಿದೆ.

(ಉದಾಹರಣೆ–ಪ್ರಧಾನ ಮಂತ್ರಿ ಇ–ವಿದ್ಯಾ, ಸ್ವಯಂ ಪ್ಲಾಟ್‌ಫಾರ್ಮ್)

ಬಿ. ಡಿಜಿಟಲ್ ಲೈಬ್ರರಿ

ದೇಶದ ಸಾಕ್ಷರತೆ ಪ್ರಮಾಣವನ್ನು ಉತ್ತಮಗೊಳಿಸಲು ಗ್ರಂಥಾಲಯ ಸೌಲಭ್ಯವು ಪ್ರಮುಖ ಪಾತ್ರ ವಹಿಸುತ್ತದೆ. ಹಿಂದಿನ ಕಾಲದಂತೆ ಇಂದು ಹಣ ವ್ಯಯಮಾಡಿ ಪುಸ್ತಕಗಳನ್ನು ಖರೀದಿಸುವ ವ್ಯವಸ್ಥೆ ಮಾತ್ರವಲ್ಲದೇ, ಅಚಿತರ್ಜಾಲಗಳ ಮೂಖಾಂತರ ಡಿಜಿಟಲ್ ರೂಪದಲ್ಲಿ ಪುಸ್ತಕಗಳನ್ನು ಜನರು ತಮ್ಮ ಅಭಿರುಚಿಗೆ ಅನುಸಾರವಾಗಿ ಅಥವಾ ಶೈಕ್ಷಣಿಕ ದೃಷ್ಟಿಕೋನದಿಂದ ಓದಬಹುದಾಗಿದೆ.ಇದರಿಂದ ಹಿಂದುಳಿದ ಸಮುದಾಯಗಳ ಬಡ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನೆಗಾಗಿ ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಇದರಿಂದ ವಿದ್ಯಾರ್ತಿಗಳಿಗೆ ತಮಗೆ ಬೇಕಾದ ಮಾಹಿತಿ ಕ್ಷಣಾರ್ಧದಲ್ಲಿ ದೊರಕುವ್ಯದರಿಂದ ಮಾಹಿತಿ ಸಂಗ್ರಹಣೆಗಾಗಿ ತಗುಲುವ ಸಮಯದ ಉಳಿತಾಯವಾಗುತ್ತದೆ.

3 ತ್ವರಿತ ಆರ್ಥಿಕ ಸೇವೆಗಳು

ಕ. ನೇರ ನಗದು ವರ್ಗಾವಣೆ (Direct Benefit Transfer)

ಸರ್ಕಾರದ ಹಲವಾರು ಸೌಲಭ್ಯಗಳು ಮತ್ತು ಸಬ್ಸಿಡಿಗಳು ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ಫಲಾನಿಭವಿಗಳ ಬ್ಯಾಂಕ ಖಾತೆಗೆ ಜಮಾವಣೆಗೊಳ್ಳುತ್ತದೆ. ಇದರಿಂದಾಗಿ ಜನರು ತಮಗೆ ತಲುಪಬೇಕಾದ ಹಣದ ಮೊತ್ತವನ್ನು ಯಾವುದೇ ರೀತಿಯ ಭ್ರಷ್ಟಾಚಾರ ರಹಿತತೆ ಇಂದ ಪಡೆದುಕೊಳ್ಳಬಹುದಾಗಿದೆ. ಇದರೊಂದಿಗೆ ಸರ್ಕಾರಿ ಸೌಲಭ್ಯಗಳನ್ನು ನೀಡುವಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ತಡೆದಂತಾಗುತ್ತದೆ.

ಉದಾಹರಣೆ: Real-Time Gross Settlement (RTGS), National Electronic Fund Transfer (NEFT)

ಖ. ಡಿಜಿಟಲ್ ಪಾವತಿ

ಗಕಖ ನಂತಹ ತಂತ್ರಜ್ಞಾನದಿಂದ ಚಿಕ್ಕ–ಪುಟ್ಟ ವ್ಯಾಪಾರಿಗಳೂ ಸಹ ಸುಲಭವಾಗಿ ಆರ್ಥಿಕ ವ್ಯವಹಾರ ನಡೆಸಲು ಸಾಧ್ಯವಾಗಿದೆ. ಇದರಿಂದಾದ ಮತ್ತೊಂದು ಅನುಕೂಲವೆಚಿದರೆ, ಸಾಮಾನ್ಯ ವ್ಯಾಪಾರಿಗಳಿಗೆ ಆಗುತ್ತಿದ್ದ ಚಿಲ್ಲರೆ ಸಮಸ್ಯೆ ಹಾಗೂ ಹರಿದ ಮತ್ತು ಹಳೆಯ ನೋಟುಗಳ ಸಮಸ್ಯೆ ಪರಿಹಾರವಾದಂತಾಗಿದೆ.

ಉದಾಹರಣೆ: ಪೇಟಿಯಂ, ಫೋನ್–ಪೇ ಗೂಗಲ್–ಪೇ

ಸುಧಾರಿತ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ

ಅ. ಇ–ಓಂಒ (Electronic National Agriculture Market)

ಇ–ಓಂಒ ಮೂಲಕ ಕೃಷಿಕರು ತಮ್ಮ ಬೆಳೆಗಳನ್ನು ದೇಶಾದ್ಯಂತ ಉತ್ತಮ ಬೆಲೆಗೆ ಮಾರಾಟ ಮಾಡಲು ಆನ್‌ಲೈನ್ ಮೂಲಕ ಅನುವು ಮಾಡಿಕೊಡುತ್ತದೆ. ಇದರಿಂದಾಗಿ ಹಲವು ದಶಕಗಳಿಂದ ರೈತರು ಅನುಭವಿಸುತ್ತಿದ್ದ ಮಧ್ಯವರ್ತಿಗಳ ಸಮಸ್ಯೆಯನ್ನು ಪರಿಹರಿಸಿದಂತಾಗುತ್ತದೆ. ಇದರೊಂದಿಗೆ ದೇಶದ ವಿವಿಧ ಭಾಗಗಳಿಗೆ ಪ್ರಾದೇಶಿಕವಾಗಿ ಬೆಳೆದ ಬೆಳೆಗಳ ಪರಿಚಯವಾಗುತ್ತದೆ.

ಆ. ಸ್ಮಾರ್ಟ್ ಕೃಷಿ

ರೈತರು ತಮಗೆ ಅವಶ್ಯಕವಿರುವ ವ್ಯವಸಾಯದ ಕುರಿತಾದ ಮಾಹಿತಿಯನ್ನು ಮನೆಯಲ್ಲಿಯೇ ಕುಳಿತು ಪಡೆಯಬಹುದಾಗಿದೆ. ಇದರಲ್ಲಿ ತಮ್ಮ ಪ್ರದೇಶದ ಹವಾಮಾನ ಮೂನ್ಸೂಚನೆ, ಮಣ್ಣಿನ ಫಲವತ್ತತೆಯ ಮಾಹಿತಿ, ಮಾರುಕಟ್ಟೆ ದರ, ಬೆಳೆಗಳಿಗೆ ಅಗತ್ಯವಿರುವ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪೋಷಕಾಂಶಗಳು ಮತ್ತು ಕೀಟಬಾಧೆಗಳಿಂದ ಪರಿಹಾರ ಮುಂತಾದ ವಿಷಯಗಳ ಕುರಿತು ರೈತರು ತಮ್ಮ ಮೋಬೈಲ್ ಆಪ್‌ಗಳ ಮೂಲಕ ಉತ್ತಮ ಸಲಹೆಗಳನ್ನು ಪಡೆಯಬಹುದಾಗಿದೆ. ಉದಾಹರಣೆ: ಕಿಸಾನ್ ಸುವಿಧಾ ಆಪ್, ಕೃಷಿ ನೆಟ್‌ವರ್ಕ, ಖಈಈಅಔ ಖಚಿಟಿ ಂಠಿಠಿ,

4 ಮಹಿಳಾ ಸಬಲೀಕರಣ ಮತ್ತು ಸುರಕ್ಷತೆ

ದೇಶದ ಮಹಿಳೆಯರಿಗೆ ತಂತ್ರಜ್ಞಾನದ ಬೆಳವಣಿಗೆಯಿಂದ ಜೀವನೋಪಾಯಕ್ಕೆ ಹಲವಾರು ಉತ್ತಮ ಅವಕಾಶಗಳು ಗೋಚರಿಸುತ್ತಿವೆ. ಇಂದಿನ ದಿನಮಾನಗಳಲ್ಲಿ ಮಹಿಳೆ ಮನೆಯಲ್ಲಿಯೇ ಕುಳಿತು ವಿವಿಧ ರೀತಿಯ ಉತ್ಪನ್ನಗಳನ್ನು ತಯಾರಿಸಿ ಅದರ ಮಾಹಿತಿಯನ್ನು ಅಚಿತರ್ಜಾಲದ ವಾಣಿಜ್ಯ ಆಪ್ ಗಳಲ್ಲಿ ಹಂಚಿಕೊಳ್ಳುವುದರ ಮೂಲಕ ನವೋದ್ಯಮಿಯಾಗಿ (ಇಟಿಣಡಿಜಠಿಡಿಜಟಿಣಡಿ) ಹೊರಹೊಮ್ಮಬಹುದು. ಇದರಿಂದಾಗಿ ಸ್ತ್ರೀಯರು ತಮ್ಮ ಮತ್ತು ತಮ್ಮ ಕುಟುಂಬದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು ಸಹಾಯಕವಾಗುತ್ತದೆ . ಮಹಿಳಾ ಸಬಲೀಕರಣ ಮಾತ್ರವಲ್ಲದೇ ಮಹಿಳೆಯರ ಸುರಕ್ಷತೆಯೂ ಸಹ ಸಮಾಜದ ಅತ್ಯವಶ್ಯಕ ಕರ್ತವ್ಯವಾಗಿದೆ. ಸಾಮಾಜಿಕ ಪ್ರಗತಿ ಸಾಧಿಸಲು ಮಹಿಳಾ ಸ್ವಾವಲಂಬನೆಯ ಜೊತೆಗೆ ಸುರಕ್ಷತೆಯು ಸಹ ಮುಖ್ಯ ಪಾತ್ರ ವಹಿಸುತ್ತದೆ.ಉಕಖ ಆಧಾರಿತ ಂಠಿಠಿ ಗಳ ಸಹಾಯದಿಂದ ಮಹಿಳೆಚುರು ತಮ್ಮ ಸುರಕ್ಷತೆಯನ್ನು ಕೈಗೊಳ್ಳಬಹುದಾಗಿದೆ. ಆದಕಾರಣ ಮಹಿಳೆಯರ ಮೇಲಾಗುವ ದೌರ್ಜನ್ಯ, ಕಿರುಕುಳ, ಹಿಂಸೆ ಮುಂತಾದವುಗಳನ್ನು ತಡೆಯುವಲ್ಲಿ ಡಿಜಿಟಲ್ ಮಾಧ್ಯಮವು ಅತೀ ಮುಖ್ಯ ಕಾರ್ಯ ನಿರ್ವಹಿಸುತ್ತಿದೆ.

ಉದಾಹರಣೆ: ಖಊಇಖಿಠಟಿಠಟಥಿ, ಊಇಓ ಖಟಿಜುಚಿ (ಊಜಟಿಟಿಜಢಿ ಇಟಿಣಡಿಜಠಿಡಿಜಟಿಜಣಡಿ ಓಜಣತಿಠಡಿಇ), ಖಣಚಿಡಿಣಣಠಿ ಖಟಿಜುಚಿ,

ಖಊಇ–ಒಚಿಡಿಣ. 112 ಖಟಿಜುಚಿ, ಂಇಇಚಿ ಘಠಟಜಟಿ' ಊಜಚಿಟಠಿಟುಟಿಜ (ಘಾಚಿಣಂಠಿಠಿ), ಏಖಕ ಖಚಿಜಿಜ ಅಠಟಿಟಿಜಖಿಣ (ಏಖಕ ಂಠಿಠಿ)

ಸಾಮಾಜಿಕ ಅಭಿವೃದ್ಧಿಯಲ್ಲಿ ಎದುರಾಗಬಹುದಾದ ತಂತ್ರಜ್ಞಾನದ ಕುರಿತ ಸವಾಲುಗಳು

1. ತಂತ್ರಜ್ಞಾನವು ಆಧುನಿಕ ಸಮಾಜಕ್ಕೆ ವರದಾನವಾಗಿದ್ದರೂ "ಡಿಜಿಟಲ್ ಡಿವೈಸ್" ನಂತಹ ಉಪಕರಣಗಳು ಬಡವ–ಶ್ರೀಮಂತ ಎಂಬ ಅಚಿತರವನ್ನು ಸೃಷ್ಟಿಮಾಡುತ್ತವೆ. ಆರ್ಥಿಕವಾಗಿ ಹಿಂದುಳಿದ ಜನರಿಗೆ ಈ ಆಧುನಿಕ ಡಿಜಿಟಲ್ ಉಪಕರಣಗಳನ್ನು ಖರೀದಿಸಲು ಸಾಧ್ಯವಾಗುವುದಿಲ್ಲ.
2. ಆಧುನಿಕ ತಂತ್ರಜ್ಞಾನ, ತಾಂತ್ರಿಕತೆ ಹೆಚ್ಚಿದಂತೆ ಅಪರಾಧಗಳೂ ಹೆಚ್ಚಾಗುವ ಸಾಧ್ಯತೆ ಅಧಿಕವಾಗಿರುತ್ತದೆ. ಸೈಬರ್ ಅಪರಾಧಗಳು, ಡಿಜಿಟಲ್ ಅರೆಸ್ಟ್, ಸ್ಪ್ಯಾಮ್ ನಂತಹ ಕೃತ್ಯಗಳು ಸಮಾಜದಲ್ಲಿ ಆತಂಕವನ್ನು ಸೃಷ್ಟಿಮಾಡುತ್ತವೆ.
3. ತಂತ್ರಜ್ಞಾನದ ಅಭಿವೃದ್ಧಿಯು ನವ ಉದ್ಯೋಗಗಳನ್ನು ಸೃಷ್ಟಿಸಿದರೂ, ಕಡಿಮೆ ಕೌಶಲ್ಯಗಳನ್ನು ಹೊಂದಿರುವವರಿಗೆ ಉದ್ಯೋಗ ಕಳೆದುಕೊಳ್ಳುವ ಆತಂಕವನ್ನು ಹೆಚ್ಚಿಸುತ್ತದೆ.ಸ್ವಯಂ ಚಾಲಿತ ಯಾಂತ್ರಿಕ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ ಕೆಲವು ಉದ್ಯೋಗಗಳನ್ನು ಕಡಿತಗೊಳಿಸುವ ಸಾಧ್ಯತೆಯಿರುತ್ತದೆ.
4. ದತ್ತಾಂಶ/ದಾಖಲೆಗಳ ಗೌಪ್ಯತೆ ಮತ್ತು ಭದ್ರತೆಯ ಸಮಸ್ಯೆಗಳು ಡಿಜಿಟಲ್ ವ್ಯವಸ್ಥೆಯ ಬಳಕೆಯಿಂದ ಸಾಮಾನ್ಯವಾಗಿ ಉಂಟಾಗುತ್ತಿವೆ. ವೈಯಕ್ತಿಕ ಮಾಹಿತಿಯ ಗೌಪ್ಯತೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಗೌಪ್ಯತೆಯ ಉಲ್ಲಂಘನೆಯಂತಹ ಸಮಸ್ಯೆಗಳು ವ್ಯಕ್ತಿಗಳ ಸುರಕ್ಷತೆಗೆ ಧಕ್ಕೆಯನ್ನುಂಟುಮಾಡುತ್ತಿವೆ.
5. ಸ್ವಯಂ ಅರಿವು ಮತ್ತು ಜ್ಞಾನಾರ್ಜನೆ ರಹಿತತೆ ಉಂಟಾಗುವ ಆತಂಕವು ಈ ಡಿಜಿಟಲ್ ತಂತ್ರಜ್ಞಾನದ ಕೃತಕ ಬುದ್ಧಿಮತ್ತೆಯಿಂದ ಎದುರಾಗುತ್ತಿದೆ. ಮೊದಲು ಜನರು ಹಲವು ಆಕರಗಳಿಂದ ಜ್ಞಾನ ಅಥವಾ ಮಾಹಿತಿಯನ್ನು ಪಡೆದು ಅದನ್ನು ವಿಶ್ಲೇಶಣೆಗೈದು ನಂತರ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಆದರೆ ಇಗ ಎಲ್ಲವನ್ನು ಕೃತಕ ಬುದ್ದಿಮತ್ತೆ (ಂಖ) ಯಿಂದಲೇ ಪಡೆದುಕೊಳ್ಳುತ್ತಿರುವ್ಯದರಿಂದ ಸ್ವಂತ ಬುದ್ಧಿಶಕ್ತಿಯ ಬಳಕೆಯು ಕ್ರಮೇಣ ಕಡಿಮೆಯಾಗುತ್ತಾ ಸಾಗುತ್ತದೆ.

ಉಪಸಂಹಾರ:

ಇಂದಿನ ಸಾಮಾಜಿಕ ಪ್ರಗತಿಯಲ್ಲಿ ತಂತ್ರಜ್ಞಾನವು ಅನಿವಾರ್ಯವಾದ ಪಾತ್ರವಹಿಸಿದೆ. ಆರೋಗ್ಯ, ಶಿಕ್ಷಣ, ಆಡಳಿತ, ಸಾಮಾಜಿಕ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವದ್ದಾಗಿದೆ.ತಂತ್ರಜ್ಞಾನವು ಹೊಸ ಸಾಧ್ಯತೆಗಳನ್ನು ಅನ್ವೇಷಣೆಗಳ ಮೂಲಕ ಸಾಧ್ಯವಾಗಿಸುತ್ತದೆ. ಆದರೆ ತಂತ್ರಜ್ಞಾನವನ್ನು ಜವಾಬ್ದಾರಿಯುತವಾಗಿ ಬಳಸುವ ಹೊಣಗಾರಿಕೆಯು ಸಮುದಾಯದಮೇಲಿರುತ್ತದೆ. ಎಲ್ಲರನ್ನೂ ಒಳಗೊಂಡ ನ್ಯಾಯಪರವಾದ ಮತ್ತು ನಿರಂತರ ಅಭಿವೃದ್ಧಿಗಾಗಿ ತಂತ್ರಜ್ಞಾನವನ್ನು ಮಾನವ ಅಭಿವೃದ್ಧಿ ಸಾಧನವಾಗಿ ಬಳಸುವ ಅಗತ್ಯತೆ ಇಗಿನ ಸಮಾಜಕ್ಕಿದೆ. ತಂತ್ರಜ್ಞಾನವು ಸ್ವತ: ಸಾಮಾಜಿಕ ಪ್ರಗತಿಯನ್ನು ಖಚಿತಪಡಿಸುವುದಿಲ್ಲ. ಅದು ಹೇಗೆ ಮತ್ತು ಯಾವ ಕಾರಣಕ್ಕಾಗಿ ಬಳಕೆಯಾಗುತ್ತಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಆದಕಾರಣ ಇಂದಿನ ಸಮಾಜಕ್ಕೆ ತಂತ್ರಜ್ಞಾನದ ಸದ್ಬಳಕೆಯ ಅರಿವು ಮೂಡುವುದು ಅವಶ್ಯಕವಾಗಿದೆ.

ಆಧಾರ ಗ್ರಂಥಗಳು:

1. ಸಮಗ್ರ ಸಾಮಾಜಿಕ ಚಿಂತನೆ–ಪ್ರೊ. ಕೆ.ಭೈರಪ್ಪ
2. ಭಾರತೀಯ ಸಮಾಜ – ಚ.ನ. ಶಂಕರ್‌ರಾವ್
3. ಸಮಕಾಲೀನ ಸಮಾಜಶಾಸ್ತ್ರ– ಪ್ರೊ. ಜಿ. ಸುಬ್ರಮಣ್ಯ
4. ಖಿಜಖಿಟಿಠಟಠಠಥಿ ಚಿಟಿಜ ಖಠಖಿಜಣಥಿ– ಖ.ಗಿ.ಉ ಒಜಟಿಠಟಿ
5. ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ– ಡಾ. ಎಂ.ಎನ್. ಶ್ರೀನಿವಾಸ್
6. ವಿವಿಧ ಪತ್ರಿಕಾ ಲೇಖನಗಳು
7. ಅಚಿತರ್ಜಾಲ ಮಾಹಿತಿ ಸಂಗ್ರಹಣೆಗಳು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು: ಒಂದು ಅಧ್ಯಯನ

ಶ್ರೀ ಭೀಮೇಶ
ಸಹಾಯಕ ಪ್ರಾಧ್ಯಾಪಕರು,ಕನ್ನಡ ವಿಭಾಗ,
ಶ್ರೀ ಕೆ. ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಲಕೋಟಿ-582205
Email- bheemeshk123@gmail.com

Manuscript ID:
JRD -2026-180525
ISSN: 2230-9578
Volume 18
Issue 5(IV)
Pp. 102-106
April- 2026

Submitted: 16 Apr. 2026
Revised: 28 Apr.2026
Accepted: 12 May. 2026
Published: 31 May. 2026

Abstract:

`ಈ ಸಂಶೋಧನಾ ಲೇಖನವು ಕನ್ನಡ ಸಾಹಿತ್ಯದ ಸುದೀರ್ಘ ಪರಂಪರೆಯಲ್ಲಿ ಮೂಡಿಬಂದ ಮಹಿಳಾ ಪರ ಚಿಂತನೆಗಳನ್ನು ಐತಿಹಾಸಿಕ, ಸಾಮಾಜಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ. ೧೨ನೇ ಶತಮಾನದ ವಚನ ಚಳವಳಿಯ ಬಂಡಾಯದ ದನಿಯಿಂದ ಆರಂಭಿಸಿ, ಮಧ್ಯಕಾಲೀನ ಸಾಹಿತ್ಯದ ಸಂಚಿ ಹೊನ್ನಮ್ಮನ ವಿಚಾರಗಳೊಂದಿಗೆ ಹಾದು ಆಧುನಿಕ ಕಾಲದ ತ್ರಿವೇಣಿ, ಅನುಪಮಾ ನಿರಂಜನ, ಸಾರಾ ಅಬೂಬಕ್ಕರ್, ವಿಜಯಾ ದಬ್ಬೆ, ಮೊದಲಾದ ಲೇಖಕಿಯರ ಕೃತಿಗಳಲ್ಲಿನ ಸ್ತ್ರೀ ಸಂವೇದನೆ ಹಾಗೂ ಸಮಕಾಲೀನ ಸ್ತ್ರೀವಾದಿ ವಿಮರ್ಶೆಯವರೆಗೆ ಈ ಅಧ್ಯಯನವು ವಿಸ್ತರಿಸಿದೆ. ಈ ಲೇಖನವು ಪಿತೃಪ್ರಧಾನ ವ್ಯವಸ್ಥೆಯ ಸವಾಲುಗಳು, ಮಹಿಳೆಯರ ಮಾನಸಿಕ ಆರೋಗ್ಯ, ಧಾರ್ಮಿಕ ಕಟ್ಟುಪಾಡುಗಳ ನಡುವಿನ ಸಂಘರ್ಷ ಮತ್ತು ಸ್ವತಂತ್ರ ಅಸ್ಮಿತೆಯ ಹುಡುಕಾಟವನ್ನು ವಸ್ತುನಿಷ್ಠವಾಗಿ ಚರ್ಚಿಸುತ್ತದೆ.

Key words: *ಕನ್ನಡ ಸಾಹಿತ್ಯ, ಮಹಿಳಾ ಪರ ಚಿಂತನೆಗಳು, ಸ್ತ್ರೀ ಸಂವೇದನೆ, ವಚನ ಸಾಹಿತ್ಯ, ಸ್ತ್ರೀವಾದಿ ವಿಮರ್ಶೆ, ಪಿತೃಪ್ರಧಾನ ವ್ಯವಸ್ಥೆ, ಅಕ್ಕಮಹಾದೇವಿ, ಸಂಚಿ ಹೊನ್ನಮ್ಮ, ತ್ರಿವೇಣಿ, ಸಾರಾ ಅಬೂಬಕ್ಕರ್, ವಿಜಯಾ ದಬ್ಬೆ.*

ಪೀಠಿಕೆ:

ಕನ್ನಡ ಸಾಹಿತ್ಯವು ಸಾವಿರಾರು ವರ್ಷಗಳ ಸುದೀರ್ಘ ಪರಂಪರೆಯನ್ನು ಹೊಂದಿದ್ದು, ಮಾನವ ಜೀವನದ ವಿವಿಧ ಆಯಾಮಗಳನ್ನು ತನ್ನ ಒಡಲೊಳಗೆ ದಾಖಲಿಸಿಕೊಂಡಿದೆ. ಇದರಲ್ಲಿ ಮಹಿಳಾ ಪರ ಚಿಂತನೆಗಳು ಮತ್ತು ಸ್ತ್ರೀ ಸಂವೇದನೆಯು ಕಾಲಕಾಲಕ್ಕೆ ಹೊಸ ಆಯಾಮಗಳನ್ನು ಪಡೆಯುತ್ತಾ ಬಂದಿದೆ. ಸಾಹಿತ್ಯವು ಕೇವಲ ಕಲ್ಪನೆಯ ವಿಲಾಸವಾಗಿರದೆ ಸಮಾಜದ ಪ್ರತಿಬಿಂಬವೂ ಆಗಿರುವುದರಿಂದ, ಮಹಿಳೆಯರ ಸಾಮಾಜಿಕ ಸ್ಥಾನಮಾನ, ಅವರ ಹಕ್ಕುಗಳು ಮತ್ತು ಅವರು ಎದುರಿಸುವ ಶೋಷಣೆಗಳ ವಿರುದ್ಧದ ಪ್ರತಿಭಟನೆಗಳು ಸಾಹಿತ್ಯಕವಾಗಿ ಅಭಿವ್ಯಕ್ತಿ ಪಡೆದಿವೆ.

ಹನ್ನೆರಡನೇ ಶತಮಾನದ ವಚನ ಕ್ರಾಂತಿಯು ಮಹಿಳೆಯರ ವೈಚಾರಿಕ ಬಿಡುಗಡೆಗೆ ನಾಂದಿ ಹಾಡಿದರೆ, ನಂತರದ ಕಾಲಘಟ್ಟಗಳಲ್ಲಿ ಮಹಿಳೆಯರು ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ನಿರಂತರ ಪ್ರಯತ್ನ ನಡೆಸಿದ್ದಾರೆ. ಇಂದಿನ ಸಮಕಾಲೀನ ಸ್ತ್ರೀವಾದಿ ವಿಮರ್ಶೆಯು ಪಿತೃಪ್ರಧಾನ ವ್ಯವಸ್ಥೆಯ ಒಳಗಿನ ಸಂಘರ್ಷಗಳನ್ನು ಮತ್ತು ಮಹಿಳೆಯರ ಸ್ವತಂತ್ರ ವ್ಯಕ್ತಿತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ದಾಖಲಿಸುತ್ತಿದೆ. ಈ ಲೇಖನವು ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಲ್ಲಿ ಮಹಿಳಾ ಸಂವೇದನೆಯು ಅಥವಾ ಮಹಿಳಾ ಪರ ಚಿಂತನೆಗಳು ವಿಕಾಸಗೊಂಡ ಬಗೆಯನ್ನು ವಿಶ್ಲೇಷಿಸುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀ ಭೀಮೇಶ ಸಹಾಯಕ ಪ್ರಾಧ್ಯಾಪಕರು,ಕನ್ನಡ ವಿಭಾಗ, ಶ್ರೀ ಕೆ. ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಹುಲಕೋಟಿ-582205

How to cite this article:
ಭೀಮೇಶ (2026). ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು: ಒಂದು ಅಧ್ಯಯನ Journal of Research & Development, 18(5(IV)), 102–106. https://doi.org/10.5281/zenodo.20993344

Quick Response Code:
Website: https://jrdrvb.org/
DOI: 10.5281/zenodo.20993344
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ವಚನ ಸಾಹಿತ್ಯದ ಕ್ರಾಂತಿ ಮತ್ತು ಮಹಿಳಾ ಸಂವೇದನೆಯ ಉಗಮ:

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳ ಮೊತ್ತ ಮೊದಲ ಹಾಗೂ ಅತ್ಯಂತ ಪ್ರಬಲ ಸ್ಫೋಟವು ಹನ್ನೆರಡನೇ ಶತಮಾನದ ವಚನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ವಚನ ಚಳವಳಿಯು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯ ಜೊತೆಗೆ ಮಹಿಳೆಯರ ವೈಚಾರಿಕ ಬಿಡುಗಡೆಗೆ ನಾಂದಿಯನ್ನು ಹಾಡಿತು. 12ನೇ ಶತಮಾನದ ಅತಿ ದೊಡ್ಡ ಸಾಧನೆಯೆಂದರೆ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಿಕ್ಕ ಸಮಾನ ಅವಕಾಶ. ಇಲ್ಲಿ ಮಹಿಳೆಯರು ಕೇವಲ ಮನೆಕೆಲಸಗಳನ್ನು ನಿರ್ವಹಿಸುವ ಗೃಹಿಣಿಯರಾಗಿರದೆ, ವಚನಕಾರ್ತಿಯರಾಗಿ ಹಾಗೂ ಆಧ್ಯಾತ್ಮಿಕ ಮತ್ತು ವೈಚಾರಿಕ ಚಿಂತಕರಾಗಿ, ಪುರುಷರೊಂದಿಗೆ ಸಮಾನವಾಗಿ ಸಂವಾದದಲ್ಲಿ ತೊಡಗುತ್ತಿದ್ದರು.

ಹನ್ನೆರಡನೇ ಶತಮಾನದ ವಚನ ಚಳುವಳಿಯ ಮಿನುಗುವ ನಕ್ಷತ್ರವೆಂದರೆ ಅದು 'ಅಕ್ಕಮಹಾದೇವಿ'. ಪ್ರಮುಖ ವಚನಕಾರ್ತಿಯಾದ ಅಕ್ಕಮಹಾದೇವಿ, ಕನ್ನಡದ ಮೊದಲ ಮಹಿಳಾ ಕವಯಿತ್ರಿ ಎಂಬ ಅಭಿದಾನಕ್ಕೆ ಪಾತ್ರಳಾಗಿದ್ದಾಳೆ. ಆಕೆಯ ಜೀವನ ಮತ್ತು ವಚನಗಳು ಸ್ತ್ರೀ ಅಸ್ಮಿತೆಯ ಬಂಡಾಯದ ಸಂಕೇತಗಳಾಗಿವೆ. ಅಕ್ಕಮಹಾದೇವಿಯು ತನ್ನ ಆರಾಧ್ಯ ದೈವ ಚೆನ್ನಮಲ್ಲಿಕಾರ್ಜುನನನ್ನು ತನ್ನ ಪತಿಯೆಂದು ಸ್ವೀಕರಿಸಿ, ಲೌಕಿಕ ವಿವಾಹದ ಬಂಧನಗಳನ್ನು ಮೀರಿ ಕೌಶಿಕ ರಾಜನ ಅಧಿಕಾರವನ್ನು ತ್ಯಜಿಸಿದವಳು. ಅಕ್ಕಮಹಾದೇವಿಯ ನಿರ್ವಾಣ ಶರೀರವು ಕೇವಲ ಭೌತಿಕ ಬೆತ್ತಲೆತನವಾಗಿರದೆ, ಅದು ಸಮಾಜವು ಮಹಿಳೆಯ ದೇಹದ ಮೇಲೆ ಹೇರಿದ ನೈತಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳ ವಿರುದ್ಧದ ಪ್ರತಿಭಟನೆಯಾಗಿತ್ತು.

ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀ ದೇಹದ ಕುರಿತಾದ ಚಿಂತನೆಗಳು ಹೀಗಿವೆ: 'ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ. ಗಂಡು ಗಂಡಾದಡೆ ಹೆಣ್ಣಿನ ಸೂತಕ. ಮನದ ಸೂತಕ ಹಿಂಗಿದಡೆ, ತನುವಿನ ಸೂತಕಕ್ಕೆ ತೆರಹುಂಟೆ'? ಎಂಬ ವಚನದಲ್ಲಿ ಸೂತಕವು ದೇಹಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ ಅದು ಮನದ ಸೂತಕ ಎಂದು ಸ್ಪಷ್ಟಪಡಿಸುತ್ತಾಳೆ. ಒಮ್ಮೆ ಮನಸ್ಸಿನ ಮೈಲಿಗೆ ತೊಲಗಿದರೆ, ದೇಹದ ಮೈಲಿಗೆಯ ಕಲ್ಪನೆಯು ನಿರರ್ಥಕವಾಗುತ್ತದೆ ಎಂದು ಆಕೆ ದೃಢವಾಗಿ ಹೇಳುತ್ತಾಳೆ. ಈ ಮೂಲಕ, ಹೆಣ್ಣು-ಗಂಡಿನ ನಡುವಿನ ಲಿಂಗ ತಾರತಮ್ಯ ಎಂಬುದು ಮನುಷ್ಯ ನಿರ್ಮಿತ ಸಾಮಾಜಿಕ ಕಟ್ಟುಪಾಡು ಎಂಬುದನ್ನು ಪ್ರತಿಪಾದಿಸುತ್ತಾಳೆ.

'ಜೇಡರ ದಾಸಿಮಯ್ಯ'ನವರ 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂಬ ವಚನದಲ್ಲಿನ ಆತ್ಮದ ಸಮಾನತೆಯ ತತ್ವವೇ ಅಕ್ಕಮಹಾದೇವಿಯ ಈ ವಚನದ ತಳಹದಿಯಾಗಿದೆ. ಅವರ ನಿಲುವು ಲಿಂಗಾತೀತವಾದ ಅಸ್ಮಿತೆಯನ್ನು ಪ್ರತಿಪಾದಿಸುತ್ತದೆ. ಇದು ಸ್ತ್ರೀವಾದಿ ಚಿಂತನೆಯ ಆರಂಭಿಕ ಘಟ್ಟದ ಪ್ರಮುಖ ದನಿ ಎನ್ನಬಹುದು.

ಗಂಡ-ಹೆಂಡತಿಯ ನಡುವಿನ ಸಮಾನತೆಯನ್ನು ಶರಣೆ 'ಗೊಗ್ಗವ್ವೆ' 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ, ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡು ಹಿಡಿದಡೆ ಉತ್ತರವಾವುದೆಂದರಿಯಬೇಕು. ಈ ಎರಡರ ಉಭಯವ ಕಳೆದು ಸುಖಿ ತಾನಾಗ ಬಲ್ಲಡೆ, ನಾಸ್ತಿನಾಥನು ಪೂರ್ಣನೆಂಬೆ'. ಅಂದರೆ, ಗಂಡ-ಹೆಂಡತಿಯ ನಡುವೆ ಮೇಲು-ಕೀಳೆಂಬುದಿಲ್ಲ. ಅವರಿಬ್ಬರೂ ಪರಸ್ಪರರ ಒಡವೆ, ಅವರಿಬ್ಬರೂ ಸಮಾನರು ಎಂದು ಪ್ರತಿಪಾದಿಸುತ್ತಾಳೆ.

ಅಕ್ಕಮಹಾದೇವಿಯ ಹೊರತಾಗಿ ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ನೀಲಾಂಬಿಕೆ, ಸತ್ಯಕ್ಕ,ಕಾಳವ್ವೆ, ಸಂಕವ್ವೆ, ಮುಂತಾದ ಸುಮಾರು ಮೂವತ್ತೈದಕ್ಕೂ ಹೆಚ್ಚು ವಚನಕಾರ್ತಿಯರು ತಮ್ಮ ಸ್ವತಂತ್ರ ವಿಚಾರಗಳನ್ನು ಮಂಡಿಸಿದ್ದಾರೆ. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯನಿಗಿದ್ದ ಅಕ್ಕಿಯ ಮೇಲಿನ ಅತಿಯಾದ ಆಸೆಯನ್ನು ತಿದ್ದುವ ಮೂಲಕ 'ಕಾಯಕ' ತತ್ವದಲ್ಲಿ ಮಹಿಳೆಯ ನಿಷ್ಠೆ, ಪ್ರಾಮಾಣಿಕತೆಯನ್ನು ಹಾಗೂ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಾಳೆ. ಈ ಎಲ್ಲ ವಚನಕಾರ್ತಿಯರು ಪಿತೃಪ್ರಧಾನ ಕುಟುಂಬದ ವ್ಯವಸ್ಥೆಯೊಳಗೆ ಇದ್ದುಕೊಂಡೇ ವೈಚಾರಿಕ ಸಮಾನತೆಯನ್ನು ಸಾಧಿಸಿದವರು.

ನಡುಗನ್ನಡ ಸಾಹಿತ್ಯದ ಮಹಿಳಾ ದನಿ : ಸಂಚಿ ಹೊನ್ನಮ್ಮ

ಸಂಚಿ ಹೊನ್ನಮ್ಮ ಹದಿನೇಳನೇ ಶತಮಾನದ ಪ್ರಮುಖ ಲೇಖಕಿ. ಈಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಹಕ್ಕುಗಳ ಬಗ್ಗೆ ಬಹಳ ಮೃದುವಾಗಿಯೂ ಅಷ್ಟೇ ಮಾರ್ಮಿಕವಾಗಿಯೂ ದನಿ ಎತ್ತಿದ ಪ್ರಮುಖ ಕವಯಿತ್ರಿ. ಹೊನ್ನಮ್ಮನ 'ಹದಿಬದೆಯ ಧರ್ಮ' ಕೃತಿಯು ಪ್ರಮುಖವಾಗಿ ಸ್ತ್ರೀ ಧರ್ಮವನ್ನು ಬೋಧಿಸಿದರೂ, ಅದು ಮಹಿಳೆಯರ ಕುರಿತು ಸಮಾಜದಲ್ಲಿರುವ ನಕಾರಾತ್ಮಕ ಧೋರಣೆಯನ್ನು ತೀವ್ರವಾಗಿ ಪ್ರಶ್ನಿಸಿಸುತ್ತದೆ.

'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು, ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂದು ಹೇಳುತ್ತಾ ಹೆಣ್ಣಿನ ಘನತೆ ಮತ್ತು ತ್ಯಾಗವನ್ನು ಎತ್ತಿ ಹಿಡಿಯುತ್ತಾಳೆ. ನಮ್ಮನ್ನೆಲ್ಲ ಹೆತ್ತ ಅಥವಾ ಪಡೆದ ತಾಯಿ ಹೆಣ್ಣಲ್ಲವೇ? ನಮ್ಮನ್ನು ಸಾಕಿ ಸಲಹಿದವಳು ಅಥವಾ ಪೊರೆದವಳು ಹೆಣ್ಣಲ್ಲವೇ? ಹಾಗೂ ಹೆಣ್ಣನ್ನು ತಾತ್ಸಾರದಿಂದ ನೋಡುವ, ಅವಳನ್ನು ಕೀಳಾಗಿ ಕಾಣುವ ಕಣ್ಣು ಕಾಣದ ಗಾವಿಲರು ಅಜ್ಞಾನಿಗಳಾಗಿ ಏಕೆ ಹೀಗೆ ವರ್ತಿಸುತ್ತಾರೆ ಎಂದು ಕವಯಿತ್ರಿ ದಿಟ್ಟವಾಗಿ ಪ್ರಶ್ನಿಸಿದ್ದಾಳೆ. ಹೆಣ್ಣು ಕೇವಲ ದಾಸಿಯಲ್ಲ, ಅವಳು ಸಮಾಜದ ತಾಯಿ, ಪೋಷಕಿ ಮತ್ತು ಮನೆಯ ದೇವತೆ ಎಂದು ಮಹಿಳಾ ಪರ ದನಿ ಎತ್ತುತ್ತಾಳೆ. 'ಕುವರನಾದೊಡೆ ಬಂದ ಗುಣವೇನದರಿಂದ, ಕುವರಿಯಾದೊಡೆ ಕುಂದೇನು' ಎಂಬ ಹೊನ್ನಮ್ಮನ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪ್ರಶ್ನೆಯು ಇಂದಿಗೂ ಪ್ರಸ್ತುತವಾಗಿದೆ. ಆ ಕಾಲದ ಸಾಮಾಜಿಕ ಚೌಕಟ್ಟಿನೊಳಗೆ ಮಹಿಳೆಯು ಗೌರವಯುತವಾಗಿ ಬಾಳಬೇಕಾದ ಅಗತ್ಯವನ್ನು ಹೊನ್ನಮ್ಮ ಪ್ರತಿಪಾದಿಸಿದಳು. ಈ ಕೃತಿಯು ಅಂದಿನ ಅರಮನೆಯ ಪರಿಸರದಲ್ಲಿ ಮಹಿಳೆಯರಿಗಿದ್ದ ಶಿಕ್ಷಣದ ಅವಕಾಶ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ತೋರಿಸುತ್ತದೆ. ಸಂಚಿ ಹೊನ್ನಮ್ಮನ ಚಿಂತನೆಗಳು ಆಧುನಿಕ ಸ್ತ್ರೀವಾದಕ್ಕೆ ಒಂದು ರೀತಿಯ ಪ್ರಸ್ತಾವನೆಯಾಗಿ ಕೆಲಸ ಮಾಡಿವೆ ಎಂದರೆ ತಪ್ಪಾಗಲಾರದು.

ಹೊಸಗನ್ನಡ ಸಾಹಿತ್ಯ ಮತ್ತು ಸ್ತ್ರೀ ಸಂವೇದನೆಯ ವಿಕಾಸ:

ಇಪ್ಪತ್ತನೇ ಶತಮಾನದ ಆರಂಭದೊಂದಿಗೆ ಕನ್ನಡ ಸಾಹಿತ್ಯವು ನವೋದಯದ ಹಂತಕ್ಕೆ ಪ್ರವೇಶಿಸಿತು. ಈ ಕಾಲದಲ್ಲಿ ಮಹಿಳೆಯರ ಶಿಕ್ಷಣ ಮತ್ತು ಸ್ವಾತಂತ್ರ್ಯದ ಕುರಿತಾದ ಚಿಂತನೆಗಳು ಹೊಸ ಆಯಾಮ ಪಡೆದವು. ನವೋದಯ ಸಾಹಿತ್ಯವು ಮಹಿಳೆಯರನ್ನು ಕೇವಲ ಕರುಣೆಯ, ಅನುಕಂಪದ ವಸ್ತುವಾಗಿ ನೋಡದೆ, ಅವರ ಪ್ರತಿಭೆಯನ್ನು ಮತ್ತು ಸಾಮರ್ಥ್ಯವನ್ನು ಗುರುತಿಸಲು ಪ್ರಾರಂಭಿಸಿತು.

'ತ್ರಿವೇಣಿ' ಕನ್ನಡದ ಜನಪ್ರಿಯ ಲೇಖಕಿಯಾಗಿದ್ದು, ಮಹಿಳೆಯರ ಅಂತರಂಗದ ಮತ್ತು ಮನೋವೈಜ್ಞಾನಿಕ ಜಗತ್ತನ್ನು ಸಾಹಿತ್ಯದ ಕೇಂದ್ರಕ್ಕೆ ತಂದರು. ಅವರ ಕಾದಂಬರಿಗಳು ಮಹಿಳೆಯರು ಎದುರಿಸುವ ಪ್ರೇಮ ವೈಫಲ್ಯಗಳು,ಕೌಟುಂಬಿಕ ಒತ್ತಡಗಳು ಮತ್ತು ಮಾನಸಿಕ ಸಂಘರ್ಷಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಿದವು. ತ್ರಿವೇಣಿಯವರ 'ಶರಪಂಜರ' ಕಾದಂಬರಿಯು ಒಂದು ಮಹತ್ವದ ಮೈಲಿಗಲ್ಲು ಎನ್ನಬಹುದು. ಮಾನಸಿಕ ಅಸ್ವಸ್ಥತೆಯಿಂದ ಗುಣಮುಖಳಾಗಿ ಬಂದ ಮಹಿಳೆಯನ್ನು ಸಮಾಜವು ನಡೆಸಿಕೊಳ್ಳುವ ರೀತಿಯನ್ನು ಈ ಕೃತಿಯು ಕಟುವಾಗಿ ವಿಮರ್ಶಿಸುತ್ತದೆ.ಕಾದಂಬರಿಯ ನಾಯಕಿ ತನ್ನ ಗತಕಾಲದ ಘಟನೆಯಿಂದಾಗಿ ಮಾನಸಿಕ ಆಘಾತಕ್ಕೆ ಒಳಗಾಗುತ್ತಾಳೆ, ಆದರೆ ಅವಳು ಗುಣಮುಖವಾದ ನಂತರವೂ ಕುಟುಂಬದವರು ಅವಳನ್ನು ಹುಚ್ಚಿ ಎಂದೇ ನೋಡುತ್ತಾರೆ. ಇದು ಮಹಿಳೆಯರ ಮಾನಸಿಕ ಆರೋಗ್ಯದ ಬಗ್ಗೆ ಇರುವ ಸಾಮಾಜಿಕ ಕಳಂಕವನ್ನು ಹೊರಹಾಕುತ್ತದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುರುಷನ ಹಕ್ಕುಗಳು ಹೇಗೆ ರಕ್ಷಿಸಲ್ಪಡುತ್ತವೆ ಮತ್ತು ಮಹಿಳೆಯ ಚಾರಿತ್ರ್ಯವನ್ನು ಹೇಗೆ ಅನುಮಾನಿಸಲಾಗುತ್ತದೆ ಎಂಬುದು ತ್ರಿವೇಣಿಯವರ ಕಾದಂಬರಿಗಳ ಮುಖ್ಯ ವಸ್ತುವಾಗಿದೆ.

'ಡಾ. ಅನುಪಮಾ ನಿರಂಜನ' ಅವರು ವೃತ್ತಿಯಿಂದ ವೈದ್ಯರಾಗಿದ್ದು, ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳನ್ನು ಅತ್ಯಂತ ಗಟ್ಟಿಯಾಗಿ ಪ್ರತಿಪಾದಿಸಿದವರು. ಅವರ ಕೃತಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ವೈದ್ಯಕೀಯ ಜ್ಞಾನಗಳು ಬೆಸೆದುಕೊಂಡಿವೆ. ಅವರು ಮಹಿಳೆಯರ ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆಯ ಬಗ್ಗೆ ನಿರಂತರವಾಗಿ ಬರೆದರು. ಅನುಪಮಾ ಅವರ 'ಮಾಧವಿ' ಕಾದಂಬರಿಯು ಪೌರಾಣಿಕ ಕಥೆಯೊಂದನ್ನು ಸ್ತ್ರೀವಾದಿ ನೆಲೆಯಲ್ಲಿ ಮರುಚಿತ್ರಿಸಿದ ಕೃತಿಯಾಗಿದೆ. ಮಹಾಭಾರತದ ಯಯಾತಿಯ ಮಗಳು ಮಾಧವಿಯನ್ನು ಪುರುಷರ ಆಸೆಗಳನ್ನು ತೀರಿಸಿಕೊಳ್ಳಲು ಮತ್ತು ವಂಶದ ಉದ್ಧಾರಕ್ಕೆ ಮಕ್ಕಳನ್ನು ಪಡೆಯಲು ಬಾಡಿಗೆ ವಸ್ತುವಿನಂತೆ ಬಳಸಲಾಗುತ್ತದೆ. ಅನುಪಮಾ ಅವರು ಮಾಧವಿಯ ದೃಷ್ಟಿಕೋನದಿಂದ ಈ ಕಥೆಯನ್ನು ನಿರೂಪಿಸಿ, ಧರ್ಮದ ಹೆಸರಿನಲ್ಲಿ ಮಹಿಳೆಯ ದೇಹದ ಮೇಲೆ ನಡೆಯುವ ಶೋಷಣೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಅವರ 'ಋಣಮುಕ್ತಳು' ಕಾದಂಬರಿಯು ಮಹಿಳೆಯೊಬ್ಬಳು ಸಮಾಜದ ಋಣದಿಂದ ಮುಕ್ತಳಾಗಿ ತನ್ನದೇ ಆದ ಅಸ್ಮಿತೆಯನ್ನು ರೂಪಿಸಿಕೊಳ್ಳುವುದನ್ನು ಚಿತ್ರಿಸುತ್ತದೆ.

'ಬಿ.ಟಿ. ಲಲಿತಾ ನಾಯಕ್': ೧೯೭೦ರ ದಶಕದ ನಂತರ ಕನ್ನಡದಲ್ಲಿ ಆರಂಭವಾದ 'ಬಂಡಾಯ ಸಾಹಿತ್ಯ' ಚಳವಳಿಯು ಮಹಿಳಾ ಪರ ಚಿಂತನೆಗೆ ಒಂದು ಹೊಸ ಆಕ್ರೋಶದ ದನಿಯನ್ನು ನೀಡಿತು. ಈ ಹಂತದಲ್ಲಿ ಜಾತಿ ಮತ್ತು ಲಿಂಗ ಎರಡೂ ಆಯಾಮಗಳಲ್ಲಿ ಮಹಿಳೆಯರ ಶೋಷಣೆಯ ಚರ್ಚೆಗಳು ಆರಂಭವಾದವು. ಬಿ.ಟಿ. ಲಲಿತಾ ನಾಯಕ್ ಅವರು ಬಂಡಾಯ ಸಾಹಿತ್ಯದ ಪ್ರಮುಖ ಲೇಖಕಿ. ಲಂಬಾಣಿ ಸಮುದಾಯದಿಂದ ಬಂದ ಅವರು ಬಡತನ, ಜಾತೀಯತೆ ಮತ್ತು ಮಹಿಳಾ ಹಕ್ಕುಗಳಿಗಾಗಿ ಲೇಖನಿಯನ್ನೇ ತಮ್ಮ ಅಸ್ತ್ರವಾಗಿ ಉಪಯೋಗಿಸಿಕೊಂಡರು. ಅವರ 'ಗತಿ' ಕಾದಂಬರಿಯು ತಳ ಸಮುದಾಯದ ಮಹಿಳೆಯರ ಬದುಕನ್ನು ವಾಸ್ತವಿಕವಾಗಿ ಚಿತ್ರಿಸುತ್ತದೆ. ಲಲಿತಾ ನಾಯಕ್ ಅವರು ಕೇವಲ ಸಾಹಿತ್ಯಕ್ಕೆ ಸೀಮಿತವಾಗದೆ ರಾಜಕೀಯಕ್ಕೆ ಪ್ರವೇಶಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡುವ ಮೂಲಕ ಸೈದ್ಧಾಂತಿಕ ಹೋರಾಟವನ್ನು ಪ್ರಾಯೋಗಿಕವಾಗಿಯೂ ಜಾರಿಗೆ ತಂದರು. ದಲಿತ ಮತ್ತು ಬುಡಕಟ್ಟು ಮಹಿಳೆಯರ ಸಮಸ್ಯೆಗಳನ್ನು ಸಾಹಿತ್ಯದ ಕೇಂದ್ರಕ್ಕೆ ತಂದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ.

ಸಾರಾ ಅಬೂಬಕರ್ : ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು, ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡದ ಮುಸ್ಲಿಂ ಮಹಿಳೆಯರ ಬದುಕನ್ನು ವಸ್ತುನಿಷ್ಠವಾಗಿ ಚಿತ್ರಿಸಿದವರು ಸಾರಾ ಅಬೂಬಕ್ಕರ್. ಅವರ ಬರಹಗಳು ಧಾರ್ಮಿಕ ಚೌಕಟ್ಟಿನೊಳಗಿನ ಪಿತೃಪ್ರಧಾನ ಶಕ್ತಿಯನ್ನು ಕಟುವಾಗಿ ಪ್ರಶ್ನಿಸಿದವು.೧೯೮೪ರಲ್ಲಿ ಪ್ರಕಟವಾದ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಕನ್ನಡ ಸಾಹಿತ್ಯ ಲೋಕದಲ್ಲಿ ದೊಡ್ಡ ಸಂಚಲನ ಮೂಡಿಸಿತು . ಈ ಕಾದಂಬರಿಯು 'ತಲಾಕ್' ಪದ್ಧತಿಯ ದುರುಪಯೋಗ ಮತ್ತು ಅದರಿಂದ ಮಹಿಳೆಯರು ಅನುಭವಿಸುವ ನರಕಯಾತನೆಯನ್ನು ಚಿತ್ರಿಸುತ್ತದೆ.ಕಾದಂಬರಿಯ ನಾಯಕಿ ನಾದಿರಾ ಸಮಾಜದ ಕಠಿಣ ಕಾನೂನುಗಳ ನಡುವೆ ಸಿಲುಕಿ ತನ್ನ ಜೀವನವನ್ನೇ ಕಳೆದುಕೊಳ್ಳುತ್ತಾಳೆ. ಸಾರಾ ಅಬೂಬಕ್ಕರ್ ಅವರು ಸಮಾನ ನಾಗರಿಕ ಸಂಹಿತೆ ಪರವಾಗಿ ಧ್ವನಿ ಎತ್ತಿದರು. ಮುಸ್ಲಿಂ ವೈಯಕ್ತಿಕ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕಾನೂನುಗಳಲ್ಲಿ ಸುಧಾರಣೆಯಾಗಬೇಕು ಮತ್ತು ಮಹಿಳೆಯರಿಗೆ ಶಿಕ್ಷಣ ಹಾಗೂ ಆಸ್ತಿಯಲ್ಲಿ ಸಮಾನ ಪಾಲು ಸಿಗಬೇಕು ಎಂದು ಅವರು ಪ್ರತಿಪಾದಿಸಿದರು. ಅವರ ಬರಹಗಳು ಧಾರ್ಮಿಕ ಮೂಲಭೂತವಾದಿಗಳಿಂದ ಟೀಕೆಗೆ ಒಳಗಾದರೂ, ಅವರು ಮುಸ್ಲಿಂ ಮಹಿಳೆಯರ ವಿಮೋಚನೆಗಾಗಿ ನಿರಂತರವಾಗಿ ಶ್ರಮಿಸಿದರು.

'ವೈದೇಹಿ' ಅವರು ಆಧುನಿಕ ಕನ್ನಡ ಸಾಹಿತ್ಯದ ಅತ್ಯಂತ ಮಹತ್ವದ ಲೇಖಕಿ. ಅವರು ತಮ್ಮ ಕೃತಿಗಳಲ್ಲಿ ಮಹಿಳೆಯರ ದಿನನಿತ್ಯದ ಬದುಕು, ಸಂಬಂಧಗಳು ಮತ್ತು ಸಣ್ಣಪುಟ್ಟ ಸಂಘರ್ಷಗಳನ್ನು ಅತ್ಯಂತ ಆಪ್ತವಾಗಿ ಚಿತ್ರಿಸುತ್ತಾರೆ. ಕುಂದಾಪುರ ಕನ್ನಡದ ವಿಶಿಷ್ಟ ಭಾಷಾ ಪ್ರಯೋಗದ ಮೂಲಕ ಅವರು ಸ್ತ್ರೀ ಅಂತರಂಗದ ಜಗತ್ತನ್ನು ತೆರೆದಿಡುತ್ತಾರೆ. ವೈದೇಹಿಯವರ 'ಕ್ರೌಂಚ ಪಕ್ಷಿಗಳು' ಕಥಾಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ ಕಥೆಗಳಲ್ಲಿ ಮಹಿಳೆಯರು ಕೇವಲ ಸಂತ್ರಸ್ತರಾಗಿರದೆ, ತಮ್ಮದೇ ಆದ ರೀತಿಯಲ್ಲಿ ಸಮಾಜದೊಂದಿಗೆ ರಾಜಿ ಮಾಡಿಕೊಳ್ಳುವ ಅಥವಾ ಪ್ರತಿಭಟಿಸುವ ವಿಶಿಷ್ಟ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತಾರೆ. ಅವರ ಕೃತಿಗಳು ಮಹಿಳೆಯರ ಮೌನವನ್ನು ಸಾಹಿತ್ಯವಾಗಿಸುವಲ್ಲಿ ಯಶಸ್ವಿಯಾಗಿವೆ.

ವಿಜಯಾ ದಬ್ಬೆ ಮತ್ತು ಸ್ತ್ರೀವಾದಿ ವಿಮರ್ಶೆಯ ಉಗಮ:

ಕನ್ನಡದಲ್ಲಿ ಸ್ತ್ರೀವಾದವನ್ನು ಒಂದು ಸೈದ್ಧಾಂತಿಕ ಚಳವಳಿಯಾಗಿ ರೂಪಿಸಿದ ಕೀರ್ತಿ 'ವಿಜಯಾ ದಬ್ಬೆ' ಅವರಿಗೆ ಸಲ್ಲುತ್ತದೆ. ಅವರನ್ನು ಕನ್ನಡದ ಮೊದಲ ಸ್ತ್ರೀವಾದಿ ಲೇಖಕಿ ಮತ್ತು ವಿಮರ್ಶಕಿ ಎಂದು ಕರೆಯಲಾಗುತ್ತದೆ.೧೯೭೮ರಲ್ಲಿ ಅವರು ಸ್ಥಾಪಿಸಿದ 'ಸಮತಾ ವೇದಿಕೆ'ಯು ಮಹಿಳಾ ಬರಹಗಾರರಿಗೆ ಒಂದು ಸೂಕ್ತವಾದ ವೇದಿಕೆಯನ್ನು ನಿರ್ಮಿಸಿತು. ಅವರು ಕೇವಲ ಸಾಹಿತ್ಯ ರಚನೆ ಮಾಡದೆ, ಮಹಿಳಾ ಚಳವಳಿಯ ಇತಿಹಾಸವನ್ನು ಮತ್ತು ಮಹಿಳೆಯರ ಶೋಷಣೆಯ ಮೂಲಗಳನ್ನು ಸಂಶೋಧಿಸಿದರು. ಅವರ 'ನಾರಿ ದಾರಿ ದಿಗಂತ' (೧೯೭೭) ಮತ್ತು 'ಮಹಿಳಾ ಸಾಹಿತ್ಯ ಸಮಾಜ'ದಂತಹ ಕೃತಿಗಳು ಸ್ತ್ರೀವಾದಿ ಸಂಶೋಧನೆಗೆ ಹೊಸ ದಿಕ್ಸೂಚಿಯನ್ನು ನೀಡಿದವು . ಅವರು ಮಹಿಳೆಯರನ್ನು ಭಯಮುಕ್ತವಾಗಿ ಬದುಕಲು ಪ್ರೇರೇಪಿಸಿದರು.

ಇಂದಿನ ಕನ್ನಡ ಸಾಹಿತ್ಯ ಲೋಕದಲ್ಲಿ ಎಂ.ಎಸ್. ಆಶಾದೇವಿ ಅವರು ಮಹಿಳಾ ಪರ ಚಿಂತನೆಗಳನ್ನು ಅತ್ಯಂತ ವೈಚಾರಿಕವಾಗಿ ಮುನ್ನೆಲೆಗೆ ತರುತ್ತಿದ್ದಾರೆ. ಅವರು ಸಾಹಿತ್ಯದ ಮರು ಅಧ್ಯಯನದ ಮೂಲಕ ಮಹಿಳಾ ಅಸ್ಮಿತೆಯನ್ನು ಪುನರ್ ವ್ಯಾಖ್ಯಾನಿಸುತ್ತಿದ್ದಾರೆ. 'ಎಂ.ಎಸ್.ಆಶಾದೇವಿ' ಅವರ ಪ್ರಕಾರ, ಕನ್ನಡ ಸಾಹಿತ್ಯದ ಚರಿತ್ರೆಯು ಕೇವಲ ಪುರುಷರ ಇತಿಹಾಸವಾಗದೆ ಮಹಿಳೆಯರ ಚರಿತ್ರೆಯೂ ಆಗಬೇಕು. ಅವರು ವಚನಕಾರ್ತಿಯರ ಅಸ್ಮಿತೆಯನ್ನು ಸಮಕಾಲೀನ ಸ್ತ್ರೀವಾದದ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅವರ 'ನಾರೀಕೇಳ' ಅಂಕಣ ಮತ್ತು 'ಸ್ತ್ರೀಮತವನುತ್ತರಿಸಲಾಗದೆ?' ಎಂಬ ಕೃತಿಗಳು ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯನ್ನು ಗ್ರಹಿಸುವ ಕ್ರಮವನ್ನು ಬದಲಿಸಿವೆ. ಮಹಿಳೆ ತನ್ನನ್ನು ತಾನು ಕೇವಲ ದೇಹವಾಗಿ ನೋಡದೆ ಆತ್ಮವಾಗಿ ಗುರುತಿಸಿಕೊಳ್ಳಬೇಕು ಎಂಬುದು ಅವರ ಪ್ರಮುಖ ವಾದವಾಗಿದೆ.

ಮಹಿಳಾ ಸಾಹಿತ್ಯದಲ್ಲಿನ ವಿವಿಧ ವರ್ಗಗಳ ಪ್ರಾತಿನಿಧ್ಯ:

ಕನ್ನಡ ಮಹಿಳಾ ಸಾಹಿತ್ಯವು ಇಂದು ಕೇವಲ ಒಂದು ನಿರ್ದಿಷ್ಟ ವರ್ಗಕ್ಕೆ ಸೀಮಿತವಾಗಿಲ್ಲ. ದಲಿತ ಮಹಿಳೆಯರು, ಮುಸ್ಲಿಂ ಮಹಿಳೆಯರು ಮತ್ತು ಬುಡಕಟ್ಟು ಸಮುದಾಯದ ಮಹಿಳೆಯರು ತಮ್ಮ ವಿಶಿಷ್ಟ ಸಮಸ್ಯೆಗಳೊಂದಿಗೆ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿದ್ದಾರೆ. ಗೀತಾ ನಾಗಭೂಷಣ ಅವರಂತಹ ಲೇಖಕಿಯರು ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನ ಮಹಿಳೆಯರ ನೋವನ್ನು ಅತ್ಯಂತ ತೀಕ್ಷ್ಣವಾಗಿ ಚಿತ್ರಿಸಿದ್ದಾರೆ. ದಲಿತ ಸ್ತ್ರೀವಾದವು ಹೇಗೆ ಪಿತೃಪ್ರಧಾನತೆಯ ಜೊತೆಗೆ ಜಾತೀಯತೆಯನ್ನೂ ಎದುರಿಸಬೇಕು ಎಂಬುದನ್ನು ಇವರ 'ಬದುಕು' ಅಂತಹ ಕಾದಂಬರಿ ಮನವರಿಕೆ ಮಾಡಿಕೊಡುತ್ತದೆ.

ಭವಿಷ್ಯದ ದೃಷ್ಟಿಕೋನ ಮತ್ತು ಸಾಹಿತ್ಯದ ಜವಾಬ್ದಾರಿ:

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು ಇಂದು ಒಂದು ಪ್ರಬುದ್ಧ ಹಂತಕ್ಕೆ ಬಂದು ನಿಂತಿವೆ. ಆದರೆ ಹೊಸ ಕಾಲದ ಸವಾಲುಗಳು ಕೂಡ ಹೆಚ್ಚುತ್ತಿವೆ. ಜಾಗತೀಕರಣ, ಡಿಜಿಟಲ್ ಮಾಧ್ಯಮಗಳು ಮತ್ತು ಹೆಚ್ಚುತ್ತಿರುವ ಧಾರ್ಮಿಕ ಮೂಲಭೂತವಾದಗಳು ಮಹಿಳೆಯರ ಅಸ್ಮಿತೆಯ ಮೇಲೆ ಹೊಸ ದಾಳಿಗಳನ್ನು ನಡೆಸುತ್ತಿವೆ. ಅಂತಹ ಸಂದರ್ಭದಲ್ಲಿ ಸಾಹಿತ್ಯವು ಮಹಿಳೆಗೆ ಕೇವಲ ಅಭಿವ್ಯಕ್ತಿಯ ಮಾಧ್ಯಮವಾಗದೆ, ಅವಳ ಆತ್ಮರಕ್ಷಣೆಯ ಮತ್ತು ಹಕ್ಕುಗಳ ಹೋರಾಟದ ದಾರಿದೀಪವಾಗಬೇಕಿದೆ. ಮಹಿಳಾ ಸಾಹಿತ್ಯವು ಕೇವಲ ಹೆಣ್ಣಿನ ನೋವುಗಳ ಕಥೆಯಾಗದೆ, ಅದು ವ್ಯವಸ್ಥೆಯ ಬದಲಾವಣೆಯ ಮುನ್ನುಡಿಯಾಗಬೇಕಿದೆ. ಪುರುಷರೂ ಸಹ ಈ ಸಂವೇದನೆಗಳನ್ನು ತಮ್ಮದಾಗಿಸಿಕೊಂಡಾಗ ಮಾತ್ರ ನಿಜವಾದ ಸಾಮಾಜಿಕ ಬದಲಾವಣೆ ಸಾಧ್ಯ. ಸಾಹಿತ್ಯವು ಲಿಂಗಭೇದವಿಲ್ಲದ,ಜಾತಿ ಬೇಧವಿಲ್ಲದ ಸಮಾನತೆಯ ತಳಹದಿಯ ಮೇಲೆ ನಿರ್ಮಾಣವಾದಾಗ ಮಾತ್ರ ಅದಕ್ಕೆ ಸಾರ್ಥಕತೆ ದೊರೆಯುತ್ತದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಉಪಸಂಹಾರ:

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳ ಪಯಣವು ಬಹಳ ರೋಚಕ ಮತ್ತು ಸ್ಫೂರ್ತಿದಾಯಕವಾದ ಪಥವನ್ನು ಹೊಂದಿದೆ. ವಚನಕಾರ್ತಿಯರ ಆಧ್ಯಾತ್ಮಿಕ ಬಂಡಾಯದಿಂದ ಹಿಡಿದು, ತ್ರಿವೇಣಿಯವರ ಮನೋವೈಜ್ಞಾನಿಕ ವಿಶ್ಲೇಷಣೆ, ಸಾರಾ ಅಬೂಬಕ್ಕರ್ ಅವರ ಸಾಮಾಜಿಕ ಸುಧಾರಣೆ ಮತ್ತು ಎಂ.ಎಸ್. ಆಶಾದೇವಿಯವರ ವಿಮರ್ಶಾತ್ಮಕ ದೃಷ್ಟಿಯವರೆಗೆ ಮಹಿಳೆಯರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ. ಇಂದಿನ ಮಹಿಳಾ ಬರಹಗಾರರು ಪಿತೃಪ್ರಧಾನ ವ್ಯವಸ್ಥೆಯ ಒಳಗಿನ ಸಂಕೀರ್ಣತೆಗಳನ್ನು ಬಿಡಿಸಿಡುತ್ತಾ, ಒಂದು ನ್ಯಾಯಯುತ ಸಮಾಜದ ಕನಸನ್ನು ಕಾಣುತ್ತಿದ್ದಾರೆ. ಕನ್ನಡ ಸಾಹಿತ್ಯವು ಈ ಮೂಲಕ ಜಾಗತಿಕ ಸ್ತ್ರೀವಾದಿ ಚಿಂತನೆಗಳಿಗೆ ತನ್ನದೇ ಆದ ವಿಶಿಷ್ಟ ದೇಸೀ ಕೊಡುಗೆಯನ್ನು ನೀಡುತ್ತಾ ಬಂದಿದೆ. ಈ ಸಂಶೋಧನಾ ವರದಿಯು ಕನ್ನಡ ಸಾಹಿತ್ಯದ ಮಹಿಳಾ ದನಿಗಳು ಹೇಗೆ ಕೇವಲ ಸಾಹಿತ್ಯವಾಗದೆ, ಒಂದು ಜೀವಂತ ಚಳವಳಿಯಾಗಿ ರೂಪುಗೊಂಡಿವೆ ಎಂಬುದನ್ನು ಸಾಕ್ಷೀಕರಿಸುತ್ತದೆ.

ಪರಾಮರ್ಶನ ಗ್ರಂಥಗಳು :

1. ಅಕ್ಕಮಹಾದೇವಿ ಮತ್ತು ಜೇಡರ ದಾಸಿಮಯ್ಯನವರ ವಚನಗಳ ಪರಾಮರ್ಶೆ
2. ಮಹಿಳಾ ಸಾಹಿತ್ಯ ಸಂಪುಟ-ಕಾವ್ಯ, ಪ್ರ. ಸಂ. ಡಾ. ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - 2020
3. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ-ಸಂ: ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ
4. ಸ್ತ್ರೀವಾದ ಒಂದು ಅವಲೋಕನ - ಬಿ. ಎನ್. ಸುಮಿತ್ರಾಬಾಯಿ,ಅಹರ್ನಿಶಿ ಪ್ರಕಾಶನ-2018
5. ಸ್ತ್ರೀಮತವನುತ್ತರಿಸಲಾಗದೆ?, ಎಂ.ಎಸ್.ಆಶಾದೇವಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಕರ್ನಾಟಕ
6. ಮಹಿಳಾ ಸಾಹಿತ್ಯ ಮತ್ತು ಸಂಶೋಧನೆ, ಡಾ. ಶಕುಂತಲಾ ಸಿ ದುರಗಿ,ಸಮನ್ವಯ ಪ್ರಕಾಶನ, ಕಲಬುರಗಿ-2019
7. ಸ್ತ್ರೀವಾದಿ ಚಿಂತನೆ, ಮಲ್ಲಿಕಾ ಘಂಟಿ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,2020
8. ಆಧುನಿಕ ಮಹಿಳಾ ಸಾಹಿತ್ಯ ಇನ್ನಷ್ಟು ಪುಟಗಳು – ಸಂ: ಡಾ. ಎಂ. ಉಷಾ
9. ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ-ಲತಾ ಗುತ್ತಿ ,ವಿಜಯಪುರ ವಿಶ್ವವಿದ್ಯಾನಿಲಯ, ವಿಜಯಪುರ-2011
10. ಮಹಿಳಾ ಸಾಹಿತ್ಯ ರತ್ನಗಳು,ವಿಜಯಲಕ್ಷ್ಮಿ ಶಿವಕುಮಾರ ಕೌಟಗೆ,ಸಪ್ನ ಬುಕ್ ಹೌಸ್, ಬೆಂಗಳೂರು
11. ಮಹಿಳಾ ಸ್ವಾತಂತ್ರ್ಯ : ಶರಣರ ನಿಲುವುಗಳು, ಎಸ್. ಎಂ. ಜಾಮದಾರ,2018

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ನಾಗಚಂದ್ರನ “ ರಾಮಚಂದ್ರ ಚರಿತ ಪುರಾಣಂ’’ ಕಾವ್ಯವು ಪುಷ್ಟಿಗೊಳ್ಳುವಲ್ಲಿ ಪೋಷಕ ಪಾತ್ರಗಳ ಪಾತ್ರ

ಕಮಲಾಪುರ ಇಂದ್ರಾಬಾಯಿ
ಭೀಮಸೇನ ಸಂಶೋಧನಾ ವಿದ್ಯಾರ್ಥಿ
ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಧಾರವಾಡ
ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ಹಂಪಿ

Manuscript ID:
JRD -2026-180526
ISSN: 2230-9578
Volume 18
Issue 5(IV)
Pp. 107-110
April- 2026
Submitted: 13 Apr. 2026
Revised: 28 Apr.2026
Accepted: 13 May. 2026
Published: 31 May. 2026

ಕನ್ನಡ ಸಾಹಿತ್ಯ ಲೋಕದಲ್ಲಿ 'ಅಭಿನವ ಪಂಪ' ಎಂದೇ ಪ್ರಖ್ಯಾತನಾದ ನಾಗಚಂದ್ರನ "ರಾಮಚಂದ್ರ ಚರಿತ ಪುರಾಣ" ವು ಜೈನ ಧರ್ಮದ ಹಿನ್ನಲೆಯಲ್ಲಿ ರಚಿತವಾದ ಮಹಾಕಾವ್ಯ. ಮೂಲ ರಾಮಾಯಣಕ್ಕಿಂತ ಭಿನ್ನವಾದ ಆಯಾಮಗಳನ್ನು ಹೊಂದಿರುವ ಈ ಕಾವ್ಯವು ಪಾತ್ರಗಳ ವಿಶ್ಲೇಷಣೆಯ ದೃಷ್ಟಿಯಿಂದ ಅತ್ಯಂತ ಸಮೃದ್ಧವಾಗಿವೆ. ಒಂದು ಸುಂದರವಾದ ಹಾರದಲ್ಲಿ ಮುತ್ತುಗಳು ಹೇಗೆ ಪೋಣಿಸಲ್ಪಟ್ಟಿರುತ್ತವೆಯೋ ಹಾಗೆಯೇ ಈ ಮಹಾಕಾವ್ಯದ ಮುಖ್ಯ ಕಥಾ ಹಂದರಕ್ಕೆ ಪುಷ್ಟಿ ನೀಡಲು ನಾಗಚಂದ್ರನು ಅನೇಕ ವೈವಿಧ್ಯಮಯ ಪೋಷಕ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಪೋಷಕ ಪಾತ್ರಗಳು ಕೇವಲ ಕಥೆಯನ್ನು ಮುನ್ನಡೆಸುವ ಸಾಧನಗಳಾಗಿವೆಯಷ್ಟೇ ಉಳಿಯದೆ ಕಾವ್ಯದ ಜೀವನಾಡಿಗಳಾಗಿ ಕೆಲಸ ಮಾಡುತ್ತವೆ. ಈ ಕಾವ್ಯದಲ್ಲಿ ಬರುವ ದಶರಥ, ಭರತ, ಹನುಮ, ಮಂಡೋದರಿ, ಸುಗ್ರೀವ ಮುಂತಾದ ಪಾತ್ರಗಳು ಕಥೆಯ ಸಂಘರ್ಷ, ನಾಟಕೀಯತೆ ಮತ್ತು ಭಾವನಾತ್ಮಕ ತೀವ್ರತೆಯನ್ನು ಹೆಚ್ಚಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಪೋಷಕ ಪಾತ್ರಗಳ ವ್ಯಕ್ತಿತ್ವ, ಅವುಗಳ ಕಾರ್ಯ ವೈಖರಿ ಮತ್ತು ಕಾವ್ಯದ ಸಮಗ್ರತೆಗೆ ಅವು ನೀಡುವ ಕೊಡುಗೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಪುರುಷ ಪ್ರಧಾನ ಪೋಷಕ ಪಾತ್ರಗಳು

- **ದಶರಥ**

ಇಕ್ಷ್ವಾಕು ವಂಶದಲ್ಲಿ ಪ್ರಸಿದ್ಧ ಅರಸರಲ್ಲಿ ಅನರಣ್ಯನು ಕೂಡಾ ಒಬ್ಬರು. ಇವರಿಗೆ ಅನಂತರಥ ಮತ್ತು ದಶರಥ ಎಂಬ ಇಬ್ಬರು ಮಕ್ಕಳಿದ್ದರು. ಕಾಲಾನಂತರದಲ್ಲಿ ಅನರಣ್ಯನು ಜೀವನದಲ್ಲಿ ಜಿಗುಪ್ಸೆಗೊಂಡು ತನ್ನ ಹಿರಿಯ ಮಗ ಮತ್ತು ತಾನು ದೀಕ್ಷೆ ತೆಗೆದುಕೊಂಡು ಒಂದು ತಿಂಗಳ ಮಗುವಾದ ದಶರಥನಿಗೆ ಪಟ್ಟವನ್ನು ಕಟ್ಟಿದರು. ದಶರಥ ಧರ್ಮದಿಂದಲೂ, ಶೌರ್ಯದಿಂದಲೂ ರಾಜ್ಯ ಪರಿಪಾಲನೆ ಮಾಡುತ್ತ ಅಪರಾಜಿತೆ, ಸುಮಿತ್ರೆ, ಸುಪ್ರಭೆ ಎಂಬ ಮೂವರು ಪಟ್ಟ ಮಹಿಷಿಯರೊಡನೆ ಸುಖದಿಂದ ಇದ್ದನು. ಒಂದು ದಿನ ಕೌತುಕ ಮಂಗಳ ಪುರದ ರಾಜ ಕನ್ಯೆಯಾದ ಕೈಕೆಯನ್ನು ವಿವಾಹವಾದನು. ಕೆಲವು ಕಾಲಾನಂತರ ಅಪರಾಜಿತೆ ರಾಮನಿಗೆ, ಸುಮಿತ್ರೆ ಲಕ್ಷ್ಮಣನಿಗೆ, ಕೈಕೆ ಭರತನಿಗೆ, ಸುಪ್ರಭೆ ಶತ್ರುಘ್ನನಿಗೆ ಜನ್ಮ ನೀಡಿದರು. ಹೀಗೆ ಸುಖ ಸಂತೋಷದಿಂದ ರಾಜ್ಯ ಭಾರ ಮಾಡಲು ತನ್ನ ರಾಜ್ಯದ ಉತ್ತರಾಧಿಕಾರಿಯಾಗಿ ರಾಮನನ್ನು ಮಾಡಲು ಇಚ್ಛಿಸಿ ಎಲ್ಲರಿಗೂ ವಿಷಯ ತಿಳಿಸಿದನು. ಅದಕ್ಕೆ ಕೈಕೆ ವಿರೋದ ವ್ಯಕ್ತಪಡಿಸಿ ಎರಡು ವರಗಳನ್ನು ಬೇಡಿದಳು.

Quick Response Code:
Website: https://jrdrvb.org/
DOI: 10.5281/zenodo.20993715
OPEN ACCESS

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಕಮಲಾಪುರ ಇಂದ್ರಾಬಾಯಿ ಭೀಮಸೇನ ಸಂಶೋಧನಾ ವಿದ್ಯಾರ್ಥಿ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ ಧಾರವಾಡ

How to cite this article:
ಕಮಲಾಪುರ ಇಂದ್ರಾಬಾಯಿ. (2026). ನಾಗಚಂದ್ರನ " ರಾಮಚಂದ್ರ ಚರಿತ ಪುರಾಣಂ" ಕಾವ್ಯವು ಪುಷ್ಟಿಗೊಳ್ಳುವಲ್ಲಿ ಪೋಷಕ ಪಾತ್ರಗಳ ಪಾತ್ರ. Journal of Research & Development, 18(5(IV)), 107–110. https://doi.org/10.5281/zenodo.20993715.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಇದರಿಂದ ಸಾಕಷ್ಟು ದು:ಖಕ್ಕೊಳಗಾದ ದಶರಥ ಮಹಾರಾಜನು ಮನಸ್ಸಿಲ್ಲದಿದ್ದರೂ ಕೈಕೆಗೆ ವರವನ್ನು ನೀಡಿದನು. ಇದರ ಪ್ರಕಾರ ರಾಮನು ಹದಿನಾಲ್ಕು ವರ್ಷ ಕಾಡಿಗೆ ಮತ್ತು ಭರತನಿಗೆ ಪಟ್ಟ ಕಟ್ಟಲು ಒಪ್ಪಿದನು. ರಾಮನು ವನವಾಸಕ್ಕೆ ಹೋದ ಮೇಲೆ ತಂದೆ ದಶರಥ ದೀಕ್ಷೆ ತೆಗೆದುಕೊಂಡರು. ಜೈನ ಸಂಪ್ರದಾಯದ ಹಿನ್ನೆಲೆಯಲ್ಲಿ ಮೂಡಿಬಂದ ಈ ಕಾವ್ಯದಲ್ಲಿ ದಶರಥನು ಒಬ್ಬ ಅರಸನಾಗಿ ಉಳಿಯದೇ, ಸಂಸಾರವನ್ನು ಜಯಿಸಿದ ಮಹಾನ್ ವೈರಾಗಿಯಾಗಿ ಕಂಡು ಬರುತ್ತಾನೆ.

- **ಭರತ**

ಭರತನ ತಾಯಿ ಕೈಕೆ, ಕನಕರಾಜನ ಮಗಳನ್ನು ಶುಭ ಮಹೂರ್ತದಲ್ಲಿ ಬಹಳ ವೈಭವದಿಂದ ಭರತನಿಗೆ ಮದುವೆ ಮಾಡಿಸಿದರು. ರಾಮನಿಗೆ ಪಟ್ಟವನ್ನು ಕಟ್ಟಿ ದಶರಥ ಮಹಾರಾಜನು ತಪಸ್ಸಿಗೆ ಹೋಗಬೇಕೆಂದು ನಿರ್ಧರಿಸಿದನು. ಆದರೆ ತಾಯಿ ಕೈಕೆ, ದಶರಥನ ಬಳಿ ಬೇಡಿದ ವರಗಳ ಬಗ್ಗೆ ಭರತನು ತನ್ನ ತಾಯಿ ತಪ್ಪು ಕೆಲಸ ಮಾಡಿದಳು ಎಂದು ನೊಂದುಕೊಂಡನು. ರಾಮನು ಭರತನಿಗೆ ರಾಜ್ಯ ಪಟ್ಟವನ್ನು ಕಟ್ಟಲು ಒಪ್ಪಿಕೊಂಡಾಗ, ಭರತನು ಕಿರಿಯನಾದ ತಾನು ಹಿರಿಯನ ರಾಜ್ಯ ಬಯಸುವುದು ತಕ್ಕುದ್ದಲ್ಲ ಎಂದು ಹೇಳಿ ನಿರಾಕರಿಸಿದ. ಆದರೆ ರಾಮನ ಮಾತಿಗೆ ಅಂದರೆ ಅಣ್ಣನ ಮಾತಿಗೆ ವಿಧೇಯನಾಗಿರು ಎಂದು ತಂದೆ ಹೇಳಿದಾಗ ಒಪ್ಪಿಕೊಂಡು ಸುಮ್ಮನಾದನು. ವನವಾಸ ಮುಗಿಸಿ ರಾಮನು ಅಯೋಧ್ಯೆಗೆ ಬರುತ್ತಾನೆ, ರಾಮನಿಗೆ ರಾಜ್ಯವನ್ನು ಒಪ್ಪಿಸಿ ಜೈನ ಮುನಿಯಾಗಿ ದೀಕ್ಷೆ ಪಡೆಯುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ. ಈ ಕಾವ್ಯದಲ್ಲಿ ಭರತ ಕೇವಲ ಒಬ್ಬ ಆದರ್ಶ ಸಹೋದರನಷ್ಟೇ ಅಲ್ಲ, "ಸಂಸಾರ ಮೋಹವನ್ನು ಗೆದ್ದ ವೈರಾಗಿ" ಯಾಗಿ ಕಂಗೊಳಿಸುತ್ತಾನೆ.

- **ಹನುಮ**

ಹನುಮನ ಪಾತ್ರವು ಓದುಗರಿಗೆ ತಮ್ಮ ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಲು ಮತ್ತು ಅಡೆತಡೆಗಳನ್ನು ಜಯಿಸಲು ಪ್ರೇರೆಪಿಸುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ. ರಾವಣನ ಸಾಮಾಜ್ಯದ ರಾಜಧಾನಿಯಾದ ಲಂಕೆಗೆ ಹೋಗಲು ಹನುಮನೇ ಎಂದು ಸುಗ್ರೀವನು ನಿರ್ಧರಿಸಿದನು. ಆಗ ಶ್ರೀರಾಮನು ಸೀತೆಗೆ ಕೊಡಲು ರವಿಮಂಡಲವನ್ನು ಮತ್ತು ಆಕೆಯ ಹತ್ತಿರವಿರುವ ಚೂಡಾಮಣಿಯನ್ನು ತರಲು ಹೇಳುತ್ತಾನೆ. ಈ ಕಾವ್ಯದಲ್ಲಿ ಹನುಮ ಬ್ರಹ್ಮಚಾರಿ ಅಲ್ಲ. ಅವನು ಸೀತೆಯನ್ನು ಅನೇಕ ಸಾಹಸ ಮತ್ತು ಜಲವರ್ಷ ವಿದ್ಯೆಯ ಮೂಲಕ ಭೇಟಿ ಮಾಡಿ ಶ್ರೀರಾಮ ನೀಡಿದ್ದ ಮುದ್ರೆ ಉಂಗುರ ನೀಡಿ ಸೀತೆಗೆ ನಮಸ್ಕರಿಸಿ ಚೂಡಾಮಣಿಯನ್ನು ತಂದು ರಾಮನಿಗೆ ಕೊಡುತ್ತಾನೆ. ನಂತರ ಶ್ರೀರಾಮ, ಲಕ್ಷ್ಮಣ, ಸುಗ್ರೀವ, ಅಂಗದ, ನಳ, ನೀಲ, ಹನುಮ ಎಲ್ಲರೂ ಲಂಕೆಗೆ ಮುತ್ತಿಗೆ ಹಾಕಿ ಸೀತೆಯನ್ನು ಕಾಪಾಡುತ್ತಾರೆ. ಶ್ರೀ ರಾಮ ಅಯೋಧ್ಯೆಗೆ ಮರಳಿದ ಕೆಲವು ದಿನಗಳ ಮೇಲೆ ಶ್ರೀ ಪರ್ವತ ನಗರವನ್ನು ಹನುಮಂತನಿಗೆ ನೀಡಿ ರಾಜ್ಯಾಭೀಷೇಕ ಮಾಡುತ್ತಾನೆ. ಹನುಮನ ಧೈರ್ಯ, ಪರಿಶ್ರಮ, ಶಕ್ತಿ ಮತ್ತು ಶ್ರದ್ಧಾಪೂರ್ವಕ ಸೇವೆಯಿಂದಾಗಿ ಹನುಮಂತನನ್ನು ನಿಸ್ವಾರ್ಥತೆ ಮತ್ತು ನಿಷ್ಠೆಯ ಪರಿಪೂರ್ಣ ಸಂಕೇತವೆಂದು ಪರಿಗಣಿಸಲಾಗಿದೆ.

- **ಸುಗ್ರೀವ**

ವಾಲಿ, ಸುಗ್ರೀವ ಮತ್ತು ಶ್ರೀ ಪ್ರಭೆ ಸೂರ್ಯಜನ ಮಕ್ಕಳು. ಕೆಲವು ಕಾಲ ಕಳೆದ ಮೇಲೆ ಸೂರ್ಯಜನು ವಾಲಿ ಸುಗ್ರೀವರಿಗೆ ಅಧಿರಾಜ ಯುವರಾಜ ಪದವಿಯಲ್ಲಿ ನಿಲ್ಲಿಸಿ ಸೂರ್ಯಜನು ದೀಕ್ಷೆಗೊಂಡನು. ಸುಗ್ರೀವನ ಹೆಂಡತಿ ಸುತಾರೆ, ಆದರೆ ಅಣ್ಣನ ದೆಸೆಯಿಂದ ಸತಿ ವಿಯೋಗದಿಂದ ವ್ಯಥೆ ಪಡುತ್ತಿದ್ದನು. ಸುಗ್ರೀವನು ಶ್ರೀ ರಾಮನೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡನು. ಒಪ್ಪಂದದ ಪ್ರಕಾರ ಮಾಯಾ ಸುಗ್ರೀವನನ್ನು ಶ್ರೀ ರಾಮನು ಕೊಂದನು. ಕಪಿಧ್ವಜನಾದ ಸುಗ್ರೀವನು ರಾಮಲಕ್ಷ್ಮಣರನ್ನು ಮರ್ಯಾದೆಯೊಡನೆ ಕಿಷ್ಕಿಂದಪುರಕ್ಕೆ ಕರೆದುಕೊಂಡು ಹೋಗಿ ಸತ್ಕರಿಸಿ ತನ್ನ ಹನ್ನೆರಡು ಹೆಣ್ಣು ಮಕ್ಕಳನ್ನು ರಾಮನಿಗೆ ಮದುವೆ ಮಾಡಿ ಕೊಟ್ಟನು. ಮತ್ತು ಸೀತೆಯನ್ನು ಹುಡುಕಲು ರಾಮನಿಗೆ ಸಹಾಯ ಮಾಡುತ್ತಾನೆ. ರಾವಣನ ವಿರುದ್ಧದ ಯುದ್ಧದಲ್ಲಿ ರಾಮನಿಗೆ ಬೆಂಬಲವಾಗಿ ನಿಂತು ಜಯ ಗಳಿಸಲು ಕಾರಣನಾಗುತ್ತಾನೆ ಮತ್ತು ಕಿಷ್ಕಿಂದನಗರದ ರಾಜನಾಗುತ್ತಾನೆ ಒಟ್ಟಾರೆಯಾಗಿ ಸುಗ್ರೀವನು ರಾಮಾಯಣದಲ್ಲಿ ಧೈರ್ಯ, ನಿಷ್ಠೆ ಮತ್ತು ಸಹಾಯದ ಸಂಕೇತವಾಗಿ ನಿಲ್ಲುತ್ತಾನೆ.

- **ಪ್ರಭಾಮಂಡಲ**

ಈ ಕಾವ್ಯದಲ್ಲಿ ಪ್ರಭಾಮಂಡಲ ಪಾತ್ರವು ಅತ್ಯಂತ ಕುತೂಹಲಕಾರಿ ಮತ್ತು ಭಾವನಾತ್ಮಕ ವಾದುದು. ಪ್ರಭಾಮಂಡಲನು ಸೀತೆಯ ಅಣ್ಣ. ಜನಕ ಮಹಾರಾಜ ಮತ್ತು ವಿಧೇಹಿಯ ಪುತ್ರನಾಗಿ ಜನಿಸಿದ. ಇವನು ಸೀತೆಯ ಜೊತೆಯಲ್ಲೇ ಹುಟ್ಟಿದ ಅವಳಿ ಸೋದರ. ಪೂರ್ವ ಜನ್ಮದ ವೈರತ್ವದಿಂದ ಒಬ್ಬ ನಿಶಾಚರ ಇವರಿಗೆ ಹುಟ್ಟಿದ ಗಂಡು ಮಗುವನ್ನು ಕೊಲ್ಲಲು ತೆಗೆದುಕೊಂಡು ಹೋಗುತ್ತಾನೆ. ಅದು ಇಂದುಗತಿ ಎಂಬ ಅರಸನಿಗೆ ಸಿಗಲು ಅವನು ಆ ಮಗುವಿಗೆ ಪ್ರಭಾಮಂಡಲ ಎಂದು ಹೆಸರಿಡುತ್ತಾನೆ. ಬೆಳೆದು ದೊಡ್ಡವನಾದ ಮೇಲೆ ಸೀತೆಯನ್ನು ತಂಗಿ ಎಂದು ತಿಳಿಯದೇ ಮದುವೆ ಆಗಲು ಇಚ್ಛಿಸುತ್ತಾನೆ. ಆದರೆ ಒಬ್ಬ ಜೈನಮುನಿ ಬಳಿ ತನ್ನ ಪೂರ್ವ ವೃತ್ತಾಂತವನ್ನು ತಿಳಿದುಕೊಳ್ಳುತ್ತಾನೆ. ಇದರಿಂದ ಇಂದುಮತಿ ಅವನಿಗೆ ರಾಜ್ಯವನ್ನು ಒಪ್ಪಿಸಿ ದೀಕ್ಷೆ ಪಡೆದುಕೊಳ್ಳುತ್ತಾನೆ. ನಂತರ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪ್ರಭಾಮಂಡಲ ಜನಕನ ರಾಜ್ಯವನ್ನು ಚಿಕ್ಕಪ್ಪನಿಗೆ ಒಪ್ಪಿಸುತ್ತಾನೆ. ನಂತರ ಕಷ್ಟಕಾಲದಲ್ಲಿ ರಾಮನಿಗೆ ಒಬ್ಬ ಆಪ್ತಮಿತ್ರನಾಗಿ ಬೆಂಬಲ ನೀಡುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿ ಕಾಣಿಸದ ಈ ಪಾತ್ರ ಈ ಕಾವ್ಯದ ಇಡೀ ಕಥಾ ಹಂದರಕ್ಕೆ ಅತ್ಯಂತ ರೋಚಕ ಮತ್ತು ಮಹತ್ವದ ತಿರುವು ನೀಡಿದ ಅದ್ಭುತ ಪಾತ್ರವಾಗಿದೆ.

ಮಹಿಳಾ ಪ್ರಧಾನ ಪೋಷಕ ಪಾತ್ರಗಳು:

- **ಅಪರಾಜಿತೆ**

ಅಪರಾಜಿತೆ ದಶರಥ ಮಹಾರಾಜನ ಹಿರಿಯ ಪತ್ನಿ, ಒಂದು ದಿನ ರಾತ್ರಿ ಆಕೆ ಮಲಗಿರುವಾಗ ಆನೆ, ಸಿಂಹ, ಸೂರ್ಯ, ಚಂದ್ರ ಇವನ್ನು ಕಂಡಂತೆ ಕನಸು ಬಿದ್ದಿತು. ಆಕೆ ಆ ಕನಸನ್ನು ಗಂಡನಿಗೆ ತಿಳಿಸಲು ಈ ಶುಭ ಸ್ವಪ್ನದಿಂದ ಚಕ್ರವರ್ತಿಯಾಗುವ ಮಗನು ಆಕೆಯ ಉದರದಲ್ಲಿ ಹುಟ್ಟುವನೆಂದು ಹೇಳಿದನು. ಕಾಲಾಂತರದಲ್ಲಿ ಆಕೆ ರಾಮನಿಗೆ ಜನ್ಮವನ್ನು ನೀಡಿದಳು. ಆದರೆ ರಾಮ ವನವಾಸಕ್ಕೆ ಹೋದ ಸಂದರ್ಭದಲ್ಲಿ ಅಪರಾಜಿತೆ ಅವನ ನೆನಪಿನಲ್ಲಿ ಕಣ್ಣೀರು ಹಾಕುತ್ತ ಮಗನಿಗಾಗಿ ಹಂಬಲಿಸುತ್ತಿದ್ದಳು. ಅವಳ ದು:ಖ ನಾರದರ ಮೂಲಕ ಲಂಕೆಯಲ್ಲಿರುವ ರಾಮ ಲಕ್ಷ್ಮಣರಿಗೆ ತಿಳಿಯಿತು. ಅವರು ಪುಷ್ಪಕ ವಿಮಾನವೇರಿ ಅಯೋಧ್ಯೆಗೆ ಬಂದು ಅಪರಾಜಿತೆಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆಯುತ್ತಾರೆ. ನಂತರ ಅವಳು ಐಹಿಕ ಸುಖಗಳನ್ನು ತ್ಯಜಿಸಿ ಆಧ್ಯಾತ್ಮಕದ ಕಡೆಗೆ ಮುಖ ಮಾಡುತ್ತಾಳೆ.

- **ಕೈಕೆ**

ಜೈನ ರಾಮಾಯಣದ ಪ್ರಕಾರ ಕೈಕೆಯಿಯು ಕೇವಲ ದಶರಥನ ಸುಂದರ ಪತ್ನಿಯಲ್ಲ, ಅವಳು ಯುದ್ಧಭೂಮಿಯಲ್ಲಿ ದಶರಥನಿಗೆ ನೆರವಾದ ಶೂರ ಮಹಿಳೆ. ದಶರಥನು ಯುದ್ಧವೊಂದರಲ್ಲಿ ಸಂಕಷ್ಟದಲ್ಲಿದ್ದಾಗ, ಕೈಕೆಯಿಯು ರಥವನ್ನು ಚಾಣಾಕ್ಷತನದಿಂದ ನಡೆಸಿ ಅವನ ಪ್ರಾಣ ಉಳಿಸುತ್ತಾಳೆ. ಈ ಸಾಹಸಕ್ಕೆ ಮೆಚ್ಚಿ ದಶರಥನು ಅವಳಿಗೆ ಎರಡು ವರಗಳನ್ನು ನೀಡುತ್ತಾನೆ. ಒಂದು ದಿನ ದಶರಥನು ರಾಮನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದಾಗ ಕೈಕೆಯಿಯು ದಶರಥನಿಗೆ ತನಗೆ ನೀಡಿದ್ದ ಎರಡು ಹಳೆಯ ವರಗಳನ್ನು ನೆನಪಿಸಿ ಕೇಳುತ್ತಾಳೆ. ಒಂದು ತನ್ನ ಮಗ ಭರತನಿಗೆ ಪಟ್ಟವನ್ನು ಕಟ್ಟಬೇಕು. ಎರಡು ರಾಮನು ವನವಾಸಕ್ಕೆ ಹೋಗಬೇಕು. ಮನಸ್ಸಿಲ್ಲದಿದ್ದರೂ ದಶರಥ ಮಹಾರಾಜ ಒಪ್ಪಲು ರಾಮ ತನ್ನ ಚಿಕ್ಕ ತಾಯಿಯ ಆಸೆಯನ್ನು ಒಪ್ಪಿಕೊಂಡು ಕಾಡಿಗೆ ಹೋಗುತ್ತಾನೆ. ತಾಯಿ ಮಾಡಿದ ಕೃತ್ಯವನ್ನು ಭರತನು ಖಂಡಿಸಿದಾಗ ಕೈಕೆಯಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಮುಂದಿನ ದಿನಗಳಲ್ಲಿ ಅವಳು ಕೂಡಾ ವೈರಾಗ್ಯದ ಹಾದಿ ಹಿಡಿಯುತ್ತಾಳೆ. ಹೀಗೆ ನಾಗಚಂದ್ರನು ಕೈಕೆಯಿಯನ್ನು ಸಂಪೂರ್ಣ ತಪ್ಪು ಪಾತ್ರವಾಗಿ ಚಿತ್ರಿಸದೆ ಮಾನವ ಸಹಜ ದೌರ್ಬಲ್ಯ ಮತ್ತು ತಾಯಿಯ ಮಮತೆಗೆ ಸಿಲುಕಿದ ಒರ್ವ " ದುರಂತ ನಾಯಕಿ'' ಯಂತೆ ಚಿತ್ರಿಸಿದ್ದಾನೆ.

- **ಚಂದ್ರನಖಿ**

ಪ್ರತಿ ವಾಸುದೇವನಾದ ರಾವಣನ ತಂಗಿ ಚಂದ್ರನಖಿ. ಪಾತಾಳ ಲಂಕೆಯ ಪುರದರಸ ಖರನ ಹೆಂಡತಿ. ಇವರಿಗೆ ಶಂಭುಕ ಮತ್ತು ಸುಂದರ ಎಂಬ ಮಕ್ಕಳಿದ್ದಾರೆ. ಅವರಲ್ಲಿ ಶಂಭುಕನನ್ನು ಅಕಸ್ಮಾತಾಗಿ ಗೊತ್ತಿಲ್ಲದೆ ಲಕ್ಷಣನು ಖಡ್ಗದಿಂದ ಅವನನ್ನು ಸಂಹರಿಸುತ್ತಾನೆ. ಮಗನ ಸಾವಿಗೆ ನೊಂದು ಚಂದ್ರನಖಿ ನ್ಯಾಯ ಕೇಳಲು ಶ್ರೀರಾಮನ ಬಳಿ ಬರುತ್ತಾಳೆ. ಶೋಕವನ್ನು ಮರೆತು ರಾಮಲಕ್ಷ್ಮಣರ ಸೌಂದರ್ಯವನ್ನು ಕಂಡು ಮರಳಾಗುತ್ತಾಳೆ. ಅವಳನ್ನ ಮದುವೆಯಾಗುವಂತೆ ರಾಮಲಕ್ಷ್ಮಣರಿಗೆ ಪ್ರಾರ್ಥಿಸುತ್ತಾಳೆ. ಇದನ್ನು ತಿರಸ್ಕರಿಸಿದ ರಾಮ ಲಕ್ಷ್ಮಣರ ವಿರುದ್ಧ ತನ್ನ ಪತಿ ಖರ ಮತ್ತು ರಾವಣನ ಬಳಿ ಹೋಗಿ ದೂರುತ್ತಾಳೆ. ಸೀತೆಯ ಸೌಂದರ್ಯವನ್ನು ವರ್ಣಿಸಿ ರಾವಣನಿಗೆ ಅವಳ ಮೇಲೆ ಮೋಹ ಹುಟ್ಟುವಂತೆ ಮಾಡುತ್ತಾಳೆ. ರಾಮ ರಾವಣರ ನಡುವೆ ಯುದ್ಧಕ್ಕೆ ಮುನ್ನುಡಿ ಬರೆಯುತ್ತಾಳೆ. ನಾಗಚಂದ್ರನು ಚಂದ್ರನಖಿಯ ಪಾತ್ರದ ಮೂಲಕ ' ಮೋಹ ಮತ್ತು ಸೇಡು ಮನುಷ್ಯನ ಜೀವನವನ್ನು ಹೇಗೆ ವಿನಾಶದತ್ತ ಕೊಂಡೊಯುತ್ತವೆಯೆಂಬುದನ್ನು ತೋರಿಸಿದ್ದಾನೆ.

- **ಮಂಡೋದರಿ**

ಮಂಡೋದರಿಯ ಪಾತ್ರವು ಅತ್ಯಂತ ಘನತೆಯಿಂದ ಕೂಡಿದ ಮತ್ತು ಆದರ್ಶಪ್ರಾಯವಾದ ಸ್ತ್ರೀ ಪಾತ್ರವಾಗಿದೆ. ಅಪ್ರತಿಮ ಸೌಂದರ್ಯವತಿ ಮತ್ತು ಬುದ್ಧಿವಂತೆಯಾದ ಮಂಡೋದರಿ ರಾವಣನ ಪಟ್ಟದರಸಿ. ರಾವಣನು ಸೀತೆಯನ್ನು ಅಪಹರಿಸಿ ತಂದಾಗ ಮಂಡೋದರಿ ಅದನ್ನು ತೀವ್ರವಾಗಿ ವಿರೋಧಿಸುತ್ತಾಳೆ. ಸೀತೆಯನ್ನ ಮರಳಿ ರಾಮನಿಗೆ ಒಪ್ಪಿಸು ಮತ್ತು ಅವನೊಂದಿಗೆ ಶಾಂತಿ ಸ್ಥಾಪಿಸಲು ಸಲಹೆ ನೀಡುತ್ತಾಳೆ. ಆದರೆ ರಾವಣ ಅವಳ ಮಾತನ್ನು ಕೇಳುವುದಿಲ್ಲ. ಆದರೂ ಮಂಡೊದರಿ ರಾವಣನ್ನು ಆಳವಾಗಿ ಪ್ರೀತಿಸುತ್ತಾಳೆ. ಮತ್ತು ಅವನಿಗೆ ಯಾವಾಗಲೂ ಒಳ್ಳೆಯದನ್ನೇ ಬಯಸುತ್ತಾಳೆ. ಪತಿಯ ತಪ್ಪುಗಳನ್ನು ತಿದ್ದಲು ಪ್ರಯತ್ನಿಸಿದರೂ, ಕೊನೆಯವರೆಗೂ ಅವಳು ಅವನ ಹಿತವನ್ನೆ ಬಯಸುವ ನಿಷ್ಠಾವಂತ ಪತ್ನಿ. ಅವಳು ರಾವಣನಿಗೆ ಒಳ್ಳಯ ಮಾರ್ಗವನ್ನು ತೋರಿಸಲು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪ್ರಯತ್ನಿಸುತ್ತಾಳೆ. ಆದರೆ ಅವನ ದುರಹಂಕಾರ ಮತ್ತು ಕೆಟ್ಟ ಆಲೋಚನೆಗಳು ಅವನ ಅವನತಿಗೆ ಕಾರಣವಾಗುತ್ತವೆ. ಇಲ್ಲಿ ಅವಳ ಪಾತ್ರವು ಧರ್ಮನಿಷ್ಠೆ, ಪ್ರೀತಿ ಮತ್ತು ಪತಿವ್ರತಾ ಧರ್ಮವನ್ನು ಎತ್ತಿ ಹಿಡಿಯುತ್ತದೆ.

- **ವಿಶಲ್ಯ ಸೌಂದರಿ**

ದ್ರೋಣ ಮೇಘನ ಮಗಳು ವಿಶಲ್ಯ ಸೌಂದರಿ. ದ್ರೋಣ ಮೇಘನ ಹೆಂಡತಿಯು ಅನೇಕ ವ್ಯಾಧಿಗಳಿಂದ ಪೀಡಿತಗಳಾಗಿರುವಾಗ ಗರ್ಭವನ್ನು ಧರಿಸಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಲು ಅವಳ ವ್ಯಾಧಿಯು ನಾಶವಾಗುತ್ತದೆ. ಈ ಕಾರಣದಿಂದ ಆ ಕೂಸಿಗೆ ವಿಶಲ್ಯ ಸೌಂದರಿ ಎಂಬ ಹೆಸರನ್ನು ಇಡುತ್ತಾರೆ. ಆ ಮಗುವಿನ ಮಜ್ಜನ ಜಲದಿಂದ ತನ್ನ ದೇಶವೆಲ್ಲವೂ ವ್ಯಾಧಿ ರಹಿತವಾಗಿದೆ ಎಂದು ದ್ರೋಣ ಮೇಘನು ಅತಿಚಂದ್ರನಿಗೆ ಹೇಳುತ್ತಾನೆ. ಈ ವಿಷಯವನ್ನು ತಿಳಿದ ರಾಮನು ಮೂರ್ಛೆ ಹೋದ ಲಕ್ಷ್ಮಣನನ್ನು ಕಾಪಾಡಲು ಆ ಜಲವನ್ನು ತರಿಸಲು ಹೇಳುತ್ತಾನೆ. ಆಗ ದ್ರೋಣ ಮೇಘ ತನ್ನ ಮಗಳನ್ನೇ ಲಕ್ಷ್ಮಣನನ್ನು ಕಾಪಾಡಲು ಕಳುಹಿಸಿ ಕೊಡುತ್ತಾನೆ. ಅವಳ ಕರ ಸ್ಪರ್ಶದಿಂದ ಲಕ್ಷ್ಮಣನಿಗೆ ಪ್ರಜ್ಞೆ ಬರುತ್ತದೆ. ಮತ್ತು ಅವನು ವಿಶಲ್ಯಸೌಂದರಿಯನ್ನು ಮದುವೆ ಆಗುತ್ತಾನೆ. ಸೌಂದರ್ಯವು ಕೇವಲ ಆಕರ್ಷಣೆ ಅಲ್ಲ ಅದು ಲೋಕ ಕಲ್ಯಾಣಕ್ಕಾಗಿ ಬಳಕೆಯಾಗಬೇಕು ಎಂಬುದಕ್ಕೆ ಈ ಪಾತ್ರ ಉದಾಹರಣೆ.

ನಾಗಚಂದ್ರನ "ರಾಮಚಂದ್ರ ಚರಿತ ಪುರಾಣಂ" ಕಾವ್ಯವು ಕೇವಲ ರಾಮ ರಾವಣರ ಯುದ್ಧದ ಕಥೆಯಲ್ಲ. ಇದು ವೈವಿಧ್ಯಮಯ ಪೋಷಕ ಪಾತ್ರಗಳ ಮೂಲಕ ಜೀವನದ ನೈತಿಕ ಸಂಘರ್ಷಗಳನ್ನ ಅನಾವರಣಗೊಳಿಸುವ ಮಹೋನ್ನತ ಕೃತಿ. ಇಲ್ಲಿನ ಪೋಷಕ ಪಾತ್ರಗಳು ಕೇವಲ ನೆರಳಿನಂತೆ ಬಂದು ಹೋಗದೆ ಕಥೆಯ ಪ್ರತಿ ಹಂತದಲ್ಲೂ ತಮ್ಮದೇ ಆದ ವಿಶಿಷ್ಟ ಅಸ್ತಿತ್ವನ್ನು ಉಳಿಸಿಕೊಂಡಿದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ರನ್ನ ಚಿತ್ರಿಸಿದ ಅತ್ತಿಮಬ್ಬೆ

ಡಾ.ಸೋಮನಗೌಡ ಭೂಮನಗೌಡ್ರ
Guest Lecturer, GFGC Kundagol
Mail – Sgouda416@gmail.com

Manuscript ID:
JRD -2026-180527
ISSN: 2230-9578
Volume 18
Issue 5(IV)
Pp. 111-113
April- 2026
Submitted: 12 Apr. 2026
Revised: 28 Apr.2026
Accepted: 13 May. 2026
Published: 31 May. 2026

ಭೂಮಿಯ ಮೇಲೆ ಇರುವಂತಹ ಪ್ರತಿಯೊಬ್ಬರು ಒಂದಿಲ್ಲೊಂದು ರೀತಿಯಲ್ಲಿ ಮತ್ತೊಬ್ಬರಿಗೆ ಸಹಾಯ ಸಹಕಾರವನ್ನು ಮಾಡಿತ್ತಿರುತ್ತಾರೆ. ಅಂದರೆ ಮಾತ್ರ ಎಲ್ಲಾ ರೀತಿಯ ಕ್ರಿಯೆಗಳು ಸರಳವಾಗಿ ನಡೆಯುತ್ತವೆ. ಅಂತಹದರಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ದೆಯಿ ಎಂದು ಬಂದವರಿಗೆ ರಕ್ಷಣೆಯನ್ನು ನೀಡುವಂತಹ ಪುಣ್ಯಕಾರ್ಯ ಮತ್ತೊಂದಿಲ್ಲ ಹಾಗಾಗಿಯೇ ಜಗತ್ತಿನ ಎಲ್ಲ ಸಂಸ್ಕೃತಿ, ಸಂಪ್ರದಾಯಗಳಲ್ಲಿ ಭಾರತೀಯ ಸಂಸ್ಕೃತಿ ಸಂಪ್ರದಾಯ ಜನಪ್ರಿಯವಾಗಿರುವುದರಿಂದ ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗೆ ಭಾರತೀಯ ಚರಿತ್ರೆಯನ್ನು ನೋಡುತ್ತಾ ಹೋದಾಗ ಇಂತಹ ಹಲವು ರೀತಿಯ ಸಂಗತಿಗಳು ಗೋಚರಿಸುತ್ತವೆ. ಇವುಗಳೇ ಮುಂದಿನ ಪಿಳಿಗೆಗೆ ಮೌಲ್ಯವನ್ನು ಪ್ರಸಾರ ಮಾಡುತ್ತಲಿವೆ. ರಾಜರು ಪ್ರಜಾಪಾಲನೆ, ಪ್ರಜಾರಕ್ಷಣೆಯೇ ಧರ್ಮವೆಂದು ಅದುವೆ ದೈವವೆಂದು ಪಾಲಿಸುತ್ತಾ ಬಂದಿದ್ದಾರೆ. ಇಷ್ಟೇ ಅಲ್ಲದೇ ವಿದ್ವಾಂಸರು, ಪಂಡಿತರು, ಪುರೋಹಿತರಿಗೆ ಆಶ್ರಯವನ್ನು ನೀಡಿ ಅವರಿಂದ ಸ್ವಾಸ್ಥ್ಯ ಸಮಾಜಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಕವಿಗಳು ಕೂಡಾ ತಮ್ಮ ಕೃತಿತಗಳಲ್ಲಿ ಆಶ್ರಯದಾತರನ್ನು ಕೀರ್ತಿಸಿ ಅಜರಾಮರ ಗೊಳಿಸಿದ್ದಾರೆ. ಕನ್ನಡ ಸಾಹಿತ್ಯ ರತ್ನತ್ರಯರಲ್ಲಿ ಒಬ್ಬನೂ ಕವಿ ಚಕ್ರವರ್ತಿಗಳಲ್ಲಿ ಎರಡನೇಯವಾದ ರನ್ನನು ತನ್ನ ಅಜಿತನಾಥ ಪುರಾಣದಲ್ಲಿ ಆಶ್ರಯದಾತೆಯಾದ ಅತ್ತಿಮಬ್ಬೆಯನ್ನು ಕುರಿತು ಮೊದಲ ಆಶ್ವಾಸದ ಮತ್ತು ಕೊನೆಯ ಆಶ್ವಾಸದ ಕೇಲವು ಪದ್ಯಗಳಲ್ಲಿ ಚಿತ್ರಿಸಿ ಧರೆಯಲ್ಲಿ ಪೂಜನೀಯಳನ್ನಾಗಿಸಿದ್ದಾರೆ. ಈ ಅಜಿತನಾಥ ಪುರಾಣದಲ್ಲಿ ರನ್ನನು ಎರಡನೇಯ ತೀರ್ಥಂಕರನಾದ ಅಜಿತನಾಥ ಮತ್ತು ಎರಡನೇಯ ಚಕ್ರವರ್ತಿಯಾದ ಸಗರ ರಾಜನನ್ನು ಕುರಿತು ಹೇಳುವಾಗ ಜಿನ ಭಕ್ತೆಯಾದ ಅತ್ತಿಮಬ್ಬೆಗೆ ಪ್ರಧಾನ ಸ್ಥಾನವನ್ನು ಕಲ್ಪಿಸಿ ಧನ್ಯನಾಗಿದ್ದಾನೆ.

ಅತ್ತಿಮಬ್ಬೆಯ ಹಿನ್ನೆಲೆಯನ್ನು ಹೇಳುವಾಗ ಯಾವುದೇ ಊಹೆಗೆ ಅವಕಾಶವನ್ನು ಕೊಡದೆ ರನ್ನನು ನೇರವಾಗಿ ಇವಳ ತವರುಮನೆಯ ಪರಿಚಯವನ್ನು ಸಮುದ್ರದಿಂದ ಆವೃತವಾದ ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನಲ್ಲಿ ಜಗತ್ತತಿಲಕನಾದಂತಹ ನಾಗಮಯ್ಯನೆಂಬಾತನಿದ್ದನೆಂದು ಇವಳಪೂರ್ವಜರ ಪರಿಚಯವನ್ನು ಒಂದೇ ಪದ್ಯದಲ್ಲಿ ಹೇಳಿ ಮುಗಿಸಿದ್ದಾನೆ. ಆತನಿಗೆ ಮಲ್ಲಪ್ಪಯ್ಯ ಮತ್ತು ಪೊನ್ನಮಯ್ಯ ಎಂಬ ವೀರಪುತ್ರರಿದ್ದರು. ಮಲ್ಲಪ್ಪಯ್ಯನು ವಿದ್ಯಾವಂತನಾಗಿ ತಂದೆಗೆ ವಿಧೇಯನಾಗಿ ಒಳ್ಳೆಯ ನಡತೆಯುಳ್ಳವನಾಗಿದ್ದನು. ಇವನ ತಮ್ಮ ಪೊನ್ನಮಯ್ಯನು ಅಣ್ಣನ ಭಕ್ತನಾಗಿ ಹಿರಿಯರ ಮಾತಿನಂತೆ ನಡೆದುಕೊಳ್ಳುತ್ತಿದ್ದನು. ಇವರಿಬ್ಬರು ಭೀಮಾರ್ಜುನ, ಲವಕುಶ, ರಾಮಲಕ್ಷ್ಮಣರಂತೆಯೇ ಅನ್ಯೋನ್ಯ ಸಹೋದರರಾಗಿದ್ದರೆಂದು ಕವಿಯು ಇವರನ್ನು ವರ್ಣಿಸಿದ್ದಾರೆ.

"ಗುರು ಜಿನಚಂದ್ರ ಮುನೀಂದ್ರರ
ಪರೋಕ್ಷದೊಳ್ ತಮ್ಮುತಿರ್ವರುಂ ಪೊನ್ನಗನಿಂ
ಬರೆಯಿಸಿದರ್ ಸಕಳೋರ್ವಿಗೆ
ಪರೆಯಿಸಿದರ್ ಸಲೆ ಪುರಾಣಚೂಡಾಮಣಿಯಂ"[1]

ಮಲ್ಲಪ್ಪಯ್ಯ ಮತ್ತು ಪೊನ್ನಮಯ್ಯರ ಗುರುಗಳಾದ ಜಿನಚಂದ್ರಮುನಿಂದ್ರರ ಆಜ್ಞೆಯಂತೆ ಪೊನ್ನ ಕವಿಯಿಂದ ಪುರಾಣ ಚೂಡಾಮಣಿಯನ್ನು (ಶಾಂತಿನಾಥ ಪುರಾಣ) ಬರೆಯಿಸಿ ಭೂಮಂಡಲದಲ್ಲೆಲ್ಲ ಪ್ರಸಾರ ಮಾಡಿಸಿದರು. ಹೀಗೆ ಇವರು ಜಿನನ ಭಕ್ತರಾಗಿ ಕವಿಗೆ ಮತ್ತು ಗುರುವಿಗೆ ಆಶ್ರಯವನ್ನು ನೀಡಿ ಅದರಿಂದಲೇ ಜೈನ ಧರ್ಮದ ಕ್ಷೇಯೋಭಿವೃದ್ಧಿ ಕ್ರಿಯೆಗಳನ್ನು ಕೈಗೊಂಡು ಜಗದುತ್ತಮರನಿಸಿ ಕೊಂಡರು. ಇಂತಹ ಜೈನ ಧರ್ಮದ ಅಭಿವೃದ್ಧಿ ಹರಿಕಾರರ ಪರಿಚಯವನ್ನು ಹೆಮ್ಮೆಯಿಂದ ವರ್ಣಿಸಿದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಸೋಮನಗೌಡ ಭೂಮನಗೌಡ್ರ Guest Lecturer, GFGC Kundagol

How to cite this article:
*ಡಾ.ಸೋಮನಗೌಡ ಭೂಮನಗೌಡ್ರ. **(2026).** ರನ್ನ ಚಿತ್ರಿಸಿದ ಅತ್ತಿಮಬ. Journal of Research & Development, 18(5(IV)), 111–113. https://doi.org/10.5281/zenodo.20994213*

Quick Response Code:
Website: https://jrdrvb.org/
DOI: 10.5281/zenodo.20994213
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಮಲ್ಲಪ್ಪಯ್ಯನನ್ನು ಅಪ್ರತಿಮ ಕುಲದೀಪಕರನೂ, ಅಸಹಾಯ ಉತ್ಸಾಹದಿಂದ ಕೂಡಿರುವಂತಹ ಆಶ್ರಿತರನು ವಜ್ರದ ಕೋಟೆಯಂತೆ ರಕ್ಷಿಸಿಸುವವನು. ಕಾಡಾನೆಗಳ ಸಮೂಹಕ್ಕೆ ಸಿಂಹಪ್ರಾಯನಾಗಿಯೂ ಸ್ವಾಮಿಪ್ರಿಯನೂ ಅಭಿನವ ಕೃಪಾಚಾರ್ಯನೂ, ತ್ರಿಕಾಲ ಜ್ಞಾನಿಯಾಗಿರುವಂತವನೂ, ಜೈನಧರ್ಮದ ರತ್ನತ್ರಯಗಳನ್ನು ಪಾಲಿಸತಕ್ಕವನು. ಭೂಲೋಕ ಪ್ರಸಿದ್ಧ ಮುನಿಗಳಾದ ಜಿನಚಂದ್ರರ ಪರಮಶಿಷ್ಯನಾಗಿ ಚಾಲುಕ್ಯರ ಆಭರಣದಂತಿರುವನು. ವಲ್ಲದೇವನ ಸಾಮ್ರಾಜ್ಯಲಕ್ಷ್ಮೀಯ ವಿಸ್ತರಣೆಗೆ ಕಾರಣನಾದವನು ಆತನ ಮುಂತಾದ ವಿಶೇಷಗಳೆಲ್ಲವನು ಸವಿಸ್ತರವಾಗಿ ವರ್ಣಿಸಿದ್ದಾನೆ.

ಈ ಮಲ್ಲಪ್ಪಯ್ಯನಿಗೆ ಹೆಂಡತಿ ಅಪ್ಪಕಬ್ಬೆಯಾಗಿದ್ದಳು. ಇವರಿಗೆ ಐದು ಜನ ಗಂಡು ಮಕ್ಕಳು ಮೂರು ಜನ ಹೆಣ್ಣು ಮಕ್ಕಳು ಇದ್ದರು. ಈ ಮೂರು ಜನ ಹೆಣ್ಣು ಮಕ್ಕಳಲ್ಲಿ ಕವಿವರ ಕಾಮಧೇನು, ಜಿನಧರ್ಮ ಪತಾಕೆ, ಮಹಾಸತಿ ಕುಲತಿಲಕೆ ಎಂಬ ಕೀರ್ತಿವಂತಳಾದ ಅತ್ತಿಮಬ್ಬೆ ಪತಿವ್ರತಾ ಗುಣಶೋಭಿತಳಾದ ಗುಂಡುಮಬ್ಬೆ ಇವರನ್ನು ಚಾಲುಕ್ಯ ಚಕ್ರವರ್ತಿ ನೂರ್ಮಡಿ ತೈಲಪನ ಮಹಾಮಂತ್ರಿ ಧಲ್ಲಪನ ಹಿರಿಯ ಮಗನಾದ ಒರಟರಮಲ್ಲ, ನಾಗದೇವನಿಗೆ ಕೊಟ್ಟ ವಿವಾಹ ಮಾಡಿದರು. ಅತ್ತಿಮಬ್ಬೆಗೆ ಪಡೆಪಳ ತೈಲನೆಂದೂ ವಿನಯಾಲಂಕಾರನೆಂದೂ ಪ್ರಸಿದ್ಧನಾದ ವಿಜಯಲಕ್ಷ್ಮಿಯನ್ನು ವರಿಸಿ ವೈಭವದಲ್ಲಿಯೇ ದೇವಲೋಕವನ್ನು ಸೇರುವ ಉತ್ಸುಕತೆಯಿಂದಾಗಿ ನಾಗದೇವನು ಸ್ವರ್ಗಸ್ಥನಾದನು. ಆಗ ಅತ್ತಿಮಬ್ಬೆಯ ಜೀವನದಲ್ಲಿ ಉತ್ಸಾಹಕ್ಕೆ ತೆರೆಬಿದ್ದಿತು.

" ನಿನಗೆ ಮಗಂ ಜಗತ್ತಿಲಕ ನಿರ್ದಪನಕ್ಕ ಮಗಂ ಸಮರ್ಥನ
ಪ್ಪಿನಮಿರು ನಾಗದೇವನೊಡನಾಂ ಬೇಸಕೇಳ್ದಪೆನೆಂದು ಬೇಡಿಕೊಂ
ಡಿನಿಯನನಪ್ಪಿಕೊಂಡು ಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತ
ಸಜ್ಜನಿಕೆಯ ಪೆಂಪು ಸಜ್ಜನಿಕೆ ಬಣ್ಣಿಸೆ ಸಂದುದು ಗುಂಡುಮಬ್ಬೆಯಾ"[2]

ಪತಿ ಸ್ವರ್ಗಸ್ಥನಾದಾಗ ಕುಲವಧು ಮಾಡುವಂತಹ ಕಾರ್ಯವಾದ ಸಹಗಮನವನ್ನು ಮಾಡುವೆನೆಂದು ಗುಂಡುಮಬ್ಬೆ ಹೇಳುವಳು ಆಗ ಅತ್ತಿಮಬ್ಬೆಯು ಒಪ್ಪದಿದ್ದಾಗ ನಿನಗೆ ಜಗತ್ತತಿಲಕನಾದ ಮಗನಿದ್ದಾನೆ ಅವನನ್ನು ಸಮರ್ಥವಾಗಿ ಬೆಳೆಸುವ ಜವಾಬ್ದಾರಿ ನಿನ್ನ ಮೇಲಿದೆ. ಹಾಗಾಗಿ ನಾನು ಪತಿಯೊಡನೆ ಚಿತಾಗ್ನಿಯನ್ನು ಅಪ್ಪಿಕೊಳ್ಳುತ್ತೇನೆ ಎಂದು ಚಿತೆಯನ್ನು ಪ್ರವೇಶಿಸಿ ಸಹಗಮನದಿಂದ ಪತಿಗೆ ತನ್ನನ್ನು ಸಮರ್ಪಿಸಿಕೊಂಡು 'ಮಹಾಸತಿ ಗುಂಡುಮಬ್ಬೆ'ಯಾಗಿ ಮೆರೆದಳು.

ಇತ್ತ ಅತ್ತಿಮಬ್ಬೆಯು ಕಠಿಣ ವ್ರತಗಳನ್ನು ಕೈಗೊಂಡು, ಧರ್ಮವನ್ನಾಚರಿಸುತ್ತಾ ಮಗನನ್ನು ಬೆಳೆಸಲೆಂದು ಮಾತ್ರ ಬದುಕಿದ್ದಳು ಇವಳಿಗೆ ಧರ್ಮಕಾರ್ಯಗಳಿಂದಲೇ ಮೋಕ್ಷ ಪ್ರಾಪ್ತಿಯೆಂದು ಭಾವಿಸಿ ಜಿನನ ಆರಾಧನೆಯಲ್ಲಿಯೇ ಕಾಲಕಳೆಯುತ್ತಿದ್ದಳು. ದೇಹವನ್ನು ಉಪವಾಸದಿಂದ ನಿಗ್ರಹಿಸಿ ತನ್ನ ಸಂಪತ್ತನ್ನು ಯಾವಾಗಲೂ ದಾನ ಧರ್ಮ ಮಾಡುತ್ತಲೇ ಸಮಾಜೋಪಕಾರವನ್ನು ಮಾಡುತ್ತಿದ್ದಳು.

ಉತ್ತಮ ಕುಲದಲ್ಲಿ ಜನಿಸಿದವಳೂ ಸದಾಚಾರ ಸಂಪನ್ನೆಯೂ, ವಿನಯವಂತೆಯು, ಇತರರನ್ನು ಗೌರವಿಸುವಂತಹ ಗುಣವುಳ್ಳವಳೇ ಅತ್ತಿಮಬ್ಬೆ ಇಂತಹವಳು ಜಗತ್ತ ಶ್ರೇಷ್ಠ ಪತಿವ್ರತೆಯರಾದ ಧರಣಿಸುತೆ ಸೀತೆ, ಪುಲೋಮಸುತೆ ಶಚಿದೇವಿ, ಪರ್ವತರಾಜನ ಮಗಳಾದ ಗಂಗೆ ಇವರೆಲ್ಲರು ಮಲ್ಲಪಸೂತೆ ಅತ್ತಿಮಬ್ಬೆಗೆ ಸಮಾನರೂ ಎಂದು ಪೌರಾಣಿಕ ಶ್ರೇಷ್ಠ ಮಹಿಳೆಯರ ಸಾಲಿಗೆ ಸೇರಿಸಿ ಇವಳ ಗುಣವನ್ನು ರನ್ನನು ಬಹು ಮನೋಜ್ಞವಾಗಿ ಹೊಗಳಿದ್ದಾನೆ.

ಜಗತ್ತಿನ ವಿದ್ವಾಂಸರಿಂದ ನಮಸ್ಕರಿಸಲ್ಪಡುವವಳು, ಧರ್ಮಾಚರಣೆಯಲ್ಲಿ ಪ್ರಮುಖಳಾದವಳು. ಶ್ರೇಷ್ಠ ಕವಿಗಳಿಗೆ ಕಾಮಧೇನುವಿನ ಹಾಗೆ ಕೇಳಿದ್ದನ್ನೆಲ್ಲಾ ದಯಪಾಲಿಸಿ, ಧರ್ಮ ಸಾಹಿತ್ಯವನ್ನು ಬೆಳೆಸುವುದೇ ಇವಳ ಸಂಕಲ್ಪವಾಗಿತ್ತು, ಇವಳು ಇಡಿ ಭೂಮಂಡಲದಲ್ಲೇ ಪೂಜ್ಯನೀಯವಾಗಿ ನಮಸ್ಕರಿಸುವಂತವಳಾಗಿದ್ದಳು.

ಜೈನ ತೀರ್ಥಂಕರರ ತಾಯಿಯು ಜಿನನನ್ನು ಗರ್ಭದಲ್ಲಿ ಒಂಬತ್ತು ತಿಂಗಳು ಮಾತ್ರ ಧರಿಸುತ್ತಾಳೆ. ಆದರೆ ಈ ಅತ್ತಿಮಬ್ಬೆಯು ಜಿನನನ್ನು ಮನಸ್ಸಿನಲ್ಲೇ ಧರಿಸುತ್ತಾಳೆ. ಜಿನನನ್ನು ತನ್ನ ಅವಸಾನದವರೆಗೂ ಪೂಜಿಸುತ್ತಾಳೆ. ಎಲ್ಲ ಜಿನರನ್ನು ತನ್ನ ಅಂತರಂಗದಲ್ಲಿ ಸ್ಥಾಪಿಸಿ ಆಧರನಿಯಳಾಗಿರುತ್ತಾಳೆ. ಇವಳಿಂದ ಜೈನಧರ್ಮದ ಪುಣ್ಯನೇ ಸರಿ ಅಂತವಳ ಆಶ್ರಯವನ್ನು ಪಡೆದ ತಾನೆ ಧನ್ಯನೆಂದು ಕವಿಯು ಸ್ಮರಿಸುತ್ತಾನೆ.

ಅತ್ತಿಮಬ್ಬೆಯ ಭಕ್ತಿಯು ಮಾಡುವಂತಹ ಧರ್ಮಕಾರ್ಯದಿಂದ ಮೋಕ್ಷಪ್ರಾಪ್ತಿಯಾಗಿತ್ತು. ಅಂತಹದರಲ್ಲಿ ಸಾವಿರದಾ ಐದನೂರು ಜಿನಪ್ರತಿಮೆಗಳನ್ನು ಮಾಡಿಸಿ ಹಂಚಿದ್ದರಿಂದ ನೂರ್ಮಡಿ ಪುಣ್ಯವು ಇವಳಿಗೆ ಪ್ರಾಪ್ತವಾಗಿ ಪ್ರಸಿದ್ಧಿಯನ್ನು ಪಡೆದಳು.

"ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತೆ ಪೋಗಿ ಕಾ
ಣ್ಯನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇರ ತಜ್ಜಿನಾ
ಸನ್ನಿದೊಳತ್ತಿಮಬ್ಬೆಗೆ ಪಥಶ್ರಮಮಾದುದು ಕಾಲ ವೃಷ್ಟಿಯಾ
ಯ್ತೆನ್ನದೊ ದೇವಭಕ್ತಿಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್"[3]

ಅತ್ತಿಮಬ್ಬೆಯು ದಕ್ಷಿಣ ಜೈನಕಾಶಿಯಾದ ಶ್ರವಣಬೆಳಗೊಳದ 57 ಅಡಿ ಎತ್ತರದ ಏಕಶಿಲಾ ಮೂರ್ತಿಯಾದ ಕುಕ್ಕುಟೇಶ್ವರನಾದ ಗೊಮ್ಮಟೇಶ್ವರನನ್ನು ನೋಡುವವರೆಗೂ ಅನ್ನ ನೀರು ಸೇವಿಸುವುದಿಲ್ಲ ಎಂದು ಶಪಥ ಮಾಡಿ ವಿಂಧ್ಯಗಿರಿಯನ್ನು ಏರುತ್ತಿರುವಾಗ ಇವಳ ಆಯಾಸವನ್ನು ಇನ್ನಷ್ಟು ಹೆಚ್ಚಿಸಿದನು. ಹೀಗೆ ಇವಳ ಭಕ್ತಿಗೆ ದೇವಲೋಕವೇ ಹಾಡಿ ಹರಿಸುತ್ತಿತ್ತು.

ಅತ್ತಿಮಬ್ಬೆಯು ಬರಿ ಒಬ್ಬ ಭಕ್ತೆಯಾಗದೇ ಇವಳೊಬ್ಬ ಶೂರ ಕಲಿಯಾಗಿದ್ದಳು. ಹಲವಾರು ಯುದ್ಧಗಳನ್ನು ಮುನ್ನಡಿಸಿ ಪ್ರಸಿದ್ಧಳಾಗಿದ್ದಳು. ಇಷ್ಟೇ ಅಲ್ಲದೆ ತನ್ನ ಎಲ್ಲ ಬೌದ್ಧಿಕ, ಮಾನಸಿಕ, ಭೌತಿಕ ಸಂಪತ್ತನ್ನೆಲ್ಲ ದಾನ ಮಾಡುವುದರಲ್ಲಿ ಶೂರಳಾಗಿದ್ದಳು.

ಶಿಲಾಂಕೃತೆಯು ಗುಣಮಾಲೆಕೃತವೂ ಆದ ಮಹಾಸತಿ ತೈಲಪನ ಜನನಿಯಾದ ಅತ್ತಿಮಬ್ಬೆಯ ಹೆಸರನ್ನು ಉಚ್ಚರಿಸುವ ಬಾಲೆಯರಿಗೆ ಯಾವುದೇ ರೀತಿ ಕಂಟಕ ಬರುವುದಿಲ್ಲ. ಇವಳ ಹೆಸರು ಸ್ಮರಿಸುವುದರಿಂದ ಪುಣ್ಯಪ್ರಾಪ್ತವಾಗಿ ಮೋಕ್ಷವು ದೊರಕುವುದು. ಅಂತಹ ಗುಣವಂತೆಯಾಗಿದ್ದವಳೇ ಈ ಅತ್ತಿಮಬ್ಬೆ ಎಂದು ಕವಿ ಹೊಗಳಿದ್ದಾನೆ.

"ಅಳುರದು ಕಿರ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮರೆಕೊಳ್ವದೆನಿಪ್ಪ ಜಸಕ್ಕೆ ನೋಂತ ಭೂ
ತಿಲಕಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ
ತಿಲಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವದು ಪುಣ್ಯಕಾರಣಂ"[4]

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಅತ್ತಿಮಬ್ಬೆ ದಾಸಿಸುವ ಧರೆಯಲ್ಲಿ ಕಿಚ್ಚು ಹರಡುವುದಿಲ್ಲ, ವಿಷಸರ್ಪಗಳು ಕಚ್ಚುವುದಿಲ್ಲ, ರಾಜ್ಯದ ಸಂಪತ್ತು ವೃದ್ಧಿಯಾಗುತ್ತಾ ಹೋಗುತ್ತದೆ. ಸಕಾಲದಲ್ಲಿ ಮಳೆ ಸುರಿಯುವುದರಿಂದ ಜನ–ಜಾನುವಾರಗಳು ಸುಖವಾಗಿರುತ್ತವೆ. ಇಂತಹ ಕೀರ್ತಿವಂತಳಾದವಳ ನಾಮಸ್ಮರಣೆಯಿಂದ ಪುಣ್ಯಪ್ರಾಪ್ತವಾಗುವುದು. ಈ ಎಲ್ಲ ವರ್ಣನೆಯಲ್ಲಿ ಪುರಾಣ ಸದೃಶ್ಯ ವ್ಯಕ್ತಿತ್ವವನ್ನು ಹೇಳಿದ್ದಾನೆ.

"ಬಿಳಿಯರಳೆಯಂತೆ ಗಂಗಾ
ಜಳದಂತೆ ತೇಸೆವಜಿತಸೇನಮುನಿಪತಿಯ ಗುಣಾ
ವಳಿಯಂತೆ ನೆಗಳ್ದ ಕೋಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ"[5]

ಅತ್ತಿಮಬ್ಬೆಯ ಚಾರಿತ್ರೆಯನ್ನು ರನ್ನ ತುಂಬಾ ಸಂಗ್ರಹವಾಗಿ, ಸಾಂಕೇತಿಕವಾಗಿ, ಗೌರವ ಪೂರ್ವಕವಾಗಿ ಚಿತ್ರಿಸಿದ್ದಾನೆ. 'ಬಿಳಿಯರಳೆ' ಎಂಬ ಹೋಲಿಕೆ ಅವಳ ಶುಭ್ರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಹಾಗಿದೆ. ಗಂಗಾಜಲದ ಹೋಲಿಕೆಯು ಪವಿತ್ರತೆಯನ್ನು, ಪಾವನತೆಯನ್ನು ತಿಳಿಸುತ್ತವೆ. ಅಜಿತಸೇನಮುನಿಗಳು ರನ್ನ ಮತ್ತು ಗಂಗರಾಜರ ಗುರುಗಳಾಗಿದ್ದರು ಅವರ ಗುಣಾವಳಿಯಂತೆ ಎನ್ನುವುದು ಅವಳ ಧಾರ್ಮಿಕ ಗುಣವನ್ನು ಎತ್ತಿ ತೋರಿಸುತ್ತದೆ. ಕೋಪಣ ಜೈನ ಧಾರ್ಮಿಕ ಕೇಂದ್ರ ಇಲ್ಲಿನ 'ಕೋಪಣಾಚಳದಂತೆ' ಎನ್ನುವ ಮಾತು ಶ್ರವಣಬೆಳಗೊಳದ ವಿಂಧ್ಯೆ ಗಿರಿಯನ್ನು ನೆನಪಿಗೆ ತರುತ್ತ ಪವಿತ್ರ ದೈವಿಕ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಹೀಗೆ ಈ ಪದ್ಯ ಇತಿಹಾಸ ಪ್ರಸಿದ್ಧವಾದ ಜೀವನವನ್ನು ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ.

ರನ್ನ ಕವಿಯು ತನಗೆ ಆಶ್ರಯದಾತೆ ಎನ್ನುವುದಕ್ಕಿಂತಲೂ ಜಿನನ ಪರಮಭಕ್ತೆ ಎನ್ನುವುದರಿಂದಲೇ ಅವಳ ಚರಿತ್ರಾ ವರ್ಣನೆಯನ್ನು ಅನಂತನಾಥನ ಚರಿತ್ರೆಯ ಹಾಗೇ ಸೃಷ್ಟಿಸಿರುವುದು ರನ್ನನ ನಿಷ್ಠೆಗೆ ಪ್ರತಿಕವಾಗಿ ಅತ್ತಿಮಬ್ಬೆಯನ್ನು ಕೃತಿಯಲ್ಲಿ ಜಿನನ ಕಥಾನಿರೂಪಣೆಯಲ್ಲಿಯೂ ಬಳಸಿರುವುದು ಆಶ್ರಯದಾತೆ ಎನ್ನುವುದಕ್ಕಿಂತಲೂ ಜೈನಧರ್ಮದ ಪೂಜನೀಯಳು ಎಂಬುದೆ ಪ್ರಮುಖವಾದಂತಹ ಕಾರಣವಾಗಿದೆ. ಇಷ್ಟೇ ಅಲ್ಲದೇ ಲಕ್ಕುಂಡಿಯ ಶಾಸನಗಳಲ್ಲಿಯೂ ಕೂಡಾ ವರ್ಣನಾ ಪದ್ಯಗಳಿಂದ ಜಗತ್ತಪ್ರಸಿದ್ಧಳಾಗಿದ್ದಾಳೆ.

ಅಡಿಟಿಪ್ಪಣಿಗಳು :

1. ರನ್ನ ವಿರಚಿತ ಅಜಿತತೀರ್ಥಂಕರ ಪುರಾಣಂ
   ಸಂ. – ಬಿ.ಎಸ್. ಸಣ್ಣಯ್ಯ, ರಾಮೇಗೌಡ
   ಪು – 57
2. ಅದೇ ಪು – 61
3. ಅದೇ ಪು – 63
4. ಅದೇ ಪು – 66
5. ಅದೇ ಪು– 265

ಪರಾಮರ್ಶನ ಗ್ರಂಥಗಳು

1. ರನ್ನ ವಿರಚಿತ ಅಜಿತತೀರ್ಥಂಕರ ಪುರಾಣಂ
   ಸಂ. – ಬಿ.ಎಸ್. ಸಣ್ಣಯ್ಯ, ರಾಮೇಗೌಡ
2. ರನ್ನ ಮತ್ತು ಆತನ ಕೃತಿಗಳು
   ಡಾ. ಎಂ ರಾಮಕೃಷ್ಣ
3. ರನ್ನ ಕವಿ ಕಾವ್ಯ ಪರಂಪರೆ
   ಸಂ – ವಿ. ಸೀತಾರಾಮಯ್ಯ
4. ಕನ್ನಡ ಸಾಹಿತ್ಯ ಚರಿತ್ರೆ
   ರಂ. ಶ್ರೀ. ಮುಗಳಿ
5. ಕನ್ನಡ ಸಾಹಿತ್ಯ ಚರಿತ್ರೆ
   ತ.ಸು. ಶಾಮರಾಯ
6. ರನ್ನ ಕವಿ ಪ್ರಶಸ್ತಿ
   ಕ.ಸಾ.ಪ
7. ಕಾವ್ಯಾನ್ವಯ ದರ್ಪಣ
   ಪ್ರೊ. ಎನ್. ಶಿವರುದ್ರಯ್ಯ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

'ಶಿಶುನಾಳ ಶರೀಫರ ತತ್ವಪದದಲ್ಲಿ ಮಾನವ ಜೀವನ ದರ್ಶನ'

ಡಾ.ಜಯದೇವ ಸಿರಳ್ಳಿ
ಕನ್ನಡ ಸಹ ಪ್ರಾದ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾವೇರಿ (ಗಾಂಧಿಪುರ)
Mail Id: siralli80@gmail.com

Manuscript ID:
JRD -2026-180528
ISSN: 2230-9578
Volume 18
Issue 5(IV)
Pp. 114-118
April- 2026
Submitted: 12 Apr. 2026
Revised: 28 Apr.2026
Accepted: 13 May. 2026
Published: 31 May. 2026

Abstract

ಕನ್ನಡನಾಡು ಶರಣರು, ದಾಸರು, ತತ್ವಪದಕಾರರು ಹಾಗೂ ಸರ್ವಧರ್ಮಿಯರೂ ಬದುಕಿ ಬಾಳಿದ ನಾಡು. ಇವರು ತಮ್ಮ ಬದುಕು, ಚಿಂತನೆ, ಸಾಹಿತ್ಯಗಳಿಂದ ಜನರ ಮೇಲೆ ಅಪಾರ ಪ್ರಭಾವ ಬೀರಿದರು. ಇವರಲ್ಲಿ 19ನೆಯ ಶತಮಾನದ ಕಳಸದ ಗುರು ಗೋವಿಂದ ಭಟ್ಟರ ಶಿಷ್ಯರಾದ ಶಿಶುನಾಳ ಷರೀಪರು ಪ್ರಮುಖರು. ಇವರ ಬದುಕು, ತತ್ವಪದಗಳು, ಧಾರ್ಮಿಕ ಭಾವೈಕ್ಯತೆ ಸಾಮರಸ್ಯದ ಸಮಾನತೆಗೆ ನಿದರ್ಶನಗಳಾಗಿವೆ. ಸಂತ ಶಿಶುನಾಳ ಷರೀಪರು ಕನ್ನಡ ಸಾಹಿತ್ಯದಲ್ಲಿ, ಅದರಲ್ಲೂ ಮುಖ್ಯವಾಗಿ ತತ್ವಪದ ಸಾಹಿತ್ಯದ ಪರಂಪರೆಯಲ್ಲಿ ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ಹೊಂದಿದ್ದಾರೆ. ಅವರು 'ಕರ್ನಾಟಕದ ಕಬೀರ' ಎಂದು ಪ್ರಸಿದ್ಧರಾಗಿದ್ದಾರೆ. ಅವರ ತತ್ವಪದ ಸಾಹಿತ್ಯವು ಕೇವಲ ಭಕ್ತಿಗೀತೆಗಳಾಗದೆ, ಮನುಷ್ಯ ಜೀವನದ ಜಟಿಲತೆಗಳು, ನಶ್ವರತೆ, ಆಧ್ಯಾತ್ಮಿಕ ಹುಡುಕಾಟ ಮತ್ತು ಸಾಮಾಜಿಕ ಸತ್ಯಗಳನ್ನು ಪ್ರತಿಬಿಂಬಿಸುವ ದಿವ್ಯದರ್ಶನವಾಗಿದೆ. ಶಿಶುನಾಳ ಶರೀಫರ ಸಾಹಿತ್ಯದಲ್ಲಿ ಕೇವಲ ಬಾಹ್ಯ ಆಚರಣೆಗಳಿಗೆ ಮಹತ್ವ ನೀಡದೆ, ಆಂತರಂಗದ ಶುದ್ಧತೆಗೆ ಹೆಚ್ಚು ಒತ್ತು ನೀಡಿದರು. ಅವರ ಸಾಹಿತ್ಯವು ಮನುಷ್ಯನಿಗೆ 'ಬಾಳು ಮತ್ತು ಬೆಳಗು' ಎರಡನ್ನೂ ಕಲಿಸುವ ಕನ್ನಡಿಯಾಗಿದೆ. ಲೌಕಿಕ ಬದುಕಿಗೆ ಅಂಟಿಕೊಳ್ಳದೆ, ಆಧ್ಯಾತ್ಮದ ಕಡೆಗೆ ಮುಖ ಮಾಡಿ, ಸಮಾನತೆಯಿಂದ ಬಾಳುವುದೇ ನಿಜವಾದ ಮಾನವ ಜೀವನದ ದರ್ಶನ ಎಂದು ಅವರು ತಮ್ಮ ಸಾಹಿತ್ಯದ ಮೂಲಕ ಸಾರಿದ್ದಾರೆ. ಶಿಶುನಾಳ ಶರೀಫರ ತತ್ವಪದ ಸಾಹಿತ್ಯದಲ್ಲಿ ಮುಖ್ಯವಾಗಿ ಮಾನವ ಜೀವನದ ನಶ್ವರತೆ ಮತ್ತು ಅನಿತ್ಯತೆ, ಆತ್ಮ ಸಾಕ್ಷಾತ್ಕಾರ ಮತ್ತು ಅಂತರಂಗದ ಅರಿವು, ಆಧ್ಯಾತ್ಮಿಕ ಒಳ ನೋಟಗಳು ಮತ್ತು ಯೋಗ ಮತ್ತು ಬದುಕಿನ ಸಿಹಿ–ಕಹಿಗಳ ಸಮಾನ ಅನುಭವದ ಮಾನವ ಜೀವನ ದರ್ಶನವನ್ನು ಕಾಣಬಹುದು.

Keywords:*ಶಿಶುನಾಳ ಶರೀಫರ ಜೀವನ, ತತ್ವಪದ, ಸಮಾನತೆ ಮತ್ತು ಭಾವೈಕ್ಯತೆ, ಆಧ್ಯಾತ್ಮ ಜೀವನ.*

ಪ್ರಸ್ಥಾವನೆ :

ಕನ್ನಡ ನಾಡು ಶರಣರು, ದಾಸರು, ತತ್ವಪದಕಾರರು ಹಾಗೂ ಸರ್ವಧರ್ಮಿಯರೂ ಬದುಕಿ ಬಾಳಿದ ನಾಡು. ಇವರು ತಮ್ಮ ಬದುಕು, ಚಿಂತನೆ, ಸಾಹಿತ್ಯಗಳಿಂದ ಜನರ ಮೇಲೆ ಅಪಾರ ಪ್ರಭಾವ ಬೀರಿದರು. ಇವರಲ್ಲಿ 19ನೆಯ ಶತಮಾನದ ಕಳಸದ ಗುರು ಗೋವಿಂದ ಭಟ್ಟರ ಶಿಷ್ಯರಾದ ಶಿಶುನಾಳ ಷರೀಪರು ಪ್ರಮುಖರು. ಇವರ ಬದುಕು, ತತ್ವಪದಗಳು, ಧಾರ್ಮಿಕ ಭಾವೈಕ್ಯತೆ ಸಾಮರಸ್ಯದ ಸಮಾನತೆಗೆ ನಿದರ್ಶನಗಳಾಗಿವೆ.

ಶಿಶುನಾಳ ಶರೀಫರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳ ಗ್ರಾಮದಲ್ಲಿ ಹುಲಗೂರಿನ ಸಂತ ಸೈಯದ್ ಹಜರತ್ ಶಾ ಖಾದ್ರಿಯವರ ವರಪ್ರಸಾದದಿಂದ 1819 ಜುಲೈ 3ರಂದು ಜನಿಸಿದರು. ತಂದೆ ಹಜರತ ಇಮಾಮ ಸಾಹೇಬರು, ತಾಯಿ ಹಜ್ಜುಮಾ. ಹುಲಗೂರಿನ ಖಾದ್ರಿಯವರೇ 'ಮೊಹಮ್ಮದ್ ಶರೀಫ್' ಎಂದು ಹೆಸರಿಟ್ಟರು. ಮುಂದೆ ಇದೇ ಹೆಸರಿಂದ 'ಶಿಶುನಾಳ ಶರೀಫ' ಎಂದೇ ಜನಪ್ರೀಯರಾದರು.

ಸಂತ ಶಿಶುನಾಳ ಶರೀಪರು ಕನ್ನಡ ಸಾಹಿತ್ಯದಲ್ಲಿ, ಅದರಲ್ಲೂ ಮುಖ್ಯವಾಗಿ ತತ್ವಪದ ಸಾಹಿತ್ಯದ ಪರಂಪರೆಯಲ್ಲಿ ಅತ್ಯಂತ ವಿಶಿಷ್ಟವಾದ ಸ್ಥಾನವನ್ನು ಪಡೆದ್ದಾರೆ. ಅವರು 'ಕರ್ನಾಟಕದ ಕಬೀರ' ಎಂದು ಪ್ರಸಿದ್ಧರಾಗಿದ್ದಾರೆ. ಅವರ ತತ್ವಪದ ಸಾಹಿತ್ಯವು ಕೇವಲ ಭಕ್ತಿಗೀತೆಗಳಾಗದೆ ಮನುಷ್ಯ ಜೀವನದ ಜಟಿಲತೆಗಳು, ನಶ್ವರತೆ, ಆಧ್ಯಾತ್ಮಿಕ ಹುಡುಕಾಟ ಮತ್ತು ಸಾಮಾಜಿಕ ಸತ್ಯಗಳನ್ನು ಪ್ರತಿಬಿಂಬಿಸುವ ದಿವ್ಯದರ್ಶನವಾಗಿದೆ. ಶಿಶುನಾಳ ಶರೀಫರ ತತ್ವಪದ ಸಾಹಿತ್ಯದಲ್ಲಿನ ಮುಖ್ಯವಾದ ಮಾನವ ಜೀವನ ದರ್ಶನವನ್ನು ಈ ರೀತಿ ವಿಶ್ಲೇಷಿಸಬಹುದು.

1. **ಮಾನವ ಜೀವನದ ನಶ್ವರತೆ ಮತ್ತು ಅನಿತ್ಯತೆ:**

ಶರೀಫರು ಈ ದೇಹವು ಶಾಶ್ವತವಲ್ಲ, ಆತ್ಮವಷ್ಟೇ ಸತ್ಯ ಎಂಬ ತತ್ವವನ್ನು ತತ್ವಪದದಲ್ಲಿ ಸರಳ ಜನಪದ ಸಾಹಿತ್ಯದಲ್ಲಿ ಹೇಳಿದ್ದಾರೆ. 'ಗುಡಿಯ ನೋಡಿರಣ್ಣ ದೇಹದ' ಎಂಬ ಗೀತೆಯಲ್ಲಿ ದೇಹವನ್ನು ಒಂದು ದೇವಾಲಯಕ್ಕೆ ಹೋಲಿಸಿ, ಅದರೊಳಗೆ ವಾಸಿಸುವಂತಹ ಆತ್ಮವನ್ನು ದೇವರೆಂದು ವಿವರಿಸಿದ್ದಾರೆ. ದೇಹವು ನಾಶವಾಗುವ ವಸ್ತು. ಆದ್ದರಿಂದ ಅದರ ಬಗ್ಗೆ ಅತಿಯಾದ ಮೋಹ ಇರಬಾರದು ಎಂಬ ಸಂದೇಶವನ್ನು ಸಾರಿದ್ದಾರೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಜಯದೇವ ಸಿರಳ್ಳಿ ಕನ್ನಡ ಸಹ ಪ್ರಾದ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾವೇರಿ (ಗಾಂಧಿಪುರ)

How to cite this article:
ಡಾ.ಜಯದೇವ ಸಿರಳ್ಳಿ , *(2026). 'ಶಿಶುನಾಳ ಶರೀಫರ ತತ್ವಪದದಲ್ಲಿ ಮಾನವ ಜೀವನ ದರ್ಶನ್ರ' Journal of Research & Development, 18(5(IV)), 114–118. https://doi.org/10.5281/zenodo.20994393*

Quick Response Code:
Website: https://jrdrvb.org/
DOI: 10.5281/zenodo.20994393
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

"ಗುಡಿಯ ನೋಡಿರಣ್ಣಾ ದೇಹದ
ಗುಡಿಯ ನೋಡಿರಣ್ಣಾ
ಗುಡಿಯ ನೋಡಿರಿದು
ಪೊಡವಿಗೆ ಒಡೆಯನು
ಅಡಗಿಕೊಂಡು ಕಡು ಬೆಡಗಿನೊಳಿರುತಿಹ
ನೋಡಿರಣ್ಣಾ"1

ಈ ದೇಹವೆಂಬ ದೇವಾಲಯವನ್ನು ನೋಡಿರಿ ಅಣ್ಣಂದಿರಾ, "ದೇಹವೇ ದೇಗುಲ ಪರಿಕಲ್ಪನೆಯ ಜೊತೆಗೆ ದೇಹದಲ್ಲಡಗಿದ ಕಡು ಬೆಳಗು ಅಂದರೆ ಆತ್ಮನ ನಿಲುವನ್ನು ತಿಳಿಸುತ್ತದೆ."2 ಇಲ್ಲಿ ಭೂಮಿಗೆ ಒಡೆಯನಾದ ಪರಮಾತ್ಮನು ಅತ್ಯಂತ ಚಾತುರ್ಯದಿಂದ ಶಿಲೆಯೊಳಗಿನ ಅಗ್ನಿಯಂತೆ, ಬೀಜದೊಳಗಿನ ವೃಕ್ಷದಂತೆ, ಜಲದೊಳಗಿನ ಪ್ರತಿಬಿಂಬದಂತೆ ಅಡಗಿಕೊಂಡಿದ್ದಾನೆ ಎಂದು ಶರೀಫರು ಹೇಳುತ್ತಾರೆ.

"ಮೂರು ಮೊನೆಯ ಕಲ್ಲು ಅದರೊಳು
ಜಾರುತಿರುವ ಕಲ್ಲು
ಧೀರ ನಿರ್ಗುಣನು ಸಾರ ಸಗುಣದಲಿ
ತೋರಿ ಅಡಗಿ ತಾ ಬ್ಯಾರ್ಯಾಗಿರುತಿಹ
ಗುಡಿಯ ನೋಡಿರಣ್ಣಾ"3

ಸಾಧಕನು ಪ್ರಾಣ, ಮನ, ದೃಷ್ಟಿಯನ್ನು ಒಂದಾಗಿಸಿ, ಭೂಮಧ್ಯ ಸ್ಥಾನದಲ್ಲಿ ಸ್ಥಿರವಾಗಿಸಿ ನಿಲ್ಲಿಸಿದಾಗ, ಆತನಿಗೆ ಬಿಂದುವಿನ ಒಳಗೆ ತ್ರಿಕೋನದ ದರ್ಶನವಾಗುತ್ತದೆ. ಈ ತ್ರಿಕೋನಕ್ಕೆ ಶರೀಫರು ಮೂರು ಮೊನೆಯ ಕಲ್ಲು ಎಂದು ಹೇಳುತ್ತಾರೆ. ಈ ತ್ರಿಕೋನಾಕಾರದ ಬ್ರಹ್ಮಯೋನಿ ಅತ್ಯಂತ ತೇಜಪೂರ್ಣವಾಗಿದೆ.ಇದರಲ್ಲಿ ನೀಲಜ್ಯೋತಿ ರೂಪದಿಂದ ಪರಮಾತ್ಮನು ಸ್ಥಿತನಾಗಿದ್ದಾನೆ. ಇದು ಜಾರುತಿರುವ ಕಲ್ಲು. ನಾಮರೂಪ ರಹಿತ ಸಚ್ಚಿದಾನಂದ ಸ್ವರೂಪನಾದ ನಿರ್ಗುಣ ಪರಮಾತ್ಮನು ಸಗುಣ ರೂಪಗಳಾದ ನಾದ, ಬಿಂದು, ಕಳೆಗಳ ರೂಪವಾಗಿ ತೋರಿ, ಪುನ: ಅಡಗಿ ಸಾಕ್ಷಿಯಾಗಿ, ತಾನು ಬೇರೆಯಾಗಿರುವ ಈ ದೇಹ ರೂಪ ದೇವಾಲಯವನ್ನು ನೋಡಿರಿ ಎಂದು ಹೇಳುತ್ತಾರೆ.

"ಆರು ಮೂರು ಕಟ್ಟಿ ಮೇಲಕೆ
ಏರಿದವನು ಘಟ್ಟಿ
ಭೇರಿ ಕಾಳಿ ಶಂಖ
ಭಾರಿ ಸುನಾದದಿ
ಮೀರಿದಾನಂದ ತೋರಿ ಹೊಳೆಯುತಿಹ
ಗುಡಿಯ ನೋಡಿರಣ್ಣಾ"4

ಗಗನ ತತ್ವದಿಂದಾದ ಎರಡು ಕಿವಿ, ಅಗ್ನಿ ತತ್ವದಿಂದಾದ ಎರಡು ಕಣ್ಣು, ಭೂತತ್ವದಿಂದಾದ ನಾಸಿಕದ ಎರಡು ರಂಧ್ರಗಳನ್ನು ಕರಶಾಖೆಗಳಾದ ಅಂಗುಷ್ಟ, ತೋರಬೆರಳು ಮತ್ತು ಮಧ್ಯದ ಬೆರಳುಗಳಿಂದ ಬಂಧಿಸುವ ಷಣ್ಮುಖಿ ಮುದ್ರೆಯಿಂದ ಆರು ಮೂರು ಬಂಧಿಸಿ ಮಾನಸಿಕವಾಗಿ ಪ್ರಾಣಸಹಿತವಾಗಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಚಕ್ರಗಳನ್ನು ಹತ್ತಿ ಕೂಟಸ್ಥದಲ್ಲಿ ನೆಲೆನಿಂತಾಗ ಭೇರಿ, ಕಾಳಿ, ಶಂಖ ಧ್ವನಿಗಳಿಗೆ ಹೋಲುವ ಅನಾಹತ ಪ್ರಣವ ಧ್ವನಿಯು ಜೋರಾಗಿ ಕೇಳಲಾರಂಭಿಸುತ್ತದೆ. ಆಗ ಅತ್ಯಂತ ಪ್ರಕಾಶಮಾನವಾದ ಬಿಂದುವು ತೋರಿ ಶ್ರೇಷ್ಠವಾದ ಆನಂದದ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಇಂತಹ ದೇಹವೆಂಬ ದೇವಾಲಯವನ್ನು ನೋಡಿರಿ ಅಣ್ಣಂದಿರಾ ಎನ್ನುತ್ತಾರೆ.

"ಸಾಗುತಿಹವು ದಿವಸ ಬಹುದಿನ
ಹೋಗಿ ಮಾಡಿ ವಾಸ
ಯೋಗಿ ರಾಜ ಶಿಶುನಾಳಧೀಶ ತಾ
ನಾಗಿ ಪರಾತ್ಪರ ಬ್ರಹ್ಮರೂಪನಿಹ
ಗುಡಿಯ ನೋಡಿರಣ್ಣಾ"5

ಯೋಗಿರಾಜನಾದ ನಾಡಿನ ಒಡೆಯನಾದ ಪರಬ್ರಹ್ಮನೇ ಈ ದೇಹವೆಂಬ ದೇವಸ್ಥಾನದಲ್ಲಿ ಕೂಟಸ್ಥ ಬ್ರಹ್ಮರೂಪವಾಗಿ ನೆಲೆಸಿದ್ದಾನೆ. ಆದ್ದರಿಂದ ಸಮಯವನ್ನು ವ್ಯರ್ಥ ಮಾಡದೆ ಬೇಗನೆ ಹೋಗಿ ತಮ್ಮ ದೇಹವೆಂಬ ದೇವಸ್ಥಾನದಲ್ಲಿ ಸಾಗಿ, ಬ್ರಹ್ಮನೊಡನೆ ಒಂದಾಗಿ ಜನ್ಮ ಸಾರ್ಥಕ ಮಾಡಿರಿ ಅಣ್ಣಂದಿರಾ ಎಂದು ಶರೀಫರು ಉಪದೇಶಿಸಿದ್ದಾರೆ.

2. ಆತ್ಮ ಸಾಕ್ಷಾತ್ಕಾರ ಮತ್ತು ಅಂತರಂಗದ ಅರಿವಿನ ಚಿತ್ರಣ:

ಮಾನವನು ಹೊರಗಿನ ಜಗತ್ತನ್ನು ಹುಡುಕುವ ಬದಲು ತನ್ನ ಅಂತರಂಗವನ್ನು ನೋಡಬೇಕೆಂಬುದು ಶರೀಫರ ಆಲೋಚನೆಯಾಗಿದೆ. 'ನಾನಾರೆಂಬುದು ನಾನಲ್ಲ, ಈ ಮಾನುಷ ಜನ್ಮವು ನಾನಲ್ಲ' ಎಂಬ ಪದಗಳಲ್ಲಿ ಅಹಂಕಾರವನ್ನು ತೊರೆದು, ನಿಜವಾದ ಆತ್ಮಸ್ವರೂಪವನ್ನು ಕಂಡುಕೊಳ್ಳುವ ಮಾರ್ಗವನ್ನು ತೋರಿಸಿ ಕೊಟ್ಟಿದ್ದಾರೆ.

"ನಾ ನಾರೆಂಬುದು ನಾನಲ್ಲ ಈ
ಮಾನುಷ ಜನ್ಮವು ನಾನಲ್ಲಾ

ನಾರಾಯಣ ಪರಬ್ರಹ್ಮ ಸದಾಶಿವ
ನೀ ಎನಿಸುವ ಗುಣ ನಾನಲ್ಲಾ"6

ನಾನೆಂಬ ಅಹಂಕಾರ ಆತ್ಮವಲ್ಲ ಎಂಬುದು ಈ ಪದದ ಗೂಢಾರ್ಥವಾಗಿದೆ. ನಾನು ನಾನು ಎನ್ನುವ ಅಹಂಕಾರವು ನಾನಲ್ಲ, ಈ ಮನುಷ್ಯ ಜನ್ಮವೇ ನಾನಲ್ಲ. ಸೃಷ್ಟಿ ಕಾರ್ಯ ಮಾಡುವ ಬ್ರಹ್ಮ, ಸೃಷ್ಟಿ ಸ್ಥಿತಿಯನ್ನು ಮಾಡುವ ವಿಷ್ಣು, ಸೃಷ್ಟಿ ಸ್ಥಿತಿ ಲಯವನ್ನು ಮಾಡುವವನು ಶಿವನು. ಇವರು ಮಾಯಾ ಉಪಾಧಿಯಿಂದ ಕೂಡಿ ಸೃಷ್ಟಿ ರಚನಾದಿ ಕ್ರಿಯೆಯನ್ನು ಮಾಡುತ್ತಾರೆ. ಆದ್ದರಿಂದ ಉಪಾಧಿಯನ್ನು ಹೊಂದಿದ ಇವರು ಹಾಗೂ ಇವರ ಸೃಷ್ಟಿ ರಚನಾದಿ ಗುಣಗಳು ನಾನಲ್ಲ.

"ಮಾತಾ ಪಿತ ಸುತ ನಾನಲ್ಲ
ಭೂನಾಥನಾದಾವ ನಾನಲ್ಲ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಜಾತಿ ಗೋತ್ರಗಳು ನಾನಲ್ಲಾ ಬಹು
ಪ್ರೀತಿಯ ಸತಿ ಸುತ ನಾನಲ್ಲಾ"7

ತಂದೆ ತಾಯಿಯಿಂದ ಹುಟ್ಟಿದ ಮಗನು ನಾನಲ್ಲ. ಭೂಮಿಗೆ ಒಡೆಯನಾದವನು ನಾನಲ್ಲ. ಜಾತಿ ಗೋತ್ರಗಳು ನಾನಲ್ಲ. ಅತ್ಯಂತ ಪ್ರೀತಿಯ ಹೆಂಡತಿ ಮಕ್ಕಳು ನಾನಲ್ಲ. ತಂದೆ ತಾಯಿಗಳಿಂದ ಹುಟ್ಟಿದ್ದು ಈ ಸ್ಥೂಲ ತನುವಿಗೆ. ಈ ತನುವಿನೊಳಗೆ ಇರವ ಸೂಕ್ಷ್ಮ ಹಾಗೂ ಕಾರಣ ಶರೀರಗಳಿಗೆ ಬೇರೆ ಬೇರೆ ಜನ್ಮದಲ್ಲಿ ಬೇರೆ ಬೇರೆ ಸ್ಥೂಲ ಶರೀರಗಳು ಪ್ರಾಪ್ತವಾಗುತ್ತವೆ. ಆಗ ಬೇರೆ ಬೇರೆ ತಂದೆ ತಾಯಿಗಳು, ಜಾತಿ ಗೋತ್ರಗಳು ಇರುತ್ತವೆ, ಹಾಗೂ ಹೆಂಡಿರು ಮಕ್ಕಳು ಬಹಳ ಮಂದಿ ಇರುತ್ತಾರೆ. ಸೂಕ್ಷ್ಮತೆಯ ಕಾರಣ ಶರೀರಗಳಿಗೆ ಜಾತಿ ಧರ್ಮಗಳಿಲ್ಲ. ಅಂದ ಮೇಲೆ ನಾನು ಸ್ಥೂಲ ಸೂಕ್ಷ್ಮ ಕಾರಣ ಮೂರೂ ಶರೀರಗಳಿಗಿಂತ ಬೇರೆಯಾದ ಸಾಕ್ಷಿ ಪ್ರತ್ಯಗಾತ್ಮನಿದ್ದೇನೆ. ನನಗೆಲ್ಲಿ ತಂದೆ ತಾಯಿ, ಹೆಂಡತಿ ಮಕ್ಕಳು, ಜಾತಿ ಗೋತ್ರಗಳು? ಎಂದು ಶರೀಫರು ಪ್ರಶ್ನಿಸುತ್ತಾರೆ.

"ವೇದ ಓದುಗಳು ನಾನಲ್ಲಾ
ವಾದ ಮಾಡಿದವ ನಾನಲ್ಲಾ
ನಾದ ಬಿಂದು ಕಳೆ ಭೇದ ವಸ್ತು ನಿಜ
ಬೋಧದಲ್ಲಿದ್ದವ ನಾನಲ್ಲಾ"8

ವೇದಗಳನ್ನು ಓದುವವನು ನಾನಲ್ಲ, ವಾದ ಮಾಡಿದವನು ನಾನಲ್ಲ, ನಾದ ಬಿಂದು ಕಳೆ ಭೇದ ನಿಜ ವಸ್ತು ಬೋಧದಲ್ಲಿದ್ದವನು ನಾನಲ್ಲ. ಅಂದರೆ ವೇದಗಳನ್ನು ಓದಿ, ವಾದ ಮಾಡಿ, ಸಾಧನೆಯಿಂದ ನಾದ ಬಿಂದು ಕಳೆಗಳನ್ನು ಸಾಕ್ಷಾತ್ಕಾರ ಮಾಡಿಕೊಂಡು, ತನ್ನ ನಿಜಾನುಸಂಧಾನವನ್ನು ಮಾಡುವವನು ಜೀವಾತ್ಮನು. ಈ ಜೀವನಿಗೆ ಸಾಕ್ಷಿಯಾದ ನಾನು ಜೀವಕ್ಕಿಂತ ಬೇರೆಯಾಗಿದ್ದೇನೆ. ಆದ್ದರಿಂದ ಜೀವನು ನಾನಲ್ಲ ಎಂದು ಹೇಳಿದ್ದಾರೆ.

"ನಾನಾಗಿ ನಡೆದವ ನಾನಲ್ಲಾ
ನಾ ಶಿಶುನಾಳಧೀಶನ ಬಿಡಲಿಲ್ಲಾ
ನಾ ಅಳಿಯದೆ ನಾ ತಿಳಿಯಲಾರದು
ನೀ ಎನಿಸುವ ಗುಣ ನಾನಲ್ಲಾ"9

ತಾನೇ ತಾನಾಗಿ ನಡೆಯುವವನು ನಾನಲ್ಲ. ನಾನು ನಾಡಿಯ ಒಡೆಯನಾದ ಪರಬ್ರಹ್ಮವನ್ನು ಬಿಡಲಿಲ್ಲ. ನಾನು ಎಂಬ ಅಹಂಕಾರವು ನಾಶವಾಗುವವರೆಗೆ ನಿಜವಾದ ನಾನು ತಿಳಿಯಲಾರದು. ಇದು ಎಂದು ಅಥವಾ ನೀನು ಎಂದು ಹೇಳಿಸಿಕೊಳ್ಳವುದು ಒಂದೂ ನಾನಲ್ಲ. ನಾನು ಕೇವಲ ಅರಿವು, ಕೇವಲ ಇರುವು, ಕೇವಲ ಆನಂದ, ನಾನು ಎಲ್ಲದಕ್ಕೂ ಸಾಕ್ಷಿ ಚೇತನ ನಿರ್ಗುಣ ಸ್ವರೂಪನು. ಹೀಗೆ ಶರೀಫರು ತತ್ವಪದಗಳ ಮೂಲಕ ಮನುಷ್ಯನಿಗೆ ತನ್ನಲ್ಲಿರುವ 'ನಾನು' ಎಂಬುದನ್ನು ಕಳೆದುಕೊಂಡು ನಿರಹಂಕಾರಿಯಾಗಲು ಬೋಧಿಸಿದ್ದಾರೆ.

3. ಆಧ್ಯಾತ್ಮಿಕ ಒಳ ನೋಟಗಳು ಮತ್ತು ಯೋಗ:

ಅವರ ತತ್ವಪದಗಳಲ್ಲಿನ ಅನೇಕ ಪದಗಳು ಯೋಗಶಾಸ್ತ್ರ ಮತ್ತು ವೇದಾಂತದ ಗೂಢಾರ್ಥಗಳನ್ನು ಸರಳವಾಗಿ ತಿಳಿಸುತ್ತವೆ. 'ಕೋಡಗನ ಕೋಳಿ ನುಂಗಿತ್ತ' ಎಂಬಂತಹ ಪದಗಳು ಮನಸ್ಸು (ಕೋಡಗ) ಎಂಬ ಚಂಚಲತೆಯನ್ನು ಜ್ಞಾನವೆಂಬ ಕೋಳಿ ಹೇಗೆ ಹತೋಟಿಗೆ ತರುತ್ತದೆ ಎಂಬ ಯೋಗಿಕ ಅರ್ಥವನ್ನು ಒಳಗೊಂಡಿದೆ.

"ಕೋಡಗನ ಕೋಳಿ ನುಂಗಿತ್ತ
ನೋಡವ್ವಾ ತಂಗಿ
ಕೋಡಗನ ಕೋಳಿ ನುಂಗಿತ್ತ"10

ಇಲ್ಲಿ ಶರೀಫರು ಕೋಡಗವೆಂಬ ಕತ್ತಲೆಯನ್ನು ಕೋಳಿ ಎಂಬ ಬೆಳಕು ನುಂಗಿದ ಪರಿಯನ್ನು ಬೆಡಗಿನಿಂದ ಹೇಳಿದ್ದಾರೆ. ಕಪಿಯನ್ನು ಕೋಳಿ ನುಂಗಿತು. ಅಂದರೆ ಮಂಗ ಚಂಚಲತೆಯ ಸಂಕೇತ, ಹಾಗೆಯೇ ಮನಸ್ಸು. ಕೋಳಿಯ ಕೂಗು ಕತ್ತಲೆ ಕಳೆದು ಬೆಳಗಾಗುವುದರ ಸಂಕೇತವನ್ನು ಸೂಚಿಸುತ್ತದೆ. ಕೋಳಿಯ ಕೂಗು ಬೆಳಗಾಗುವದರ ಅಂದರೆ ತುರ್ಯಾವಸ್ಥೆಯು ಪ್ರಾಪ್ತವಾಗುವುದರ ಸಂಕೇತ. ಈ ತುರ್ಯಾವಸ್ಥೆಯೆಂಬ ಸೂರ್ಯೋದಯವಾಗುವ ಮುಂಚೆ ಅನಾಹತ ಪ್ರಣವ ಧ್ವನಿಯೆಂಬ ಕೋಳಿಯು ಕೂಗಲಾರಂಭಿಸುತ್ತದೆ. ವಿಷಯಾಸಕ್ತವಾದ ಚಂಚಲವಾದ ಮನವೆಂಬ ಮಂಗನು ಅನಾಹತ ಪ್ರಣವ ಧ್ವನಿಯೆಂಬ ಕೋಳಿಯ ಕೂಗನ್ನು ಕೇಳಿ ಅದರಲ್ಲಿಯೇ ಮಗ್ನವಾದರೆ ಮನವು ಅಮನವಾಗಿ ಸಹಜವಾದ ತುರ್ಯಾವಸ್ಥೆಯೆಂಬ ಬೆಳಗಾಗುತ್ತದೆ ಎನ್ನುವರು.

"ಆಡು ಆನೆಯ ನುಂಗಿ
ಗ್ವಾಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಳೆ ನುಂಗಿತ್ತ"11

ಆಡು ಆನೆಯನ್ನು ನುಂಗಿತ್ತು, ಗೋಡೆ ಸುಣ್ಣವನ್ನು ನುಂಗಿತ್ತು, ಕುಣಿಯಲು ಬಂದ ಪಾತರದವಳನ್ನು ಮದ್ದಳೆ ನುಂಗಿತ್ತು. ಅಂದರೆ ಆಡು ಎಂಬ ಪದಕ್ಕೆ ಸಂಸ್ಕೃತದಲ್ಲಿ 'ಅಜ' ಎನ್ನುತ್ತಾರೆ. 'ಅಜ' ಎಂದರೆ ಬ್ರಹ್ಮ. ಆನೆ ಎಂದರೆ ಅಂತರಂಗದ ಅಷ್ಟ ಮದಗಳು ಹಾಗೂ ಬಹಿರಂಗದ ಅಷ್ಟ ಮದಗಳು. ಆಡು ಆನೆಯನ್ನು ನುಂಗುವುದು ಎಂದರೆ ಕೇವಲ ಬ್ರಹ್ಮಜ್ಞಾನದಿಂದ ಮಾತ್ರ ಆಂತರಿಕ ಮತ್ತು ಬಾಹ್ಯದ ಅಷ್ಟ ಮದಗಳ ನಿವಾರಣೆಯಾಗುತ್ತದೆ. ಗೋಡೆ ಎಂದರೆ ಸ್ಥಿರವಾದ ಕೂಟಸ್ಥ ಚೇತನವು. ಸುಣ್ಣ ಎಂದರೆ ಸಂಸಾರದ ಸುಖ ದುಖ:ಗಳಲ್ಲಿ ಬೆಂದ ಜೀವನು ಕಲ್ಲಿನಂತಿದ್ದ ಸುಣ್ಣವು ಅರಳಿ ಪಕ್ವವಾಗಿ ಸುಖ ದು:ಖ ರಹಿತವಾದ ಸ್ಥಿರವಾದ ಗೋಡೆಯೆಂಬ ಕೂಟಸ್ಥ ಚೇತನದಲ್ಲಿ ಜೀವವು ವಿಲೀನವಾಗುತ್ತದೆ. ಆಡಲು ಬಂದ ಪಾತರದವಳು ಎಂದರೆ, ಶಬ್ದಾದಿ ವಿಷಯಗಳಲ್ಲಿ ಚಲಿಸುವ ಮನಸ್ಸು. ಈ ಮನವೆಂಬ ಮಾಯಾದೇವಿಯನ್ನು ಸದಾವಕಾಲ ಇರುವ ಅನಾಹತ ಪ್ರಣವ ಧ್ವನಿಯೆಂಬ ಮದ್ದಳೆಯನ್ನು ಹಿಡಿದ ಅಲ್ಲಮಪ್ರಭುವೆಂಬ ಪರಬ್ರಹ್ಮನು ತನ್ನಲ್ಲಿ ವಿಲೀನಗೊಳಿಸಿದನು.

"ಹಗ್ಗ ಮಗ್ಗವ ನುಂಗಿ
ಮಗ್ಗವ ಲಾಳಿ ನುಂಗಿ
ಮಗ್ಗದಾಗಿರುವ ಅಣ್ಣನ ಕುಣಿಯ ನುಂಗಿತ್ತ ತಂಗಿ"12

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಹಗ್ಗವು ಮಗ್ಗವನ್ನು ನುಂಗುತ್ತದೆ. ಮಗ್ಗವನ್ನು ಲಾಳಿಯು ನುಂಗುತ್ತದೆ. ಮಗ್ಗದ ಸಮೀಪದಲ್ಲಿ ಇರುವ ಅಣ್ಣನನ್ನು ಕುಣಿಯು ನುಂಗುತ್ತದೆ. ಅಂದರೆ.. ಜೀವನ್ಮುಕ್ತಿಯೆಂಬ ಬಟ್ಟೆಯನ್ನು ನೇಯಬೇಕಾದರೆ ಜ್ಞಾನವೆಂಬ ಹಗ್ಗ ಬೇಕು, ಧ್ಯಾನವೆಂಬ ಲಾಳಿಯು ಬೇಕು. ಯಾವಾಗಲೂ ವಿಷಯಗಳಲ್ಲಿಯೇ ಚಲಿಸುವ ಮಗ್ಗದಂತಿರುವ ಮನವನ್ನು ಧ್ಯಾನವೆಂಬ ಹಗ್ಗವು ನುಂಗುತ್ತದೆ. ಧ್ಯಾನದಲ್ಲಿ ಕರಿಗೊಂಡ ಮನವನ್ನು ಆತ್ಮಜ್ಞಾನರೂಪ ಲಾಳಿಯು ನುಂಗುತ್ತದೆ. ಮಗ್ಗದಲ್ಲಿರುವ ಅಣ್ಣನೆಂಬ ಜೀವವನ್ನು ಪರಬ್ರಹ್ಮರೂಪಿ ತನ್ನಲ್ಲಿ ವಿಲೀನವಾಗುತ್ತದೆ ಎನ್ನುತ್ತಾರೆ.

"ಎತ್ತು ಜತ್ತಗಿ ನುಂಗಿ
ಬತ್ತ ಬಾನವ ನುಂಗಿ
ಮುಕ್ಕುಟ ತಿರವೋ ಅಣ್ಣನ ಮೇಳಿ ನುಂಗಿತ್ತ"13

ಎತ್ತು ಜತ್ತಿಗೆಯನ್ನು ನುಂಗುತ್ತದೆ, ಬತ್ತವು ಬುಟ್ಟಿಯನ್ನು ನುಂಗುತ್ತದೆ. ನೇಗಿಲು ಹೊಡಿಯುವ ಅಣ್ಣನನ್ನು ನೇಗಿಲಿನ ತುದಿಯು ನುಂಗುತ್ತದೆ. ಅಂದರೆ ಅವಿದ್ಯಾ ಅಸ್ಮಿತಾ ರಾಗ ದ್ವೇಷ ಅಭಿನಿವೇಷ ಎಂಬ ಪಂಚ ಪಾಶಗಳಿಂದ ಜೀವಾತ್ಮನೆಂಬ ಎತ್ತು ಬಂಧಿತವಾಗಿದೆ. ಅದು ಅವುಗಳಿಂದ ಮುಕ್ತನಾಗಬೇಕು. ಬ್ರಹ್ಮವೇ ನಾನಿದ್ದೇನೆ ಎಂಬ ಜ್ಞಾನದ ಫಲವು ದೇಹವು ನಾನೆಂಬ ಅಜ್ಞಾನದ ಬುಟ್ಟಿಯನ್ನು ನಾಶ ಮಾಡಿತು. ಮುಕ್ಕುಟವನ್ನು ತಿರುಗಿಸುವ ಅಣ್ಣನು ಎಂದರೆ ಮನಸ್ಸನ್ನು ಹದ ಮಾಡುವ ಸಾಧಕನು. ಅವನನ್ನು ಆತ್ಮಧ್ಯಾನವೆಂಬ ಮೇಳಿಯು ನುಂಗುತ್ತದೆ ಎಂದು ಶರೀಫರು ಹೇಳುತ್ತಾರೆ.

"ಗುಡ್ಡ ಗಂವ್ಹರ ನುಂಗಿ
ಗಂವ್ಹರ ಇರವಿ ನುಂಗಿ
ಗುರುಗೋವಿಂದನ ಪಾದ ಆತ್ಮ ನುಂಗಿತ್ತ"14

ಗುಡ್ಡವು ಗವಿಯನ್ನು ನುಂಗುತ್ತದೆ, ಗವಿಯು ಇರುವೆಯನ್ನು ನುಂಗುತ್ತದೆ, ಗುರುಗೋವಿಂದನ ಪಾದವು ಆತ್ಮವನ್ನೇ ನುಂಗುತ್ತದೆ. ಅಂದರೆ ಶರೀರವೆಂಬ ಗುಡ್ಡದಲ್ಲಿ ಭ್ರೂಮಧ್ಯವೆಂಬ ಗವಿಯು ಇದೆ. ಅಲ್ಲಿ ದೃಷ್ಟಿ ಮನ ಪ್ರಾಣವನ್ನು ಒಂದಾಗಿಸಿ ನಿಲ್ಲಿಸಿದಾಗ ಮಹಾಪ್ರಕಾಶರೂಪ ಹಾಗೂ ಅನಾಹತ ಪ್ರಣವ ನಾದವು ಕೇಳಲಾರಂಭಿಸುತ್ತದೆ. ಅದು ಯಾವಾಗಲೂ ಇರುವಂಥ ಸಚ್ಚಿದಾನಂದ ಪರಬ್ರಹ್ಮರೂಪ ಗುರುವಿನ ಪಾದದಲ್ಲಿ ಪ್ರಣವ ನಾದವನ್ನು ನಾನು ಕೇಳುತ್ತ ಲೀನನಾದೆ ಎಂದು ಸಾಮಾನ್ಯ ಜನರ ಭಾಷೆಯಲ್ಲೇ ತತ್ವಜ್ಞಾನವನ್ನು ಜನಪ್ರೀಯಗೊಳಿಸಿದರು.

4. ಬದುಕಿನ ಸಿಹಿ–ಕಹಿಗಳ ಸಮಾನ ಅನುಭವ:

ಶರೀಫರು ತಮ್ಮ ವೈಯಕ್ತಿಕ ಜೀವನದಲ್ಲಿ ಬಡತನ ಮತ್ತು ಸಂಕಷ್ಟಗಳನ್ನು ಅನುಭವಿಸಿ ಅದನ್ನು ಸಾಹಿತ್ಯದ ಮೂಲಕ ದಿವ್ಯಾನುಭವವಾಗಿ ಪರಿವರ್ತಿಸಿದರು. 'ಅಳಬೇಡ ತಂಗಿ ಅಳಬೇಡ' ಎಂಬಂತಹ ಸಾಂತ್ವನದ ಮಾತುಗಳು ಬದುಕಿನ ಕಷ್ಟಗಳನ್ನು ಧೈರ್ಯದಿಂದ ಎದುರಿಸುವ ಮನೋಭಾವವನ್ನು ಕಲಿಸಿ ಕೊಡುತ್ತವೆ.

"ಅಳಬೇಡ ತಂಗಿ ಅಳಬೇಡ ನಿನ್ನ
ಕಳುಹ ಬಂದವರಿಲ್ಲಿ ಉಳುಹಿಕೊಂಬವರಿಲ್ಲ"15

ಅತ್ತಿಗೇರಿಯಲ್ಲಿ ಗಂಡನ ಮನೆಗೆ ಹೋಗುವ ವಧುವಿಗೆ ಆಶೀರ್ವದಿಸುವ ಸಂದರ್ಭದಲ್ಲಿ ಶರೀಫರು ನಿನ್ನನ್ನು ಕಳುಹಿಸಲು ಬಂದವರು ಇಲ್ಲಿ ಸ್ಥಿರವಾಗಿ ನೆಲೆ ನಿಲ್ಲುವುದಿಲ್ಲ, ಆದ್ದರಿಂದ ತಂಗಿ ಅಳಬೇಡ ಎನ್ನುತ್ತಾರೆ.

ಆತ್ಮಜ್ಞಾನಿಗಳಾದ ಶರೀಫರು ಜೀವವು ಈ ನಶ್ವರವಾದ ಶರೀರವನ್ನು ಬಿಟ್ಟು ಹೋದಾಗ ಶರೀರದ ಅಂತ್ಯಕ್ರಿಯೆಗೆ ಕಳುಹ ಬಂದವರು ಯಾರೂ ಸ್ಥಿರವಾಗಿ ಈ ಭೂಮಿಯಲ್ಲಿ ನೆಲೆ ನಿಲ್ಲುವುದಿಲ್ಲ ಎಂದು ತಮ್ಮಲ್ಲಿಯೇ ಅನುಭವಿಸಿ ಉಪದೇಶಿಸಿದ್ದಾರೆ.

"ಖಡಕಿಲೆ ಉಡಿಯಕ್ಕಿ ಹಾಕಿದಾರವ್ವಾ ಒಳ್ಳೆ
ದುಡಿಕಿಲೆ ಮುಂದಕೆ ನೂಕಿದಾರವ್ವಾ
ಮಿಡಿಕ್ಯಾಡಿ ಮದಿವ್ಯಾದಿ ಮೋಜು ಕಾಣವ್ವ ಮುಂದ
ಹುಡಿಕ್ಯಾಡಿ ಮಾಯದ ಮರವೇರಿದೆವ್ವಾ"16

ಸಡಗರದಿಂದ ಉಡಿಯಕ್ಕಿ ಹಾಕಿದ್ದಾರೆ, ಅವಸರದಿಂದ ಮುಂದಕ್ಕೆ ನೂಕಿದ್ದಾರೆ, ಚಟುವಟಿಕೆಯಿಂದ ಮದುವಿಯಾದಿ ಇದು ಆನಂದ ನೋಡವ್ವ, ನೀನೆ ಹುಡುಕಿ ಮಾಯೆಯೆಂಬ ಮರವನೇರಿದೆ ಅವ್ವಾ ಎನ್ನುತ್ತಾರೆ.

"ಮಿಂಡೇರ ಬಳಗವು ಬೆನ್ನತ್ತಿ ಬಂದು ನಿನ್ನ
ರಂಡೇರೈವರು ಕೂಡಿ ನಗುತಲಿ ನಿಂತು
ಕಂಡವರ ಕಾಲ್ಬಿದ್ದು ಕೈ ಮುಗಿದು ನಿಂತರ
ಗಂಡನ ಮನಿ ನಿನಗ ಬಿಡದವ್ವ ತಂಗಿ"17

ಅರಿಷಡ್ವರ್ಗಗಳೆಂಬ ಮಿಂಡೇರು ಜೀವನ ಬೆನ್ನತ್ತಿ ಬಂದಿದ್ದಾರೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳೈವರು ರಂಡೆಯರು ನಿನ್ನನ್ನು ನೋಡಿ ನಗುತಲಿದ್ದಾರೆ. ಶಬ್ದಾದಿ ವಿಷಯಗಳನ್ನು ನೋಡುವ ಕೇಳುವ ಜ್ಞಾನೇಂದ್ರಿಯಗಳ ಕಾಲು ಬಿದ್ದು ಕೈ ಮುಗಿದು ನಿಂತರೆ, ನಿರಂತರ ಜನ್ಮ ಮರಣಾತ್ಮಕ ಭವ ಎಂಬ ಗಂಡನ ಮನೆಯು ನಿನಗೆ ಬಿಡದವ್ವಾ ತಂಗಿ ಎಂದು ಹೇಳುತ್ತಾರೆ.

"ರಂಗೀಲಿ ಉಟ್ಟಿದಿ ರೇಶ್ಮಿದಡಿಸೀರಿ ಮತ್ತ
ಹಂಗನೂಲಿನ ಪರವಿ ಮರತೆವ್ವ ನಾರಿ
ಮಂಗಳ ಮೂರುತಿ ಶಿಶುನಾಳಧೀಶನ
ಅಂಗಳಕ ನೀ ಹೊರತಾದೆವ್ವ ಗೌರಿ"18

ಪಂಚ ವಿಷಯಗಳ ಸಮುದಾಯದ ಬದುಕೆಂಬ ರೇಶ್ಮೇಧಡಿ ಸೀರೆಯನ್ನು ಉತ್ಸಾಹದಿಂದ ಉಟ್ಟುಕೊಂಡಿರುವೆ. ಈ ಬದುಕಿನಲ್ಲಿ ಪರಮಾತ್ಮನ ಭಕ್ತಿಯೆಂಬ ಹಂಗನೂಲನ್ನು ಮರೆತು, ಮಂಗಳ ಮೂರುತಿಯಾದ ಸುಷುಮ್ನ ನಾಡಿಯ ಒಡೆಯನಾದ ಪರಬ್ರಹ್ಮನ ಸ್ಥಾನವಾದ ಮೋಕ್ಷವೆಂಬ ಅಂಗಳಕೆ ಎಲೇ ಜೀವವೆಂಬ ತಂಗಿಯೇ ನೀನು ಹೊರತಾದಿ ಅವ್ವಾ ಎಂದು ನುಡಿದಿದ್ದಾರೆ ಶರೀಫರು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸಮಾರೋಪ:

ಶರೀಫರು ತಮ್ಮ ತತ್ವಪದಗಳಲ್ಲಿ ಜಾತಿ, ಮತ, ಪಂಥಗಳ ಬೇಲಿಯನ್ನು ಕಿತ್ತೆಸೆದು ಮಾನವತಾವಾದವನ್ನು ಎತ್ತಿ ಹಿಡಿದರು. 'ಈಶ್ವರ ಅಲ್ಲಾ ನೀನೇ ಎಲ್ಲಾ' ಎಂದು ಬೋಧಿಸಿದವರು ಜೊತೆಗೆ ಆಚರಣೆಯಲ್ಲಿ ತಂದವರು ಹಾಗೂ ಸಾಧಿಸಿದವರು ಕಳಸದ ಗುರು ಗೋವಿಂದ ಭಟ್ಟರ ಶಿಷ್ಯರಾದ ಕರ್ನಾಟಕದ ಕಬೀರ ಸಂತ ಶಿಶುನಾಳ ಶರೀಫರು. ಮಂದಿರ–ಮಸೀದಿ, ನಮನ–ನಮಾಜ್, ಪುರಾಣ–ಕುರಾನ್, ಜಂಗಮ–ಫಕೀರ, ಅಲ್ಲಮ–ಅಲ್ಲಾ ಇವೆಲ್ಲಾ ಒಂದೇ. ಭಗವಂತನ ದರ್ಶನಕ್ಕೆ ನಾವುಗಳು ಹಾಕಿಕೊಂಡ ವಿವಿಧ ಮಾರ್ಗಗಳು ಎಂದು ತೋರಿಸಿದಂತಹ 'ದಾರ್ಶನಿಕರು' ಸಂತ ಶಿಶುನಾಳ ಶರೀಫರು. ಇವರು ತಮ್ಮ ಗುರುಗಳಾದ ಗೋವಿಂದ ಭಟ್ಟರ ಮಾರ್ಗದರ್ಶನದಲ್ಲಿ ಸಮಾನತೆಯ ತತ್ವವನ್ನು ಬದುಕಿನಲ್ಲೇ ಅಳವಡಿಸಿಕೊಂಡಿದ್ದರು.

ಶಿಶುನಾಳ ಶರೀಫರ ಸಾಹಿತ್ಯದಲ್ಲಿ ಕೇವಲ ಬಾಹ್ಯ ಆಚರಣೆಗಳಿಗೆ ಮಹತ್ವ ನೀಡದೆ, ಆಂತರಿಕ ಶುದ್ಧತೆಗೆ ಒತ್ತು ನೀಡಿದರು. ಅವರ ಸಾಹಿತ್ಯವು ಮನುಷ್ಯನಿಗೆ 'ಬಾಳು ಮತ್ತು ಬೆಳಗು' ಎರಡನ್ನೂ ಕಲಿಸುವ ಕನ್ನಡಿಯಾಗಿದೆ. ಲೌಕಿಕ ಬದುಕಿಗೆ ಅಂಟಿಕೊಳ್ಳದೆ, ಆಧ್ಯಾತ್ಮದ ಕಡೆಗೆ ಮುಖ ಮಾಡಿ, ಸಮಾನತೆಯಿಂದ ಬಾಳುವುದೇ ನಿಜವಾದ ಮಾನವ ಜೀವನದ ದರ್ಶನ ಎಂದು ಅವರು ತಮ್ಮ ಸಾಹಿತ್ಯದ ಮೂಲಕ ಸಾರಿದ್ದಾರೆ.

ಅಡಿಟಿಪ್ಪಣಿ:

1. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–12
2. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–12
3. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–12
4. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–12
5. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–12
6. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–76
7. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–76
8. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–76
9. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–76
10. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–23
11. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–23
12. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–23
13. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–23
14. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–23
15. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–52
16. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–52
17. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–52
18. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018, ಪು.ಸಂ–52

ಆಕರ ಗ್ರಂಥಗಳು:

1. ಶಿಶುನಾಳಧೀಶ, ಲೇ. ಡಾ. ಎ.ಸಿ.ವಾಲಿ. ಪ್ರಕಾಶನ, ಆಧ್ಯಾತ್ಮ ಟ್ರಸ್ಟ, ಬಂಡಿವಾಡ–2018,
2. ಶರೀಫ ಸಾಹೇಬರ ಚರಿತ್ರೆ ಹಾಗೂ ತತ್ವಪದಗಳು: ಎಚ್.ಟಿ.ಮಹಾಂತೇಶ ಶಾಸ್ತ್ರಿಗಳು, ಶಾಬಾಧಿಮಠ ಬಕ್ ಡಿಪೋ, ಗದಗ
3. ಶ್ರೀ ಶರೀಫರ ನೂರೊಂದು ತತ್ವಪದಗಳ ಭಾವಾರ್ಥ ದೀಪಿಕೆ, ಲೇ. ಪ. ಪೂ. ಶ್ರೀ ಶ್ರೀಧರ ಗಂಗಾಧರ ಮುರಾಳೆ ಶಿವಯೋಗಿಗಳು, ಪಂಚಾಗ್ನಿಮಠ ಟ್ರಸ್ಟ, ಶಿಶುವಿನಾಳ. 2019
4. ಚೆನ್ನಕ್ಕ ಪಾವಟೆ. 'ಶಾಸನ ಸಂಜೀವಿನಿ' ಚೆನ್ನಗಂಗಾ ಪ್ರಕಾಶನ, ಧಾರವಾಡ, 2003
5. ಪಾಟಿಲ ಭೋಜರಾಜ. 'ನಾಗರಖಂಡ–70 ಒಂದು ಅಧ್ಯಯನ' ಆನಂದಪುರಂ, 1995
6. ಸಂ. ಶ್ರೀ. ಚನ್ನಪ್ಪ ಉತ್ತಂಗಿ: ಸರ್ವಜ್ಞನ ವಚನಗಳು, ಪ್ರಕಾಶ ಸಾಹಿತ್ಯ, ಬೆಂಗಳೂರು–1999
7. ಸಂ. ಎಲ್. ಬಸವರಾಜ: ಸರ್ವಜ್ಞನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು–2012
8. ಬಸವ ಯುಗದ ಮಹಾಸಂಪುಟ: ಪ್ರ. ಸಂ–ಡಾ. ಎಂ.ಎಂ ಕಲಬುರ್ಗಿ, ಪ್ರ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2001

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಆಲೂರು ವೆಂಕಟರಾಯರ ಪಾತ್ರ: ಒಂದು ಐತಿಹಾಸಿಕ ವಿಶ್ಲೇಷಣೆ

(The role of Alur Venkataraya in the freedom struggle of Dharwad district: A historical analysis)

Hanumanthappa K. Y [1] Dr. L. P Maruthi [2]
[1]Research Scholar & Assistant Professor, Dept. of History & Archaeology, Karnataka University Dharwad
[2]Research Guide,Dept. of History & Archaeology, Karnataka University Dharwad

Manuscript ID:
JRD -2026-180529
ISSN: 2230-9578
Volume 18
Issue 5(IV)
Pp. 119-124
April- 2026
Submitted: 13 Apr. 2026
Revised: 27 Apr.2026
Accepted: 13 May. 2026
Published: 31 May. 2026

Abstract

Karnataka played a highly significant role in the history of India's freedom struggle. Within this broader context, the contributions of Alur Venkataraya—revered as the "Karnataka Kulapurohita" (The High Priest of Karnataka)—are unparalleled. He uniquely and seamlessly integrated the movement for Karnataka's unification with the broader national awakening. Specifically, he is credited with igniting the spark of nationalism and laying a robust foundation for the independence movement in the Dharwad district, which was then a part of the Bombay Presidency. His impact extended far beyond standard political leadership; as a prolific writer, journalist, and historian, the socio-political awareness he fostered among the masses was immense. Drawing upon available archival records, contemporary press reports, academic research papers, and literary works, this article critically analyzes the decisive role Alur Venkataraya played in shaping and propelling the freedom struggle in Dharwad district.

Keywords: *Alur Venkataraya, Dharwad District, Indian Freedom Struggle, Karnataka Unification, Bombay Presidency, Nationalism.*

ಪ್ರಸ್ತಾವನೆ :

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಕರ್ನಾಟಕದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಹೋರಾಟದಲ್ಲಿ ಕರ್ನಾಟಕದ ಏಕೀಕರಣ ಮತ್ತು ರಾಷ್ಟ್ರೀಯ ಜಾಗೃತಿಯನ್ನು ಒಟ್ಟೊಟ್ಟಿಗೆ ಕೊಂಡೊಯ್ದು, "ಕರ್ನಾಟಕ ಕುಲಪುರೋಹಿತ" ಎಂದು ಖ್ಯಾತರಾದ ಆಲೂರು ವೆಂಕಟರಾಯರ ಕೊಡುಗೆ ಅನನ್ಯ. ವಿಶೇಷವಾಗಿ, ಅಂದಿನ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ್ದ ಧಾರವಾಡ ಜಿಲ್ಲೆಯಲ್ಲಿ ರಾಷ್ಟ್ರೀಯತೆಯ ಕಿಡಿಯನ್ನು ಹೊತ್ತಿಸಿ, ಸ್ವಾತಂತ್ರ್ಯ ಚಳುವಳಿಗೆ ಭದ್ರ ಬುನಾದಿ ಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕೇವಲ ಒಬ್ಬ ರಾಜಕೀಯ ನಾಯಕರಾಗಿರದೆ, ಸಾಹಿತಿಯಾಗಿ, ಪತ್ರಕರ್ತರಾಗಿ ಮತ್ತು ಇತಿಹಾಸಕಾರರಾಗಿ ಅವರು ಜನರಲ್ಲಿ ಮೂಡಿಸಿದ ಜಾಗೃತಿ ಅಪಾರ. ಈ ಲೇಖನವು, ಲಭ್ಯವಿರುವ ಆರ್ಕೈವ್ ದಾಖಲೆಗಳು, ಸಮಕಾಲೀನ ಪತ್ರಿಕಾ ವರದಿಗಳು, ಸಂಶೋಧನಾ ಪ್ರಬಂಧಗಳು ಮತ್ತು ಕೃತಿಗಳನ್ನು ಆಧರಿಸಿ, ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಆಲೂರು ವೆಂಕಟರಾಯರ ನಿರ್ಣಾಯಕ ಪಾತ್ರವನ್ನು ವಿಶ್ಲೇಷಿಸುತ್ತದೆ.

ಹಿನ್ನೆಲೆ ಮತ್ತು ಆರಂಭಿಕ ಜೀವನ

ಆಲೂರು ವೆಂಕಟರಾಯರು ಜನಿಸಿದ್ದು 12 ಜುಲೈ 1880 ರಂದು ಬಿಜಾಪುರ ಜಿಲ್ಲೆಯಲ್ಲಿ. ಆದರೆ ಅವರ ಕಾರ್ಯಕ್ಷೇತ್ರ ಮುಖ್ಯವಾಗಿ ಧಾರವಾಡವೇ ಆಗಿತ್ತು. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ, ಬಾಲ ಗಂಗಾಧರ ತಿಲಕರ ಮತ್ತು ವಿ.ಡಿ. ಸಾವರ್ಕರ್ ಅವರ ತೀವ್ರಗಾಮಿ ವಿಚಾರಧಾರೆಗಳಿಂದ ಅವರು ಪ್ರಭಾವಿತರಾದರು. ತಿಲಕರ 'ಕೇಸರಿ' ಪತ್ರಿಕೆ ಮತ್ತು ಅವರ 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂಬ ಘೋಷಣೆ ವೆಂಕಟರಾಯರ ಮೇಲೆ ಅಳಿಸಲಾಗದ ಮುದ್ರೆ ಒತ್ತಿದವು.[1]

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
Hanumanthappa K. Y, Research Scholar & Assistant Professor, Dept. of History & Archaeology, Karnataka University Dharwad

How to cite this article:
K. Y, H., & Maruthi, L. P., *(2026).* ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಆಲೂರು ವೆಂಕಟರಾಯರ ಪಾತ್ರ: ಒಂದು ಐತಿಹಾಸಿಕ ವಿಶ್ಲೇಷಣ. *Journal of Research & Development, 18(5(IV)), 119–124.* *https://doi.org/10.5281/zenodo.20994481*.

Quick Response Code:
Website: https://jrdrvb.org/
DOI: 10.5281/zenodo.20994481
OPEN ACCESS

[1] 1. Kamath, Suryanath U., *A Concise History of Karnataka: From Pre-historic Times to the Present*, Jupiter Books, Bangalore, 2001, p. 285.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಧಾರವಾಡಕ್ಕೆ ಮರಳಿದ ನಂತರ, ಅವರು ಕೇವಲ ವಕೀಲ ವೃತ್ತಿಗೆ ಅಂಟಿಕೊಳ್ಳದೆ, ನಾಡು–ನುಡಿಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಅಂದಿನ ದಿನಗಳಲ್ಲಿ ಕನ್ನಡಿಗರು ಭಾಷಾಭಿಮಾನ ಮತ್ತು ರಾಷ್ಟ್ರಾಭಿಮಾನ ಎರಡರಲ್ಲೂ ಮಂಕಾಗಿದ್ದರು. ಈ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯದ ಕಿಚ್ಚು ಹಚ್ಚಲು, ಮೊದಲು ಕನ್ನಡಿಗರಲ್ಲಿ ತಮ್ಮ ಭವ್ಯ ಇತಿಹಾಸದ ಬಗ್ಗೆ ಅರಿವು ಮೂಡಿಸುವುದು ಅತ್ಯಗತ್ಯ ಎಂದು ಅವರು ಬಲವಾಗಿ ನಂಬಿದ್ದರು.

ಧಾರವಾಡದಲ್ಲಿ ರಾಷ್ಟ್ರೀಯ ಜಾಗೃತಿಯ ಉದಯ (1905–1920)

'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಮೂಲಕ ಜಾಗೃತಿ

ಧಾರವಾಡದಲ್ಲಿ 1890 ರಲ್ಲಿ ಸ್ಥಾಪನೆಯಾಗಿದ್ದ 'ಕರ್ನಾಟಕ ವಿದ್ಯಾವರ್ಧಕ ಸಂಘ'ವು ಕೇವಲ ಭಾಷಾ ಬೆಳವಣಿಗೆಗೆ ಸೀಮಿತವಾಗಿತ್ತು. ಆಲೂರು ವೆಂಕಟರಾಯರು ಇದರ ಕಾರ್ಯದರ್ಶಿಯಾದ ನಂತರ (1907–1908ರ ಸುಮಾರಿಗೆ), ಸಂಘವನ್ನು ಕೇವಲ ಸಾಹಿತ್ಯಕ ವೇದಿಕೆಯನ್ನಾಗಿ ಉಳಿಸದೆ, ರಾಷ್ಟ್ರೀಯ ವಿಚಾರಗಳನ್ನು ಹರಡುವ ಕೇಂದ್ರವನ್ನಾಗಿ ಪರಿವರ್ತಿಸಿದರು. "ನಮ್ಮ ಭಾಷೆ, ನಮ್ಮ ನಾಡು ಎಂಬ ಅಭಿಮಾನವಿಲ್ಲದವರು ಎಂದಿಗೂ ಸ್ವರಾಜ್ಯಕ್ಕಾಗಿ ಹೋರಾಡಲಾರರು. ಗುಲಾಮಗಿರಿಯ ಅರಿವೇ ಸ್ವಾತಂತ್ರ್ಯದ ಮೊದಲ ಮೆಟ್ಟಿಲು" – ಇದು ವೆಂಕಟರಾಯರ ದೃಢವಾದ ನಂಬಿಕೆಯಾಗಿತ್ತು.[2] ಅವರು ಸಂಘದ ಮೂಲಕ ತಿಲಕರ ವಿಚಾರಗಳನ್ನು ಪ್ರಚಾರ ಮಾಡತೊಡಗಿದರು.

1905 ರ ಬಂಗಾಳ ವಿಭಜನೆ ಮತ್ತು ಸ್ವದೇಶಿ ಚಳುವಳಿ :

1905ರ ಲಾರ್ಡ್ ಕರ್ಜನ್ ನ ಬಂಗಾಳ ವಿಭಜನೆಯ ನಿರ್ಧಾರವು ಇಡೀ ದೇಶದಲ್ಲಿ ಸ್ವದೇಶಿ ಚಳುವಳಿಗೆ ನಾಂದಿ ಹಾಡಿತು. ಧಾರವಾಡದಲ್ಲಿ ಈ ಚಳುವಳಿಯ ನೇತೃತ್ವವನ್ನು ಆಲೂರು ವೆಂಕಟರಾಯರು ವಹಿಸಿದರು. ಅವರು ಧಾರವಾಡದಲ್ಲಿ ಸಾರ್ವಜನಿಕ ಸಭೆಗಳನ್ನು ಆಯೋಜಿಸಿ, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಮತ್ತು ಸ್ವದೇಶಿ ವಸ್ತುಗಳನ್ನು ಬಳಸುವಂತೆ ಜನರನ್ನು ಹುರಿದುಂಬಿಸಿದರು.

ಮುಂಬೈ ಸರ್ಕಾರದ ಗುಪ್ತಚರ ವರದಿಗಳು ಧಾರವಾಡದಲ್ಲಿ ಆಲೂರು ವೆಂಕಟರಾಯರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದವು. ಒಂದು ವರದಿಯ ಪ್ರಕಾರ, "ಆಲೂರು ವೆಂಕಟರಾಯರು ಧಾರವಾಡದ ಯುವಕರಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳನ್ನು ಉದ್ದೀಪಿಸುತ್ತಿದ್ದಾರೆ. ಅವರ ಭಾಷಣಗಳು ಅತ್ಯಂತ ಪ್ರಭಾವಶಾಲಿಯಾಗಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅವರ ಹಿಂದೆ ಹೋಗುತ್ತಿದ್ದಾರೆ."[3]

ಧಾರವಾಡದಲ್ಲಿ ಅವರು 'ಸ್ವದೇಶಿ ವಸ್ತು ಪ್ರದರ್ಶನ'ಗಳನ್ನು ಆಯೋಜಿಸುವ ಮೂಲಕ ಸ್ಥಳೀಯ ಕರಕುಶಲತೆ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದರು. ಇದು ಕೇವಲ ಆರ್ಥಿಕ ಚಳುವಳಿಯಾಗಿರದೆ, ಬ್ರಿಟಿಷ್ ಆಡಳಿತದ ವಿರುದ್ಧದ ಪ್ರಬಲ ರಾಜಕೀಯ ಅಸ್ತ್ರವಾಗಿತ್ತು.

'ವಾಗ್ಭೂಷಣ' ಮತ್ತು 'ಕರ್ಮವೀರ' ಪತ್ರಿಕೆಗಳ ಪಾತ್ರ

ಪತ್ರಿಕೋದ್ಯಮವು ಸ್ವಾತಂತ್ರ್ಯ ಹೋರಾಟದ ಪ್ರಬಲ ಮಾಧ್ಯಮವೆಂದು ಅರಿತಿದ್ದ ವೆಂಕಟರಾಯರು, ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖವಾಣಿಯಾದ 'ವಾಗ್ಭೂಷಣ' ಪತ್ರಿಕೆಯ ಮೂಲಕ ರಾಷ್ಟ್ರೀಯತೆಯ ವಿಚಾರಗಳನ್ನು ಪ್ರಕಟಿಸತೊಡಗಿದರು. ಆದರೆ, ಸಂಪೂರ್ಣವಾಗಿ ರಾಜಕೀಯ ವಿಚಾರಗಳಿಗೆ ಮೀಸಲಾದ ಪತ್ರಿಕೆಯ ಅಗತ್ಯವನ್ನು ಮನಗಂಡ ಅವರು, 1921 ರಲ್ಲಿ ಧಾರವಾಡದಿಂದ 'ಕರ್ಮವೀರ') ಎಂಬ ರಾಷ್ಟ್ರೀಯವಾದಿ ವಾರಪತ್ರಿಕೆಯನ್ನು ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು (ಮೊಹರೆ ಹಣಮಂತರಾಯರು ಇದರ ಸಂಪಾದಕರಾಗಿದ್ದರು).

'ಕರ್ಮವೀರ' ಪತ್ರಿಕೆಯು ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯಾದ್ಯಂತ ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಯನ್ನು ಕಟುವಾಗಿ ಟೀಕಿಸುತ್ತಿತ್ತು. ಆಲೂರು ವೆಂಕಟರಾಯರು ತಮ್ಮ ಲೇಖನಗಳ ಮೂಲಕ ಜನ ಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ರಾಷ್ಟ್ರೀಯತೆಯ ಸಂದೇಶವನ್ನು ಮುಟ್ಟಿಸಿದರು.

"ನಮ್ಮ ಕತ್ತಿಗೆ ಬಿದ್ದಿರುವ ಪರಕೀಯ ಆಡಳಿತದ ನೊಗವನ್ನು ಕಿತ್ತೊಗೆಯಲು ನಾವೆಲ್ಲರೂ ಒಂದಾಗಬೇಕು. ಕೇವಲ ಪ್ರಾರ್ಥನೆ ಮತ್ತು ಅರ್ಜಿಗಳಿಂದ ನಮಗೆ ಸ್ವರಾಜ್ಯ ಸಿಗುವುದಿಲ್ಲ, ಅದಕ್ಕಾಗಿ ತ್ಯಾಗ ಮತ್ತು ಬಲಿದಾನದ ಅವಶ್ಯಕತೆಯಿದೆ" ಎಂದು ಅವರು 'ಕರ್ಮವೀರ'ದಲ್ಲಿ ಬರೆದಿದ್ದರು.[4]

ತಿಲಕರ 'ಹೋಮ್ ರೂಲ್ ಲೀಗ್' ಮತ್ತು ಧಾರವಾಡ (1916)

ಬಾಲ ಗಂಗಾಧರ ತಿಲಕರು 1916 ರಲ್ಲಿ 'ಹೋಮ್ ರೂಲ್ ಲೀಗ್' ಅನ್ನು ಸ್ಥಾಪಿಸಿದಾಗ, ಅದರ ಧಾರವಾಡ ಶಾಖೆಯನ್ನು ತೆರೆಯುವಲ್ಲಿ ಆಲೂರು ವೆಂಕಟರಾಯರು ಮುಂಚೂಣಿಯಲ್ಲಿದ್ದರು. ತಿಲಕರು ಬೆಳಗಾವಿ ಮತ್ತು ಧಾರವಾಡಕ್ಕೆ ಭೇಟಿ ನೀಡಿದಾಗ, ಅವರ ಸ್ವಾಗತ ಮತ್ತು ಸಾರ್ವಜನಿಕ ಸಭೆಗಳ ಸಂಪೂರ್ಣ ಜವಾಬ್ದಾರಿಯನ್ನು ಆಲೂರು ವಹಿಸಿಕೊಂಡಿದ್ದರು. ತಿಲಕರ 'ರಾಷ್ಟ್ರೀಯ ಶಿಕ್ಷಣ'ದ ಪರಿಕಲ್ಪನೆಯನ್ನು ಸಾಕಾರಗೊಳಿಸಲು, ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಲು ಅವರು ಶ್ರಮಿಸಿದರು. ಬ್ರಿಟಿಷ್ ಅನುದಾನಿತ ಶಾಲೆಗಳನ್ನು ತೊರೆದು ರಾಷ್ಟ್ರೀಯ ಶಾಲೆಗಳಿಗೆ ಸೇರಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇದು ಧಾರವಾಡದ ಯುವಕರಲ್ಲಿ ದೊಡ್ಡ ಮಟ್ಟದ ಜಾಗೃತಿಯನ್ನು ಮೂಡಿಸಿತು. ಗದಗ್, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳಲ್ಲಿ ಹೋಮ್ ರೂಲ್ ಲೀಗ್ ನ ವಿಚಾರಗಳನ್ನು ಪ್ರಚಾರ ಮಾಡಲು ಯುವಕರ ತಂಡಗಳನ್ನು ರಚಿಸಿದರು.

---

[2] Alur Venkatrao, *Nanna Jeevana Smrutigalu* (My Life Memories) - Autobiography, 1941, p. 45.

[3] *Bombay Presidency Secret Police Abstracts of Intelligence*, Year 1908, Volume XXI, p. 112. Maharashtra State Archives, Mumbai.

[4] *Karmaveera* Weekly Newspaper, Editorial dated 15th August 1921, Microfilm collection, Karnatak University Dharwad (KUD) Library.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

'ಕರ್ನಾಟಕ ಗತವೈಭವ' ಕೃತಿಯ ಪ್ರಭಾವ

ಆಲೂರು ವೆಂಕಟರಾಯರ ಸ್ವಾತಂತ್ರ್ಯ ಹೋರಾಟದ ವಿಶಿಷ್ಟತೆಯೆಂದರೆ, ಅವರು ಇತಿಹಾಸವನ್ನು ಒಂದು ಅಸ್ತ್ರವಾಗಿ ಬಳಸಿಕೊಂಡಿದ್ದು. 1917 ರಲ್ಲಿ ಪ್ರಕಟವಾದ ಅವರ ಮೇರು ಕೃತಿ 'ಕರ್ನಾಟಕ ಗತವೈಭವ' ಕೇವಲ ಒಂದು ಇತಿಹಾಸದ ಪುಸ್ತಕವಾಗಿರಲಿಲ್ಲ, ಅದು ನಿದ್ದೆ ಮಾಡುತ್ತಿದ್ದ ಕನ್ನಡಿಗರನ್ನು ಎಬ್ಬಿಸಿದ ಕಹಳೆಯಾಗಿತ್ತು. ಈ ಕೃತಿಯಲ್ಲಿ ಅವರು ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹರಿಹರ ಮತ್ತು ಬುಕ್ಕರು ಹೇಗೆ ಪರಕೀಯರ ಆಕ್ರಮಣದಿಂದ ನಾಡನ್ನು ರಕ್ಷಿಸಲು ವಿಜಯನಗರವನ್ನು ಸ್ಥಾಪಿಸಿದರೋ, ಅದೇ ರೀತಿ ಈಗಿನ ತಲೆಮಾರು ಬ್ರಿಟಿಷರ ದಾಸ್ಯದಿಂದ ಭಾರತವನ್ನು ಮುಕ್ತಗೊಳಿಸಲು ಸಜ್ಜಾಗಬೇಕು ಎಂಬುದು ಅವರ ಕರೆಯಾಗಿತ್ತು.

"ನಮ್ಮ ಪೂರ್ವಜರು ಕಟ್ಟಿ ಬೆಳೆಸಿದ ಭವ್ಯ ಸಾಮ್ರಾಜ್ಯಗಳ ಇತಿಹಾಸವನ್ನು ಮರೆತ ಕಾರಣಕ್ಕಾಗಿಯೇ ನಾವಿಂದು ಗುಲಾಮರಾಗಿದ್ದೇವೆ. ನಮ್ಮ ಗತಕಾಲದ ವೈಭವವನ್ನು ನೆನಪಿಸಿಕೊಂಡರೆ ಮಾತ್ರ ಭವಿಷ್ಯದ ಸ್ವರಾಜ್ಯದ ಕನಸು ಕಾಣಲು ಸಾಧ್ಯ" ಎಂದು ಅವರು ತಮ್ಮ ಕೃತಿಯಲ್ಲಿ ಪ್ರತಿಪಾದಿಸಿದರು.[5]

'ಕರ್ನಾಟಕ ಗತವೈಭವ' ಕೃತಿಯು ಧಾರವಾಡದ ಮೂಲೆ ಮೂಲೆಗಳಲ್ಲಿರುವ ಯುವಕರಿಗೆ ಸ್ಫೂರ್ತಿಯ ಸೆಲೆಯಾಯಿತು. ಇದನ್ನು ಓದಿದ ಅನೇಕ ಯುವಕರು ನೇರವಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ ಅವರ ಪ್ರಕಾರ, "ಬಂಗಾಳದಲ್ಲಿ ಬಂಕಿಮಚಂದ್ರ ಚಟರ್ಜಿಯವರ 'ಆನಂದಮಠ' ಕೃತಿ ಯಾವ ರೀತಿಯ ಕ್ರಾಂತಿಯನ್ನು ಉಂಟುಮಾಡಿತೋ, ಕರ್ನಾಟಕದಲ್ಲಿ ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಅದೇ ರೀತಿಯ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸಿತು."[6]

ಅಸಹಕಾರ ಚಳುವಳಿ ಮತ್ತು ಧಾರವಾಡದ ಗೋಲಿಬಾರ್ (1920–1921)

1920 ರಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಆರಂಭವಾದ ಅಸಹಕಾರ ಚಳುವಳಿಯಲ್ಲಿ ಧಾರವಾಡ ಜಿಲ್ಲೆ ಪ್ರಮುಖ ಪಾತ್ರ ವಹಿಸಿತು. ಆಲೂರು ವೆಂಕಟರಾಯರು ಗಾಂಧೀಜಿಯವರ ಅಹಿಂಸಾತ್ಮಕ ಮಾರ್ಗವನ್ನು ಒಪ್ಪಿಕೊಂಡು, ಜಿಲ್ಲೆಯಾದ್ಯಂತ ಚಳುವಳಿಯನ್ನು ಸಂಘಟಿಸಿದರು. ಧಾರವಾಡ, ಹುಬ್ಬಳ್ಳಿ, ಗದಗ್ ಮತ್ತು ಹಾವೇರಿಗಳಲ್ಲಿ ವಕೀಲರು ತಮ್ಮ ವೃತ್ತಿಯನ್ನು ತ್ಯಜಿಸಿದರು, ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ಬಹಿಷ್ಕರಿಸಿದರು. ವಿದೇಶಿ ಬಟ್ಟೆಗಳ ದಹನ ಮತ್ತು ಹೆಂಡದ ಅಂಗಡಿಗಳ ಮುಂದೆ ಪಿಕೆಟಿಂಗ್ ದಿನನಿತ್ಯದ ದೃಶ್ಯವಾಯಿತು.

1921 ರ ಜುಲೈ 1 ರ ಧಾರವಾಡ ಗೋಲಿಬಾರ್:

ಅಸಹಕಾರ ಚಳುವಳಿಯ ಅತ್ಯಂತ ಕರಾಳ ಘಟನೆ ಧಾರವಾಡದಲ್ಲಿ 1 ಜುಲೈ 1921 ರಂದು ನಡೆಯಿತು. ಹೆಂಡದ ಅಂಗಡಿಗಳ ಮುಂದೆ ಶಾಂತಿಯುತವಾಗಿ ಪಿಕೆಟಿಂಗ್ ಮಾಡುತ್ತಿದ್ದ ಖಿಲಾಫತ್ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬ್ರಿಟಿಷ್ ಪೊಲೀಸರು ಏಕಾಏಕಿ ಗುಂಡಿನ ದಾಳಿ ನಡೆಸಿದರು. ಈ ಘಟನೆಯಲ್ಲಿ ಮೂವರು (ಮೈಲಾರ್, ಅಬ್ದುಲ್ ಗಫೂರ್ ಮತ್ತು ನಾರಾಯಣಪ್ಪ) ಹುತಾತ್ಮರಾದರು ಮತ್ತು ಅನೇಕರು ಗಾಯಗೊಂಡರು.

ಈ ಘಟನೆಯ ನಂತರ, ಬ್ರಿಟಿಷ್ ಸರ್ಕಾರವು ಚಳುವಳಿಯನ್ನು ಹತ್ತಿಕ್ಕಲು ಪ್ರಮುಖ ನಾಯಕರನ್ನು ಬಂಧಿಸಲು ಆರಂಭಿಸಿತು. ಧಾರವಾಡದ 29 ಮುಖಂಡರ ಮೇಲೆ ಮೊಕದ್ದಮೆ ಹೂಡಲಾಯಿತು. ಆಲೂರು ವೆಂಕಟರಾಯರು ಈ ಸಂದರ್ಭದಲ್ಲಿ ತೋರಿದ ಧೈರ್ಯ ಮತ್ತು ನಾಯಕತ್ವ ಅನನ್ಯ. ಅವರು ಗಾಯಗೊಂಡವರಿಗೆ ವೈದ್ಯಕೀಯ ನೆರವು ಒದಗಿಸಲು ಮತ್ತು ಬಂಧಿತ ನಾಯಕರ ಪರವಾಗಿ ಕಾನೂನು ಹೋರಾಟ ನಡೆಸಲು ನಿಧಿ ಸಂಗ್ರಹಿಸಿದರು. ಬಾಂಬೆ ಕ್ರಾನಿಕಲ್ ಪತ್ರಿಕೆಯು ಈ ಘಟನೆಯ ಬಗ್ಗೆ ವರದಿ ಮಾಡುತ್ತಾ, "ಧಾರವಾಡದಲ್ಲಿ ಬ್ರಿಟಿಷ್ ಪೊಲೀಸರ ವರ್ತನೆ ಜಲಿಯನ್ ವಾಲಾಬಾಗ್ ನ ನೆನಪು ತರಿಸುತ್ತದೆ. ಆದರೆ, ಸ್ಥಳೀಯ ನಾಯಕರಾದ ಆಲೂರು ವೆಂಕಟರಾಯರಂತಹವರ ಮಾರ್ಗದರ್ಶನದಲ್ಲಿ ಜನತೆ ಎದೆಗುಂದಿಲ್ಲ" ಎಂದು ಬರೆದಿತ್ತು.[7] ಆಲೂರು ವೆಂಕಟರಾಯರು ಸ್ವತಃ ಈ ಘಟನೆಯನ್ನು ತೀವ್ರವಾಗಿ ಖಂಡಿಸಿ, ಬ್ರಿಟಿಷ್ ಸರ್ಕಾರದ ದೌರ್ಜನ್ಯದ ವಿರುದ್ಧ ರಾಷ್ಟ್ರಮಟ್ಟದ ನಾಯಕರ ಗಮನ ಸೆಳೆದರು.

ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ (ಏಕಆಅ) ಸ್ಥಾಪನೆ:

ಸ್ವಾತಂತ್ರ್ಯ ಚಳುವಳಿಯನ್ನು ತಳಮಟ್ಟದಿಂದ ಸಂಘಟಿಸಲು ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ಕಾಂಗ್ರೆಸ್ ಸಮಿತಿಗಳನ್ನು ರಚಿಸುವ ಕಲ್ಪನೆಯನ್ನು ಆಲೂರು ವೆಂಕಟರಾಯರು ಬಹಳ ಹಿಂದೆಯೇ ಪ್ರತಿಪಾದಿಸಿದ್ದರು. 1920 ರ ನಾಗ್ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅವರ ನಿರಂತರ ಒತ್ತಾಯದ ಫಲವಾಗಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂದಿತು. ಮುಂಬೈ ಪ್ರಾಂತದಿಂದ ಪ್ರತ್ಯೇಕಗೊಂಡು ಕರ್ನಾಟಕಕ್ಕೆ ಪ್ರತ್ಯೇಕ ಕಾಂಗ್ರೆಸ್ ಸಮಿತಿ ರಚನೆಯಾಗಿದ್ದು ಧಾರವಾಡದ ಸ್ವಾತಂತ್ರ್ಯ ಹೋರಾಟಗಾರರಿಗೆ ಹೊಸ ಹುರುಪು ನೀಡಿತು. ಆಲೂರು ವೆಂಕಟರಾಯರು ಇದರ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿ, ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸಿದರು. ಅವರ ಪ್ರಯತ್ನದಿಂದಾಗಿಯೇ 1924 ರಲ್ಲಿ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 39 ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಲು ಸಾಧ್ಯವಾಯಿತು. ಬೆಳಗಾವಿ ಅಧಿವೇಶನದ ಯಶಸ್ಸಿನಲ್ಲಿ ಧಾರವಾಡ ಜಿಲ್ಲೆಯ ಸ್ವಯಂಸೇವಕರ ಪಾತ್ರ ದೊಡ್ಡದಾಗಿತ್ತು, ಮತ್ತು ಇವರನ್ನು ಸಂಘಟಿಸುವಲ್ಲಿ ಆಲೂರು ವೆಂಕಟರಾಯರು ಹಗಲಿರುಳು ಶ್ರಮಿಸಿದ್ದರು.

ಸೈಮನ್ ಕಮಿಷನ್ ಬಹಿಷ್ಕಾರ ಮತ್ತು ಶಾಸನಭಂಗ ಚಳುವಳಿ (1928–1930)

---

[5] Venkatrao, Alur, *Karnataka Gatavaibhava* (The Past Glory of Karnataka), 1917, Chapter 4, p. 58.
[6] Chidanandamurthy, M., *Karnataka Shasanagalu: Samskrutika Adhyayana* (Inscriptions of Karnataka: A Cultural Study), Kannada Sahitya Parishat, Bangalore.
[7] *The Bombay Chronicle*, Report on Dharwad Firing, Issue dated 4th July 1921. Retrieved from Nehru Memorial Museum and Library (NMML), New Delhi archives

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

1928 ರಲ್ಲಿ ಸೈಮನ್ ಕಮಿಷನ್ ಭಾರತಕ್ಕೆ ಬಂದಾಗ, "ಸೈಮನ್ ಗೋ ಬ್ಯಾಕ್" ಎಂಬ ಘೋಷಣೆಗಳೊಂದಿಗೆ ಇಡೀ ದೇಶ ಪ್ರತಿಭಟಿಸಿತು. ಧಾರವಾಡದಲ್ಲಿ ಆಲೂರು ವೆಂಕಟರಾಯರು ಯುವಜನತೆಯನ್ನು ಸಂಘಟಿಸಿ ಕಪ್ಪು ಬಾವುಟ ಪ್ರದರ್ಶನ ಮತ್ತು ಹರತಾಳಗಳನ್ನು ಯಶಸ್ವಿಗೊಳಿಸಿದರು. 1930 ರಲ್ಲಿ ಗಾಂಧೀಜಿಯವರ ದಂಡಿ ಯಾತ್ರೆಯೊಂದಿಗೆ ಆರಂಭವಾದ ಶಾಸನಭಂಗ ಚಳುವಳಿಯ ಸಂದರ್ಭದಲ್ಲಿ, ಧಾರವಾಡ ಜಿಲ್ಲೆಯು ಮತ್ತೊಮ್ಮೆ ಹೋರಾಟದ ಮುಂಚೂಣಿಗೆ ಬಂತು. ಆಲೂರು ವೆಂಕಟರಾಯರು ಆಗಲೇ ವಯಸ್ಸಾಗಿದ್ದರೂ, ತಮ್ಮ ಭಾಷಣಗಳು ಮತ್ತು ಬರಹಗಳ ಮೂಲಕ ಜನರನ್ನು ಪ್ರೇರೇಪಿಸುತ್ತಲೇ ಇದ್ದರು.

ಅಂಕೋಲಾದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹಕ್ಕೆ ಧಾರವಾಡದಿಂದ ನೂರಾರು ಸತ್ಯಾಗ್ರಹಿಗಳನ್ನು ಕಳುಹಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಕರನಿರಾಕರಣೆ ಚಳುವಳಿ ಮತ್ತು ಅರಣ್ಯ ಸತ್ಯಾಗ್ರಹಗಳಲ್ಲಿ ಧಾರವಾಡದ ರೈತರು ಭಾಗವಹಿಸುವಂತೆ ಅವರು ಪ್ರೋತ್ಸಾಹಿಸಿದರು. ಧಾರವಾಡದ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರ 1930 ರ ರಹಸ್ಯ ವರದಿಯೊಂದರಲ್ಲಿ ಹೀಗೆ ಉಲ್ಲೇಖಿಸಲಾಗಿದೆ: "ಆಲೂರು ವೆಂಕಟರಾಯರು ನೇರವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸದಿದ್ದರೂ, ಅವರೇ ಧಾರವಾಡದ ಎಲ್ಲಾ ಪ್ರತಿಭಟನೆಗಳ ಹಿಂದಿನ ಪ್ರಬಲ ಶಕ್ತಿಯಾಗಿದ್ದಾರೆ. ಅವರ ಬರಹಗಳು ಜನರನ್ನು ಪ್ರಚೋದಿಸುತ್ತಿವೆ. ಅವರನ್ನು ತಡೆಯದೆ ಚಳುವಳಿಯನ್ನು ಹತ್ತಿಕ್ಕುವುದು ಕಷ್ಟಸಾಧ್ಯ."[8]

ಏಕೀಕರಣ ಮತ್ತು ಸ್ವಾತಂತ್ರ್ಯ – ಒಂದೇ ನಾಣ್ಯದ ಎರಡು ಮುಖಗಳು :

ಆಲೂರು ವೆಂಕಟರಾಯರ ದೃಷ್ಟಿಯಲ್ಲಿ ಕರ್ನಾಟಕ ಏಕೀಕರಣ ಮತ್ತು ಭಾರತದ ಸ್ವಾತಂತ್ರ್ಯ ಇವೆರಡೂ ಪ್ರತ್ಯೇಕ ವಿಚಾರಗಳಾಗಿರಲಿಲ್ಲ. ಹರಿದು ಹಂಚಿಹೋಗಿದ್ದ ಕನ್ನಡಿಗರು ಒಂದಾಗದೆ ಬ್ರಿಟಿಷರ ವಿರುದ್ಧ ಪ್ರಬಲ ಹೋರಾಟ ಸಾಧ್ಯವಿಲ್ಲ ಎಂಬುದು ಅವರ ಖಚಿತ ನಿಲುವಾಗಿತ್ತು.

1907 ರಲ್ಲಿ ಧಾರವಾಡದಲ್ಲಿ ಅವರು ಆರಂಭಿಸಿದ 'ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ'ವು ಕೇವಲ ಚಾರಿತ್ರಿಕ ಸಂಶೋಧನೆಗೆ ಸೀಮಿತವಾಗಿರದೆ, ಕನ್ನಡ ಅಸ್ಮಿತೆಯನ್ನು ಜಾಗೃತಗೊಳಿಸುವ ಕೇಂದ್ರವಾಗಿತ್ತು. ಧಾರವಾಡವು ಅಂದಿನ ದಿನಗಳಲ್ಲಿ ಉತ್ತರ ಕರ್ನಾಟಕದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಾಜಧಾನಿಯಾಗಿದ್ದರಿಂದ, ಆಲೂರು ವೆಂಕಟರಾಯರ ವಿಚಾರಗಳು ಇಡೀ ಪ್ರಾಂತ್ಯಕ್ಕೆ ಸುಲಭವಾಗಿ ಹರಡಿದವು.

ಡಾ. ಜಿ. ಎಸ್. ಹಾಲಪ್ಪ ಅವರು ತಮ್ಮ "History of Freedom Movement in Karnataka" (ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಇತಿಹಾಸ) ಕೃತಿಯಲ್ಲಿ ಹೀಗೆ ಬರೆಯುತ್ತಾರೆ: *"Alur Venkatrao was the high priest of Karnataka nationalism. He prepared the emotional and intellectual ground upon which the later political struggles in Dharwad and the rest of North Karnataka were fought."* (ಆಲೂರು ವೆಂಕಟರಾಯರು ಕರ್ನಾಟಕ ರಾಷ್ಟ್ರೀಯತೆಯ ಮಹಾಪುರೋಹಿತರಾಗಿದ್ದರು. ಧಾರವಾಡ ಮತ್ತು ಉತ್ತರ ಕರ್ನಾಟಕದ ಉಳಿದ ಭಾಗಗಳಲ್ಲಿ ನಂತರದ ರಾಜಕೀಯ ಹೋರಾಟಗಳಿಗೆ ಅವರು ಭಾವನಾತ್ಮಕ ಮತ್ತು ಬೌದ್ಧಿಕ ತಳಪಾಯವನ್ನು ಸಿದ್ಧಪಡಿಸಿದರು).[9]

ಕ್ರಾಂತಿಕಾರಿಗಳೊಂದಿಗೆ ಸಂಪರ್ಕ :

ಆಲೂರು ವೆಂಕಟರಾಯರು ಬಹಿರಂಗವಾಗಿ ಕಾಂಗ್ರೆಸ್ ನ ಶಾಂತಿಯುತ ಮಾರ್ಗಗಳನ್ನು ಬೆಂಬಲಿಸುತ್ತಿದ್ದರೂ, ಧಾರವಾಡ ಮತ್ತು ಬೆಳಗಾವಿ ಭಾಗದ ಕ್ರಾಂತಿಕಾರಿ ಯುವಕರಿಗೂ ಗುಪ್ತವಾಗಿ ಬೆಂಬಲ ನೀಡುತ್ತಿದ್ದರು ಎಂಬ ಬಗ್ಗೆ ಕೆಲವು ದಾಖಲೆಗಳು ಸುಳಿವು ನೀಡುತ್ತವೆ.

ಗೋವಿಂದರಾವ್ ಯಳಗಾವಿ, ಗಂಗಾಧರರಾವ್ ದೇಶಪಾಂಡೆ ಮುಂತಾದ ತೀವ್ರಗಾಮಿ ನಾಯಕರೊಂದಿಗೆ ಅವರು ನಿಕಟ ಸಂಪರ್ಕ ಹೊಂದಿದ್ದರು. ಮಹಾರಾಷ್ಟ್ರದ ಕ್ರಾಂತಿಕಾರಿಗಳು ಧಾರವಾಡದ ಮೂಲಕ ಹಾದುಹೋಗುವಾಗ ಅವರಿಗೆ ಆಶ್ರಯ ನೀಡುವುದು, ಗುಪ್ತವಾಗಿ ಶಸ್ತ್ರಾಸ್ತ್ರಗಳನ್ನು ಸಾಗಿಸಲು ಸಹಾಯ ಮಾಡುವುದು ಮುಂತಾದ ಚಟುವಟಿಕೆಗಳಲ್ಲಿ ಆಲೂರು ವೆಂಕಟರಾಯರ ಒಳಸಂಚು ಇತ್ತು ಎಂದು ಬ್ರಿಟಿಷ್ ಗುಪ್ತಚರ ಇಲಾಖೆ ಶಂಕಿಸಿತ್ತು. ಆದರೆ, ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಅತ್ಯಂತ ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸುತ್ತಿದ್ದರಿಂದ, ಬ್ರಿಟಿಷ್ ಸರ್ಕಾರಕ್ಕೆ ಅವರ ವಿರುದ್ಧ ಯಾವುದೇ ನೇರ ಸಾಕ್ಷ್ಯಾಧಾರಗಳು ಸಿಗಲಿಲ್ಲ.[10]

ಮಹಿಳೆಯರ ಪಾತ್ರ ಮತ್ತು ಸಮಾಜ ಸುಧಾರಣೆ

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಆಲೂರು ವೆಂಕಟರಾಯರಿಗೆ ಸ್ಪಷ್ಟ ಅರಿವಿತ್ತು. ಧಾರವಾಡದಲ್ಲಿ ಮಹಿಳೆಯರನ್ನು ಸಂಘಟಿಸಲು ಅವರು ವಿಶೇಷ ಒತ್ತು ನೀಡಿದರು. ಖಾದಿ ಪ್ರಚಾರ ನೂಲುವ ಕಾರ್ಯಕ್ರಮಗಳು ಮತ್ತು ಸ್ವದೇಶಿ ವ್ರತವನ್ನು ಆಚರಿಸಲು ಮಹಿಳೆಯರಿಗೆ ಕರೆ ನೀಡಿದರು. ಉಮಾಬಾಯಿ ಕುಂದಾಪುರ , ಕೃಷ್ಣಾಬಾಯಿ ಪಂಜೀಕರ್ ರಂತಹ ಮಹಿಳಾ ನಾಯಕಿಯರು ಧಾರವಾಡದಲ್ಲಿ ಬೆಳೆಯಲು ಆಲೂರು ವೆಂಕಟರಾಯರ ಪ್ರೇರಣೆ ಬಹುಮುಖ್ಯವಾಗಿತ್ತು. ಜೊತೆಗೆ, ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನೋದ್ಧಾರ ಕಾರ್ಯಗಳಲ್ಲೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಸಾಮಾಜಿಕವಾಗಿ ಒಡೆದ ಸಮಾಜವು ಎಂದಿಗೂ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲಾರದು ಎಂದು ಅವರು ನಂಬಿದ್ದರು.

ಸಾಹಿತ್ಯ ಕೃಷಿ ಮತ್ತು ಬೌದ್ಧಿಕ ನಾಯಕತ್ವ

ಸ್ವಾತಂತ್ರ್ಯ ಹೋರಾಟದ ಉತ್ತುಂಗದಲ್ಲಿದ್ದಾಗಲೂ ಆಲೂರು ವೆಂಕಟರಾಯರು ತಮ್ಮ ಸಾಹಿತ್ಯ ಕೃಷಿಯನ್ನು ನಿಲ್ಲಿಸಲಿಲ್ಲ. 'ಕರ್ನಾಟಕ ವೀರರತ್ನಗಳು', 'ಶಿವಾಜಿ ಚರಿತ್ರೆ', 'ವಿದ್ಯಾರಣ್ಯ ಚರಿತ್ರೆ' ಮುಂತಾದ ಕೃತಿಗಳ ಮೂಲಕ ಜನರಲ್ಲಿ ದೇಶಭಕ್ತಿಯನ್ನು ಬಿತ್ತಿದರು. ಅವರು ಭಗವದ್ಗೀತೆಯ ತಿಲಕರ 'ಗೀತಾ

[8] *Confidential Report of the District Magistrate, Dharwad*, File No. 89/1930, Home Department (Special), Government of Bombay. State Archives, Vidhana Soudha, Bangalore

[9] Halappa, G. S., *History of Freedom Movement in Karnataka*, Volume II, Government of Mysore Publication, 1964, p. 182.

[10] Ph.D. Thesis: Patil, V. S., *Role of Dharwad District in the Freedom Struggle of India (1885-1947)*, Department of History, Karnatak University, Dharwad, 1995, p. 145.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ರಹಸ್ಯ'ವನ್ನು ಕನ್ನಡಕ್ಕೆ ಅನುವಾದಿಸಿದರು. ಇದು ಧಾರವಾಡದ ಯುವಕರಲ್ಲಿ ನಿಷ್ಕಾಮ ಕರ್ಮ ಮತ್ತು ದೇಶಸೇವೆಯ ಆದರ್ಶವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಧಾರವಾಡದ 'ಕರ್ನಾಟಕ ಕಾಲೇಜು' ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ವಿಚಾರಗಳನ್ನು ಬಿತ್ತುವಲ್ಲಿ ಅವರ ಉಪನ್ಯಾಸಗಳು ಪ್ರಭಾವಶಾಲಿಯಾಗಿದ್ದವು. ಅವರು ಆಗಾಗ ಕಾಲೇಜು ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ, ಭಾರತದ ಭವಿಷ್ಯದ ಬಗ್ಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು.

ಅಂತಿಮ ವರ್ಷಗಳು ಮತ್ತು ಪರಂಪರೆ

1940 ರ ದಶಕದ ವೇಳೆಗೆ ಆಲೂರು ವೆಂಕಟರಾಯರ ಆರೋಗ್ಯ ಕ್ಷೀಣಿಸತೊಡಗಿತು. 1942 ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಅವರು ನೇರವಾಗಿ ಮೈದಾನಕ್ಕಿಳಿಯಲು ಸಾಧ್ಯವಾಗದಿದ್ದರೂ, ಧಾರವಾಡದ ಯುವಕರಿಗೆ ಅವರೇ ಸ್ಫೂರ್ತಿಯ ಚಿಲುಮೆಯಾಗಿದ್ದರು. 15 ಆಗಸ್ಟ್ 1947 ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ, ಆಲೂರು ವೆಂಕಟರಾಯರ ದಶಕಗಳ ಕನಸು ನನಸಾಯಿತು. ಹಾಗೆಯೇ, ಅವರ ಮತ್ತೊಂದು ಕನಸಾದ 'ಏಕೀಕೃತ ಕರ್ನಾಟಕ' 1956 ರಲ್ಲಿ (ನವೆಂಬರ್ 1, 1956) ಸಾಕಾರಗೊಂಡಿತು. ಅವರು 25 ಫೆಬ್ರವರಿ 1964 ರಂದು ನಿಧನರಾದರು.

ಉಪಸಂಹಾರ ಮತ್ತು ವಿಶ್ಲೇಷಣಾತ್ಮಕ ಮೌಲ್ಯಮಾಪನ :

ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಆಲೂರು ವೆಂಕಟರಾಯರ ಹೆಸರನ್ನು ಹೊರತುಪಡಿಸಿ ಬರೆಯಲು ಸಾಧ್ಯವಿಲ್ಲ. ಅವರ ಸಾಧನೆಗಳನ್ನು ಕೇವಲ ರಾಜಕೀಯ ಹೋರಾಟದ ಚೌಕಟ್ಟಿನಲ್ಲಿ ಅಳೆಯುವುದು ಅಪೂರ್ಣವಾಗುತ್ತದೆ. ಲಭ್ಯವಿರುವ ಐತಿಹಾಸಿಕ ದಾಖಲೆಗಳು ಮತ್ತು ಸಮಕಾಲೀನ ಘಟನೆಗಳನ್ನು ವಿಶ್ಲೇಷಿಸಿದಾಗ, ಅವರ ನಾಯಕತ್ವದ ನಾಲ್ಕು ಪ್ರಮುಖ ಆಯಾಮಗಳು ಸ್ಪಷ್ಟವಾಗಿ ಗೋಚರಿಸುತ್ತವೆ:

1. ಸಾಂಸ್ಕೃತಿಕ ರಾಷ್ಟ್ರೀಯತೆಯೇ ರಾಜಕೀಯ ಅಸ್ತ್ರವಾಗಿ: ಆಲೂರು ವೆಂಕಟರಾಯರು ಕೇವಲ ಬ್ರಿಟಿಷರ ವಿರುದ್ಧ ರಾಜಕೀಯ ಭಾಷಣಗಳನ್ನು ಮಾಡಲಿಲ್ಲ. ಬದಲಾಗಿ, "ಸಾಂಸ್ಕೃತಿಕ ರಾಷ್ಟ್ರೀಯತೆ" ಮತ್ತು ಐತಿಹಾಸಿಕ ಪ್ರಜ್ಞೆಯನ್ನು ಅಸ್ತ್ರವನ್ನಾಗಿ ಬಳಸಿದರು. 'ಕರ್ನಾಟಕ ಗತವೈಭವ'ದ ಮೂಲಕ ಅವರು ಹುಟ್ಟುಹಾಕಿದ ಸ್ವಾಭಿಮಾನ ಕೇವಲ ಕನ್ನಡಿಗರನ್ನು ಭಾಷಿಕವಾಗಿ ಒಗ್ಗೂಡಿಸಲಿಲ್ಲ, ಅದು ನೇರವಾಗಿ ವಸಾಹತುಶಾಹಿ ವಿರೋಧಿ ಮನೋಭಾವವಾಗಿ ರೂಪಾಂತರಗೊಂಡಿತು. ಗುಲಾಮಗಿರಿಯ ಮನಸ್ಥಿತಿಯಲ್ಲಿದ್ದ ಜನರಿಗೆ ಗತಕಾಲದ ವೈಭವವನ್ನು ನೆನಪಿಸಿ ಅವರನ್ನು ಹೋರಾಟಕ್ಕೆ ಅಣಿಗೊಳಿಸಿದ ಅವರ ತಂತ್ರಗಾರಿಕೆ ಅತ್ಯಂತ ಯಶಸ್ವಿಯಾಯಿತು.

2. ನಾಯಕರನ್ನು ರೂಪಿಸಿದ 'ಕುಲಪುರೋಹಿತ': ಸ್ವಾತಂತ್ರ್ಯ ಚಳುವಳಿಯಲ್ಲಿ ಆಲೂರು ವೆಂಕಟರಾಯರ ಬಹುದೊಡ್ಡ ಕೊಡುಗೆಯೆಂದರೆ, ಅವರು ಕೇವಲ ಮುಂದಾಳತ್ವ ವಹಿಸಲಿಲ್ಲ, ಬದಲಿಗೆ ದ್ವಿತೀಯ ಹಂತದ ಬಲಿಷ್ಠ ನಾಯಕರ ಪಡೆಯನ್ನು ಸೃಷ್ಟಿಸಿದರು. ರಂಗರಾವ್ ದಿವಾಕರ್ ಮೊಹರೆ ಹಣಮಂತರಾಯ, ಕದಪಾ ರಾಘವೇಂದ್ರರಾವ್, ಮತ್ತು ಉಮಾಬಾಯಿ ಕುಂದಾಪುರ ಅವರಂತಹ ದಿಗ್ಗಜರು ಧಾರವಾಡದಲ್ಲಿ ಪ್ರಭಾವಿ ನಾಯಕರಾಗಿ ಬೆಳೆಯಲು ಆಲೂರು ವೆಂಕಟರಾಯರ ಮಾರ್ಗದರ್ಶನವೇ ಕಾರಣವಾಗಿತ್ತು. ಅವರು ಹೋರಾಟಗಾರರಿಗೆ ತಾತ್ವಿಕ ಮತ್ತು ಬೌದ್ಧಿಕ ತಳಪಾಯವನ್ನು ಒದಗಿಸುವ "ಶಿಷ್ಟಗುರು" ಅಥವಾ ಕುಲಪುರೋಹಿತರಾಗಿ ಕಾರ್ಯನಿರ್ವಹಿಸಿದರು.

3. ಸಾಂಸ್ಥಿಕ ನೆಲೆಗಟ್ಟಿನ ನಿರ್ಮಾಣ: ವ್ಯಕ್ತಿಗತ ಹೋರಾಟಕ್ಕಿಂತ ಸಾಂಸ್ಥಿಕ ಹೋರಾಟಕ್ಕೆ ಹೆಚ್ಚು ಬಲವಿದೆ ಎಂಬುದನ್ನು ಅರಿತಿದ್ದ ವಿರಳ ನಾಯಕರಲ್ಲಿ ಆಲೂರು ಒಬ್ಬರು. ಧಾರವಾಡದಲ್ಲಿ 'ವಿದ್ಯಾವರ್ಧಕ ಸಂಘ', 'ಇತಿಹಾಸ ಸಂಶೋಧನಾ ಮಂಡಲ', 'ರಾಷ್ಟ್ರೀಯ ಶಾಲೆಗಳು' ಮತ್ತು 'ಕರ್ಮವೀರ' ಪತ್ರಿಕೆಯಂತಹ ಸಂಸ್ಥೆಗಳನ್ನು ಸ್ಥಾಪಿಸುವ ಹಾಗೂ ಬಲಪಡಿಸುವ ಮೂಲಕ, ಅವರು ಸ್ವಾತಂತ್ರ್ಯ ಹೋರಾಟಕ್ಕೆ ಶಾಶ್ವತವಾದ ವೇದಿಕೆಗಳನ್ನು ನಿರ್ಮಿಸಿದರು. ಈ ಸಂಸ್ಥೆಗಳು ಕೇವಲ ಅಕ್ಷರಶಾಲೆಯಾಗದೆ, ಬ್ರಿಟಿಷ್ ವಿರೋಧಿ ಚಟುವಟಿಕೆಗಳ 'ಗರಡಿಮನೆ'ಗಳಾಗಿ ಮಾರ್ಪಟ್ಟವು.

4. ಏಕೀಕರಣ ಮತ್ತು ಸ್ವಾತಂತ್ರ್ಯದ ವಿಶಿಷ್ಟ ಸಮ್ಮಿಲನ: ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಸ್ಥಾಪನೆಗೆ ಅವರು ನೀಡಿದ ಒತ್ತಡ ಅವರ ರಾಜಕೀಯ ಮುತ್ಸದ್ದಿತನಕ್ಕೆ ಸಾಕ್ಷಿಯಾಗಿದೆ. "ಭಾಷಾವಾರು ಪ್ರಾಂತ್ಯಗಳ ರಚನೆಯಾಗದೆ ತಳಮಟ್ಟದ ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸುವುದು ಅಸಾಧ್ಯ" ಎಂಬ ಅವರ ವಾದವನ್ನು ಅಂತಿಮವಾಗಿ ಮಹಾತ್ಮ ಗಾಂಧೀಜಿಯವರೂ ಒಪ್ಪಿಕೊಳ್ಳಬೇಕಾಯಿತು. ಆಲೂರು ವೆಂಕಟರಾಯರ ದೃಷ್ಟಿಯಲ್ಲಿ, 'ಕನ್ನಡ ನಾಡಿನ ಏಕೀಕರಣ' ಎನ್ನುವುದು 'ಭಾರತದ ಸ್ವಾತಂತ್ರ್ಯ'ದ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿತ್ತು.

ಅಂತಿಮ ನುಡಿ: ಒಟ್ಟಾರೆಯಾಗಿ ಹೇಳುವುದಾದರೆ, 1905 ರ ಬಂಗಾಳ ವಿಭಜನೆಯ ದಿನಗಳಿಂದ ಹಿಡಿದು 1947 ರ ಸ್ವಾತಂತ್ರ್ಯ ಪ್ರಾಪ್ತಿಯವರೆಗಿನ ಧಾರವಾಡದ ಪ್ರತಿಯೊಂದು ರಾಜಕೀಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪಲ್ಲಟಗಳ ಹಿಂದೆಯೂ ಆಲೂರು ವೆಂಕಟರಾಯರ ಹೆಜ್ಜೆಗುರುತುಗಳಿವೆ. ಧಾರವಾಡದ ಮಣ್ಣಿನಲ್ಲಿ ರಾಷ್ಟ್ರೀಯತೆಯ ಬೀಜ ಬಿತ್ತಿ, ಅದಕ್ಕೆ ನೀರುಣಿಸಿ, ಹೆಮ್ಮರವಾಗಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕೇವಲ ಒಬ್ಬ ರಾಜಕೀಯ ಹೋರಾಟಗಾರನಾಗಿರದೆ, ಧಾರವಾಡ ಜಿಲ್ಲೆಯ ಜನತೆಯ ಭೌದ್ಧಿಕ ಮತ್ತು ಭಾವನಾತ್ಮಕ ಜಗತ್ತನ್ನು ಆಳಿದ ಕ್ರಾಂತಿಕಾರಿ ಚಿಂತಕನಾಗಿ ಆಲೂರು ವೆಂಕಟರಾಯರು ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ರಾರಾಜಿಸುತ್ತಾರೆ.

ಆಧಾರ ಗ್ರಂಥಗಳು:

1. Kamath, Suryanath U., *A Concise History of Karnataka: From Pre-historic Times to the Present*, Jupiter Books, Bangalore, 2001.
2. Alur Venkatrao, *Nanna Jeevana Smrutigalu* (My Life Memories) - Autobiography, 1941.
3. *Bombay Presidency Secret Police Abstracts of Intelligence*, Year 1908, Volume XXI, p. 112. Maharashtra State Archives, Mumbai.
4. *Karmaveera* Weekly Newspaper, Editorial dated 15th August 1921, Microfilm collection, Karnatak University Dharwad (KUD) Library.
5. Venkatrao, Alur, *Karnataka Gatavaibhava* (The Past Glory of Karnataka), 1917,

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

6. Chidanandamurthy, M., *Karnataka Shasanagalu: Samskrutika Adhyayana* (Inscriptions of Karnataka: A Cultural Study), Kannada Sahitya Parishat, Bangalore.
7. *The Bombay Chronicle*, Report on Dharwad Firing, Issue dated 4th July 1921. Retrieved from Nehru Memorial Museum and Library (NMML), New Delhi archives.
8. *Confidential Report of the District Magistrate, Dharwad*, File No. 89/1930, Home Department (Special), Government of Bombay. State Archives, Vidhana Soudha, Bangalore.
9. Halappa, G. S., *History of Freedom Movement in Karnataka*, Volume II, Government of Mysore Publication.
10. Ph.D. Thesis: Patil, V. S., *Role of Dharwad District in the Freedom Struggle of India (1885-1947)*, Department of History, Karnatak University, Dharwad, 1995.
11. Diwakar, R. R. (Ed.), *Karamaveera - Diamond Jubilee Commemoration Volume*, Hubli.
12. ಜೋಶಿ, ಶಂ. ಬಾ., ಕರ್ನಾಟಕದ ವೀರರತ್ನಗಳು.
13. ಹರ್ಡೇಕರ್ ಮಂಜಪ್ಪನವರ ಆತ್ಮಚರಿತ್ರೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿ ತೀರದಲ್ಲಿ ಕಾದಂಬರಿ: ಸ್ತ್ರೀ ತಾತ್ವಿಕ ನೆಲೆಗಳು

ಡಾ.ರೇಖಾ ಬಾಳೋಜಿ
ಅತಿಥಿ ಉಪನ್ಯಾಸಕರು
ಕನ್ನಡ ಅಧ್ಯಯನ ವಿಭಾಗ
ಹಾವೇರಿ ವಿಶ್ವವಿದ್ಯಾಲಯ, ಹಾವೇರಿ
Email-rekhabaloji1981@gmil.com

Manuscript ID:
JRD -2026-180530
ISSN: 2230-9578
Volume 18
Issue 5(IV)
Pp. 125-128
April- 2026
Submitted: 13 Apr. 2026
Revised: 26 Apr.2026
Accepted: 13 May. 2026
Published: 31 May. 2026

'ಚಂದ್ರಗಿರಿ ತೀರದಲ್ಲಿ' ಸಾರಾ ಅವರ ಮೊದಲ ಕಾದಂಬರಿ, ಪುರುಷರಿಗೆ ಸುಲಭವೆನಿಸಿರುವ ವಿವಾಹ ವಿಚ್ಛೇದನದ ಹಕ್ಕಿನಿಂದಾಗಿ ಇಸ್ಲಾಂ ಧರ್ಮದ ಮಹಿಳೆಯರು ಅನುಭವಿಸುವ ದುರಂತವನ್ನು ಪರಿಚಯಿಸುತ್ತದೆ. ಜೊತೆಗೆ ಇಸ್ಲಾಂ ಧರ್ಮದಲ್ಲಿರುವ ವಿವಾಹ ಸಂಬಂಧಿ ನಿಯಮಗಳನ್ನು ಕುರಿತು ವಿಶ್ಲೇಷಿಸುತ್ತದೆ. "ಧರ್ಮ ಗ್ರಂಥದಲ್ಲಿರುವದನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರುವಾಗ ಹೆಣ್ಣಾದವಳು ಯಾವ ರೀತಿಯ ಮಾನಸಿಕ ಚಿತ್ರಹಿಂಸೆಗೆ ಗುರಿಯಾಗುತ್ತಾಳೆಂದು ತಿಳಿಸುತ್ತಾರೆ. ಕಾದಂಬರಿ ನಾಯಕಿ ನಾದಿರಾ ತನ್ನ ತಂದೆಯ ಅವಿವೇಕದ ಹಟದಿಂದಾಗಿ ತನಗೆ ಗೊತ್ತಿಲ್ಲದೆಯೇ ಗಂಡನಿಂದ ವಿಚ್ಛೇದನಗೊಳ್ಳುತ್ತಾಳೆ. ಪಶ್ಚಾತ್ತಾಪಗೊಂಡ ತಂದೆ ಮತ್ತೊಮ್ಮೆ ಆಕೆಯನ್ನು ಮೊದಲಿನ ಪತಿಯೊಂದಿಗೆ ವಿವಾಹ ಮಾಡಲು ನಿರ್ಧರಿಸುತ್ತಾನೆ. ಆದರೆ ಧರ್ಮದ ಕಟ್ಟಳೆಗಳು ತೊಡಕಾಗುತ್ತವೆ. ವಿಚ್ಛೇದಿತ ಪತ್ನಿಯೂ ಮತ್ತೆ ಮೊದಲಿನ ಗಂಡನನ್ನು ವಿವಾಹವಾಗಬೇಕಾದರೆ ಪರ ಪುರುಷನೊಂದಿಗೆ ವಿವಾಹವಾಗಿ ಆತನೊಂದಿಗೆ ಒಂದು ರಾತ್ರಿ ಕಳೆಯಬೇಕೆಂದು ಇಸ್ಲಾಂ ಧರ್ಮದ ನೀತಿಯ ಸ್ತ್ರೀ ವಿರೋಧಿ ಅವಮಾನವನ್ನು ಸಹಿಸಲಾರದೇ ನಾದಿರಾ ಧರ್ಮಪ್ರತೀಕವಾಗಿರುವ ಮಸೀದಿಕೊಳ್ಳದಲ್ಲಿ ಪ್ರಾಣ ಕಳೆದುಕೊಳ್ಳುತ್ತಾಳೆ. ಹೀಗೆ ಧರ್ಮದ ಕಟ್ಟುಪಾಡುಗಳು ನಾದಿರಾಳ ಜೀವನವನ್ನು ಬಲಿತೆಗೆದುಕೊಳ್ಳುತ್ತವೆ.

ಚಂದ್ರಗಿರಿ ತೀರದ ಸಮೀಪ ಇರುವ ಕಿಳಿಯೂರಿನ ನಿವಾಸಿ ಮಹಮ್ಮದ್ ಖಾನ್ ಮುಂಗೋಪಿ ಸ್ವಭಾವದ ವ್ಯಕ್ತಿ. ಈತನ ಪತ್ನಿ ಫಾತಿಮಾ ಒಳ್ಳೆಯ ಗೃಹಿಣಿ. ಈ ದಂಪತಿಗಳಿಗೆ ನಾದಿರಾ ಮತ್ತು ಜಮೀಲಾ ಇಬ್ಬರು ಹೆಣ್ಣು ಮಕ್ಕಳು. ಜೀವನಾಧಾರಕ್ಕಾಗಿ ಒಂದಿಷ್ಟು ತೆಂಗಿನ ತೋಟ, ಒಂದೆರಡು ದನಗಳು, ಒಂದೆರಡು ಆಡುಗಳು, ಕೋಳಿಗಳನ್ನು ಸಾಕಿದ್ದರು. ಹದಿನಾಲ್ಕು ವರ್ಷದ ನಾದಿರಾಳನ್ನು ಪಕ್ಕದ ಕಾವಳಿ ಊರಿನ ೨೩ ವರ್ಷದ ರಶೀದನ ಜೊತೆ ವಿವಾಹ ಮಾಡಿರುತ್ತಾರೆ. ರಶೀದನು ತಕ್ಕಮಟ್ಟಿಗೆ ತೋಟವನ್ನು ಮತ್ತು ಚಿಕ್ಕ ವ್ಯಾಪಾರವನ್ನು ನಡೆಸುತ್ತಿದ್ದರಿಂದ ಆತನ ಸಂಸಾರವು ಯಾವ ತಾಪತ್ರಯವಿಲ್ಲದೆ ಸಾಗಿರುತ್ತದೆ. ನಾದಿರಾಳಿಗೆ ಗಂಡು ಮಗು ಜನಿಸುತ್ತದೆ. ನಾದಿರಾ ತನ್ನ ಗಂಡ, ಮಗ, ಅತ್ತೆ ಇವರೊಂದಿಗೆ ಸುಖ-ಸಂತೋಷದಿಂದ ಇರುತ್ತಾಳೆ. ಇತ್ತ ನಾದಿರಾಳ ತಂದೆ-ತಾಯಿ-ತಂಗಿ ಬೀಡಿ ವ್ಯಾಪಾರ ಮಾಡುತ್ತಾ ಜೀವನ ಸಾಗಿಸುತ್ತಿರುತ್ತಾರೆ. ಜಮೀಲಾಳ ವಿವಾಹಕ್ಕಾಗಿ ಕಡಿಮೆ ಬಿದ್ದ ವರದಕ್ಷಿಣೆ ಹಣವನ್ನು ಮಹಮ್ಮದ್ ಖಾನ್ ತನ್ನ ಅಳಿಯ ರಶೀದನ ಹತ್ತಿರ ಸಹಾಯ ಕೇಳುತ್ತಾನೆ. ರಶೀದ ನಿರಾಕರಿಸಿದಾಗ ಅದನ್ನು ಅಪಮಾನವೆಂದು ಬಗೆದು ಸಿಟ್ಟಿನಿಂದ ಮಗಳು ನಾದಿರಾಳನ್ನು ತನ್ನ ಮನೆಗೆ ಕರೆದುಕೊಂಡುಬರುತ್ತಾನೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ರೇಖಾ ಬಾಳೋಜಿ ಅತಿಥಿ ಉಪನ್ಯಾಸಕರು ಕನ್ನಡ ಅಧ್ಯಯನ ವಿಭಾಗ ಹಾವೇರಿ ವಿಶ್ವವಿದ್ಯಾಲಯ, ಹಾವೇರಿ

How to cite this article:
ಡಾ.ರೇಖಾ ಬಾಳೋಜಿ. (2026). ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿ ತೀರದಲ್ಲಿ ಕಾದಂಬರಿ: ಸ್ತ್ರೀ ತಾತ್ವಿಕ ನೆಲೆಗಳು . Journal of Research & Development, 18(5(IV)), 125–128.
https://doi.org/10.5281/zenodo.20994630

Quick Response Code:
Website:
https://jrdrvb.org/
DOI:
10.5281/zenodo.20994630
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ತವರಿನಲ್ಲಿರುವ ನಾದಿರಾಳಿಗೆ ತನ್ನ ತಂದೆಯ ಕುತಂತ್ರ ತಿಳಿದು ಕುಸಿಯುತ್ತಾಳೆ. ನಾದಿರಾ ತನ್ನ ಗಂಡ, ಅತ್ತೆಗಾಗಿ ಹಗಲಿರುಳು ಪರಿತಪಿಸುತ್ತಾ, ತನ್ನ ಗಂಡ ತನ್ನನ್ನು ಕರೆಯಲು ಬರುತ್ತಾನೆನ್ನುವ ನಂಬಿಗೆಯಲ್ಲಿಯೇ ಕಾಲ ತಳ್ಳುತ್ತಾಳೆ. ಇತ್ತ ಮಹಮ್ಮದ್‌ಖಾನ್ ಮಗಳನ್ನು ಗಂಡನ ಮನೆಗೆ ಕಳಿಸುವದಿಲ್ಲ. ಇಂತಹ ಸ್ಥಿತಿಯಲ್ಲಿ ನಾದಿರಾಳ ಅಳಲು, ವೇದನೆ ಮುಗಿಲು ಮುಟ್ಟುತ್ತದೆ. ಸದಾ ಗಂಡನ ಚಿಂತೆಯಲ್ಲಿ ರುವ ನಾದಿರಾ ಕ್ರಮೇಣ ಚಿಂತೆಯಿಂದ ಜರ್ಜರಿತಳಾಗುತ್ತಾಳೆ. ಇಂತಹ ಸ್ಥಿತಿಯಲ್ಲಿ ತನ್ನ ಗಂಡನ ಊರಿನಿಂದ ಬಂದ ಮೀನು ಮಾರುವ ಪಾರುವನ್ನು ನೋಡಿ ಸಂತೋಷಪಡುತ್ತಾಳೆ.

ಪಾರು, ರಶೀದನ ಪತ್ರವನ್ನು ನಾದಿರಾಗೆ ತಲುಪಿಸುತ್ತಾಳೆ. "ನಾಳೆ ಸಂಜೆಗೂ ಪಾರು ಬರುವಳು ಅವಳೊಡನೆ ದೋಣಿಯಲ್ಲಿ ಕುಳಿತು ಬಾಗೋಡು ಗ್ರಾಮಕ್ಕೆ ಬಂದು ಬೀಡು' ಎಂಬ ಪತ್ರದ ಸಂದೇಶದಿಂದ ನಾದಿರಾ ಸಂತೋಷಪಡುತ್ತಾಳೆ. ಆದರೆ ನಾದಿರಾ ಧರ್ಮದ ಭಯದಿಂದ "ತಾನು ತನ್ನ ತಂದೆಗೆ ತಿಳಿಯದೆ ಈ ಚಂದ್ರಗಿರಿಯನ್ನು ದಾಟುವುದು ಎಂದಾದರೂ ಸಾಧ್ಯವೇ? ಮುಸ್ಲಿಂ ಹೆಣ್ಣು ಮಕ್ಕಳು ಎಷ್ಟೊಂದು ಅಬಲೆಯರು, ಅಸಹಾಯಕರೂ ಆಗಿದ್ದಾರೆ? ತನ್ನ ಗಂಡನೇ ಬಂದು, ನದಿಯಾಚೆ ನಿಂತು ಕರೆಯುತ್ತಿದ್ದರೂ ತಂದೆಯ ಕಣ್ಣು ತಪ್ಪಿಸಿ ಆತನ ಬಳಿ ಹೋಗುವಂತಿಲ್ಲ'ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಳೆ. ಸಮಾಜದ ಭೀತಿ, ಧರ್ಮದ ಕಟ್ಟಳೆಗಳ ಭಯದಲ್ಲಿ ಸಿಲುಕಿರುವ ತಾಯಿಯಿಂದಲೂ ಯಾವುದೇ ರೀತಿಯ ಸಹಾಯ ಸಿಗದೆ ಹೋಗುತ್ತದೆ.

ಪಾರುವಿಗೆ 'ತನ್ನ ತಂದೆಯ ಜೊತೆ ರಾಜಿಮಾಡಿಕೊಂಡು ತನ್ನನ್ನು ಕರೆದುಕೊಂಡು ಹೋಗೆಂದು ಗಂಡನಿಗೆ ಹೇಳಿಕಳಿಸುತ್ತಾಳೆ. ಪತಿಯ ಪ್ರೀತಿಯ ಕನಸಿನಲ್ಲಿ ತೇಲಿ ಹೋಗುತ್ತಿದ್ದ ನಾದಿರಾ ತನ್ನಲ್ಲಿ ಹಲವಾರು ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾಳೆ. 'ತನ್ನ ದುಡಿಮೆಯ ಆದಾಯ ತನ್ನ ತಂದೆ ಬಯಸಿದ ಕಾರಣವೇನೋ ತನ್ನನ್ನು ಇಲ್ಲಿಟ್ಟುಕೊಂಡಿದ್ದಾರೆ' ಎಂದು ಬಗೆದು ಆಕೆಯ ತಂದೆಯ ಬಗ್ಗೆ ಪ್ರೀತಿ, ವಿಶ್ವಾಸ ಹಿದುಕೊಳ್ಳುತ್ತಾಳೆ. ಹೀಗಿರುವಾಗ ರಶೀದನ ತಾಯಿ ನಾದಿರಾಳ ಮನೆಗೆ ಬಂದು ಆಕೆ ಮಗನನ್ನು ಕರೆದುಕೊಂಡು ಹೋಗುತ್ತಾಳೆ. ಆಗ ನಾದಿರಾಳ ಕನಸುಗಳು ಒಡೆದು ಚೂರು ಚೂರಾಗುತ್ತವೆ.

ಮಗು ಹೋದಾಗಿನಿಂದ ನಾದಿರಾಳು ಹುಚ್ಚಿಯಂತಾಗುತ್ತಾಳೆ, ಕೆಲವೊಮ್ಮೆ ಮೌನಿಯಾಗಿರುತ್ತಾಳೆ. ಆಕೆಗೆ ಗೊತ್ತಿಲ್ಲದಂತೆ ಆಕೆಯ ತಂದೆಯೂ ರಶೀದನಿಂದ ಒತ್ತಾಯ ಪೂರ್ವಕವಾಗಿ ತಲಾಖ್ ಪಡೆಯುತ್ತಾನೆ. ಇತ್ತ ನಾದಿರಾಳಿಗೆ ನಿನ್ನ ಗಂಡ ತಲಾಖ್ ಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಾನೆ. ಅಲ್ಲದೆ ಹಣದ ಆಸೆಗಾಗಿ ಊರ ಶ್ರೀಮಂತ ಮುದುಕ ಸಲೀಂನೊಂದಿಗೆ ನಾದಿರಾಳ ವಿವಾಹ ಮಾಡಲು ಪ್ರಯತ್ನಿಸುತ್ತಾನೆ. ಮಗಳು ತಿರಸ್ಕರಿಸುತ್ತಾಳೆ. ನಾದಿರಾಳಿಗೆ ತನ್ನ ಗಂಡ ತಲಾಖ್ ಕೊಡುವಷ್ಟು ನೀಚ ವ್ಯಕ್ತಿಯಾಗಿರಲಿಲ್ಲವೆನ್ನುವುದು ಮೀನ ಮಾರುವ ಪಾರುವಿನ ಮೂಲಕ ತಿಳಿದು ಬರುತ್ತದೆ. ತನ್ನ ಮಗು ಮತ್ತು ಗಂಡನಿಗಾಗಿ ಮತ್ತಷ್ಟು ಹಂಬಲಿಸುತ್ತಾಳೆ.

ವಯಸ್ಸಾಗಿದ್ದ ತಂದೆ ಮಹಮ್ಮದ್ ಖಾನ್ ಗೆ ಮತ್ತು ಆಕೆಯ ಗಂಡ ರಶೀದನಿಗೆ ತಮ್ಮ ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಾರೆ. ನಾದಿರಾಳ ತಂದೆ, ಮತ್ತೆ ತನ್ನ ಮಗಳನ್ನು ರಶೀದನ ಜೊತೆ ಪುನಃ ವಿವಾಹ ಮಾಡಲು ಮುಂದಾಗುತ್ತಾನೆ. ಆದರೆ ಮರು ವಿವಾಹಕ್ಕೆ ಅಂಟಿಕೊಂಡಿದ್ದ ಧರ್ಮದ ಕಟ್ಟುಪಾಡುಗಳನ್ನು ಕೇಳಿ ನಾದಿರಾ ಆತಂಕ ಪಡುತ್ತಾಳೆ. ಖುರ್ ಆನನಿನಲ್ಲಿ ಹೇಳಿರುವಂತೆ "ಒಮ್ಮೆ ಒಬ್ಬನು ತನ್ನ ಹೆಂಡತಿಯ ತಲಾಖ್ ನ್ನು ಮೂರು ಸಲ ಹೇಳಿದರೆ ಅಲ್ಲಿಗೆ ಆ ಗಂಡ ಹೆಂಡತಿಯ ಸಂಬಂಧ ಸಂಪೂರ್ಣ ಕೊನೆಗೊಂಡಿತು. ಪುನಃ ಅವರು ಒಂದಾಗಬೇಕಾದರೆ ಆಕೆ ಬೇರೊಬ್ಬನನ್ನು ಮದುವೆಯಾಗಿ ಅವನಿಂದಲೂ ತಲಾಖ್ ಪಡೆದಿರಬೇಕು. ಹಾಗೆ ಅವಳು ಬೇರೊಬ್ಬನನ್ನು ಮದುವೆಯಾಗಿಲ್ಲದಿದ್ದರೆ ಒಂದು ದಿನಕ್ಕಾದರೂ ಒಬ್ಬನನ್ನು ಮದುವೆಯಾಗಬೇಕು; ಒಂದು ರಾತ್ರಿಯನ್ನು ಅವನ ಜೊತೆಯಲ್ಲಿ ಕಳೆಯಬೇಕು. ಮರುದಿನ ಅವನಿಂದ ತಲಾಖ್ ಹೇಳಿಸಿಕೊಂಡು ಮೂರು ತಿಂಗಳ ಕಾಯಬೇಕು. ಗರ್ಭವೇನಾದರೂ ನಿಂತಿದೆಯೇ ಎಂದು ರುಜುವಾತು ಪಡಿಸಿಕೊಳ್ಳಲು, ಇಲ್ಲ ಎಂದು ನಿಶ್ಚಯವಾದ ಮೇಲೆ ಆ ಮೊದಲ ಗಂಡನು ಅವಳನ್ನು ಮದುವೆಯಾಗಬಹುದು. ಇದು ಇಸ್ಲಾಂ ಧರ್ಮಶಾಸ್ತ್ರ. ಇದನ್ನು ಮೀರುವಂತೆಯೇ ಇಲ್ಲ. ಎಂಬುದನ್ನು ಕೇಳಿ ನಾದಿರಾ ತತ್ತರಿಸುತ್ತಾಳೆ. ತನ್ನ ದೇನೂ ತಪ್ಪಿಲ್ಲದಿದ್ದರೂ ಶಿಕ್ಷೆ ತನಗೇಕೆ? ಗಂಡಸರು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಮಾಡುವ ತಪ್ಪಿಗೆ ತಾನೇಕೆ ಶಿಕ್ಷೆ ಅನುಭವಿಸಬೇಕೆಂದು ತನ್ನಲ್ಲಿಯೇ ಪ್ರಶ್ನಿಸಿಕೊಳ್ಳುತ್ತಾಳೆ. ಅಲ್ಲದೆ ಒಂದು ರಾತ್ರಿ ಬೇರೊಬ್ಬನ ಜೊತೆ ಕಳೆಯುವಂತಹ ಧರ್ಮದ ನಿಯಮವನ್ನು ಪ್ರತಿಭಟಿಸುತ್ತಾ " ಈ ಗಂಡಸರು ಹೇಳಿದಂತೆ ಒಂದು ರಾತ್ರಿ ಒಬ್ಬನ ಜೊತೆ ಕಳೆಯಲು, ಒಂದು ಹೊತ್ತು ತನ್ನ ದೇಹವನ್ನು ಒಬ್ಬನಿಗೆ ಒಪ್ಪಿಸಲು ತಾನೇನು ದನವೇ ? ಹೃದಯ ಭಾವನೆಗಳೇನೂ ಇಲ್ಲದ ಒಂದು ಮೃಗ ತಾನು ಎನ್ನುವಂತೆ ಇವರು ವರ್ತಿಸುತ್ತಾರಲ್ಲ? ಏನೇ ಆದರೂ ಯಾರೊ ಒಬ್ಬನ ಜೊತೆಯಲ್ಲಿ ಒಂದು ರಾತ್ರಿ ಕಳೆಯಲು ಅವನು ವಿಧಿಪೂರ್ವಕವಾಗಿ ತನ್ನನ್ನು ನಿಕಾಹ್ ಮಾಡಿದವನಾದರೂ, ತನ್ನಿಂದ ಸಾಧ್ಯವೇ ಇಲ್ಲ" ಎಂದು ನಾದಿರಾಳು ನಿರ್ಧರಿಸುತ್ತಾಳೆ.

ನಾದಿರಾ ಮತ್ತೊಂದು ನಿಖಾಹ ಮಾಡಿಕೊಳ್ಳಲು ಒಪ್ಪದ ಸಂದರ್ಭದಲ್ಲಿ ಮಗುವನ್ನು ಕರೆದುಕೊಂಡು ನಾದಿರಾಳ ಅತ್ತೆ ಬರುತ್ತಾಳೆ. ಆ ಮಗುವನ್ನು ಎತ್ತಿಕೊಳ್ಳಲು ಕೈ ಚಾಚಿದಾಗ "ರಕ್ತ ಬಂಧನ, ಅಷ್ಟು ಬೇಗ ಕಳಚಿ ಹೋಗುವದಲ್ಲ? ಮೂರು ಸಲ 'ತಲಾಖ್' ಎಂದು ಹೇಳಿ 'ತೂ' ಎಂದು ಬಿಟ್ಟರೆ ಎಂದೆಂದಿಗೂ ಆಗಿ ಮುರಿದು ಬೀಳಲು ಅದು ನಿಖಾಹ ಅಲ್ಲವಲ್ಲಾ ಇಲ್ಲಿ ಬಂಧಿಸಿರುವುದು ರಕ್ತ" ಎಂದು ರಕ್ತ ಸಂಬಂಧವನ್ನು ಹರಿಯಲೆತ್ನಿಸುವ ಧರ್ಮದ ವಿಫಲತೆಯನ್ನು ಕುರಿತು ನಾದಿರಾ ಪ್ರಶ್ನೆ ಎತ್ತುವದು ಅರ್ಥ ಪೂರ್ಣವಾಗಿದೆ.

'ತನ್ನ ಮಗುವಿಗಾಗಿ ನಾದಿರಾಳು ಒಂದು ರಾತ್ರಿಗೆ ಬೇರೆ ಗಂಡನನ್ನು ನಿಖಾಹ ಆಗಲು ಒಪ್ಪುತ್ತಾಳೆ. ಆದರೆ ನಾದಿರಾಳಿಗೆ ಆ ಸಂದರ್ಭದಲ್ಲಿ ತನಗೆ ಮಕ್ಕಳಾದರೆಂಬ ಸಂಶಯವು ಕಾಡುತ್ತದೆ. ಇದನ್ನು ಮೌಲ್ವಿಗಳ ಮುಂದಿಟ್ಟಾಗ "ಜನರಿಗೆ ಬುದ್ಧಿಯಿಲ್ಲ ಕುರಾ- ಆನ್‌ನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವದಿಲ್ಲ. ಮೂರು ಸಲ 'ತಲಾಖ್' ಎಂದು ಹೇಳುವದರ ಅರ್ಥ, ಒಂದೇ ಸಲ ಹೇಳುವುದೆಂದಲ್ಲ. ಮೂರು ತಿಂಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಬೇಕು ಮೂರು ಸಲ ತಲಾಖ್ ಹೇಳುವದೆಂದರೆ ಅದು ಖುರ್ ಆನ್ ನಮಗೊದಗಿಸಿದ ಮೂರು ಅವಕಾಶಗಳು. ಈ ಮೂರನೆಯ ಅವಕಾಶವನ್ನು ನಾವು ಉಪಯೋಗಿಸುವಾಗ ನಾವು ಚೆನ್ನಾಗಿ ಯೋಚನೆ ಮಾಡಬೇಕು; ಇನ್ನೆಂದು ನನಗೆ ಈ ಹೆಂಡತಿ ಬೇಡ ಎಂಬ ದೃಢವಾದ ನಿಶ್ಚಯದೊಡನೆ ನಾವು ಈ ಮೂರನೆಯ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಎರಡು ಅವಕಾಶಗಳನ್ನು ಮಾತ್ರ ಉಪಯೋಗಿಸಿದರೆ ಯಾವ ತೊಂದರೆಯೂ ಇಲ್ಲದೆ ಗಂಡ-ಹೆಂಡತಿ ಪುನಃ ಒಂದಾಗಬಹುದು. ಆದರೆ ಮೂರನೆಯ ಅವಕಾಶವೂ ಮುಗಿದು ಪುನಃ ಒಬ್ಬನಿಗೆ ಅದೇ ಹೆಂಡತಿ ಬೇಕೆಂದಾದ ಪಕ್ಷ ದಲ್ಲಿ ಆಕೆ ಇನ್ನೊಬ್ಬನನ್ನು ವಿವಾಹವಾಗಿ ಆ ಗಂಡ-ಹೆಂಡತಿ ಚೆನ್ನಾಗಿ ಬಾಳಲಾರದೆ ಆತನನ್ನು ಬಿಟ್ಟು ಬಂದವಳಾಗಿರಬೇಕು. ಮೊದಲಿನ ಗಂಡನನ್ನೇ ಮದುವೆಯಾಗಲಿಕ್ಕಾಗಿ ಒಬ್ಬನನ್ನು ಒಂದು ರಾತ್ರಿಗೆ ವಿವಾಹವಾಗಬೇಕೆಂದು ಬುರ್‌ಆನ್‌ನಲ್ಲಿ ಎಲ್ಲಿ ಯೂ ಹೇಳಿಲ್ಲ. ಇದೆಲ್ಲ ಮೂರ್ಖ ಗಂಡಸರು ತಮ್ಮ ಸೌಕಯ್ಯಕ್ಕಾಗಿ ಕೈಗೊಂಡ ಉಪಾಯಗಳು. ಆದರೂ ಒಮ್ಮೆಯೇ 'ತಲಾಖ್' ಎಂದು ಮೂರು ಸಲ ಹೇಳಿದರೂ ಆ ಬಂಧನ ಕಳಚಿಯೇ ಹೋಗುತ್ತದೆ. ಅವರು ಪುನಃ ಒಂದಾಗ ಬೇಕಾದರೆ ಆಕೆ ಇನ್ನೊಬ್ಬನನ್ನು ವಿವಾಹವಾಗಲೇಬೇಕು. ಆ ವಿವಾಹದಲ್ಲಿ ಮಗು ಜನಿಸಿದರೆ ಆ ಮಗುವಿಗೆ ಆ ಗಂಡನೇ ವಾರಸುದಾರನಾಗುತ್ತಾನೆ. ಮಗು ಹುಟ್ಟುವವರೆಗೆ ಇವಳು ತನ್ನ ಮೊದಲಿನ ಗಂಡನನ್ನು ವರಿಸುವುದೂ ಸಾಧ್ಯವಿಲ್ಲ. ಹೀಗೆ ಖುರ್ ಆನ್ ಹೇಳಿರುವುದು ಒಂದಾದರೆ ನೀವು ಮಾಡುವುದು ಇನ್ನೊಂದು ಎಂದು ಮೌಲ್ವಿಗಳು ಹೇಳುತ್ತಾರೆ.

ಆ ಕಾರಣಕ್ಕಾಗಿ ನಾದಿರಾಳು ತನ್ನ ಕುಟುಂಬದ ಒತ್ತಾಯಕ್ಕೆ ಮಣಿದು ಇಳಿವಯಸ್ಸಿನ ಶೇಖಾತಲಿಯ ಜೊತೆ ನಿಖಾಹ ಮಾಡಿಕೊಳ್ಳಲು ಒಪ್ಪಿರುತ್ತಾಳೆ. ಆದರೆ ಒಂದು ರಾತ್ರಿಗಾಗಿ ಪರಪುರುಷನ ಜೊತೆ ಕಳೆಯಲು ಜಿಗುಪ್ಸೆಯುಂಟಾಗುತ್ತದೆ. ತನ್ನ ದೇಹವನ್ನು ಆತನಿಗೆ ಒಪ್ಪಿಸಲು ತಯಾರಿರದ ನಾದಿರಾಳು ನೈತಿಕ ಪ್ರಜ್ಞೆಯಿಂದ ಧರ್ಮ ಪ್ರತೀಕವಾಗಿರುವ ಮಸೀದಿಕೊಳ್ಳದಲ್ಲಿ ಮುಳುಗಿ ತನ್ನ ಪ್ರಾಣ ಕಳೆದುಕೊಳ್ಳುತ್ತಾಳೆ.

ಇದು ನಾದಿರಾಳು ಪಟ್ಟ ಹಿಂಸೆಮಾತ್ರವಾಗಿರದೆ ಇಡೀ ಮುಸ್ಲಿಂ ಸಮುದಾಯದ ಮಹಿಳೆಯರು ಅನುಭವಿಸುವ ಘೋರ ಯಾತನೆಯಾಗಿದೆ. ಧರ್ಮದ ಕಠಿಣ ನಿಯಮಗಳನ್ನು ಮತ್ತು ಅದಕ್ಕೆ ಪುಷ್ಟಿ ಕೊಡುವ ಪುರುಷರು ತಮ್ಮ ಸ್ವಾರ್ಥಕ್ಕಾಗಿ ನಿಯಮಗಳನ್ನು ತಿರುಚಿರುವುದನ್ನು ಸಾರಾ ಅವರು ಈ ಕಾದಂಬರಿಯ ಮೂಲಕ ಹೇಳುತ್ತಾರೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪರಾಮರ್ಶನ ಗ್ರಂಥಗಳು.

1) ಚಂದ್ರಗಿರಿ ತೀರದಲ್ಲಿ – ಡಾ.ಸಾರಾ ಅಬೂಬಕ್ಕರ್
2) ಚಂದ್ರಗಿರಿ ಅಭಿನಂದನ ಗ್ರಂಥ– ಡಾ. ಸಬಿಹಾ ಭೂಮಿಗೌಡ
3) ಮಹಿಳಾ ಸಾಹಿತ್ಯ ಸಮೀಕ್ಷೆ – ಎಚ್. ಎಸ್. ಶ್ರೀಮತಿ
4) ಮಹಿಳಾ ಸಾಹಿತ್ಯ ಚರಿತ್ರೆ ಎಚ್. ಎಸ್. ಪಾರ್ವತಿ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಕ್ರೀಡಾ ಸಾಧನೆಯ ಮೇಲೆ ಕೃತಕ ಬುದ್ಧಿಮತ್ತೆಯ ಪರಿಣಾಮ

ಡಾ। ಅಪರ್ಣ ಆಳ್ವ ಎನ್., [1] ಶುಭಾ ಕೆ.ಹೆಚ್, [2]

[1]ದೈಹಿಕ ಶಿಕ್ಷಣ ನಿರ್ದೇಶಕರು,
ಡಾ। ಪಿ ದಯಾನಂದ ಪೈ – ಸತೀಶ್ ಪೈ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್‌ಸ್ಟ್ರೀಟ್, ಮಂಗಳೂರು– 575 001
[2]ದೈಹಿಕ ಶಿಕ್ಷಣ ನಿರ್ದೇಶಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು.

Manuscript ID:
JRD -2026-180531
ISSN: 2230-9578
Volume 18
Issue 5(IV)
Pp. 129-131
April- 2026
Submitted: 14 Apr. 2026
Revised: 29 Apr.2026
Accepted: 13 May. 2026
Published: 31 May. 2026

ಸಾರಾಂಶ :

ಆಧುನಿಕ ಜಗತ್ತಿನ ವೇಗದ ಬದಲಾವಣೆಗಳಿಗೆ ಕ್ರೀಡಾ ಕ್ಷೇತ್ರಗಳು ಹೊರತಾಗಿಲ್ಲ. ಪರಾಂಪರಿಕ ವಿಧಾನಗಳಿಂದ ಆಧುನಿಕತೆಗೆ ಒಗ್ಗಿಕೊಳ್ಳುವ ಈ ಕಾಲಘಟ್ಟದಲ್ಲಿ ಪ್ರತಿ ಕ್ಷೇತ್ರವು ತನ್ನದೇ ಆದ ಬದಲಾವಣೆಗಳಿಗೆ ಒಳಗಾಗಿದ್ದು, ಕ್ರೀಡಾ ಕ್ಷೇತ್ರವು ಇದರಿಂದ ಹೊರತಾಗಿಲ್ಲ. ಮುಖ್ಯವಾಗಿ ವೈಯಕ್ತಿಕ ಕ್ರೀಡಾ ತರಬೇತಿ, ನೈಜ ಸಮಯದಲ್ಲಿ ಶ್ರೇಷ್ಠ ಸಾಧನೆಯ ಮೌಲ್ಯಮಾಪನ ಮಾಡುವುದು ಸಾಧ್ಯವಾಗಿದೆ. ಈ ಬಗ್ಗೆ AI ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದಾದರೆ ಕ್ರೀಡಾಪಟುವಿನ ಚಲನೆ ವಿಶ್ಲೇಷಣೆ ಮತ್ತು ಫಲಿತಾಂಶಗಳ ಯಾಂತ್ರಿಕೃತ ಮೌಲ್ಯಮಾಪನ ಅಥವಾ ಫಲಿತಾಂಶಗಳ ವಿಶ್ಲೇಷಣೆಯು ಸಾಧ್ಯವಾಗಿದೆ. ಕ್ರೀಡಾ ಕ್ಷೇತ್ರದಲ್ಲಿ ದೇಹಭಂಗಿಗಳ ಮತ್ತು ಚಲನೆಗಳಿಗೆ ಸಂಬಂಧಿಸಿದ ಮೂಲಭೂತ ಅಂಶಗಳನ್ನು ತಜ್ಞರು ಡಿಜಿಟಲ್ ವಿಶ್ಲೇಷಣೆಯ ಮೂಲಕ ಪರಿಶೀಲಿಸಿದಾಗ ಉದ್ದೇಶಿತ ಅಗತ್ಯ ದೇಹದ ಚಲನೆಗಳ ಭಂಗಿಗಳ ವ್ಯತ್ಯಾಸವನ್ನು ತಿಳಿದುಕೊಳ್ಳಬಹುದು. ಇದು ಕ್ರೀಡಾ ಫಲಿತಾಂಶದ ಮೇಲೆ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸತಕ್ಕದ್ದು ಪಕ್ಷಪಾತರಹಿತ ಫಲಿತಾಂಶದ ನಿಖರತೆಯನ್ನು AI ಮಾರ್ಗದರ್ಶನದಿಂದ ನಾವು ಪಡೆದುಕೊಳ್ಳಬಹುದು. ಇದು ಕ್ರೀಡೆಯಲ್ಲಿ ಪ್ರೇಕ್ಷಕರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಕ್ರೀಡಾ ಕ್ಷೇತ್ರದಲ್ಲಿ AI ತಂತ್ರಜ್ಞಾನವು ಧರಿಸಬಹುದಾದ (ವೇರೆಬಲ್ಸ್) ಸಾಧನಗಳಿಂದ ಮತ್ತು ಪೂವಾನುಗ್ರಹಿಕೆಗಳು ಕ್ರೀಡಾ ಸಾಧನೆಯ ಪರಿಣಾಮಕಾರಿತ್ವವನ್ನು AI ಮತ್ತಷ್ಟು ಹೆಚ್ಚಿಸುವಂತೆ ಮಾಡಿದೆ. ಗಾಯಗಳನ್ನು ತಡೆಗಟ್ಟಲು ಮತ್ತಷ್ಟು ಪರಿಣಾಮಕಾರಿಯಾಗಿದೆ. ಗೋಲ್‌ಲೈನ್ ತೀರ್ಪು ನೀಡುವ ತಂತ್ರಜ್ಞಾನವು ಕ್ರೀಡೆಯ ನಿಖರತೆ, ಪಾರದರ್ಶಕತೆಗೆ ನೈಜತೆಯನ್ನು ಹೆಚ್ಚಿಸಲು ಸಹಾಯ ಮಾಡಿದೆ.

ಪ್ರಮುಖ ಪದಗಳು: *ಕೃತಕ ಬುದ್ಧಿಮತ್ತೆ (AI) ಕ್ರೀಡಾಕ್ಷೇತ್ರ, ಡಿಜಿಟಲ್ ವಿಶ್ಲೇಷಣೆ, ಕ್ರೀಡಾ ಸಾಧನೆ*

ಪರಿಚಯ :

ಕೃತಕ ಬುದ್ಧಿಮತ್ತೆ ಎಂದರೆ ಯಂತ್ರಗಳು ಅಥವಾ ಕಂಪ್ಯೂಟರ್‌ಗಳು ಮಾನವರಂತೆ ಯೋಚಿಸುವ, ಕಲಿಯುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ತಂತ್ರಜ್ಞಾನ. ಇಂದಿನ ಜಗತ್ತಿನಲ್ಲಿ AI ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ನಮ್ಮ ದೈನಂದಿನ ಜೀವನದ ಭಾಗವಾಗುತ್ತಿದೆ.
ಇತ್ತೀಚಿನ ದಿನಗಳಲ್ಲಿ ಕ್ರೀಡಾ ಸಾಧನ ಕ್ಷೇತ್ರಗಳು ಕೃತಕ ಬುದ್ಧಿಮತ್ತೆಯಿಂದ, ಮಹತ್ತರ ಬದಲಾವಣೆಗೆ ಒಳಗಾಗುತ್ತಿದೆ. ಕೃತಕ ಬುದ್ಧಿಮತ್ತೆ (AI) ಯಿಂದ ಕ್ರೀಡಾ ಸಾಧಕರು ತಮ್ಮ ತರಬೇತಿ ಯೋಜನೆಗಳನ್ನು ಯಾವ ತರ ರೂಪಿಸಬಹುದೆಂದು ನಿರ್ಧರಿಸುತ್ತದೆ. ಕ್ರೀಡಾಪಟುಗಳು ತಮ್ಮ ಕ್ರೀಡಾ ತರಬೇತಿಯ ಮೂಲಭೂತ ಅಂಶಗಳ ಮೇಲೆ ಸಮಗ್ರ ಜ್ಞಾನವನ್ನು ಗಳಿಸಲು AI ನೆರವಾಗುತ್ತದೆ. ತಮ್ಮ ನೆಚ್ಚಿನ ಕ್ರೀಡೆಗೆ ಸಂಬಂಧಿಸಿದ ಡೇಟಾ ವಿಶ್ಲೇಷಣೆ ಕಲಿಕೆಗಳು ಕ್ರೀಡಾಪಟುವಿನ ಸಾಮರ್ಥ್ಯ ಮತ್ತು ತಮ್ಮ ಸಾಧನೆಯ ಪ್ರಗತಿಯನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ಕ್ರೀಡೆಗೆ ಸಂಬಂಧಿಸಿದ ಚಲನೆಯ ದಕ್ಷತೆಗಳನ್ನು ಕ್ರೀಡಾಪಟು ಧರಿಸಬಹುದಾದ ಸಾಧನಗಳ ನಿಖರತೆಯನ್ನು ಪರಿಶೀಲಿಸುವುದರ ಜೊತೆಗೆ ಗಾಯ ತಡೆಗೆ ಸಹಾಯ ಮಾಡುತ್ತದೆ. ಬಯೋಮೆಕ್ಯಾನಿಕಲ್ ಚಲನೆಯ ಮಾದರಿಯನ್ನು ಕೂಡಾ ಇದು ಸಮಗ್ರವಾಗಿ ಪರಿಶೀಲಿಸುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ। ಅಪರ್ಣ ಆಳ್ವ ಎನ್., ದೈಹಿಕ ಶಿಕ್ಷಣ ನಿರ್ದೇಶಕರು,ಡಾ। ಪಿ ದಯಾನಂದ ಪೈ – ಸತೀಶ್ ಪೈ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್‌ಸ್ಟ್ರೀಟ್, ಮಂಗಳೂರು

How to cite this article:
ಡಾ। ಅಪರ್ಣ ಆಳ್ವ ಎನ್., ಶುಭಾ ಕೆ.ಹೆಚ್, , (2026). ಕ್ರೀಡಾ ಸಾಧನೆಯ ಮೇಲೆ ಕೃತಕ ಬುದ್ಧಿಮತ್ತೆಯ ಪರಿಣಾಮ Journal of Research & Development, 18(5(IV)), 129–131. https://doi.org/10.5281/zenodo.20994801

Quick Response Code:
Website:
https://jrdrvb.org/
DOI:
10.5281/zenodo.20994801
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸಾಹಿತ್ಯದ ಸಮೀಕ್ಷೆ:

ಕೃತಕ ಬುದ್ಧಿಮತ್ತೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಕ್ರೀಡೆಯ ಸಾಧನೆಯ ಮೇಲಿನ ಪರಿಣಾಮಗಳನ್ನು ವಿಶ್ಲೇಷಿಸುವುದಾದರೆ,

ಮರೂಯೆನ್ ಸೌಯಿಫಿ (2025) ರಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇನ್ ಸ್ಪೋರ್ಟ್ಸ್ ಬಯೋಮೆಕ್ಯಾನಿಕ್ಸ್–ಎಂಬ ತಮ್ಮ ಸಂಶೋಧನಾ ವರದಿಯಲ್ಲಿ ಸುಮಾರು ಜನವರಿ 2015ರಿಂದ 2024 ಡಿಸೆಂಬರ್‌ವರೆಗಿನ 3248 ಆರ್ಟಿಕಲ್ಸ್ 73 ಸಂಶೋಧನಾ ವರದಿಗಳನ್ನು ಸಂಗ್ರಹಿಸಿಕೊಂಡು ಹೇಗೆ ಕ್ರೀಡಾ ವಿಷಯಗಳಲ್ಲಿ ಸಾಂಪ್ರದಾಯಿ ಪದ್ಧತಿಯಿಂದ ಯಂತ್ರದ ಬಳಕೆ ಮತ್ತು ಕಲಿಕೆಗೆ ತೊಡಗಿಸಿಕೊಂಡರು ಎಂಬುದರ ಬಗ್ಗೆ ವಿವರಣಾತ್ಮಕ ವಿಮರ್ಶೆಯನ್ನು ಮಾಡಿರುತ್ತಾರೆ. AI ಯಿಂದ ತರಬೇತುದಾರರ ಜಾಣ್ಮೆಯನ್ನು ಕ್ರೀಡಾ ಪಟುವಿಗೆ ವರ್ಗಾಯಿಸುವಲ್ಲಿ 45% ನಷ್ಟು ಕೆಲಸಮಾಡುತ್ತದೆ ಹಾಗೂ ಗಾಯಗಳನ್ನು ತಡೆಯುವಲ್ಲಿ 85%ರಷ್ಟು ನಿಖರತೆಯನ್ನು ಸಾಧಿಸಬಹುದೆಂದು ತಿಳಿಸಿದೆ. 23% ನಷ್ಟು ಗಾಯಗೊಳ್ಳುವ ಸಂದರ್ಭಗಳನ್ನು ಇದು ಕಡಿಮೆಗೊಳಿಸಿದೆ ಎಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಜಸ್ತಿ ಡಬ್ಲ್ಯೂ.ಎಲ್.ಕಿಯೋಫ್ (2025) ಇನ್ ಸ್ಪೋರ್ಟ್ಸ್ ನರೇಟಿವ್ ರಿವ್ಯೂ ಆಫ್ ಅಪ್ಲಿಕೇಶನ್ಸ್ ಚಾಲೆಂಜಸ್ ಆ್ಯಂಡ್ ಫ್ಯೂಚರ್ ಟ್ರೆಂಡ್ಸ್ ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಕೃತಕ ಬುದ್ಧಿಮತ್ತೆ AI ಕ್ರೀಡೆಯಲ್ಲಿ ಸಾಧನೆ, ಆರೋಗ್ಯ ಮೇಲ್ವಿಚಾರಣೆ, ಕ್ರೀಡಾ ವೈದ್ಯಕೀಯ ತರಬೇತಿ ಮತ್ತು ಪ್ರತಿಭೆಗಳನನು ಗುರುತಿಸುವ ಮಹತ್ವದ ಪ್ರಗತಿಯನ್ನು ಸಾಧಿಸುವುದು ಕಂಡುಬರುತ್ತಿದೆ ಎಂದಿದ್ದಾರೆ.

ಕ್ರೀಡಾ ಕ್ಷೇತ್ರದಲ್ಲಿ ಒಂದು ಪ್ರಮುಖ ಸಾಧ್ಯತೆ ಎಂದರೆ ಡೇಟಾ ಆಧಾರಿತ ನಿಖರತೆಯನ್ನು ಸಾಧಿಸುವುದು. ಹೆಚ್ಚಿನ ಡೇಟಾ ಆಧಾರಿತ ವಿಶ್ಲೇಷಣೆಯಿಂದ ವೈಯಕ್ತಿಕ ತರಬೇತಿ, ವ್ಯಕ್ತಿಗತ ಆರೋಗ್ಯ ನಿರ್ವಹಣೆಗೆ ಮತ್ತು ಅನುಭವಕ್ಕಿಂತ ಸಾಕ್ಷಾಧರಿತ, ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ಸುಧಾರಿತ ತಂತ್ರಜ್ಞಾನದ ವಿಶ್ಲೇಷಣೆ ಮತ್ತು ಮಾಹಿತಿಯು ಕೇವಲ ದೊಡ್ಡ ದೊಡ್ಡ ಸಂಸ್ಥೆಗಳು ಅಥವಾ ಶ್ರೀಮಂತ ಕ್ರೀಡಾಪಟುಗಳಿಗಷ್ಟೇ ಸೀಮಿತವಾಗಿರದೆ ಎಲ್ಲರಿಗೂ ಲಭ್ಯವಾಗುವಂತೆ ಮಾಡುತ್ತದೆ. ಇದರಿಂದ ಸಮಾನ ಅವಕಾಶಗಳು ಹೆಚ್ಚಾಗಿ ಹಿಂದುಳಿದ ಪ್ರದೇಶಗಳಲ್ಲಿಯೂ ಪ್ರತಿಭೆಯನ್ನು ಗುರುತಿಸಲು ಮತ್ತು ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತದೆ ಎಂದು ತಮ್ಮ ಸಂಶೋಧನಾ ವರದಿಯಲ್ಲಿ ತಿಳಿಸಿರುತ್ತಾರೆ.

ಮಹೇಶ್ ಕುಮಾರ್ ಬಲಿದಾನಿಜ (2025) ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇನ್ ಸ್ಪೋರ್ಟ್ಸ್ ಸೈನ್ಸ್, ಎ ಸಿಸ್ಟಮ್ಯಾಟಿಕ್ ರಿವ್ಯೂ ಆನ್ ಪರ್ಫೋರ್ಮೆನ್ಸ್ ಓಪ್ಟಿಮೈಜೇಶನ್ ಇಂಜುರಿ ಪ್ರಿವೆಂಶನ್ ಆಂಡ್ ರಿಹಾಬಿಲಿಟೇಶನ್ ಎಂಬ ಸಂಶೋಧನಾ ವರದಿಯಲ್ಲಿ ಡಬ್ಲ್ಯೂ ಸ್ಕೋಪಸ್ ವೆಬ್ ಆಫ್ ಸೈನ್ಸ್, ಐಇಇಇ ಎಕ್ಸ್‌ಪ್ಲೋರ್ ಮತ್ತು ಎಂಬ ಸಂಶೋಧನಾ ಡೇಟಾಬೇಸ್‌ಗಳನ್ನು 2015 ಜನವರಿಯಿಂದ 2024 ಡಿಸೆಂಬರ್‌ವರೆಗೆ ಪ್ರಕಟಿತ ಅಧ್ಯಾಯಗಳನ್ನು ಪರಿಶೀಲಿಸಿದ್ದು, ಕ್ರೀಡಾಪಟುಗಳ ಮೇಲಿನ AI ಆಧಾರಿತ ತರಬೇತಿ ಫಲಿತಾಂಶಗಳನ್ನು ಪರಿಶೀಲಿಸಿದ್ದು, ಅಧ್ಯಯನದ ಗುಣಮಟ್ಟದ ಪರಿಶೀಲನೆಗಾಗಿ ಕೊಕ್ರೇನ್ ರಾಬ್ 2.0 ಮತ್ತು ನ್ಯೂ ಕ್ಯಾಸಲ್ ಒಟ್ಟೋವಾ ಸ್ಕೇಲ್ ಬಳಸಲಾಯಿತು ಹಾಗೂ ವಿಶ್ಲೇಷಣೆಗಾಗಿ ಎಸ್.ಎಂ.ಡಿ ಮತ್ತು ಎಫ್ ಅಂಶಗಳನ್ನು ಬಳಸಲಾಯಿತು. ಸಂಪಾದನಶೀಲತೆ ಮತ್ತು ಪ್ರಕಟಣಾ ಪಕ್ಷಪಾತ ಪರೀಕ್ಷೆಗಳನ್ನು ಪರಿಶೀಲಿದಾಗ AI ವಿಧಾನಗಳು ಕ್ರೀಡಾಫಲಿತಾಂಶಗಳ ಮೇಲೆ ಗಮನಾರ್ಹ (ಎಸ್.ಎಂ.ಡಿ=0.68) ಫಲಿತಾಂಶ ಗಾಯ ತಡೆಗಟ್ಟುವಲ್ಲಿ (ಎಸ್.ಎಂ.ಡಿ=0.75) ಮತ್ತು ಪುನಃಚೇತರಿಕೆ (ಎಸ್.ಎಂ.ಡಿ=0.69) ಕಂಡುಬಂದಿದ್ದು, ಇದು ಯಂತ್ರ ಕಲಿಕೆ ವಿಧಾನಗಳು ಇತರ ವಿಧಾನಗಳಿಂದ ಹೆಚ್ಚು ಪರಿಣಾಮಕಾರಿ ಎಂದು ಕಂಡುಬರುತ್ತಿದೆ.

ಈ ಮೇಲಿನ ಎಲ್ಲಾ ವಿಶ್ಲೇಷಣೆಗಳಿಂದ ಕೃತಕ ಬುದ್ಧಿಮತ್ತೆಯ ಅಗತ್ಯಗಳನ್ನು ನಾವು ಈ ಕೆಳಗಿನಂತೆ ವಿಶ್ಲೇಷಿಸಬಹುದು

ಆಟಗಾರರ ಕಾರ್ಯಕ್ಷಮತೆಯ ವಿಶ್ಲೇಷಣೆ:

AI ಬಳಸಿ ಕ್ರೀಡಾಪಟುಗಳ ಶೈಲಿ, ಬಲ ಮತ್ತು ದುರ್ಬಲತೆಗಳನ್ನು ವಿಶ್ಲೇಷಿಸಬಹುದು. ತರಬೇತುದಾರರು ಆಟಗಾರರ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು AI ಮೂಲಕ ಆಳವಾದ ಒಳನೋಟವನ್ನು ಕಾರ್ಯಕ್ಷಮತೆಯ ವಿಶ್ಲೇಷಣೆಯನ್ನು ಬಳಸಿಕೊಳ್ಳಬಹುದು.

ಯೋಜನೆ ಮತ್ತು ತಂತ್ರ ರೂಪಿಸುವುದು

ಎದುರಾಳಿ ತಂಡದ ಆಟದ ವಿಧಾನವನ್ನು ವಿಶ್ಲೇಷಿಸಿ ಉತ್ತಮ ತಂತ್ರ ರೂಪಿಸಬಹುದು. AI ಯ ಶೀಘ್ರ ಅಭಿವೃದ್ಧಿಯ ಕ್ರೀಡೆಯ ವ್ಯವಸ್ಥಾಪನೆ ಹಾಗೂ ನಿರ್ಣಯವನ್ನು ನೀಡುವಲ್ಲಿ AI ಪಾತ್ರ ಬಹಳ ದೊಡ್ಡದು.

ನಿರ್ಣಯಗಳನ್ನು ನೀಡಲು ಸಹಾಯ:

AI ತಂತ್ರಜ್ಞಾನದಿಂದ ಕ್ರೀಡೆಯು ಉತ್ತಮ ನಿರ್ಣಯವನ್ನು ನೀಡುವಲ್ಲಿ ಸಫಲವಾಗಿದೆ. ಡೇಟಾದ ಗೌಪ್ಯತೆ, ಪಕ್ಷಪಾತದ ನಿರ್ಣಯಗಳನ್ನು ನಿವಾರಿಸಿ ಕ್ರೀಡೆಯಿಂದ ಸಾಮಾರಸ್ಯವನ್ನು ಸಾಧಿಸುವಲ್ಲಿ AI ನೀಡಿದ ತೀರ್ಪುಗಳಿಂದ ಸಾಧ್ಯವಾಗಿದೆ.

ಪ್ರೇಕ್ಷಕರ ಅನುಭವ ಹೆಚ್ಚಿಸುವುದು

AI ಮೂಲಕ ಲೈವ್ ವಿಶ್ಲೇಷಣೆ ಹೈಲೈಟ್ಸ್ ಮತ್ತು ವೈಯಕ್ತಿಕೃತ ಕಂಟೆಂಟ್ ನೀಡಬಹುದು. ಡೇಟಾಚಾಲಿತ ಒಳನೋಟಗಳು ಮತ್ತು ಯಂತ್ರ ಕಲಿಕೆ (ಎಂ.ಎಲ್) ಅಭಿಮಾನಿಗಳ ತೊಡಗಿಸಿಕೊಳ್ಳುವಿಕೆ. AI ಬಹುಮುಖಿ ಪರಿಣಾಮಗಳನ್ನು ಪರಿಶೀಲಿಸುತ್ತದೆ. ವೇಗವಾಗಿ ವಿಕಸನಗೊಳ್ಳುತ್ತಿರುವ ಭೂದೃಶ್ಯದಲ್ಲಿ ಉದ್ಭವಿಸುವ ನವೀನ ಅನ್ವಯುಕೆಗಳು ಸವಾಲುಗಳು ಮತ್ತು ನೈತಿಕ ಪರಿಗಣಿಗಳ ಮೇಲೆ ಬೆಳಕು ಚೆಲ್ಲುತ್ತದೆ.

ಪ್ರತಿಕ್ಷಣ ಸುಧಾರಣೆ:

AI ಆಧಾರಿತ ತರಬೇತಿ ಮೂಲಕ ಆಟಗಾರರು ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಬಹುದು. ಇದು ಅಭೂತಪೂರ್ವ ನಿಖರತೆಯೊಂದಿಗೆ ಪ್ರತಿಭೆಯನ್ನು ಗುರುತಿಸಸಲು ಮತ್ತು ಪೋಷಿಸಲು ಅನುವು ಮಾಡಿಕೊಡುತ್ತದೆ.

ಗಾಯತಡೆ ಮತ್ತು ಆರೋಗ್ಯ ನಿರ್ವಹಣೆ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

AI ತಂತ್ರಜ್ಞಾನದಿಂದ ಕ್ರೀಡಾಪಟುಗಳ ಪೂರ್ವತಯಾರಿಯು ಡೇಟಾ ಪರಿಶೀಲಿಸಿ ಗಾಯವಾಗುವ ಅಂಶಗಳನ್ನು ಮೊದಲೇ ಪರಿಶೀಲಿಸಲು ಈ ತಂತ್ರಜ್ಞಾನದಿಂದ ಸಾಧ್ಯವಾಗಲಿದೆ.

ಹಳೆಗಾಯಗಳ ಡೇಟಾ ಮತ್ತು ಪ್ರಸ್ತುತ ಮಾಹಿತಿಯನ್ನು ಬಳಸಿ ಗಾಯದ ಅಪಾಯವನ್ನು ಊಹಿಸುತ್ತದೆ. ಪ್ರತಿಯೊಬ್ಬ ಆಟಗಾರನಿಗೂ ಅಪಾಯದ ಅಂಕ (ರಿಸ್ಕ್ ಸ್ಕೋರ್) ನೀಡುತ್ತದೆ.

ಪುನಶ್ಚೇತನಕ್ಕೆ ಸಹಾಯ:

AI ತಂತ್ರಜ್ಞಾನವು ಗಾಯದ ನಂತರ ಪುನಃ ಚೇತರಿಕೆಗೆ ಸಹಾಯ ಮಾಡುತ್ತದೆ. ಮರುಗಾಯವನ್ನು ಕಡಿಮೆ ಮಾಡಿ ಗುಣಮುಖವಾಗುವ ಪ್ರಗತಿಗೆ ಅನುಗುಣವಾಗಿ ಯೋಜನೆ ರೂಪಿಸುತ್ತದೆ.

ತಕ್ಷಣದ ಪ್ರತಿಕ್ರಿಯೆ ವ್ಯವಸ್ಥೆ: ಕ್ರೀಡಾಪಟುವು ತಪ್ಪಾದ ಭಂಗಿಗೆ ಧ್ವನಿ ಅಥವಾ ದೃಶ್ಯದ ಮೂಲಕ ಎಚ್ಚರಿಕೆ ನೀಡುತ್ತದೆ. ಸ್ಮಾರ್ಟ್ ಮಿರರ್ ಅಥವಾ ಎ.ಆರ್. ಮೂಲಕ ಸರಿಯಾದ ಚಲನೆಯನ್ನು ತೋರಿಸುತ್ತದೆ. ಗಾಯವಾಗುವ ಮೊದಲು ತಿದ್ದುಪಡಿ ಮಾಡಲು ಸಹಾಯ ಮಾಡುತ್ತದೆ.

ತರಬೇತಿ ಲೋಡ್ ನಿರ್ವಹಣೆ

ಕ್ರೀಡಾಪಟುವಿನ ಭಾರದ ಒಟ್ಟು ದೈಹಿಕ ಒತ್ತಡವನ್ನು ಟ್ರ್ಯಾಕ್ ಮಾಡುತ್ತದೆ. ಹಠಾತ್ ಹೆಚ್ಚು ಒತ್ತಡ ಆಗುವುದನ್ನು ತಪ್ಪಿಸಿ ಸುರಕ್ಷಿತರ ತರಬೇತಿ ಯೋಜನೆಗಳನ್ನು ರೂಪಿಸುತ್ತದೆ.

ವೇರೆಬಲ್ ಸೆನ್ಸರ್ ನಿಗಾವಳಿ:

ದೇಹಕ್ಕೆ ಬಳಸುವ AI ಸಾಧನಗಳಿಂದ ಹೃದಯಬಡಿತ, ದಣಿವು, ಸ್ನಾಯು ಒತ್ತಡ, ವೇಗ ಇತ್ಯಾದಿಗಳನ್ನು ಅಸಾಮಾನ್ಯ ದೈಹಿಕ ಒತ್ತಡವನ್ನು AI ಪತ್ತೆ ಹಚ್ಚುತ್ತದೆ ಹಾಗೂ ಅತಿಯಾದ ತರಬೇತಿ ಆಗುತ್ತಿರುವಾಗ ಎಚ್ಚರಿಕೆ ನೀಡುತ್ತದೆ.

ಮುಕ್ತಾಯ

ಡೇಟಾ ಚಾಲಿತ ಒಳನೋಟಗಳ ಅನ್ವಯವು ಅಥ್ಲೆಟಿಕ್ ಕಾರ್ಯಕ್ಷಮತೆ ಮತ್ತು ಕ್ರೀಡಾ ನಿರ್ವಹಣೆ ಎರಡರ ಮೇಲೂ ಗಾಢ ಪ್ರಭಾವ ಬೀರಿದೆ. ಧರಿಸಬಹುದಾದ ಸಾಧನಗಳು ಮತ್ತು ಸಂವೇದಕಗಳು ಸೇರಿದಂತೆ ಅತ್ಯಾಧುನಿಕ ಸಂವೇದಕಗಳು ಸೇರಿದಂತೆ ಅತ್ಯಾಧುನಿಕ ಡೇಟಾ ಸಂಗ್ರಹ ತಂತ್ರಜ್ಞಾನಗಳಿಂದ ಶಾರೀರಿಕ ಮಾಪನಗಳು, ಬಯೋಮೆಕ್ಯಾನಿಕಲ್ ಡೇಟಾ ಮತ್ತು ಪದ್ಯ ಅಂಕಿಅಂಶಗಳಂತಹ ವ್ಯಾಪಕವಾದ ಕಾರ್ಯಕ್ಷಮತೆ ಸಂಬಂಧಿತ ಮಾಹಿತಿಯನ್ನು ಸಂಗ್ರಹಿಸಲು ಅನುಕೂಲವಾಗುತ್ತದೆ. ಈ ಸಂಶೋಧನೆಯ ಗಮನಾರ್ಹ ಮಿತಿಯೆಂದರೆ ಕೃತಕ ಬುದ್ಧಿಮತ್ತೆ (AI) ಕ್ರೀಡೆಗಳಲ್ಲಿ ಪ್ರಸ್ತುತಪಡಿಸಿದ ಸಕರಾತ್ಮಕ ಅಂಶಗಳು ಮತ್ತು ಅವಕಾಶಗಳ ಮೇಲೆ ಅದು ಒತ್ತು ನೀಡುತ್ತವೆ. ಆದರೆ ಅದರ ಸಂಭಾವ್ಯ ನ್ಯೂನತೆಗಳು ಮತ್ತು ಮಿತಿಗಳನ್ನು ಸಾಕಷ್ಟು ಪರಿಹರಿಸುವುದಿಲ್ಲ ಹಾಗೂ ಭವಿಷ್ಯದ ತನಿಖೆಗಳು ಡೇಟಾ ಗೌಪ್ಯತೆ ಅಲ್ಗಾರಿದಮಿಕ್ ಪಕ್ಷಪಾತ ಮತ್ತು ಕ್ರೀಡಾ ಸ್ಪರ್ಧೆಗಳ ವಲಯದಲ್ಲಿ ನಕರಾತ್ಮಕ ಅಂಶಗಳಾದರೆ, ಸಕರಾತ್ಮಕ ಅಂಶಗಳಾಗಿ.... AI ಏಕೀಕರಣವು ಕಾರ್ಯಕ್ಷಮತೆ ಅಭಿಮಾನಿಗಳ ತೊಡಗಿಸಿಕೊಳ್ಳುವಿಕೆ ಮತ್ತು ಕಾರ್ಯತಂತ್ರದ ನಿರ್ಧಾರವನ್ನು ತೆಗೆದುಕೊಳ್ಳುವಿಕೆಯಲ್ಲಿ ಗಮನಾರ್ಹ ಸುಧಾರಣೆಗಳಿಗೆ ಕಾರಣವಾಗಿದೆ.

ಆದಾಗ್ಯೂ ಒಟ್ಟಾರೆ ತೀರ್ಮಾನಕ್ಕೆ ಬಂದರೆ ಕ್ರೀಡೆ ಮತ್ತು ಕ್ರೀಡಾ ನಿರ್ವಹಣೆಯಲ್ಲಿ AI ನ ಸಂಯೋಜನೆಯು ಕ್ರೀಡಾ ತರಬೇತಿ ಸಾಧನೆಯ ಕಾರ್ಯಕ್ಷಮತೆ ವಿಶ್ಲೇಷಣೆಗೆ, ಗಾಯ ತಡೆಗಟ್ಟುವಿಕೆ, ಪ್ರತಿಭೆ ಗುರತಿಸಿ, ಆಟದ ತಂತ್ರದ ಅಭಿವೃದ್ಧಿಯಲ್ಲಿ (AI) ಬಳಕೆಯನ್ನು ಎತ್ತಿ ತೋರಿಸುವ ಪ್ರಯತ್ನದ ಜೊತೆ ವೈಜ್ಞಾನಿಕ ಅಂಶಗಳನ್ನು ಡೇಟಾ ಚಾಲಿತ ವಿಧಾನಗಳಿಂದ ಕ್ರೀಡಾ ಸಾಧನೆಯಲ್ಲಿ ಗಮನಾರ್ಹ ಸುಧಾರಣೆಗಳನ್ನು ಸಾಧಿಸಬಹುದಾಗಿದೆ.

ಪರಮಾರ್ಶನ ಗ್ರಂಥಗಳು

1) ಕ್ಸ್.ಟಿ., ಬಘಾಸಿ. ಎಸ್. (2025) ಕೃತಕ ಬುದ್ಧಿಮತ್ತೆಯೊಂದಿಗೆ ಕ್ರೀಡೆಯ ಭವಿಷ್ಯವನ್ನು ಮರುರೂಪಿಸುವುದು: ಕಾರ್ಯಕ್ಷಮತೆ ಹೆಚ್ಚಿಸುವುದು, ಅಭಿಮಾನಿ ತೊಡಗುವಿಕೆ ಮತ್ತು ತಂತ್ರಾತ್ಮಕ ನಿರ್ಧಾರ ತೆಗೆದುಕೊಳ್ಳುವಲ್ಲಿ ಸವಾಲುಗಳು ಮತ್ತು ಅವಕಾಶಗಳು. ಇಂಜಿನಿಯರಿಂಗ್ ಅಪ್ಲಿಕೇಶನ್ಸ್ ಆಫ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ 142, 109912.

2) ಸೌಯಿಫಿ, ಎಂ., ಎಟ್ ಅಲ್ (2025) ಕ್ರೀಡಾ ಬಯೋಮೆಕ್ಯಾನಿಕ್ಸ್‌ನಲ್ಲಿ ಕೃತಕ ಬುದ್ಧಿಮತ್ತೆ: ಧರಿಸಬಹುದಾದ ತಂತ್ರಜ್ಞಾನ, ಚಲನಾ ವಿಶ್ಲೇಷಣೆ ಮತ್ತು ಗಾಯ ತಡೆಗಟ್ಟುವಿಕೆ ಕುರಿತು ಸ್ಕೋಪಿಂಗ್ ವಿಮರ್ಶೆ, ಬಯೋ ಇಂಜಿನಿಯರಿಂಗ್ (ಬೇಸೆಲ್).

3) ಝೌ, ಡಿ., ಎಟ್ ಅಲ್ (2025), ಕ್ರೀಡೆಯಲ್ಲಿ ಕೃತಕ ಬುದ್ಧಿಮತ್ತೆ: ಅನ್ವಯಗಳು, ಸವಾಲುಗಳು ಮತ್ತು ಭವಿಷ್ಯದ ಪ್ರವೃತ್ತಿಗಳ ಕುರಿತು ಒಂದು ವಿವರಣಾತ್ಮಕ ವಿಮರ್ಶೆ, ಜರ್ನಲ್ ಆಫ್ ಸ್ಪೋರ್ಟ್ಸ್ ಸೈನ್ಸಸ್.

4) ಬಲದಾನಿಯಾ, ಎಂ., ಮತ್ತು ಚೌಧರಿ, ಎ.ಕೆ.(2025) ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇನ್‌ಸ್ಪೋರ್ಟ್ಸ್ ಸೈನ್ಸ್; ಎ ಸಿಸ್ಟಮ್ಯಾಟಿಕ್ ರಿವ್ಯೂ ಆನ್ ಪರ್ಫಾಮೆನ್ಸ್ ಆಪ್ಟಿಮೈಸೇಶನ್, ಇಂಜುರಿ ಪ್ರಿವೆನ್ಶನ್, ಆಂಡ್ ರಿಹ್ಯಾಬಿಲಿಟೇಶನ್, ಜರ್ನಲ್ ಆಫ್ ಕ್ಲಿನಿಕಲ್ ಮೆಡಿಸಿನ್ ಆಫ್ ಕಝಾಕಿಸ್ತಾನ್, 22(3), 64–72.

ಗಾವೊ, ವೈ (2025) ದ ರೋಲ್ ಆಫ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಇನ್ ಎನ್ಹಾನ್ಸಿಂಗ್ ಸ್ಪೋರ್ಟ್ಸ್ ಎಜುಕೇಶನ್ ಆಂಡ್ ಪಬ್ಲಿಕ್ ಹೆಲ್ತ್ ಇನ್ ಹೈಯರ್ ಎಜುಕೇಶನ್: ಇನ್ನೋವೇಶನ್ಸ್ ಇನ್ ಟೀಚಿಂಗ್ ಮಾಡೆಲ್ಸ್, ಇವ್ಯಾಲುವೇಶನ್ ಸಿಸ್ಟಮ್ಸ್, ಆಂಡ್ ಪರ್ಸನಲೈಸ್ಡ್ ಟ್ರೈನಿಂಗ್ ಫ್ರಾಂಟಿಯರ್ಸ್ ಇನ್ ಪಬ್ಲಿಕ್ ಹೆಲ್ತ್, 13.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಸಮಾಜಕಾರ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (AI)ಅಳವಡಿಕೆಗಳು. (ಪ್ರಮುಖ ಆವಿಷ್ಕಾರಗಳು ಮತ್ತು ಭವಿಷ್ಯದ ಸವಾಲುಗಳು)

ಶೃತಿ ಜಿ ನಾಯ್ಕ್
ಉಪನ್ಯಾಸಕರು, ಸಮಾಜಕಾರ್ಯ ವಿಭಾಗ
ಹಾವೇರಿ ವಿಶ್ವವಿದ್ಯಾಲಯ, ಹಾವೇರಿ – 581110
Email– shruthignaik1992@gmail.com

Manuscript ID:
JRD -2026-180532
ISSN: 2230-9578
Volume 18
Issue 5(IV)
Pp. 132-134
April- 2026
Submitted: 14 Apr. 2026
Revised: 29 Apr.2026
Accepted: 13 May. 2026
Published: 31 May. 2026

ಸಸಾರಾಂಶ :
ಇಂದಿನ ದಿನಮಾನಗಳಲ್ಲಿ ಸಮಾಜಕಾರ್ಯದ ವ್ಯಾಪ್ತಿಯು ಎಲ್ಲ ಕ್ಷೇತ್ರಗಳನ್ನು ಮುಟ್ಟುತ್ತಿದೆ ಎಂದರೆ ತಪ್ಪಾಗಲಾರದು. ಸಮಾಜಕಾರ್ಯ ಚಟುವಟಿಕೆಗಳು ಮಾನವೀಯ ಮೌಲ್ಯಗಳ ನೆಲಗಟ್ಟಿನ ಮೇಲೆ ಕಾರ್ಯಚರಣೆ ನಡೆಸುತ್ತಿರುವದರಿಂದ ಮಾನವ ಸಂಪನ್ಮೂಲವಿರುವ ಎಲ್ಲ ರಂಗಗಳಲ್ಲೂ ಸಮಾಜಕಾರ್ಯದ ಅವಶ್ಯಕತೆಯಿದೆ. ಬದಲಾದ ದಿನಮಾನಗಳಲ್ಲಿ ತಾಂತ್ರಿಕತೆಯ ಆವಿಷ್ಕಾರಗಳು ಹೆಚ್ಚಾಗಿ ನಡೆಯುತ್ತಿರುವುದರಿಂದ, ಸಮಾಜಕಾರ್ಯವೂ ಸಹ ಬದಲಾವಣೆಯನ್ನು ಮೈಗೂಡಿಸಿಕೊಂಡು, ಹೋಸ ನಾವಿನ್ಯತೆ ಹಾಗೂ ಪ್ರಮುಖ ಆವಿಷ್ಕಾರಗಳ ಸದುಪಯೋಗವನ್ನು ಮಾಡಿಕೊಳ್ಳುತ್ತಿದೆ. ಸಮಾಜಕಾರ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಕೇವಲ ಒಂದು ತಾಂತ್ರಿಕ ಬದಲಾವಣೆಯಲ್ಲ, ಅದು ಸೇವೆ ನೀಡುವ ವಿಧಾನವನ್ನೆ ಬದಲಿಸುವ ಶಕ್ತಿಯಾಗಿದೆ. ಸಮಾಜಕಾರ್ಯದಲ್ಲಿ ತಂತ್ರಜ್ಞಾನದ ಪ್ರಮುಖ ಆವಿಷ್ಕಾರಗಳ ಅಳವಡಿಕೆ ಹಾಗೂ ಭವಿಷ್ಯದ ಸವಾಲುಗಳು ಈ ಲೇಖನದ ಪ್ರಮುಖ ವಿಷಯಗಳಾಗಿವೆ.

ಪ್ರಮುಖ ಪದಗಳು: *ಸಮಾಜಕಾರ್ಯ, ಕೃತಕ ಬುದ್ಧಿಮತ್ತೆ, ತಾಂತ್ರಿಕತೆಯ ಆವಿಷ್ಕಾರಗಳು, ಭವಿಷ್ಯದ ಸವಾಲುಗಳು.*

ಪೀಠಿಕೆ :

21 ನೇ ಶತಮಾನ ತಂತ್ರಜ್ಞಾನಗಳ ಆವಿಷ್ಕಾರದ ಯುಗವೆಂದು ಹೇಳಬಹುದಾಗಿದೆ. ಬದಲಾದ ಕಾಲಘಟ್ಟದಲ್ಲಿ ಸಮಾಜಕಾರ್ಯದ ಅಭ್ಯಾಸದಲ್ಲೂ ಕೆಲವೊಂದು ಬದಲಾವಣೆಯನ್ನು ತಂದುಕೊಳ್ಳುವುದು ಅನಿವಾರ್ಯವಾದ ಕಾರಣದಿಂದಾಗಿ ಸಮಾಜಕಾರ್ಯಕರ್ತರು ವಿವಿದ ರೀತಿಯ ತಂತ್ರಜ್ಞಾನಗಳ ಉಪಯೋಗಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದರ ಮೂಲಕ ಹಲವು ಸಾಮಾಜಿಕ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರಗಳನ್ನು ನೀಡಲು ಸಹಾಯವಾಗಿದೆ. ಈ ಅಧ್ಯಯನದಲ್ಲಿ ಪ್ರಮುಖವಾಗಿ ಸಮಾಜಕಾರ್ಯದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆ ಮತ್ತು ಎದುರಾಗುವ ಸವಾಲುಗಳ ಕುರಿತಾಗಿ ಚರ್ಚಿಸಲಾಗಿದೆ.

ಅಧ್ಯಯನದ ಉದ್ದೇಶಗಳು

1. ತ್ವರಿತ ಸಮಾಜಕಾರ್ಯ ಸೇವೆಗಳನ್ನು ಒದಗಿಸುವಲ್ಲಿ ಂಖ ದ ಪಾತ್ರಗಳನ್ನು ತಿಳಿಯುವುದು.
2. ಸಮಾಜಕಾರ್ಯ ಅಭ್ಯಾಸದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆಗಳನ್ನು ಚರ್ಚಿಸುವುದು.
3. ಸಮಾಜಕಾರ್ಯ ಅಭ್ಯಾಸದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆಗಳಿಂದ ಉಂಟಾಗುವ ಸವಾಲುಗಳನ್ನು ಪಟ್ಟಿ ಮಾಡುವುದು.
4. ಸಮಾಜಕಾರ್ಯ ಅಭ್ಯಾಸದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆಯ ಭವಿಷ್ಯದ ಸಾಧ್ಯತೆಗಳನ್ನು ಕಂಡುಕೊಳ್ಳುವುದು.

ಸಂಶೋದನಾ ವಿಧಾನ

ಈ ಅಧ್ಯಯನವು ಮಾದ್ಯಮಿಕ ದತ್ತಾಂಶಗಳ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಮಾಹಿತಿಗಳನ್ನು ಒಳಗೊಂಡಿರುತ್ತದೆ. ಸೂಕ್ತವಾದ ಮಾಹಿತಿಗಳನ್ನು ಸಂಬಂದಿಸಿದ ಪತ್ರಿಕಾ ಲೇಖನಗಳಿಂದ ಹಾಗೂ ಅಂತರ್ ಜಾಲದಿಂದ ತೆಗೆದುಕೊಳ್ಳಲಾಗಿದೆ.

ಸಮಾಜಕಾರ್ಯದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆ

1. **ಮುನ್ನೆಚ್ಚರಿಕೆ ವಿಶ್ಲೇಷಣೆ** : ಹಳೆಯ ದತ್ತಾಂಶಗಳನ್ನು ಬಳಸಿಕೊಂಡು ಮಕ್ಕಳ ಮೇಲಿನ ದೌರ್ಜನ್ಯ ಅಥವಾ ಆತ್ಮಹತ್ಯೆಯಂತಹ ತುರ್ತು ಪರಿಸ್ಥಿಗಳನ್ನು ಮೊದಲೇ ಊಹಿಸಲು ಮತ್ತು ತಡೆಗಟ್ಟಲು ಂಖ ಸಹಕಾರಿಯಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ. ಶೃತಿ ಜಿ ನಾಯ್ಕ್ ಉಪನ್ಯಾಸಕರು, ಸಮಾಜಕಾರ್ಯ ವಿಭಾಗ ಹಾವೇರಿ ವಿಶ್ವವಿದ್ಯಾಲಯ, ಹಾವೇರಿ – 581110

How to cite this article:
ಶೃತಿ ಜಿ ನಾಯ್ಕ್, (2026). ಸಮಾಜಕಾರ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (AI)ಅಳವಡಿಕೆಗಳು. (ಪ್ರಮುಖ ಆವಿಷ್ಕಾರಗಳು ಮತ್ತು ಭವಿಷ್ಯದ ಸವಾಲುಗಳು) Journal of Research & Development, 18(5(IV)), 132–134.
https://doi.org/10.5281/zenodo.20994993

Quick Response Code:
Website:
https://jrdrvb.org/
DOI:
10.5281/zenodo.20994993
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಆಡಳಿತಾತ್ಮಕ ಕೆಲಸಗಳ ಸರಳೀಕರಣ : ಸಮಾಜಕಾರ್ಯಕರ್ತರು ವರದಿಗಳನ್ನು ಸಿದ್ಧಪಡಿಸಲು ಮತ್ತು ಕೇಸ್ ನೋಟ್ಸ್ ಬರೆಯಲು ಹೆಚ್ಚಿನ ಸಮಯ ವ್ಯಯಿಸಬೇಕಾಗುತ್ತದೆ. ಂಖ ಈ ಕೆಲಸಗಳನ್ನು ಸ್ವಯಂ ಚಾಲಿತವಾಗಿ ಮಾಡುವ ಮೂಲಕ ಅವರ ಹೊರೆಯನ್ನು ಕಡಿಮೆ ಮಾಡುತ್ತಿದೆ ಹಾಗೂ ಸಮಯದ ಸದುಪಯೋಗ ಮಾಡಿಕೊಳ್ಳಲು ನೆರವಾಗಿದೆ. ಕೇಸ್ ನೋಟ್ಸ್ ಮತ್ತು ವರದಿಗಳಂತ ಅಪಾರ ಪ್ರಮಾಣದ ಡೇಟಾವನ್ನು ತ್ವರಿತವಾಗಿ ಪ್ರಕ್ರಿಯೆಗೊಳಿಸುವ ಂಖ ಸಾಮರ್ಥ್ಯವು ಸಾಮಾಜಿಕ ಕಾರ್ಯಕರ್ತರ ಸಮಯವನ್ನು ಹೆಚ್ಚು ಅರ್ಥಿಯ ಜೊತೆಗೆ ಸಂವಹನಕ್ಕಾಗಿ ಮುಕ್ತಗೊಳಿಸುತ್ತದೆ.

3. **ಚಾಟ್ ಬಾಟ್‌ಗಳು ಮತ್ತು ವರ್ಚುವಲ್ ಸಹಾಯ** : ಮಾನಸಿಕ ಆರೋಗ್ಯದ ತುರ್ತು ಸಂದರ್ಭಗಳಲ್ಲಿ 24/7 ನೆರವು ನೀಡಲು ಮತ್ತು ಆರಂಭಿಕ ಹಂತದ ಸಮಾಲೋಚನೆ ನಡೆಸಲು ಂಖ ಚಾಟ್ ಬಾಟ್‌ಗಳು ಬಳಕೆಯಾಗುತ್ತವೆ. ಂಖ ನಿಂದ ಚಾಟ್ ಬಾಟ್‌ಗಳು ವ್ಯಕ್ತಿಗಳು ತಮ್ಮ ಸವಾಲುಗಳನ್ನು ಚರ್ಚಿಸಲು ಮತ್ತು ಸೂಕ್ತವಾದ ಸಂಪನ್ಮೂಲಗಳು ಮತ್ತು ಸೇವೆಗಳನ್ನು ಪ್ರವೇಶಿಸಲು ಗೌಪ್ಯ, ಪಕ್ಷಪಾತವಿಲ್ಲದ ಸ್ಥಳವನ್ನು ನೀಡುತ್ತದೆ. ಸಾಮಾಜಿಕ ಕಳಂಕದಿಂದಾಗಿ ವ್ಯಕ್ತಿಗಳು ಮಾನವ ಸಹಾಯವನ್ನು ಪಡೆಯಲು ಹಿಂಜರಿಯಬಹುದಾದ ಮಾನಸಿಕ ಆರೋಗ್ಯ ಸಂದರ್ಭಗಳಲ್ಲಿ ಅವು ವಿಶೇಷವಾಗಿ ಪರಿಣಾಮಕಾರಿಯಾಗುತ್ತವೆ. ವಿಶ್ರಾಂತಿ ತಂತ್ರಗಳು, ನಿದ್ರೆ ಸುಧಾರಣೆ ಸಲಹೆಗಳು, ಕೆಫೀನ್ ಮತ್ತು ಆಲ್ಕೋಹಾಲ್ ಸೇವನೆ ಕಡಿಮೆ ಮಾಡುವುದು, ನಕಾರಾತ್ಮಕ ಆಲೋಚನೆಗಳನ್ನು ನಿಯಂತ್ರಿಸಲು ಮತ್ತು ಸಾಮಾಜಿಕ ಬೆಂಬಲವನ್ನು ಪ್ರೋತ್ಸಾಹಿಸುವುದು ಮುಂತಾದ ತೊಂದರೆಗಳನ್ನು ನಿರ್ವಹಿಸಲು ಚಾಟ್ ಬಾಟ್‌ಗಳು ತಕ್ಷಣದ ಸಲಹೆಗಳನ್ನು ಒದಗಿಸುತ್ತವೆ. ಅತ್ಯಾಧುನಿಕ ನೈಸರ್ಗಿಕ ಭಾಷಾ ಸಂಸ್ಕರಣಾ ಸಾಮರ್ಥ್ಯಗಳನ್ನು ಹೊಂದಿರುವ ಈ ಂಖ ಚಾಲಿತ ಚಾಟ್ ಬಾಟ್‌ಗಳು ಅರ್ಥಪೂರ್ಣ ಸಂಭಾಷಣೆಗಳನ್ನು ನಡೆಸಬಹುದು. ಇವು ಮಾನಸಿಕ ಆರೋಗ್ಯ ಸೇವೆಗಳಲ್ಲಿ ನಿರ್ಣಾಯಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ.
4. **ಸಂಪನ್ಮೂಲಗಳ ಹಂಚಿಕೆ** : ಬಡತನ ಅಥವಾ ವಸತಿ ರಹಿತರಿಗೆ ಬೇಕಾದ ಸೌಲಭ್ಯಗಳನ್ನು ಅರ್ಹ ವ್ಯಕ್ತಿಗಳಿಗೆ ನಿಖರವಾಗಿ ತಲುಪಿಸಲು ಂಖ ಇಂಜಿನಗಳು ಸಹಾಯ ಮಾಡಿತ್ತವೆ.
5. **ವರ್ಚುವಲ್ ಥೆರಪಿ ನೆರವು** : ಉಚಿಣ ಉಕಖಿ ನಂತಹ ಂಖ ಚಾಲಿತ ವರ್ಚುವಲ್ ಸಹಾಯಕರು, ಚಿಕಿತ್ಸಾ ಅವಧಿಗಳ ನಡುವೆ ಅಥವಾ ಸಮಾಜ ಕಾರ್ಯಕರ್ತರು ಲಭ್ಯವಿಲ್ಲದಿದ್ದಾಗ ಗ್ರಾಹಕರಿಗೆ ಅಮೂಲ್ಯವಾದ ಬೆಂಬಲವನ್ನು ನೀಡಬಹುದು. ಈ ಸಹಾಯಕರು ಅರ್ಥಿಗಳಿಗೆ ನಿಭಾಯಿಸುವ ತಂತ್ರಗಳನ್ನು ಅಭ್ಯಾಸ ಮಾಡುವಲ್ಲಿ ಮಾರ್ಗದರ್ಶನ ನೀಡಬಹುದಾಗಿದೆ.
6. **ಪಕ್ಷಪಾತವನ್ನು ಕಡಿಮೆ ಮಾಡುವುದು** : ಡೇಟಾ–ಚಾಲಿತ ಒಳನೋಟಗಳನ್ನು ಅವಲಂಬಿಸುವ ಮೂಲಕ, ಂಖ ವಸ್ತುನಿಷ್ಠ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಹಾಯ ಮಾಡುತ್ತದೆ. ಅರಿವಿಲ್ಲದ ಪಕ್ಷಪಾತಗಳ ಪ್ರಭಾವವನ್ನು ಕಡಿಮೆ ಮಾಡುತ್ತದೆ.

7. **ಕಾರ್ಯಕ್ರಮ ಮೌಲ್ಯಮಾಪನ** : ಕಾರ್ಯಕ್ರಮ ಮೌಲ್ಯಮಾಪನದಲ್ಲಿ ಂಖ ಮಾದರಿಗಳು ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶದ ವಿಶ್ಲೇಷಣೆಯನ್ನು ಸುಗಮಗೊಳಿಸುತ್ತವೆ. ಸುಧಾರಣೆ ಮತ್ತು ದಕ್ಷತೆಯ ಕ್ಷೇತ್ರಗಳನ್ನು ಗುರುತಿಸುವಲ್ಲಿ ಸಹಾಯ ಮಾಡುತ್ತವೆ. ಅರ್ಥಿ ಅನುಭವಗಳು ಮತ್ತು ಪಾಲುದಾರರ ದೃಷ್ಟಿಕೋನಗಳ ಸಮಗ್ರ ತಿಳುವಳಿಕೆಯನ್ನು ಒದಗಿಸುವುದರ ಮೂಲಕ ನಡೆಸಿದ ಕಾರ್ಯಕ್ರಮಗಳ ಕುರಿತಾಗಿ ವಿವರವಾದ ಮೌಲ್ಯಮಾಪನವನ್ನು ಕಡಿಮೆ ಕಾಲಾವಕಾಶದಲ್ಲೇ ಮಾಡಿ ಮುಗಿಸಲು ಸಹಾಯವಾಗುತ್ತದೆ. ಹಾಗೂ ಮುಂದಿನ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಬಹುದಾದ ಸೂಕ್ತ ಕ್ರಮಗಳ ಬಗ್ಗೆ ವಿವರವಾದ ದಾಖಲೀಕರಣಕ್ಕೆ ಂಖ ಮಾದರಿಗಳು ಸಹಾಯವಾಗಿವೆ.

ಸಮಾಜಕಾರ್ಯದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆ ಹಾಗೂ ಭವಿಷ್ಯದ ಸಾದ್ಯತೆಗಳು

1. **ವೈಯಕ್ತಿಕ ಸೇವೆಗಳು** : ಪ್ರತಿಯೊಬ್ಬ ವ್ಯಕ್ತಿಯ ಜೀವನಶೈಲಿ ಹಾಗೂ ಅಗತ್ಯಗಳಿಗೆ ತಕ್ಕಂತೆ ವಿಶೇಷವಾದ ನೆರವು ನೀಡಲು ಂಖ ನೆರವಾಗುತ್ತದೆ.
2. **ತರಬೇತಿ ಮತ್ತು ಸಿಮ್ಯುಲೇಶನ್** : ಸಮಾಜಕಾರ್ಯದ ವಿದ್ಯಾರ್ಥಿಗಳು ಕಠಿಣ ಪರಿಸ್ಥಿತಿಗಳನ್ನು ಹೇಗೆ ಎದುರಿಸಬೇಕೆಂದು ಕಲಿಯಲು ವರ್ಚುವಲ್ ರಿಯಾಲಿಟಿ ಮತ್ತು ಂಖ ಮೂಲಕ ಕೃತಕ ಗ್ರಾಹಕರೊಂದಿಗೆ ಮಾತನಾಡಿ ತರಬೇತಿ ಪಡೆಯಬಹುದು.
3. **ಸಮುದಾಯ ಅಭಿವೃದ್ಧಿ** : ಒಂದು ನಿರ್ದಿಷ್ಟ ಪ್ರದೇಶದಲ್ಲಿ ಯಾವ ಸೌಲಭ್ಯಗಳ ಕೊರತೆಯಿದೆ ಎಂಬುದನ್ನು ದತ್ತಾಂಶಗಳ ಮೂಲಕ ಪತ್ತೆ ಹಚ್ಚಿ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಯೋಜನೆ ರೂಪಿಸಬಹುದು.

ಸಮಾಜಕಾರ್ಯದಲ್ಲಿ ಂಖ ಆವಿಷ್ಕಾರಗಳ ಅಳವಡಿಕೆ ಹಾಗೂ ಎದುರಾಗಬಹುದಾದ ಸವಾಲುಗಳು

1. **ನೈತಿಕತೆ ಮತ್ತು ಪೂರ್ವಾಗ್ರಹ** : ದತ್ತಾಂಶಗಳಲ್ಲಿ ತಾರತಮ್ಯವಿದ್ದರೆ ಂಖ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿರುತ್ತದೆ.
2. **ಗೌಪ್ಯತೆ** : ವ್ಯಕ್ತಿಗಳ ಅತ್ಯಂತ ಸೂಕ್ಷ್ಮ ಮಾಹಿತಿಗಳನ್ನು ಸೋರಿಕೆಯಾಗದಂತೆ ರಕ್ಷಿಸುವುದು ದೊಡ್ಡ ಸವಾಲಾಗಿದೆ.
3. **ಮಾನವೀಚಿಯ ಸಂಬಂಧದ ಕೊರತೆ** : ಸಮಾಜಕಾರ್ಯದ ಮೂಲವೇ 'ಮಾನವೀಯ ಅನುಭೂತಿ' ಅತಿಯಾದ ತಂತ್ರಜ್ಞಾನದ ಬಳಕೆ ಮಾನವೀಯ ಸಂಬಂಧಗಳನ್ನು ಕಡಿಮೆ ಮಾಡಬಾರದು.

ಉಪಸಂಹಾರ :

ತಂತ್ರಜ್ಞಾನಗಳ ಬಳಕೆಯಿಂದ ಎಷ್ಟೇ ಸವಾಲುಗಳು ಎದುರಾದರೂ ಸಹ ಬದಲಾದ ದಿನಮಾನಗಳಿಗೆ, ಸುಧಾರಿತ ಮಾನವ ಸೇವೆಗಳನ್ನು ನೀಡುವುದು ಇಂದಿನ ಸಮಾಜಕಾರ್ಯಕರ್ತರ ಜವಾಬ್ದಾರಿಯಾಗಿರುತ್ತದೆ. ಅವಶ್ಯಕತೆಗೆ ತಕ್ಕಂತೆ ತಂತ್ರಜ್ಞಾನಗಳ ಬಳಕೆ ಮಾಡಿಕೊಳ್ಳುವುದರಿಂದ, ತ್ವರಿತ ಸಮಾಜಕಾರ್ಯ ಸೇವೆಗಳನ್ನು ಒದಗಿಸಲು ಸಹಾಯವಾಗುತ್ತದೆ. ಹೀಗೆ ಹಲವಾರು ರೀತಿಯ ತಾಂತ್ರಿಕ ಅನ್ವೇಷಣೆಗಳು ಸಮಾಜಕಾರ್ಯ ಅಭ್ಯಾಸದಲ್ಲಿ ಸೇರಿಕೊಳ್ಳುತ್ತಿವೆ. ತಾಂತ್ರಿಕ ಸಹಾಯಗಳನ್ನು ಪಡೆದುಕೊಂಡು ಸಮಾಜಕಾರ್ಯ ಸೇವೆಗಳನ್ನು ಇನ್ನೂ ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಕಾರ್ಯ ಹೆಚ್ಚಿನ ಮಟ್ಟದಲ್ಲಿ ನಡೆಯಬೇಕಿದೆ ಎಂದರೆ ತಪ್ಪಾಗಲಾರದು.

ಆಕರ ಗ್ರಂಥಗಳು :

1. Anbalagan, S., & Fathima, A. S. (2024). *Leveraging artificial intelligence for social work: Opportunities and challenges*. *Indian Journal of Natural Sciences, 15*(85). Sri Ramakrishna College of Arts & Science, Coimbatore, India.
2. Fahad, S. (2024). *Transforming medical social work with artificial intelligence*. *Social Work Chronicle, 13*(1), 24–49. University of Delhi. SSRN. https://doi.org/10.2139/ssrn.4958922
3. Kumar, A., & Singh, N. K. (2024). *Use of artificial intelligence in social work practice*. *Indian Journal of Health Social Work*. King George's Medical University, Lucknow.

4. Verma, R., & Kapoor, S. (2024). *Exploring barriers to acceptance of artificial intelligence in social welfare schemes of governments in India: A systematic literature review*. *International Journal of System Assurance Engineering and Management*. Amity University.
5. Kanmani, T. R., Thirumoorthy, A., & Janardhana, N. (2020). *Guidelines for tele-psychiatric social work practice*. National Institute of Mental Health and Neurosciences (NIMHANS), Bengaluru.
6. Pandya, S. P. (2026). *Social work practice in the era of artificial intelligence: Social workers' voices from South Asia*. *Social Work, 71*(1), 69–80.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆಯ ಪ್ರಭಾವ ಪ್ರೇರಣೆಗಳು

ಶ್ರೀಮತಿ ಸುನಂದಮ್ಮ
ಸಂಶೋಧನಾ ವಿದ್ಯಾರ್ಥಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾಂವಿ ಹಾವೇರಿ ಜಿಲ್ಲೆ–581205.
E mail id: sunandamma1985@gmail.com

Manuscript ID:
JRD -2026-180533
ISSN: 2230-9578
Volume 18
Issue 5(IV)
Pp. 135-138
April- 2026
Submitted: 18 Apr. 2026
Revised: 29 Apr.2026
Accepted: 14 May. 2026
Published: 31 May. 2026

ಕನ್ನಡ ಸಾಹಿತ್ಯ ಲೋಕದಲ್ಲಿ ಕೃತಕ ಬುದ್ಧಿಮತ್ತೆ (AI) ಯು ಇಂದು ಕುತೂಹಲಕಾರಿ ಆಗಿರುವುದು ಮಾತ್ರವಲ್ಲದೆ ಸೃಜನಶೀಲ ಪ್ರಪಂಚದಲ್ಲಿ ಒಂದು ಮಹತ್ವದ ಬದಲಾವಣೆಯಾಗಿ ರೂಪಗೊಂಡಿದೆ. ಕೃತಕ ಬುದ್ಧಿಮತ್ತೆ(AI) ಆಧಾರಿತ ತಂತ್ರಜ್ಞಾನಗಳು ಔಅಖ ಮತ್ತು ಓಐಕ ತಂತ್ರಜ್ಞಾನಗಳ ಮೂಲಕ ಹಳೆಯ ಕನ್ನಡ ಪುಸ್ತಕಗಳು ಹಸ್ತಪ್ರತಿಗಳನ್ನು ಮತ್ತು ಶಾಸನಗಳನ್ನು ಡಿಜಿಟಲೀಕರಿಸುತ್ತಿದೆ. ಕೃತಕ ಬುದ್ಧಿಮತ್ತೆ(AI) ಆಧಾರಿತ ಅನುವಾದ ತಂತ್ರಜ್ಞಾನಗಳಿಂದ ಕನ್ನಡ ಸಾಹಿತ್ಯವನ್ನು ಇತರ ಬೇರೆ ಭಾಷೆಗಳಿಗೆ ಪರಿಚಯಿಸಲು ಸಹಕಾರಿಯಾಗಿದೆ. ಕೃತಕ ಬುದ್ಧಿಮತ್ತೆ(AI) ಯಿಂದ ಕನ್ನಡದಲ್ಲಿ ಕಥೆ ಕವನ ಪ್ರಬಂಧ ಮತ್ತು ಲೇಖನಗಳನ್ನು ರಚಿಸಲು ಸಾಧ್ಯವಾಗಿದೆ. ಇದರಿಂದಾಗಿ ಬರವಣಿಗೆ ವೇಗ ಹೆಚ್ಚುವುದರ ಜೊತೆಗೆ ಹೊಸ ಪ್ರತಿಭೆಗಳಿಗೆ ಹೊಸ ಲೇಖಕರಿಗೆ ಪ್ರೇರಣೆ ಸಿಗುತ್ತದೆ.

ಪ್ರಸ್ತಾವನೆ :

ಇತ್ತೀಚಿನ ರ್ಷಗಳಲ್ಲಿ ತಂತ್ರಜ್ಞಾನವು ಮಾನವನ ಜೀವನದ ಪ್ರತಿಯೊಂದು ರಂಗದಲ್ಲಿ ದಿನದಿಂದ ದಿನಕ್ಕೆ ರ್ಷದಿಂದ ರ್ಷಕ್ಕೆ ಆಳವಾದ ಪ್ರಭಾವ ಬೀರಿದೆ. ಅದರಲ್ಲೂ "ಕೃತಕ ಬುದ್ಧಿಮತ್ತೆ" (ರ್ಟಿಫಿಷಿಯಲ್ ಇಂಟೆಲಿಜೆಂಟ್) ಎಂಬ ಪರಿಕಲ್ಪನೆ ಜಾಗತಿಕ ಮಟ್ಟದಲ್ಲಿ ಎಲ್ಲೆಡೆ ರ್ಚೆಯ ವಿಷಯವಾಗಿದೆ. ವೈದ್ಯಕೀಯ ಕ್ಷೇತ್ರ, ಶಿಕ್ಷಣ ಕ್ಷೇತ್ರ, ವ್ಯಾಪಾರ, ಮಾಧ್ಯಮ, ಇವುಗಳಲ್ಲದೆ ಸಾಹಿತ್ಯ ಕ್ಷೇತ್ರದಲ್ಲಿಯೂ ಕೃತಕ ಬುದ್ಧಿಮತ್ತೆ(ಂಖ) ತನ್ನ ಪ್ರಭಾವವನ್ನು ವಿಸ್ತರಿಸಿದೆ. ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆ ಪ್ರಭಾವ ಡಿಜಿಟಲ್ ಸಾಹಿತ್ಯ, ಕಥೆಗಳ ವಿನ್ಯಾಸ ,ಕಾವ್ಯ ತಯಾರಿ ಮತ್ತು ಸಂಶೋಧನಾ ಕ್ರಿಯೆಗಳ ತನಕ ವ್ಯಾಪಿಸಿದೆ. ಕೃತಕ ಬುದ್ಧಿಮತ್ತೆ(ಂಖ) ಒಂದು ಪ್ರಮುಖ ಸಾಧನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ವೇಗ ಹಾಗೂ ಸುಲಭವಾಗಿ ಮತ್ತು ಹೊಸ ಹೊಸ ಕಲ್ಪನೆಗಳನ್ನು ನೀಡುತ್ತಿದೆ. ಕೃತಕ ಬುದ್ಧಿಮತ್ತೆಯ ರ್ಥ: ಸಾಮಾನ್ಯವಾಗಿ ಕೃತಕ ಬುದ್ಧಿ ಮತ್ತೆ ಎಂದರೆ ಮನುಷ್ಯನ ಬುದ್ಧಿಶಕ್ತಿಯನ್ನು ಅನುಕರಿಸುವ ತಂತ್ರಜ್ಞಾನ, ಕಲಿಯುವುದು, ನರ್ಧಾರ ತೆಗೆದುಕೊಳ್ಳುವುದು ಒಂದು ಭಾಷೆಯನ್ನು ರ್ಥ ಮಾಡಿಕೊಳ್ಳುವುದು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಇತ್ಯಾದಿ ಮಾನವನ ಬೌದ್ಧಿಕ ಕೆಲಸಗಳಿಗೆ ಯಂತ್ರಗಳ ಮೂಲಕ ಕರ್ಯ ನರ್ವಹಿಸುವ ವ್ಯವಸ್ಥೆಯನ್ನು ಂಖ ಎಂದು ಕರೆಯಲಾಗುತ್ತದೆ. 1950 ರಲ್ಲಿ ಕೃತಕ ಬುದ್ಧಿಮತ್ತೆಯ ಬಗ್ಗೆ ಮೊದಲ ಬಾರಿಗೆ ಂಖ ಎಂದು ಕಲ್ಪನೆ ಮಾಡಿದ ವ್ಯಕ್ತಿ "ಅಲಾನ್ ಟೂರಿಂಗ್" ನಂತರ 1956 ರಲ್ಲಿ ಮೊದಲ ಬಾರಿಗೆ ಂಖ ಎಂಬ ಪದವನ್ನು "ಡರ್ಟ್ ಮೌತ್" ಎಂಬ ಸಮ್ಮೇಳನದಲ್ಲಿ "ಜಾನ್ ಮೇಕರ್ತಿ"ಎಂಬುವರು ಪರಿಚಯಿಸಿದರು. 1970 ರಲ್ಲಿ ಮೊದಲ ಬಾರಿಗೆ ಅಮೆರಿಕಾದ ರಕ್ಷಣಾ ಇಲಾಖೆ ಬೀದಿಗಳ ನಕ್ಷೆ ತಯಾರಿಸುವಲ್ಲಿ ಇದನ್ನು ಬಳಕೆ ಮಾಡಿ ಕೊಂಡಿತು.

John mccarthy (1956) ಅವರು ಮೊದಲಿಗೆ "Artificial intelligence" ಎಂಬ ಪದವನ್ನು ಬಳಸಿ ಅವರ ಪ್ರಕಾರ ಮಾನವನ ಬುದ್ಧಿವಂತಿಕೆಯನ್ನು ಯಂತ್ರಗಳಲ್ಲಿ ನರ್ಮಿಸುವ ವಿಜ್ಞಾನ ಮತ್ತು ತಂತ್ರಜ್ಞಾನವೇ ಂಖ ಎಂದಿದ್ದಾರೆ. "ಮಾನವನು ಹಕ್ಕಿಯಂತೆ ಹಾರಬಲ್ಲ ಮೀನಿನಂತೆ ಈಜಬಲ್ಲ " ಪ್ರಪಂಚದಲ್ಲಿ ಮಾನವನನ್ನು ಮಾತ್ರ ಬುದ್ಧಿವಂತ ಪ್ರಾಣಿ ಎಂದು ಕರೆಯಲಾಗುತ್ತದೆ. ಯಾಕೆಂದ್ರೆ ಮನುಷ್ಯನಿಗೆ ಕಲಿಯುವ ಶಕ್ತಿ ಇದೆ, ಯೋಜಿಸುವುದು, ಪರಿಹರಿಸುವುದು, ಚಲಿಸುವುದು ತರ್ಕಿಕ ಚಿಂತನೆ, ಮಾತನಾಡುವುದು, ಕುಣಿಯುವುದು, ಹಾಡುವುದು ಹೀಗೆ ಹೊಸ ಹೊಸದನ್ನು ಸೃಷ್ಟಿಸುವ (ಸೃಜನಶೀಲತೆ) ,ಕುಶಲತೆ ,ಮಾನವನಿಗೆ ಇದೆ. ಉದಾಹರಣೆ: "ಮಾನವನ ಚಲನೆ" ಚಲಿಸುವುದು (ನಡೆಯುವುದು) ಮಾನವನಿಗೆ ಪ್ರಕೃತಿದತ್ತವಾಗಿ ಬಂದಿರುವುದು. ಅದೇ ರೀತಿ ಯಾವುದೋ ಒಂದು ಯಂತ್ರ ಚಲಿಸುವುದು, ಹಾಡುವುದು, ಹಾರುವುದು, ಕುಣಿಯುವುದು ಮಾಡಿದರೆ ಅದು ಯಾಂತ್ರಿಕ ಚಲನೆಯಾಗುತ್ತದೆ ಅಂದರೆ ಇದು ಮಾನವ ನರ್ಮಿತ ಯಾಂತ್ರಿಕವಾಗಿರುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಶ್ರೀಮತಿ ಸುನಂದಮ್ಮ ಸಂಶೋಧನಾ ವಿದ್ಯಾರ್ಥಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಶಿಗ್ಗಾಂವಿ ಹಾವೇರಿ ಜಿಲ್ಲೆ–581205.

How to cite this article:
ಶ್ರೀಮತಿ ಸುನಂದಮ್ಮ *(2026). ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆಯ ಪ್ರಭಾವ ಪ್ರೇರಣೆಗಳು. Journal of Research & Development, 18(5(IV)), 135–138.* https://doi.org/10.5281/zenodo.20995121

Quick Response Code:
Website: https://jrdrvb.org/
DOI: 10.5281/zenodo.20995121
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಇಂತಹ ಯಾಂತ್ರಿಕ ಕೃತಕ ಬುದ್ಧಿಮತ್ತೆಯನ್ನು ಸೃಷ್ಟಿಸಿರುವುದು ಮಾನವನಿಗೆ ಪ್ರಕೃತಿ ನೀಡಿದ ಬೌದ್ಧಿಕ ಶಕ್ತಿಯಿಂದ ಸಾಧ್ಯವಾಗಿರುವುದು. ಆದ್ದರಿಂದ ಕೃತಕ ಬುದ್ಧಿಶಕ್ತಿಗಿಂತ ಮಿಗಿಲಾದುದು ಮಾನವನ ಬೌದ್ಧಿಕ ಶಕ್ತಿಯಾಗಿದೆ. ಮಾನವ ಬೌದ್ಧಿಕ ಶಕ್ತಿಯಿಂದ ಕೃತಕ ಬುದ್ಧಿ ಶಕ್ತಿ ಉಂಟಾಗಿದೆ. "ಮಾನವನ ಮೂಲ ಶಕ್ತಿಗಿಂತ ಕೃತಕ ಬುದ್ಧಿಮತ್ತೆ" ಇಡೀ ವಿಶ್ವದಾದ್ಯಂತ ಮುಂಚೂಣಿಯಲ್ಲಿದೆ. ಈ "ಕೃತಕ ಬುದ್ಧಿಮತ್ತೆಯ"(ಂಖ) ಕನ್ನಡ ಸಾಹಿತ್ಯದಲ್ಲಿನ ಪ್ರಭಾವ ಪ್ರೇರಣೆ ಕುರಿತು ತಿಳಿಸಲಾಗಿದೆ.

ಉದ್ದೇಶಗಳು:

- ಹೊಸ ಲೇಖಕರಿಗೆ ತಾಂತ್ರಿಕ ಬೆಂಬಲ ನೀಡುವುದು.
- ಮೌಖಿಕ ಪರಂಪರೆ ಸಂರಕ್ಷಣೆ
- ಕೃಷಿ ಜಾನಪದ ಮತ್ತು ಸಾಂಪ್ರದಾಯಿಕ ಜ್ಞಾನವನ್ನು ತಿಳಿದುಕೊಳ್ಳುವುದು.
- ಕನ್ನಡ ಸಾಹಿತ್ಯವನ್ನು ವಿಶ್ವದಾದ್ಯಂತ ತಲುಪಿಸುವುದು.

ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆ (ಂಖ) ಪ್ರಭಾವ:

1. ಸೃಜನಶೀಲತೆ: – ಸಾಹಿತ್ಯ ಲೋಕದ ಕಥೆ ,ಕಾದಂಬರಿ ,ಕವನ ,ಪ್ರಬಂಧ, ನಾಟಕ, ಮತ್ತು ಚುಟುಕುಗಳು, ಲೇಖನಗಳನ್ನ ರಚಿಸಲು ಉಪಯುಕ್ತವಾಗಿರುವ ChatGpt, Gemini, Claude ಮುಂತಾದ ಭಾಷೆ ಬರವಣಿಗೆಗೆ ಕನ್ನಡದಲ್ಲಿಯೂ ನೆರವಾಗುತ್ತಿವೆ. ಇದರಿಂದ ಹೊಸ ಆಲೋಚನೆಗಳು ಉಂಟಾಗುತ್ತದೆ, ಕಡಿಮೆ ಅವಧಿಯಲ್ಲಿ ಹೆಚ್ಚು ಬರವಣಿಗೆ ಸಾಧ್ಯ, ಸಂಶೋಧನಾ ಲೇಖನಗಳನ್ನು ವ್ಯವಸ್ಥಿತವಾಗಿ ಜೋಡಿಸಲು ನೆರವಾಗುತ್ತದೆ. ಶಿವಕುಮಾರ್ ಊ.ಖ. ಮತ್ತು ರಾಮಕೃಷ್ಣ ಂ.ಉ. ರವರ " Lipi and Gnani - A versatile OCR for Documentation in any Language printed in Kannada script" ಎಂಬ ಲೇಖನವು ಕನ್ನಡ ಲಿಪಿಯ ಪಠ್ಯಗಳನ್ನು ಡಿಜಿಟಲ್ ರೂಪಕ್ಕೆ ಪರಿರ್ತಿಸಲು ತಯಾರಿಸಿದ ತಂತ್ರಜ್ಞಾನವಾಗಿದೆ ಎಂಬುದನ್ನು ಲೇಖಕರು ಸೂಚಿಸಿದ್ದಾರೆ. ಇದರಲ್ಲಿ ಲೇಖಕರು ಔಅಖ ವ್ಯವಸ್ಥೆ ಹಳೆಯ ಪುಸ್ತಕಗಳು ಪತ್ರಿಕೆಗಳು ಮತ್ತು ಸಾಹಿತ್ಯ ಕೃತಿಗಳನ್ನು ಡಿಜಿಟಲಿಕರಿಸಲು ಉಪಯೋಗವಾಗಿದೆ ಎಂದಿದ್ದಾರೆ. ಈ ಅಧ್ಯಯನವು "ಕನ್ನಡ ಭಾಷೆಯ ಡಿಜಿಟಲ್ ಸಂರಕ್ಷಣೆ ಮತ್ತು ಸಾಹಿತ್ಯದ ಆನ್ಲೈನ್ ಲಭ್ಯತೆಯನ್ನು ಹೆಚ್ಚಿಸುವಲ್ಲಿ" ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ತಿಳಿಸಲಾಗಿದೆ. ನಮ್ಮ ಕನ್ನಡ ಸಾಹಿತ್ಯದ ಸುದರ್ಭ, ಇತಿಹಾಸದಲ್ಲಿ ಪಂಪ, ಕುಮಾರವ್ಯಾಸರಿಂದ ಹಿಡಿದು ಇಂದಿನ ನವ್ಯ, ದಲಿತ–ಬಂಡಾಯ ಸಾಹಿತ್ಯದವರೆಗೆ ಮನುಷ್ಯನ ಸಂವೇದನೆಗಳೇ ಪ್ರಧಾನವಾಗಿದ್ದವು. ಆದರೆ ಇಂದು ಕೃತಕ ಬುದ್ಧಿಮತ್ತೆ (Artificial Intelligence - AI) ಸಾಹಿತ್ಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ಒಂದು ಹೊಸ ಆಯಾಮಗಳನ್ನು ಪಡೆದು ಕೊಂಡಿದೆ.

2. ಅನುವಾದ: – ಸಾಹಿತ್ಯ ಕ್ಷೇತ್ರದಲ್ಲಿಯೂ ಕೂಡ ಂಖ ಮುಂಚೂಣಿಯಲ್ಲಿದೆ. Google Translate ಮತ್ತು AI ಆಧಾರಿತ ಭಾಷಾ ಮಾದರಿಗಳು ಅನುವಾದ ಪ್ರಕ್ರಿಯೆಯಲ್ಲಿ ವೇಗವಾಗಿದೆ. ಈ ಅನುವಾದದಿಂದ ವಿವಿಧ ಸಂಸ್ಕೃತಿಗಳ ಸಾಹಿತ್ಯ ವಿನಿಮಯದ ಸಾಧ್ಯ. ನಮ್ಮ ಕನ್ನಡ ಭಾಷೆ ಮತ್ತು ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಪರಿಚಯವಾಗಲು ಕಾರಣೀಭೂತವಾಗಿದೆ. ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಅಧ್ಯಯನಕ್ಕೆ ಸುಲಭ ಮಾದರಿಯಾಗಿದೆ. ಕೃತಕ ಬುದ್ಧಿಮತ್ತೆ ಪ್ರಭಾವದಿಂದ ಅನುವಾದದಲ್ಲಿ ಸಾವಿರಾರು ಪುಟಗಳ ಕಾದಂಬರಿಗಳನ್ನು ಕೆಲವೇ ನಿಮಿಷಗಳಲ್ಲಿ ಅನುವಾದ ಮಾಡಬಹುದು. ಅಲ್ಲದೆ ವಿಜ್ಞಾನ, ತಂತ್ರಜ್ಞಾನ ಮತ್ತು ವೈಚಾರಿಕ ಸಾಹಿತ್ಯವನ್ನು ಸುಲಭವಾಗಿ ಕನ್ನಡಕ್ಕೆ ತರಲು ಇದು ಸಹಕಾರಿಯಾಗಿದೆ .

ಹಳೆಯ ಹಸ್ತಪ್ರತಿಗಳನ್ನು ಓದಲು ಮತ್ತು ಆಧುನಿಕ ಕನ್ನಡಕ್ಕೆ ತರ್ಜುಮೆ ಮಾಡಲು ಂಖ ಸಂಶೋಧಕರಿಗೆ ಸಹಾಯವಾಗಿದೆ. 'ಸುನಿಲ್ ಕುಮಾರ್ ಬಿ.ಎಲ್. ಮತ್ತು ಇತರರು'. ಇವರ "Handwritten Character Recognition of Kannada Language using conventional neural networks." ಎಂಬ ಲೇಖನವು "CNN ಆಧಾರಿತ Deep Learning ವಿಧಾನವನ್ನು ಬಳಸಿ ಕನ್ನಡ ಕೈ ಬರಹ ಅಕ್ಷರಗಳನ್ನು ಗುರುತಿಸಲು" ಇದು ಸಹಕಾರಿಯಾಗಿದೆ ಎಂಬುದನ್ನು ಲೇಖಕರು ತಿಳಿಯಪಡಿಸಿದ್ದಾರೆ. ಹಳೆಯ ಕನ್ನಡ ದಾಖಲೆಗಳು, ಹಸ್ತ ಪ್ರತಿಗಳು ಮತ್ತು ಸಾಹಿತ್ಯ ಕೃತಿಗಳನ್ನು ಡಿಜಿಟಲೀಕರಣ ಮಾಡಲು ಈ ತಂತ್ರಜ್ಞಾನ ಉಪಯುಕ್ತವಾಗಿದೆ ಎನ್ನಲಾಗಿದೆ

3. ಡಿಜಿಟಲ್ ಸಾಹಿತ್ಯ:– AI ಯ ಪ್ರಭಾವದಿಂದ ಡಿಜಿಟಲ್ ಸಾಹಿತ್ಯ ಬೆಳವಣಿಗೆಯಿಂದಾಗಿ ಇ–ಪುಸ್ತಕಗಳು, ಡಿಜಿಟಲ್ ಕವನಗಳು ಮತ್ತು ಆನ್ಲೈನ್ ಕಥನಗಳು ಹೊಸ ರೂಪಗಳನ್ನು ಪಡೆದುಕೊಂಡಿವೆ. Basavanna C.S. ಮತ್ತು Manjunath D.S Guru. ರವರ "A Large scale kannada literary. Crops of for Natural Language processing." ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯದ ಡಿಜಿಟಲ್ crops ನಿರ್ಮಾಣ ಕುರಿತು ಚರ್ಚಿಸಲಾಗಿದೆ. ಇದರಲ್ಲಿ ಲೇಖಕರು "ವಿವಿಧ ಕನ್ನಡ ಸಾಹಿತ್ಯ ಪಠ್ಯಗಳನ್ನು ಸಂಗ್ರಹಿಸಿ AI ಮತ್ತು NLP ಸಂಶೋಧನೆಗೆ ಸೂಕ್ತವಾಗುವಂತೆ ಸಂಸ್ಕರಣೆ ಮಾಡಲಾಗಿದೆ".

4. ಭಾಷಾ ಸಂರಕ್ಷಣೆ:– ಕನ್ನಡ ಶಾಸನಗಳು ಮತ್ತು ಹಸ್ತ ಪ್ರತಿಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹ ಮಾಡಲು AI ಉಪಯೋಗವಾಗಿದೆ. OCR (optical character Recognition) ತಂತ್ರಜ್ಞಾನದಿಂದ ಹಳೆಯ ಕನ್ನಡ ಪಠ್ಯಗಳನ್ನು ಡಿಜಿಟಲೀಕರಿಸಲಾಗುತ್ತದೆ. 'ಎಚಿಛಿಜಜ ಒಜಟಠಟಿ, ಒಚಿಡಿಚಿ ಖಚಿಟು, ಖಿದತಿಚಿಟಿ ಝಟಜಜ ಖಿಚಿಟಿ (2020)' ರವರ "ಔಅಖ ಮತ್ತು ಂಖ ಕುರಿತ ಸಮಗ್ರ ಸಾಹಿತ್ಯ ಸಮೀಕ್ಷೆ" ಎಂಬ ಲೇಖನವು ಔಅಖ ಮತ್ತು ಂಖ ಕುರಿತು ಸಮಗ್ರ ಸಾಹಿತ್ಯ ಸಮೀಕ್ಷೆಯಾಗಿದೆ. ಅಓಓ ಖಓಓ ಮತ್ತು ಓಜಣಡಿಚಿಟ ಟಿಜಣತಿಠಡಿಞ ಮಾದರಿಗಳು "ಕೈಬರಹ ಪಠ್ಯ ಗುರುತಿಸುವಿಕೆಯಲ್ಲಿ ಹೆಚ್ಚು ಪರಿಣಾಮಕಾರಿ" ಎಂದು ಅಧ್ಯಯನದಲ್ಲಿ ತಿಳಿಸಲಾಗಿದೆ. ಇದು ಭಾರತೀಯ ಭಾಷೆಗಳ ವಿಶೇಷವಾಗಿ ಕನ್ನಡದಂತಹ ಸಂಕರ್ಣ ಲಿಪಿಗಳ ಒಸಿಆರ್ ಅಭಿವೃದ್ಧಿಗೆ "ಇನ್ನು ಹೆಚ್ಚಿನ ಸಂಶೋಧನೆ ಅಗತ್ಯವಾಗಿದೆ" ಎಂದು ಲೇಖಕರು ತಿಳಿಸಿದ್ದಾರೆ.

5. ಅಳಿವಿನಂಚಿನಲ್ಲಿರುವ ಜ್ಞಾನದ ಸಂರಕ್ಷಣೆ: ಜಾನಪದ ಮತ್ತು ಹಸ್ತಪ್ರತಿಗಳ ಸಂರಕ್ಷಣೆ ಇದರ ಪ್ರಮುಖ ಆಶಯವಾಗಿದ್ದು ನಮ್ಮ ಹಿರಿಯರ ಬಾಯಲ್ಲೇ ಉಳಿದುಹೋಗಿರುವ ಜಾನಪದ ಹಾಡುಗಳು ಮತ್ತು ಗಾದೆಗಳನ್ನು ಧ್ವನಿ ಗುರುತಿಸುವ ತಂತ್ರಜ್ಞಾನದ ಮೂಲಕ ಲಿಖಿತ ರೂಪಕ್ಕೆ ತರುವುದು. ನಮ್ಮ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ತಂತ್ರಜ್ಞಾನದೊಂದಿಗೆ ಬೆಸೆದಾಗ ಅದು ಮುಂದಿನ ತಲೆಮಾರಿಗೆ ಮತ್ತಷ್ಟು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಹತ್ತಿರವಾಗುತ್ತದೆ ಎಂಬುದನ್ನು ಅರಿಯ ಬಹುದಾಗಿದೆ. ಹಸ್ತಪ್ರತಿಗಳ ಡಿಜಿಟಲೀಕರಣದಿಂದ ಹಾಳಾಗುತ್ತಿರುವ ತಾಳೆಗರಿ ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡಿ, ಅವುಗಳನ್ನು ಓದಬಲ್ಲ ಡಿಜಿಟಲ್ ಅಕ್ಷರಗಳಾಗಿ ಪರಿರ್ತಿಸುವುದು.ಮೌಖಿಕ ಸಾಹಿತ್ಯವನ್ನು ದಾಖಲೀಕರಿಸುವುದು ಇದರಿಂದ ನಮ್ಮ ಪರಂಪರೆಯ ಜಾನಪದ ಸೊಗಡನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಸಹಾಯಕವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆ(ಂಖ) ಪ್ರೇರಣೆ:

ಸಂಶೋಧನೆಗೆ ಸಹಾಯ: – ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಉನ್ನತ ಶಿಕ್ಷಣದ ಸಂಶೋಧಕರಿಗೆ ಂಖ ಪ್ರೇರಣೆ ನೀಡುತ್ತದೆ. ಇದರಿಂದ ಸಾಹಿತ್ಯ ವಿಮರ್ಶೆ ಉಲ್ಲೇಖಗಳ ಸಂಗ್ರಹ ಲೇಖನ ಸಂಗ್ರಹಗಳ ಭಾಷೆಯ ತಿದ್ದುಪಡಿ ಮುಂತಾದ ವಿಷಯಗಳ ಕಾರ್ಯಗಳಲ್ಲಿ ಂಖ ಯ ಸಹಾಯ ಪಡೆದಿದ್ದಾರೆ. ಖ. ಖಚಿಟಿರಿಜಜತಚಿಞಣಟಿಣಜ, ಖ. ಆ ಖಣಜ್ಞಚಿಞಚಿಡಿ ಖಚಿಟಣಜಜ (2008). "ಂ ಖಟಠಿಟಜ ಚಿಟಿಜ ಇಜಿಜಿಖಿಜಟಿಣ ಔಅಖ ಖಥಿಣಜಟ ಜಿಠಿಡಿ ಃಚಿಖಿ ಖಥಿಟಛಠಟ ಟಿ ಕಡಿಟಿಣಜಜ ಏಚಿಟಿಟಿಚಿಜಚಿ ಖಿಜಥಣ" ಎಂಬ ಲೇಖನವು ಕನ್ನಡ ಮುದ್ರಿತ ಅಕ್ಷರಗಳನ್ನು ಗುರುತಿಸಲು ಅಭಿವ್ಯಕ್ತಪಡಿಸಿದ ಔಅಖ ವ್ಯವಸ್ಥೆಯನ್ನು ಕುರಿತು ರ್ಚಿಸುತ್ತಾರೆ. ಈ ಔಅಖ ವ್ಯವಸ್ಥೆ ಕನ್ನಡ ಪಠ್ಯಗಳನ್ನು ಡಿಜಿಟಲ್ ರೂಪಕ್ಕೆ ಬದಲಾಯಿಸಲು ಇದು ಸಹಕಾರಿ ಆಗಿರುತ್ತದೆ.

ಜಾಗತಿಕ ಮಟ್ಟದಲ್ಲಿ ಸಾಹಿತ್ಯ ಸಂಪರ್ಕ: – ಕನ್ನಡ ಸಾಹಿತ್ಯವನ್ನು ಜಗತ್ತಿನ ಇತರೆ ಸಾಹಿತಿಗಳೊಂದಿಗೆ ಸಂಪರ್ಕಿಸುವಂತೆ ಮಾಡಿದೆ. ಇದರಿಂದಾಗಿ ಅಂತರಾಷ್ಟ್ರೀಯ ಮಟ್ಟದ ಸಾಹಿತ್ಯ ಚರ್ಚೆಗಳಿಗೆ ಸಾಧ್ಯವಾಗಿದೆ. ಹೊಸ ಶೈಲಿಗಳ ಪ್ರಯೋಗದಿಂದ ಕೃತಕ ಬುದ್ಧಿಮತ್ತೆಯು ಹಳೆಯ ಕಾಲದ ಸಾಹಿತ್ಯ ಶೈಲಿಗಳನ್ನು ಇಂದಿನ ಆಧುನಿಕ ಶೈಲಿಯ ಬರವಣಿಗೆಯೊಂದಿಗೆ ಬೆರೆಸಿ ಹೊಸ ಮಾದರಿಯ ' ಸಾಹಿತ್ಯ' ರಚಿಸಲು ನೆರವಾಗುತ್ತಿದೆ. ಅದಲ್ಲದೆ ಡಿಜಿಟಲ್ ಲೈಬ್ರರಿ ಮತ್ತು ಸುಲಭವಾಗಿ ಲಧ್ಯವಾಗುತ್ತದೆ.ಅಲ್ಲದೆ ಅಪರೂಪದ ಕೃತಿಗಳ ಸಂರಕ್ಷಣೆ,ಹಳೆಯ ಕಾಲದ ಹಸ್ತಪ್ರತಿಗಳನ್ನು ಅಥವಾ ಅಳಿವಿನಂಚಿನಲ್ಲಿರುವ ಭಾಷೆಗಳ ಸಾಹಿತ್ಯವನ್ನು ಂಖ ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸುತ್ತಿದೆ. ಇದರಿಂದ ಪ್ರಪಂಚದ ಯಾವುದೇ ಭಾಗದ ಸಂಶೋಧಕರು ಈ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದಾಗಿದೆ.

ಧ್ವನಿ ಸಾಹಿತ್ಯ (ಂಣಜುಠಛಠಠಞ): ಓದಲು ಬಾರದವರಿಗೆ ಅಥವಾ ದೃಷ್ಟಿ ವಿಕಲಚೇತನರಿಗೆ ಸಾಹಿತ್ಯವನ್ನು ತಲುಪಿಸಲು 'ಖಿಜಥಣ–ಣಠ–ಖಠಿಜಜಖಿ' ತಂತ್ರಜ್ಞಾನವು ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ಬದಲಾವಣೆ ತಂದಿದೆ. ಂಖ ಆಧಾರಿತ ಅಲ್ಗಾರಿದಮ್ಗಳು ಓದುಗರ ಅಭಿರುಚಿಯನ್ನು ಅರ್ಥಮಾಡಿಕೊಳ್ಳುತ್ತವೆ. ಉದಾಹರಣೆಗೆ: ಒಬ್ಬ ಓದುಗ ಭಾರತೀಯ ದಲಿತ ಸಾಹಿತ್ಯವನ್ನು ಓದುತ್ತಿದ್ದರೆ, ಂಖ ಅವರಿಗೆ ಸಮಾನವಾದ ಆಫ್ರಿಕನ್ ಅಥವಾ ಲ್ಯಾಟಿನ್ ಅಮೆರಿಕನ್ ಸಾಹಿತ್ಯವನ್ನು ಶಿಫಾರಸು ಮಾಡುತ್ತದೆ. ಇದು ಸಾಹಿತ್ಯದ ಮೂಲಕ ಜಾಗತಿಕ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ವರಲಕ್ಷ್ಮಿ, ಜಿ. ರವರ "ಗ್ರಂಥಾಲಯಗಳಲ್ಲಿ ಕೃತಕ ಬುದ್ಧಿ ಮತ್ತು ಬೆಂಗಳೂರಿನ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬಳಕೆದಾರರ ತೃಪ್ತಿ" ಎಂಬ ಲೇಖನವು ಗ್ರಂಥಾಲಯದಲ್ಲಿ ಂಖ ಬಳಕೆಯ ಮಹತ್ವವನ್ನು ವಿವರಿಸಲಾಗಿದೆ. ಂಖ ಆಧಾರಿತ ತಂತ್ರಜ್ಞಾನ ಬಳಸುವುದರಿಂದ "ಬಳಕೆದಾರರಿಗೆ ಮಾಹಿತಿ ಪಡೆಯುವುದು ಅತಿ ಸುಲಭವಾಗಿದೆ" ಎಂದು ಲೇಖಕರು ಅವರ ಅಧ್ಯಯನದಲ್ಲಿ ತಿಳಿಸಲಾಗಿದೆ. ಇದರಿಂದ ಬಳಕೆದಾರರಿಗೆ ತೃಪ್ತಿಯಾಗಿದೆ ಎನ್ನಲಾಗಿದೆ ಂಖ ಯಿಂದ ಗ್ರಂಥಾಲಯ ಸಿಬ್ಬಂದಿಯ ಕೆಲಸ ಕಡಿಮೆಯಾಗಿದೆ, ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಿದೆ ಎಂದು ಲೇಖಕರು ತಿಳಿಯಪಡಿಸಿರುತ್ತಾರೆ.

ಯುವ ಲೇಖಕರಿಗೆ ಪ್ರೇರಣೆ : – ಕೃತಕ ಬುದ್ಧಿಮತ್ತೆಯು (ಂಖ) ಇಂದಿನ ಯುವ ಲೇಖಕರಿಗೆ ಕೇವಲ ಒಂದು ತಾಂತ್ರಿಕ ಸಾಧನವಾಗಿ ಉಳಿಯದೆ, ಅವರ ಸೃಜನಶೀಲತೆಯನ್ನು ವೃದ್ಧಿಗೊಳಿಸುವ ಒಂದು ಶಕ್ತಿಯಾಗಿ ಹೊರಹೊಮ್ಮಿದೆ. ಎಂದರೆ ತಪ್ಪಾಗಲಾರದು ಯುವ ಲೇಖಕರು ತಮ್ಮ ಬರವಣಿಗೆಯ ಹಾದಿಯಲ್ಲಿ ಎದುರಿಸುವ ಹತ್ತು ಹಲವು ಸವಾಲುಗಳಿಗೆ ಂಖ ಹೊಸ ಹಾದಿಗಳನ್ನು ತೋರಿಸುತ್ತಿದೆ. ಹಲವು ಬಾರಿ ಕೆಲವು ಲೇಖಕರಿಗೆ ಕಥೆ ಅಥವಾ ಲೇಖನವನ್ನು ಹೇಗೆ ಆರಂಭಿಸಬೇಕು ಎಂಬ ಗೊಂದಲವಿರುತ್ತದೆ. ಅಂತಹ ಸಂರ್ಭದಲ್ಲಿ ಲೇಖಕರಿಗೆ ಆರಂಭಿಕ ಸಾಲುಗಳು ಅಥವಾ ಕಥೆಯ ಎಳೆಗಳನ್ನು (ಖಣಠಡಿಥಿ ಠಿಡಿಠಟಠಿಣ) ನೀಡುವ ಮೂಲಕ ಬರವಣಿಗೆಯ ವೇಗವನ್ನು ಹೆಚ್ಚಿಸುತ್ತದೆ..ಒಂದು ಸಣ್ಣ ಯೋಚನೆಯನ್ನು ನೀಡಿದರೆ, ಅದಕ್ಕೆ ಸಂಬಂಧಿಸಿದ ಹತ್ತು ಹಲವು ಆಯಾಮಗಳನ್ನು ಂಖ ನೀಡುತ್ತದೆ. ಇದು ಯುವ ಲೇಖಕರ ಕಲ್ಪನಾ ಶಕ್ತಿಯನ್ನು ವಿಸ್ತರಿಸುತ್ತದೆ. ಹೊಸ ಲೇಖಕರುಗಳಿಗೆ ಭಾಷಾ ದೋಷವನ್ನು ಸರಿಪಡಿಸಿಕೊಳ್ಳಲು ಇದು ಸಹಾಯಕವಾಗಿದೆ. ವಿಷಯಗಳ ಸಂಗ್ರಹಣೆ ಮತ್ತು ಬರವಣಿಗೆ ಅಭ್ಯಾಸ ಮಾಡಲು ಂಖ ಯನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸಾಹಿತ್ಯ ಕ್ಷೇತ್ರಕ್ಕೆ ಹೊಸ ತಿರುವು ಹಾಗೂ ಹೊಸ ಪ್ರತಿಭೆಗಳು ಹೆಚ್ಚುತ್ತಿದ್ದಾರೆ.

ಶ್ರಮಿಕರ ಕಥನಗಳ" ಡಿಜಿಟಲ್ ವೇದಿಕೆ: ಕೃಷಿ ಜಾನಪದದಲ್ಲಿರುವ ಕಾಯಕದ ಮಹತ್ವವನ್ನು ಮತ್ತು ರೈತ ಕಾರ್ಮಿಕರ ಹೋರಾಟದ ಕಥೆಗಳನ್ನು ಂಖ ಮೂಲಕ ವಿಡಿಯೋ ಅಥವಾ ಅನಿಮೇಷನ್ ರೂಪಕ್ಕೆ ತಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಹುದಾಗಿದೆ. ಇದರಿಂದ ನಗರ ಪ್ರದೇಶದ ಜನರಲ್ಲಿ ಮತ್ತು ಯುವಜನಾಂಗದಲ್ಲಿ ಕೃಷಿ ಸಂಸ್ಕೃತಿಯ ಬಗ್ಗೆ ಆಸಕ್ತಿ ಮೂಡಿಸುತ್ತದೆ. ಒಟ್ಟಾರೆಯಾಗಿ ಂಖ ಎಂಬುದು ಕೇವಲ ಯಂತ್ರವಲ್ಲ, ಅದು ನಮ್ಮ ಹಳೆಯ "ಕೃಷಿ ಸಂಸ್ಕೃತಿ" ಮತ್ತು ಹೊಸ "ತಾಂತ್ರಿಕ ಜಗತ್ತಿನ" ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ನಮ್ಮ ಸಾಂಪ್ರದಾಯಿಕ ಜ್ಞಾನಕ್ಕೆ ಜಾಗತಿಕ ವೇದಿಕೆ ಕಲ್ಪಿಸುವ ಮೂಲಕ ಅದನ್ನು ಉಳಿಸಿ ಬೆಳೆಸಿಕೊಳ್ಳಲು ದೊಡ್ಡ ಪ್ರೇರಣೆ ನೀಡುತ್ತದೆ.

ಫಲಿತಾಂಶಗಳು:

ಸೃಜನಶೀಲತೆಯ ಮಟ್ಟ ವನ್ನು ಹೆಚ್ಚಿಸುತ್ತದೆ: ಂಖ ಬಳಕೆಯಿಂದ ಸಾಹಿತ್ಯ ರಚನೆಯು ಅತಿ ವೇಗದಲ್ಲಿ ಕಂಡು ಬಂದಿದೆ. ಅಂದರೆ ಲೇಖಕರು ತಿಂಗಳುಗಟ್ಟಲೆ ತೆಗೆದುಕೊಳ್ಳುತ್ತಿದ್ದ ಸಂಶೋಧನೆ ಮತ್ತು ಕಥೆಯನ್ನು ಕಾದಂಬರಿಯನ್ನು ಸಿದ್ಧಪಡಿಸುವ ಕೆಲಸವನ್ನು ಎ ಐ ಕೆಲವೇ ನಿಮಿಷಗಳಲ್ಲಿ ಮಾಡುತ್ತಿದೆ. ಇದರಿಂದ ಲೇಖಕರು ಹೆಚ್ಚು ಕೃತಿಗಳನ್ನು ಪ್ರಕಟಣೆ ಮಾಡಲು ಸಹಕಾರಿಯಾಗಿದೆ.

ಭಾಷಾಂತರ ಗುಣಮಟ್ಟ ಮತ್ತು ವ್ಯಾಪ್ತಿ: ಮೊದಲು ಮಾನವ ಭಾಷಾಂತರಕಾರನಿಗೆ ಮಾತ್ರ ಸಾಧ್ಯವಿದ್ದ ಕಾವ್ಯಾತ್ಮಕ ,ಸಾಹಿತ್ಯಿಕ ಭಾಷಾಂತರವನ್ನು ಇಂದು ಂಖ ಕ್ಷಣಾರ್ದದಲ್ಲಿ ಮಾಡುತ್ತದೆ.

ಶೈಲಿಯ ಅನುಕರಣೆ: ಸಂಶೋಧನೆಗಳ ಪ್ರಕಾರ ಂಖ ತಂತ್ರಾಂಶಗಳು ಕುವೆಂಪು ಬೇಂದ್ರೆಯವರ ಬರವಣಿಗೆಯ ಶೈಲಿಯನ್ನು ಗಮನಿಸಿ ಅದೇ ಮಾದರಿಯ ಹೊಸ ಪದ್ಯ ಪಾಠಗಳನ್ನು ರಚಿಸುವ ಸಾಮರ್ಥ್ಯವಿದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸಮಾರೋಪ:

ಂಖ ಸೃಷ್ಟಿಸಿದ ಪಠ್ಯವು ತಾಂತ್ರಿಕವಾಗಿ ಸರಿಯಾಗಿದ್ದರೂ ಮಾನವ ಅನುಭವದ "ನೈಜತೆ "ಮತ್ತು ಆತ್ಮೀಯತೆಯ ಕೊರತೆ ಎದ್ದು ಕಾಣುತ್ತದೆ. ಸಾಹಿತ್ಯವೆಂಬುದು ಕೇವಲ ಕಾಗದದ ಮೇಲಿನ ಅಕ್ಷರವಲ್ಲ, ಅದು ತಂತ್ರಜ್ಞಾನದೊಂದಿಗೆ ಬೆರೆತು ಕಾಲ ಕಾಲಕ್ಕೆ ತಕ್ಕಂತೆ ರೂಪಾಂತರ ಹೊಂದಬೇಕು ಎಂಬುದು ಇಂದಿನ ಅನಿವಾರ್ಯತೆಯಾಗಿದೆ. ಕನ್ನಡ ಸಾಹಿತ್ಯದ ಂಖ ತಂತ್ರಜ್ಞಾನ ಲೇಖಕನ ಕೈಯನ್ನು ಹಿಡಿಯಬೇಕು ಅದನ್ನು ಹೊರತುಪಡಿಸಿ ಲೇಖಕನ ಮೆದುಳನ್ನು ಆಕ್ರಮಿಸುವಂತಾಗಬಾರದು. ಇದರಿಂದ ಹೊಸ ಲೇಖಕರನ್ನು ಸೃಷ್ಟಿಸುವ ಬದಲಾಗಿ ಮುಂದೊಂದು ದಿನ ಲೇಖಕರ ಕೊರತೆ ಎದ್ದು ಕಾಣುತ್ತದೆ. ಕೃತಕ ಬುದ್ಧಿಮತ್ತೆ ಕನ್ನಡ ಸಾಹಿತ್ಯದಲ್ಲಿ ಮಹತ್ತರವಾದ ಪರಿಕಲ್ಪನೆಯನ್ನು ಉಂಟು ಮಾಡಿದೆ. ಇದು ಸಂಶೋಧನೆ, ಅನುವಾದ, ಮತ್ತು ಭಾಷಾ ಸಂರಕ್ಷಣೆ ಡಿಜಿಟಲೀಕರಣ ಹೊಸ ಅವಕಾಶವನ್ನು ಸೃಷ್ಟಿಸಿದೆ. ಆದರೆ ಕೃತಕ ಬುದ್ಧಿಮತ್ತೆ(ಂಖ) ರಚಿತ ಸಾಹಿತ್ಯದಲ್ಲಿ ಮಾನವೀಯ ಭಾವನೆಗಳಿಗೆ ಕುಂದುಂಟಾಗುತ್ತದೆ. ಮೂಲಸೃಜನಶೀಲತೆ ಕುಗ್ಗುತ್ತದೆ. ಕೃಷಿ ಸ್ವಾಮ್ಯ ಸಮಸ್ಯೆಗಳು ಹಾಗೂ ಯುವ ಪೀಳಿಗೆಗೆ ಪುಸ್ತಕ ಓದುವ ಹವ್ಯಾಸ ಕಣ್ಮರೆಯಾಗುತ್ತದೆ. ತಾಳ್ಮೆ ಮತ್ತು ಬರವಣಿಗೆ ಕೌಶಲ್ಯಗಳನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಾಗುತ್ತದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಂಖ ಕೃತಕ ಬುದ್ಧಿಮತ್ತೆಯ ಸೃಜನಶೀಲತೆಯು ಮಾನವನ ಸೃಜನಶೀಲತೆಗೆ ಪರ್ಯಾಯವಲ್ಲ. ಕನ್ನಡದ ಕಂಪನ್ನು ಚೆಲ್ಲಿದ ಕನ್ನಡ ನಾಡಲ್ಲಿ ಕನ್ನಡ ಸಾಹಿತ್ಯದ ರಸ ಋಷಿಗಳು ಬೆಳೆದ ಬಿಡಲ್ಲಿ ಕನ್ನಡ ಸಾಹಿತ್ಯದ ನಿಜವಾದ ಶಕ್ತಿ ಮಾನವನ ಅನುಭವ ಮತ್ತು ಅವನ ಭಾವನೆ ಕಲ್ಪನೆಗಳಲ್ಲಿ ಅಡಗಿದೆ ಹೊರತು ಂಖ ನಲ್ಲಿ ಅಲ್ಲ. ಆದ್ದರಿಂದ ಂಖ ಅನ್ನು ಸಮತೋಲನದಿಂದ ಜವಾಬ್ದಾರಿಯುತವಾಗಿ ಬಳಸಿದರೆ ಕನ್ನಡ ಸಾಹಿತ್ಯದ ಭವಿಷ್ಯ ಮತ್ತಷ್ಟು ಸಮೃದ್ಧವಾಗುತ್ತದೆ.

ಉಲ್ಲೇಖಗಳು :

1. Shiva Kumar H R & Ramakrishnan A G. (2019). Lipi Gnani - A Versatile OCR for Documents in any Language Printed in Kannada Script. arXiv.
2. ವರಲಕ್ಷ್ಮೀ ಜಿ.(2025). "ಗ್ರಂಥಾಲಯಗಳಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಬಳಕೆದಾರರ ತೃಪ್ತಿ". International Journal of Kannada Research. Page no. 161-168.
3. Sunil Kumar B L ಮತ್ತು ಇತರರು (2024) ವಿಷಯ: ಅಓಓ ಆಧಾರಿತ ಕನ್ನಡ ಕೈಬರಹ ಗುರುತಿಸುವಿಕೆ.
4. Basavanna C, S. Manjunath, D. S. Guru (2026). ವಿಷಯ: ಕನ್ನಡ ಸಾಹಿತ್ಯದ ದೊಡ್ಡ ಡಿಜಿಟಲ್ Corpus ¤ªÀiÁðt.
5. Jamshed Memon, Maira Sami, Rizwan Ahmed Khan (2020). ವಿಷಯ: "ಔಅಖ ಮತ್ತು ಂಖ ಕುರಿತ ಸಮಗ್ರ ಸಾಹಿತ್ಯ ಸಮೀಕ್ಷೆ".
6. R sanjeevakunte, R D Sudhakar Samued (2008). ಲೇಖನ ಶೀರ್ಷಿಕೆ: "A Simple and Efficient OCR System for Basic Symbols in Printed Kannada Text".

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

Social Conditions of Karnataka on the eve of Sri Basaveshwara- A Revisit

Nagaraj chakari [1] Dr. S.Y. Mugali [2]
[1]Research Scholar, Department of History and Archaeology, Karnatak University, Dharwad.
[2] Professor, Department History, Karnatak University, Dharwad

Manuscript ID:
JRD -2026-180534
ISSN: 2230-9578
Volume 18
Issue 5(IV)
Pp. 139-142
April- 2026
Submitted: 18 Apr. 2026
Revised: 29 Apr.2026
Accepted: 13 May. 2026
Published: 31 May. 2026

ಪ್ರಸ್ತಾವನೆ:

ಶ್ರೀ ಬಸವೇಶ್ವರರು ಭಾರತದ ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಮಹೋನ್ನತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಅವರ ಜೀವನ ಮತ್ತು ಬೋಧನೆಗಳು ಕಳೆದ ಎಂಟು ನೂರು ವರ್ಷಗಳಿಂದ ದಕ್ಷಿಣ ಭಾರತದ ಲಕ್ಷಾಂತರ ಜನರಿಗೆ ಸ್ಫೂರ್ತಿಯ ಮೂಲವಾಗಿದೆ ಮತ್ತು ಅವರ ಜೀವನವನ್ನು ಪ್ರಭಾವಿಸಿದೆ ಮತ್ತು ರೂಪಿಸಿದೆ. ಕೊಳೆಯುತ್ತಿರುವ ಹಿಂದೂ ಧರ್ಮದಿಂದ ಪ್ರೋತ್ಸಾಹಿಸಲ್ಪಟ್ಟ ಜಾತಿ ಮತ್ತು ಪಂಥದ ಆಚರಣೆಗಳು, ಮೂಢನಂಬಿಕೆಗಳು ಮತ್ತು ವ್ಯತ್ಯಾಸಗಳ ವಿರುದ್ಧ ಅವರು ದಂಗೆ ಎದ್ದರು. ಸಮಾಜವು ಜಾತಿ ಮತ್ತು ಪಂಥಗಳ ಕ್ರಮಾನುಗತ ವ್ಯವಸ್ಥೆಯಿಂದ ಛಿದ್ರಗೊಂಡಿತು ಮತ್ತು ಆಚರಣೆಗಳು ತಮ್ಮ ಸ್ವಾಧೀನವನ್ನು ಹೊಂದಿದ್ದವು. ಮಹಿಳೆಯರನ್ನು ಹರಟೆಯಂತೆ ನಡೆಸಿಕೊಳ್ಳಲಾಗುತ್ತಿತ್ತು. ಇದೆಲ್ಲವನ್ನೂ ಧರ್ಮದ ಹೆಸರಿನಲ್ಲಿ ನಡೆಸಲಾಯಿತು ಮತ್ತು ಕೆಲವು ಸ್ವಾರ್ಥಿಗಳು ತಮ್ಮ ಮೇಲುಗೈಯನ್ನು ಉಳಿಸಿಕೊಳ್ಳಲು ಮತ್ತು ಸಾಮಾನ್ಯ ಜನರನ್ನು ತಮ್ಮ ಶೋಷಣೆಗಾಗಿ ಈ ಅನಿಷ್ಟಗಳನ್ನು ಮುಂದುವರಿಸಲು ಪ್ರಯತ್ನಿಸಿದರು.

ಬಸವನ ದಿನಗಳ ಮೊದಲು ಕರ್ನಾಟಕದ ಸಾಮಾಜಿಕ ಪರಿಸ್ಥಿತಿಗಳನ್ನು ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹನ್ನೆರಡನೇ ಶತಮಾನದ ಮಧ್ಯಭಾಗದಲ್ಲಿ ವೀರಶೈವಧರ್ಮವನ್ನು ಪುನರುಜ್ಜೀವನಗೊಳಿಸಿದ ಮಹಾನ್ ಸುಧಾರಕನ ಬೆಳವಣಿಗೆಯನ್ನು ಪ್ರಶಂಸಿಸಲು ನಮಗೆ ಸಹಾಯ ಮಾಡುವಂತಹ ವೈಶಿಷ್ಟ್ಯಗಳಿಗೆ ಒತ್ತು ನೀಡಲಾಗಿದೆ. ವೀರಶೈವ ಧರ್ಮದ ದೊಡ್ಡ ಪ್ರತಿಸ್ಪರ್ಧಿ ಜೈನ ಧರ್ಮವಾಗಿದ್ದು, ಅದು ಅದನ್ನು ಮರೆಮಾಡಿತು.ಕಲ್ಯಾಣದ ರಾಷ್ಟ್ರಕೂಟರು ಮತ್ತು ಚಾಲುಕ್ಯರ ಅವಧಿಯು (8ರಿಂದ 12ನೇ ಶತಮಾನ) ಈ ಧರ್ಮದ ಉಚ್ಛಾಯ ಸ್ಥಿತಿಯಾಗಿತ್ತು. ಜೈನರು ಶಿಕ್ಷಣ ಮತ್ತು ಕಲಿಕೆ, ಕಲೆ ಮತ್ತು ವಾಸ್ತುಶಿಲ್ಪ, ಧರ್ಮ ಮತ್ತು ತತ್ವಶಾಸ್ತ್ರಕ್ಕೆ ಶಾಶ್ವತವಾದ ಕೊಡುಗೆಗಳನ್ನು ನೀಡಿದ್ದಾರೆ. ರಾಜಕೀಯ ಮತ್ತು ಆಡಳಿತದಲ್ಲಿ ಅವರ ಪಾತ್ರವು ಕಡಿಮೆ ಪ್ರಾಮುಖ್ಯತೆಯನ್ನು ಹೊಂದಿರಲಿಲ್ಲ. ಕರ್ನಾಟಕದ ಜೀವನದಲ್ಲಿ ಜೈನರು ವಹಿಸಿದ ಪಾತ್ರವನ್ನು ತಿಳಿಯಲು ನಾವು ಅತ್ತಿಮಬ್ಬೆಯ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಚಾಲುಕ್ಯ ಸತ್ಯಶ್ರಯರ (ಕ್ರಿ.ಪೂ 997–1008) ಅಡಿಯಲ್ಲಿ ಇಬ್ಬರು ಮಂತ್ರಿಗಳಿದ್ದರು, ಒಬ್ಬರು ಮಲ್ಲಪ ಮತ್ತು ಇನ್ನೊಬ್ಬರು ಧಲ್ಲಪ, ಮಲ್ಲಪ್ಪನಿಗೆ ಅತ್ತಿಮಬ್ಬೆ ಮತ್ತು ಗುಂಡಂಬೆ ಎಂಬ ಇಬ್ಬರು ಪುತ್ರಿಯರಿದ್ದರು ಮತ್ತು ಧಲ್ಲಪ್ಪನಿಗೆ ತನ್ನ ಶೌರ್ಯ ಮತ್ತು ಚಾರಿತ್ಯಕ್ಕೆ ಹೆಸರುವಾಸಿಯಾದ ನಾಗದೇವ ಎಂಬ ಒಬ್ಬ ಮಗನಿದ್ದನು. ಅತ್ತಿಮಬ್ಬೆ ಮತ್ತು ಗುಂಡಂಬೆ ಇಬ್ಬರನ್ನೂ ನಾಗದೇವಗೆ ಮದುವೆ ಮಾಡಿಕೊಡಲಾಯಿತು, ಅವರು ಅಕಾಲಿಕವಾಗಿ ನಿಧನರಾದರು. ತಾನು ಸತಿ ಮಾಡುವುದಾಗಿ ಗುಂಡಂಬೆಯು ಘೋಷಿಸಿದಳು. ಆ ನಂತರ, ಅತ್ತಿಮಬ್ಬೆ ತನ್ನ ಉಳಿದ ಜೀವನವನ್ನು ಧಾರ್ಮಿಕ ಮತ್ತು ದತ್ತಿ ಕಾರ್ಯಗಳಲ್ಲಿ ಕಳೆಯಲು ನಿರ್ಧರಿಸಿದಳು. ಈ ವಿಷಯಗಳಲ್ಲಿ ಅವರು ಎಷ್ಟು ಪ್ರಸಿದ್ಧರಾದರೆಂದರೆ, ಅವರು ಜೈನ ಧರ್ಮ ಪಟಕ್ಕೆ ಅಥವಾ ಜೈನ ಧರ್ಮದ ನೀತಿವಂತ ಧ್ವಜ ಮತ್ತು ದಾನಚಿಂತಾಮಣಿ ಅಥವಾ ಎಂದಿಗೂ ವಿಫಲವಾಗದ ಲೋಕೋಪಕಾರಿ ಎಂದು ಕರೆಯಲ್ಪಟ್ಟರು. ಆಕೆಯ ತಂದೆ ಅಭಯಭಾಸ–ಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದ ಕವಿ ಪೊನ್ನಾನನ್ನು ಪೋಷಿಸಿದ್ದರು ಮತ್ತು ಶಾಂತಿಪುರಾಣವನ್ನು ಬರೆಯಲು ಪ್ರೋತ್ಸಾಹಿಸಿದ್ದರು. ಆಕೆ ಇದ್ದಳು. ಈ ಕೃತಿಯ ಒಂದು ಸಾವಿರ ಪ್ರತಿಗಳು ಆಕೆಯ ಸ್ವಂತ ಖರ್ಚಿನಲ್ಲಿ ನಕಲು ಮಾಡಲ್ಪಟ್ಟವು ಮತ್ತು ಹೀಗೆ ಆಕೆಯ ತಂದೆ ಪ್ರಾರಂಭಿಸಿದ ಒಳ್ಳೆಯ ಕೆಲಸವನ್ನು ಮುಂದುವರಿಸಿದವು. ಅವಳು ಬಸದಿಗಳು ಅಥವಾ ದೇವಾಲಯಗಳನ್ನು ಸಹ ನಿರ್ಮಿಸಿದಳು ಮತ್ತು ಅವುಗಳಲ್ಲಿ ಚಿನ್ನ ಮತ್ತು ಆಭರಣಗಳ ಚಿತ್ರಗಳನ್ನು ಸ್ಥಾಪಿಸಿದಳು ಮತ್ತು ಅವುಗಳಲ್ಲಿ ಪ್ರತಿಯೊಂದಕ್ಕೂ ಅವಳು ಗಂಟೆಗಳು,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
Nagaraj chakari, Research Scholar, Department of History and Archaeology, Karnatak University, Dharwad.

How to cite this article:
chakari, N., & Mugali, S. Y. (2026). Social Conditions of Karnataka on the eve of Sri Basaveshwara- A Revisit. Journal of Research & Development, 18(5(IV)), 139–142.
https://doi.org/10.5281/zenodo.20995205

Quick Response Code:
Website:
https://jrdrvb.org/
DOI:
10.5281/zenodo.20995205
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಚಿನ್ನದ ದೀಪಗಳು, ಭವ್ಯವಾದ ನಿದಲುವಂಗಿಗಳು ಮತ್ತು ಶ್ರೀಮಂತ ವಿಜಯೋತ್ಸವದ ಕಮಾನುಗಳನ್ನು ಮಾಡಿದಳು. ಅಂತಿಮವಾಗಿ, ಆಕೆ ಲೋಕಿಗುಂಡಿಯಲ್ಲಿ ಒಂದು ಬಸದಿಯನ್ನು ನಿರ್ಮಿಸಿದಳು. ಅದು ಅವಳು ಮೊದಲು ನಿರ್ಮಿಸಿದ ಅನೇಕ ಬಸದಿಗಳಿಗೆ ಪರಾಕಾಷ್ಠೆ ಅಥವಾ ಕಲುಸಾದಂತೆ ಇತ್ತು. ರಾಜ ಸತ್ಯಶ್ರಯನು ಈ ದಾನ ಕಾರ್ಯದಿಂದ ಎಷ್ಟು ಸಂತೋಷಗೊಂಡನೆಂದರೆ, ಆತ ಅದಕ್ಕೆ ಒಂದು ಚಿನ್ನದ ಕವಚವನ್ನು ದಾನ ಮಾಡಿದನು ಮತ್ತು ಅದರಲ್ಲಿ ಪೂಜೆ ಸಲ್ಲಿಸಲು ಮತ್ತು ಅದರ ನಿರ್ವಹಣೆಗಾಗಿ ಭೂಮಿಯನ್ನು ದಾನ ಮಾಡಿದನು. ಆಕೆಯ ತಂದೆ ಶಾಂತಿಪುರಾಣವನ್ನು ಬರೆಯಲು ಪೊನ್ನಾನನ್ನು ಪ್ರೋತ್ಸಾಹಿಸಿದಂತೆಯೇ, ಆಕೆ ಅಜಿತಪುರಾಣವನ್ನು ಬರೆಯಲು ರಣ್ಣನನ್ನು ಪ್ರೋತ್ಸಾಹಿಸಿದಳು. ಹೀಗಾಗಿ, ನಾವು ಒಂದೇ ಕುಟುಂಬಕ್ಕೆ ಕನ್ನಡದಲ್ಲಿ ಎರಡು ಶ್ರೇಷ್ಠ ಧಾರ್ಮಿಕ ಸಾಹಿತ್ಯ ಕೃತಿಗಳು ಮತ್ತು ಅಸಂಖ್ಯಾತ ಕಲೆ ಮತ್ತು ವಾಸ್ತುಶಿಲ್ಪ ಕೃತಿಗಳಿಗೆ ಋಣಿಯಾಗಿದ್ದೇವೆ.

ಕಲ್ಯಾಣದ ಚಾಲೂಕ್ಯರ ಕೊನೆಯ ದಿನಗಳಲ್ಲಿ, ಜೈನರು ಸಮಾಜ ಮತ್ತು ಆಡಳಿತದಲ್ಲಿ ತಮ್ಮ ಸ್ಥಾನವನ್ನು ಕಳೆದುಕೊಂಡರು. ಇದನ್ನು ಶೈವ ನಾಯಕರು ತೆಗೆದುಕೊಂಡರು, ಅವರಲ್ಲಿ ಅನೇಕರು ಪಶುಪತಿ ಮತ್ತು ಕಾಲಮುಖ ಪಂಥಗಳಿಗೆ ಸೇರಿದವರು, ವೀರಶೈವರ ಪೂರ್ವಗಾಮಿಗಳು, ಜೈನರು ಮತ್ತು ಶೈವ ಪಂಥಗಳ ನಡುವಿನ ವೈರತ್ವದ ಹೊರತಾಗಿ, ಜೈನ ಧರ್ಮವು ಆಕ್ರಮಣಗಳಿಂದ ದುರ್ಬಲಗೊಂಡಿತು. ಅದರ ಕೋಪವು ಅವರ ಸ್ಮಾರಕಗಳ ವಿರುದ್ಧ ನಿರ್ದೇಶಿಸಲ್ಪಟ್ಟಿತು. ಬೌದ್ಧಧರ್ಮ ಕರ್ನಾಟಕ ಇತಿಹಾಸದಲ್ಲಿ ಜೈನ ಧರ್ಮವು ಹೊಂದಿದ್ದ ಅದೇ ಪ್ರಮುಖ ಸ್ಥಾನವನ್ನು ಬೌದ್ಧ ಧರ್ಮವು ಎಂದಿಗೂ ಹೊಂದಿರಲಿಲ್ಲ. ಆದರೆ ಇದು ಸಾಮಾನ್ಯವಾಗಿ ಊಹಿಸಿದ್ದಕ್ಕಿಂತ ದೊಡ್ಡ ಸ್ಥಾನವನ್ನು ಆಕ್ರಮಿಸಿತು. ಕರ್ನಾಟಕಕ್ಕೆ ಬೌದ್ಧಧರ್ಮವನ್ನು ಪರಿಚಯಿಸಿದವರಲ್ಲಿ ಅಶೋಕನು ಮೊದಲಿಗನಾಗಿದ್ದನು. ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಾಕೃತ ಶಾಸನಗಳನ್ನು ಹೊಂದಿರುವ ಕೆಲವು ಸ್ತೂಪಗಳು ಕಂಡುಬಂದಿವೆ. ಇದು ಅಶೋಕನ ಧರ್ಮಪ್ರಚಾರಕ ಕಾರ್ಯವು ಫಲ ನೀಡಿತು ಎಂಬುದನ್ನು ತೋರಿಸುತ್ತದೆ. ಹೂನ್ ತ್ಸಾಂಗ್ನ ಕಾಲದಲ್ಲಿ, ಬಾದಾಮಿಯ ಚಾಲುಕ್ಯರ ರಾಜ್ಯದಲ್ಲಿ ನೂರು ಬೌದ್ಧ ವಿಹಾರಗಳಿದ್ದವು. ಇವುಗಳಲ್ಲಿ ಕೆಲವು ಸ್ಪಷ್ಟವಾಗಿ ಕರ್ನಾಟಕ ಕೆಲವು ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದವು ಮತ್ತು ಇತರವುಗಳನ್ನು ಕಾಲಕ್ರಮೇಣ ನಿರ್ಮಿಸಲಾಯಿತು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳ ಶತಮಾನಗಳಷ್ಟು ಹಳೆಯದಾದ ಜಾತಿಗಳ ವ್ಯವಸ್ಥೆಯು ಅಧ್ಯಯನದ ಅವಧಿಯಲ್ಲಿ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಸಾಮಾನ್ಯ ರೀತಿಯಲ್ಲಿ ಹೇಳಬಹುದು. ಇದನ್ನು ಕಟ್ಟುನಿಟ್ಟಾಗಿ ಗಮನಿಸಲಾಗಿದೆ ಎಂದು ಪ್ರತಿಪಾದಿಸುವುದು ಬಹಳ ಕಷ್ಟ, ವಾಸ್ತವವಾಗಿ, ಚಾಲುಕ್ಯ ಕುಟುಂಬದ ಸ್ಥಾಪಕನಾದ ಪ್ರಬಲ ಚಾಲುಕ್ಯ ಅಥವಾ ಸತ್ಯಶ್ರಯನು ಒಬ್ಬ ಯೋಧನಾಗಿದ್ದನೆಂಬ ಸಿದ್ಧಾಂತವನ್ನು ನಾವು ಪರಿಗಣಿಸಿದರೆ, ಈ ರಾಜರು ಕ್ಷತ್ರಿಯರು ಎಂದು ಹೇಳಬಹುದು. ಚಾಲುಕಿ ಎಂಬ ಪದವು ಕೃಷಿ ಉಪಕರಣದ ಹೆಸರನ್ನು ಹೋಲುತ್ತದೆ ಎಂಬ ವ್ಯಾಖ್ಯಾನವು ಬಹುಶಃ ಇವರು ಮೂಲತಃ ಶೌರ್ಯವನ್ನು ಪ್ರದರ್ಶಿಸಲು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಅಂತಿಮವಾಗಿ ಒಂದು ರಾಜ್ಯವನ್ನು ಸ್ಥಾಪಿಸಿದ ಮಣ್ಣಿನ ಉಳುಮೆಗಾರರು ಎಂದು ಭಾವಿಸುವಂತೆ ಮಾಡುತ್ತದೆ. ಈ ಅವಧಿಯಲ್ಲಿ ಅನೇಕ ಸೇನಾಧಿಪತಿಗಳು ಮತ್ತು ಸೇನಾಧಿಕಾರಿಗಳು ಬ್ರಾಹ್ಮಣರಾಗಿದ್ದರು ಎಂಬುದು ಸಾಮಾನ್ಯವಾಗಿ ಕಂಡುಬರುತ್ತದೆ. ವಾಸ್ತವವಾಗಿ, ಮಿಲಿಟರಿ ತರಬೇತಿಯು ನಾಗರಿಕ ಅಧಿಕಾರಿಗಳಿಗೆ ಸಹ ಅಗತ್ಯವಾದ ಅರ್ಹತೆಯಾಗಿದೆ ಎಂದು ತೋರುತ್ತದೆ. ಆದರೂ, ಬ್ರಾಹ್ಮಣರು, ವಿಶೇಷವಾಗಿ ಪುರೋಹಿತ ವೃತ್ತಿಗೆ ಸೇರಿದವರು ಮತ್ತು ಶಿಕ್ಷಕರಾಗಿದ್ದವರು ಹೆಚ್ಚಿನ ಗೌರವವನ್ನು ಹೊಂದಿದ್ದರು.

ಶಾಸನಗಳು ಎತ್ತರದ ಭಾಷೆಯಲ್ಲಿ ಬ್ರಾಹ್ಮಣರ ಶ್ಲಾಘನೆಯನ್ನು ಒಳಗೊಂಡಿವೆ. ಅಗ್ರಹಾರಗಳಲ್ಲಿ ಮಹಾಜನರು ಸಭೆಯನ್ನು ರಚಿಸಿದರು ಮತ್ತು ಈ ಮಹಾಜನರು ವೈದಿಕ ಸಿದ್ಧಾಂತ, ತತ್ವಶಾಸ್ತ್ರ, ವಿಜ್ಞಾನ ಮತ್ತು ಸಾಹಿತ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದರು, ಅವರು ರಾಜಕೀಯವಾಗಿ ಹೆಚ್ಚು ಅಧಿಕಾರ ಅಥವಾ ಪ್ರಭಾವವನ್ನು ಹೊಂದಿರದಿದ್ದರೂ, ಸಾಮಾನ್ಯವಾಗಿ ಸಮಾಜವು ಅವರ ಕಲಿಕೆ ಮತ್ತು ಪಾಂಡಿತ್ಯಕ್ಕಾಗಿ ಅವರನ್ನು ಗೌರವಿಸಿತು. ನರಗುಂದ ಶಾಸನ ಕ್ರಿ. ಶ. 1147ರ ಎರಡನೇ ಜಗದಕಮಲ್ಲ ಕೃತಿಯಲ್ಲಿ ಅಗ್ರಹಾರದ 120 ಮಹಾಜನರಾದ ಪಿರಿಯಾ ನರುಗುಂದರು ಆರು ಕರ್ತವ್ಯಗಳಲ್ಲಿ (ಷತ್ ಕರ್ಮ) ಅಂದರೆ, ಯಜ್ಞ (ಯಜ್ಞಗಳ ಸಾಧನೆ ಮತ್ತು ಮೇಲ್ವಿಚಾರಣೆ) ಅಧ್ಯಾಯ (ಅಧ್ಯಯನ) ದಲ್ಲಿ ನಿರತರಾಗಿದ್ದಾರೆ ಎಂದು ವಿವರಿಸಲಾಗಿದೆ. (ಟಟಿಣಡಿಠಜಣಛಿಣಠಟಿ, ಠಿಜಛಿಚಿಟಟಥಿ ಠಜಿ ಣಛಜ ಗಿಜಜಛಿ) ಆನಾ (ಉಡುಗೊರೆಗಳನ್ನು ತಯಾರಿಸುವುದು) ಮತ್ತು ಪ್ರತಿಗ್ರಹ (ಉಡುಗೊರೆಗಳನ್ನು ಸ್ವೀಕರಿಸುವುದು) ಇವುಗಳನ್ನು ಅವರ ಧರ್ಮ ಎಂದು ಪರಿಗಣಿಸಲಾಗಿದೆ. ಕರ್ತವ್ಯಗಳು, ಈ ಜನರು ಹದಿನೆಂಟನೇ ಪುರಾಣಗಳು, ಮಹಾಕಾವ್ಯಗಳು, ನಾಟಕ ಮತ್ತು ಇತರ ಎಲ್ಲಾ ಸಾಹಿತ್ಯಗಳಲ್ಲಿ ಪಾರಂಗತರಾಗಿದ್ದರು. ಅವರನ್ನು ತ್ರಿಕಂದ ಮೀಮಾಂಸೆಯಲ್ಲಿ ಪ್ರವೀಣರೆಂದು ಮತ್ತು ಬ್ರಹ್ಮ–ಧರ್ಮದ ರಕ್ಷಕರೆಂದು ವರ್ಣಿಸಲಾಗಿದೆ. ಅಂತಹ ವಿವರಣೆಯಿಂದ ಸಮಾಜವು ವಿದ್ಯಾವಂತರನ್ನು ಮತ್ತು ನೀತಿವಂತರನ್ನು ಬಹಳ ಗೌರವದಿಂದ ನೋಡುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ. ಒಂದು ರೀತಿಯಲ್ಲಿ ಇವರು ಸಮಾಜದಲ್ಲಿ ಧರ್ಮದ ರಕ್ಷಕರಾಗಿದ್ದರು ಮತ್ತು ಅವರ ಪಾಂಡಿತ್ಯ ಮತ್ತು ಪಾಂಡಿತ್ಯದಿಂದ ಸಮಾಜವನ್ನು ನ್ಯಾಯದ ಹಾದಿಯಲ್ಲಿ ಮುನ್ನಡೆಸಿದರು.

ರಾಜಕೀಯದ ಬಗೆಗಿನ ಬರಹಗಾರರು ಸಮಾಜದಲ್ಲಿ ಈ ವರ್ಗದ ಬಗೆಗಿನ ತಮ್ಮ ವರ್ತನೆಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದಾರೆ. ಆರ್ಡಿನರಿ ಸಂದರ್ಭಗಳಲ್ಲಿ ಪಾಪವನ್ನು ಮಾಡುವ ಬ್ರಾಹ್ಮಣನಿಗೆ ದಂಡ ವಿಧಿಸಬಾರದು. ಸ್ವತಂತ್ರವಾಗಿ ವಾಸಿಸುವ ಶ್ರೀಮಂತ ಶೂದ್ರನಿಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ಹೇಳುವ ಮಟ್ಟಿಗೆ ಮೆಧಾತಿಥಿ ಹೋಗುತ್ತದೆ. ಕೆಲವು ಶೂದ್ರರು ವ್ಯಾಕರಣದಂತಹ ವಿಷಯಗಳಲ್ಲಿ ಪ್ರಾವೀಣ್ಯತೆಯನ್ನು ಗಳಿಸಿ ಅವರಿಗೆ ಕಲಿಸಿದರು ಮತ್ತು ಹೀಗೆ ಶಿಕ್ಷಕರಾದರು. ಅಂತಹ ಶಿಕ್ಷಕರ ಶಿಷ್ಯರನ್ನು ಮೆಧತಿತಿ ಶೂದ್ರ–ಶಿಷ್ಯರೆಂದು ವರ್ಣಿಸಿದ್ದಾರೆ. ಮತ್ತೊಂದೆಡೆ, ಮಿತಾಕ್ಷರದ ಲೇಖಕನಾದ ವಿಜ್ಞಾನೇಶ್ವರನು ಬ್ರಾಹ್ಮಣರಿಗೆ ವಿಶೇಷ ಹಕ್ಕುಗಳು ಮತ್ತು ಸವಲತ್ತುಗಳನ್ನು ನಿರಾಕರಿಸುತ್ತಾನೆ. ಬಹಳ ವಿದ್ಯಾವಂತರಾಗಿದ್ದ ಮತ್ತು ಯಾವುದೇ ಪೂರ್ವಭಾವಿ ಯೋಚನೆಯಿಲ್ಲದೆ ಅಪರಾಧಗಳನ್ನು ಮಾಡಿದ್ದ ಅಂತಹ ಬ್ರಾಹ್ಮಣರಿಗೆ ಮಾತ್ರ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ದಂಡದಿಂದ ವಿನಾಯಿತಿ ನೀಡಲಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇದು ಪ್ರತಿಯೊಬ್ಬರಿಗೂ ಸಮಕಾಲೀನನಾಗಿದ್ದನೆಂಬುದನ್ನು ಗಮನಿಸಬಹುದು. ಹೀಗಾಗಿ ಮೇಧಾತಿಥಿ ಮತ್ತು ವಿಜ್ಞಾನೇಶ್ವರರ ಬರಹಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಗಮನಿಸಬಹುದು, ಇದು ಅನ್ವಯವಾಗುತ್ತಿರಲಿಲ್ಲ, ವಿಜ್ಞಾನೇಶ್ವರನು ಅಧ್ಯಯನದ ಅವಧಿಯ ಬದಲಾಗುತ್ತಿರುವ ಪರಿಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ. ಮೂಲಕ ಸಮಾಜದಲ್ಲಿ

ಸ್ವಯಂ–ಅಭಿಮಾನ, ಬಸವೇಶ್ವರರು ಈ ಪ್ರತಿಗಾಮಿ ಶಕ್ತಿಗಳ ವಿರುದ್ಧ ಬಂಡಾಯವೆದ್ದರು. ಅವರು ಎಲ್ಲಾ ಪ್ರತಿಗಾಮಿ ಪದ್ಧತಿಗಳು ಮತ್ತು ಆಚರಣೆಗಳಿಂದ ಅಸಹ್ಯಪಟ್ಟು ಬ್ರಾಹ್ಮಣತ್ವವನ್ನು ತ್ಯಜಿಸಿದರು ಮತ್ತು ವಿರಶೈವ ಧರ್ಮವನ್ನು ಪುನರುಜ್ಜಿವನಗೊಳಿಸಿದರು, ಅದನ್ನು ಅವರು ಅಳವಡಿಸಿಕೊಂಡರು ಮತ್ತು ವಿಶಾಲವಾದ ತಳಹದಿಯ ಮೇಲೆ ಸ್ಥಾಪಿಸಿದರು, ಎಲ್ಲಾ ಸಂಕುಚಿತ ಪರಿಗಣನೆಗಳನ್ನು ತೆಗೆದುಹಾಕಿದರು. ಎಲ್ಲ ರೀತಿಯಲ್ಲೂ ಪುರುಷನಿಗೆ ಸರಿಸಮಾನ ಎಂಬ ಹೆಣ್ಣಿನ ಸ್ಥಾನಮಾನವನ್ನು ಪುನರುತ್ಥಾನಗೊಳಿಸಿದರು.

ತಮ್ಮ 'ಕಾಯಕ' ತತ್ವದ ಮೂಲಕ ದುಡಿಮೆಯ ಘನತೆಯನ್ನು ಸಾರುವ ಮೂಲಕ ಎಲ್ಲ ವರ್ಗದ ಪುರುಷರನ್ನೂ ಸೇವೆಯ ಸಹವಾಸದಲ್ಲಿ ಸಮಾನವಾಗಿ ಪರಿಗಣಿಸಿ, ಮಾನವನ ಘನತೆಯಲ್ಲಿ ಮನುಷ್ಯನ ಸ್ಥಾನಮಾನವನ್ನು ಮರುಸ್ಥಾಪಿಸಲು ಸಾಮಾಜಿಕ ಕ್ರಾಂತಿಯನ್ನು ತಂದರು. ಅವರು ವೈರಶೈವಿಸಂನಲ್ಲಿ ದೃಢವಾದ ಸಾಮಾಜಿಕ ನೆಲೆಯನ್ನು ಒದಗಿಸಿದರು, ಅದರ ಮೇಲೆ ಮನುಕುಲದ ಸಮಾಜವನ್ನು ಸಂಘಟಿಸಬಹುದಾಗಿದೆ ಯಾವುದೇ ರೀತಿಯ ಮಾನವ ನಿರ್ಮಿತ ವ್ಯತ್ಯಾಸಗಳು ಮತ್ತು ಪರಿಣಾಮವಾಗಿ ಉಂಟಾಗುವ ಜಗಳಗಳಿಂದ ಮುಕ್ತವಾಗಿದೆ. ಅವರು ಗಮನಾರ್ಹ ಯಶಸ್ಸಿನೊಂದಿಗೆ ಸಮಕಾಲೀನ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದರು. ಹೊಸದಾಗಿ ಜಾಗೃತಗೊಂಡ ಮನುಕುಲದ ಸಮೂಹವು ಉನ್ನತ ಆದರ್ಶಗಳು ಮತ್ತು ಉತ್ತಮ ಜೀವನಕ್ಕಾಗಿ ಉತ್ಸಾಹದಿಂದ ತುಂಬಿದ ಸಮುದಾಯವನ್ನು ರೂಪಿಸಲು ಅವನ ಕಡೆಗೆ ಚಿಮ್ಮಿತು. ಇದು ಅಲ್ಪಾವಧಿಯಲ್ಲಿ ಯಾವುದೇ ದೇಶವು ಹೆಮ್ಮೆಪಡುವಂತಹ ಸಂಸ್ಕೃತಿಯ ಮಟ್ಟವನ್ನು ತಲುಪಿತು. ಬಸವೇಶ್ವರರ ಬಗ್ಗೆ ಯೋಚಿಸಿದಾಗ ನಮಗೆ ಕ್ರಿಸ್ತ, ಬುದ್ಧ, ಗಾಂಧಿ ಮುಂತಾದ ವ್ಯಕ್ತಿಗಳು ನೆನಪಾಗುತ್ತಾರೆ. ಅವನಲ್ಲಿ ಇವೆಲ್ಲವುಗಳಲ್ಲಿ ಏನಾದರೂ ಇತ್ತು. ಅವರು ತಮ್ಮ ಬೋಧನೆಗಳನ್ನು ಕನ್ನಡದಲ್ಲಿ ಅಪರೂಪದ ಸಂಭ್ರಮದ ಸರಳ ಪದ್ಯ ರೂಪಗಳಲ್ಲಿ ಮಂಚಿಸಿದರು ಇದನ್ನು 'ವಚನಗಳು' ಎಂದು ಕರೆಯಲಾಗುತ್ತದೆ, ಇದು ಅವರ ಶ್ರೀಮಂತ ಮತ್ತು ಸೂಕ್ಷ್ಮ ಮನಸ್ಸಿನ ಆಳವಾದ ಭಾವನೆಗಳ ಸ್ವಯಂಪ್ರೇರಿತ ಹೊರಹರಿವುಗಳಲ್ಲದೆ ಬೇರೇನೂ ಅಲ್ಲ. ಅವು ಸಾಮಾನ್ಯ ಜನರ ಭಾಷೆಯಲ್ಲಿ, ಸರಳ, ಅತ್ಯಾಧುನಿಕ ಮತ್ತು ಸೊಗಸಾದ, ಆದರೆ ಅದೇ ಸಮಯದಲ್ಲಿ, ಉದಾತ್ತ ವಿಚಾರಗಳು ಮತ್ತು ಧರ್ಮದ ಅತ್ಯುನ್ನತ ಸತ್ಯಗಳನ್ನು ಸಾಕಾರಗೊಳಿಸುತ್ತವೆ. ಈ ವಚನಗಳ ಹಿರಿಮೆ ಏನೆಂದರೆ ಅವು ಅತ್ಯಂತ ವಿನಮ್ರ ಪುರುಷರ ಹೃದಯ ಮತ್ತು ಮನಸ್ಸನ್ನು ಸ್ಪರ್ಶಿಸಬಲ್ಲವು. ಅವರ ಮೌಖಿಕ ಮೃದುತ್ವ, ಅವರ ಸರಳತೆ ಮತ್ತು ಭಾಷೆಯ ಸಂತೋಷವು ಯಾವುದೇ ಭಾಷೆಯಲ್ಲಿ

ಕಾವ್ಯದಿಂದ ಅಪರೂಪವಾಗಿ ಸಾಧಿಸಬಹುದಾದ ಒಂದು ದಯೆ ಮತ್ತು ಮನವಿಯನ್ನು ಅವರಿಗೆ ನೀಡಿದೆ. ಸಾಹಿತ್ಯದ ಈ ಪ್ರಕಾರವನ್ನು ನಂತರದ ಸಮಯದಲ್ಲಿ ಅನೇಕ ವೀರಶೈವ ಶರಸರು ಮತ್ತು ಇತರ ನಂಬಿಕೆಗಳಿಗೆ ಸೇರಿದ ಸಂತರು ಅಳವಡಿಸಿಕೊಂಡರು. ಹೀಗೆ ಈ ಸಾಹಿತ್ಯ ರೂಪದ ಹರಿಕಾರರಾಗಿ ಬಸವೇಶ್ವರರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರು ಮಹಾತ್ಮ ಗಾಂಧಿಯವರು ಹರಿಜನರ ಉನ್ನತಿಯ ಕಲ್ಪನೆಯನ್ನು ಮತ್ತು ಸರ್ವೋದಯ ಮತ್ತು ಡಾ. ಶೆಟ್ಟರ್ ಅವರ ತತ್ವಗಳನ್ನು ಯಾವುದೇ ರೂಪದಲ್ಲಿ ಜೀವನಕ್ಕೆ ಪೂಜ್ಯವಾಗಿ ಪ್ರತಿಪಾದಿಸುವಲ್ಲಿ ಅವರು ನಿರೀಕ್ಷಿಸಿದ್ದರು. ಬಸವೇಶ್ವರರ ಹಿರಿಮೆ ಅಡಗಿದ್ದು ಅವರು ತಮ್ಮ ಬೋಧನೆಗಳ ಪ್ರತಿ ಮಾತಿಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಬಸವೇಶ್ವರರು ಇಂದಿಗೂ ಮನುಷ್ಯರ ಮನಸ್ಸಿನಲ್ಲಿ ನೆಲೆಸಿದ್ದಾರೆ ಮತ್ತು ಮನುಕುಲ ಇರುವವರೆಗೂ ಬದುಕುತ್ತಲೇ ಇರುತ್ತಾರೆ ಎಂಬುದು ಅವರ ಉನ್ನತ ಚಿಂತನೆಗಳು ಮತ್ತು ಕ್ರಾಂತಿಕಾರಿ ಬದಲಾವಣೆಯ ಕಾರಣದಿಂದ ತಳಮಳಗೊಂಡ ಮನುಕುಲಕ್ಕೆ ಮಾನವ ಘನತೆಯನ್ನು ಮರುಸ್ಥಾಪಿಸುವಲ್ಲಿ ಅವರು ತಂದರು. ಅವರ ಬರಹಗಳು ಕನ್ನಡದಲ್ಲಿರುವುದರಿಂದ ಅವರ ಬೋಧನೆಗಳು, ಅವರ ಧಾರ್ಮಿಕ ಮತ್ತು ಅತೀಂದ್ರಿಯ ಅನುಭವಗಳು ಬಹಳ ಮಟ್ಟಿಗೆ ಕನ್ನಡ ಪ್ರದೇಶದ ಸಂಕುಚಿತ ಮಿತಿಗಳಲ್ಲಿ ಸೀಮಿತವಾಗಿವೆ. ಅವರ ಚಿಂತನೆಗಳು ಮತ್ತು ಸಂದೇಶಗಳು ಭಾಷೆಯ ಅಡೆತಡೆಗಳನ್ನು ಮೀರಿ ಪ್ರಪಂಚದ ಮೂಲೆಗಳನ್ನು ತಲುಪಲು ಅರ್ಹವಾಗಿವೆ. ಮುಖ್ಯವಾಗಿ ಈ ಸ್ಮರಣಾರ್ಥ ಸಂಪುಟದ ಪ್ರಕಟಣೆಯನ್ನು ಕೈಗೆತ್ತಿಕೊಂಡಿದ್ದು ಇದೇ ವಿಚಾರ. ಇಂತಹ ಸಂದರ್ಭದಲ್ಲಿ ಅವರ ವ್ಯಕ್ತಿತ್ವದ ವಿವಿಧ ಮುಖಗಳು, ಅವರ ಕೆಲಸ ಮತ್ತು ಸಾಧನೆಗಳನ್ನು ಜನರಿಗೆ ತಿಳಿಸುವುದು ಸೂಕ್ತ.

ಭಾರತದಂಥ ಬಹು ಧರ್ಮ, ಭಾಷೆ ಮತ್ತು ಸಂಸ್ಕೃತಿ ಇರುವಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬೇರೆ ಬೇರೆಯಾಗಿರುವ ವೈವಿಧ್ಯತೆ ಇದ್ದಾಗಲೂ ಜಾತಿ ಮತ್ತು ಅಸ್ಪೃಶ್ಯತೆಯ ಆಚರಣೆಗಳ ವಿಷಯದಲ್ಲಿ ಏಕತೆಯನ್ನು ಕಾಣಬಹುದಾಗಿದೆ. ಅಸ್ಪೃಶ್ಯತೆ ಅತಿ ಪ್ರಾಚೀನವಾದ ಪದ್ಧತಿ. ಅದಕ್ಕೆ ಕನಿಷ್ಠ ಪಕ್ಷ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಆಧುನಿಕ ಕಾಲದಲ್ಲಿ ಅಸ್ಪೃಶ್ಯತೆಯನ್ನು ಮನುಕುಲದ ಮೇಲಿನ ಕಳಂಕವೆಂದು ಭಾವಿಸಲಾಯಿತು. ಇದನ್ನು ತೊಡೆದು ಹಾಕಲು ಮೊದಲಿನಿಂದಲೂ ಪ್ರಯತ್ನಗಳು ನಡೆದಿವೆ. ಆ ನಿಟ್ಟಿನಲ್ಲಿ ಹೆಸರಿಸಬೇಕಾದವರು ಬುದ್ಧ, ಕಬೀರ, ಬಸವೇಶ್ವರ, ಮಹಾತ್ಮಾ ಜ್ಯೋತಿರಾವ ಪುಲೆ, ಗಾಂಧೀಜಿ ಮತ್ತು ಡಾ. ಬಿ. ಆರ್. ಅಂಬೇಡ್ಕರ,

ಈ ಮೇಲೆ ಹೆಸರಿಸಿದವರಲ್ಲಿ 12ನೇ ಶತಮಾನದಲ್ಲಿ ಶ್ರೀ ಬಸವೇಶ್ವರ ಅವರನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅವರ ಕಾಲದಲ್ಲಿ ನಡೆಯುತ್ತಿದ್ದ ವರ್ಣಬೇಧ, ಜಾತಿ ಭೇದ ಮತ್ತು ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿ ಸಮತಾ ಸಮಾಜವನ್ನು ಸ್ಥಾಪಿಸಲು ಸಾಮಾಜಿಕ ಕ್ರಾಂತಿಯನ್ನು ಹುಟ್ಟು ಹಾಕಿದರು. ಸಮಾಜದಲ್ಲಿ ಅತ್ಯಂತ ಪ್ರತಿಷ್ಠಿತ ಬ್ರಾಹ್ಮಣ ಜಾತಿ ಮತ್ತು ಅತ್ಯಂತ ಕನಿಷ್ಠ ಜಾತಿಯಾದ ಮಾದಿಗರ ನಡುವೆ ವೈವಾಹಿಕ ಸಂಬಂಧ ಕುದುರಿಸುವದರೊಂದಿಗೆ ಕಲ್ಯಾಣದ ಕ್ರಾಂತಿಗೆ ನಾಂದಿ ಹಾಡಿದ ಬಸವಣ್ಣನ ಅಸ್ಪೃಶ್ಯತೆಯ ವಿರುದ್ಧದ ಹೋರಾಟ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸಾಮಾಜಿಕ ಇತಿಹಾಸದಲ್ಲಿ ನಮ್ಮ ಕಣ್ಣ ಮುಂದೆ ಬಂಡೆಗಲ್ಲಿನಂತೆ ನಿಂತಿದೆ. ಅಸ್ಪೃಶ್ಯತೆ ಒಂದು ಪಿಡುಗು. ಒಂದು ಜನವರ್ಗಕ್ಕೆ ಸೇರಿದ ಜನರನ್ನು ಮುಟ್ಟಿಸಿಕೊಳ್ಳದೇ ಅವರನ್ನು ಜೀವನದ ಮುಖ್ಯ ಪ್ರವಾಹದಿಂದ ದೂರ ಇಟ್ಟು ಧಾರ್ಮಿಕ ಮತ್ತು ಸಾಮಾಜಿಕ ಸಂಕೋಲೆಗಳಿಂದ ಅವರ ಬದುಕುವ ಹಕ್ಕನ್ನು ದಮನಗೊಳಿಸಿ ಆರ್ಥಿಕ ಶೋಷಣೆ ಮಾಡಿ, ಇತ್ತ ಬದುಕಲೂ ಆಗದ ಸಾಯಲೂ ಆಗದ ಸ್ಥಿತಿ ತಂದೊಡ್ಡಿರುವುದೇ ಈ ಅಸ್ಪೃಶ್ಯತೆ, ಅಸ್ಪೃಶ್ಯತೆಗೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳಿವೆ. ರಾಜಕೀಯವಾದ ನಿಶ್ಯಕೀಕರಣವೂ ಅಸ್ಪೃಶ್ಯತೆಯ ಸ್ಥಿತಿಗೆ ಕಾರಣವೆಂದು ಹೇಳಲಾಗುತ್ತಿದೆ. ಅಸ್ಪಶ್ಯತೆಯ ಆಚರಣೆಯಲ್ಲಿ ಒಂದು ಸಮುದಾಯಕ್ಕೆ ಸೇರಿದ ಜನರ ವಿರುದ್ಧದ ನಿಂದನೆ ಮತ್ತು ಅವಹೇಳನ ಎದ್ದು ಕಾಣುತ್ತದೆ. ಈ ವ್ಯವಸ್ಥೆಯ ವಿರುದ್ಧ ಹೋರಾಡಿದ ಶ್ರೀ ಬಸವಣ್ಣನವರು ಮೇಲು ವರ್ಗಕ್ಕೆ ಸೇರಿದ ಬ್ರಾಹ್ಮಣ್ಯವನ್ನು ಧಿಕ್ಕರಿಸಿ ಮನೆ ಬಿಟ್ಟು ಹೊರಬಂದು ಮಹತ್ತರವಾದ ಶರಣರ ಮತ್ತು ಕಾಯಕ ಜೀವಿಗಳ ಚಳವಳಿ ಕಟ್ಟಿದವರು. ಅವರು ತಮ್ಮ ಹೋರಾಟದಲ್ಲಿ ಜಾತಿಗಿರುವ ಶ್ರೇಷ್ಠತೆಯನ್ನು ತಳ್ಳಿ ತಾನು ಬ್ರಾಹ್ಮಣನೆಂದರೆ ಕೂಡಲ ಸಂಗನು ಒಪ್ಪುವನೇ ? ಎಂದು ಪ್ರಶ್ನಿಸಿದರು. ಚನ್ನಯ್ಯನ ಮನೆಯ ದಾಸನ ಮಗನು; ಕಕ್ಕಯ್ಯನ ಮನೆಯ ದಾಸಿಯ ಮಗಳು– ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮ ದೇವ ಸಾಕ್ಷಿಯಾಗಿ! ಎಂದು ಹೇಳುವ ಮುಖಾಂತರ ತನ್ನ ಹುಟ್ಟು ಅಸ್ಪಶ್ಯರ ಹುಟ್ಟಿಗಿಂತ ಕೀಳಾದುದು ಎಂದು ಹೇಳಿ ಅಸ್ಪಶ್ಯರಲ್ಲಿ ಆತ್ಮಸ್ಥೆರ್ಯ ತುಂಬಿ ಎಲ್ಲಾ ಜಾತಿಗಳೂ ಸಮಾನವೆಂದು ಸಾರಿ ಮಾದಿಗರ–ಬ್ರಾಹ್ಮಣರ ನಡುವೆ ವೈವಾಹಿಕ ಸಂಬಂಧ ಕುದುರಿಸಿದರು.

ಗ್ರಂಥ ಸೂಚಿ:

ಚಿದಾನಂದ ಮೂರ್ತಿ, ಎಮ್. "ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ" ಎಸ್ ಬಿ ಎಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು–2011

ಮಂಜಪ್ಪ, ಹರ್ಡೇಕರ, "ಅಣ್ಣನ ಕ್ರಾಂತಿ" ಆಲಮಟ್ಟಿ,–1938

ಗೋಪಾಲ, ಬಿ. ಆರ್. "ದಿ ಚಾಲುಕ್ಯಸ್ ಆಪ್ ಕಲ್ಯಾಣ ಆಂಡ ದಿ ಕಳಚೂರಿಸ್ ಪ್ರಸರಾಂಗ ಕ ವಿ ವಿ ಧಾರವಾಡ.–1981

Kadetotad.N.K. *"Religion and Society Among the Harijans"* Extension service and publication Karnataka University Dharwad 1977

Wodeyar.s.s, "*Sri Basvesvara*" Manipal power press, manipal 1967

ಮಹಾಪ್ರಂಧಗಳು

ಕಲೋಳಿಕರ್. ಎಸ್. ಕೆ. "ಅಕ್ಷಶೋದ್ಧಾರ ಶ್ರೀಬಸವೆಶ್ವರ ಮತ್ತು ಡಾ ಬಿ ಆರ್ ಅಂಬೇಡ್ಕರ್ ಅವರ ಮಾರ್ಗೋಪಾಯಗಳು ಒಂದು ತುಲನಾತ್ಮಕ ಅಧ್ಯಾಯನ"

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಸಾಮಾಜಿಕ ಪರಿವರ್ತನೆಯಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ: ಒಂದು ಸಮಾಜಶಾಸ್ತ್ರೀಯ ಅಧ್ಯಯನ

Dr. Suresh Sankannavar.S [1] Prof. Rashmi G M [2]
[1]Lecturer, Dept of Sociology, GFGC Kundagol
[2]Assistant professor, Dept of sociology, GFGC Kundagol
e – mail: sureshsankannavar16@gmail.com

Manuscript ID:
JRD -2026-180535
ISSN: 2230-9578
Volume 18
Issue 5(IV)
Pp. 143-145
April- 2026
Submitted: 19 Apr. 2026
Revised: 29 Apr.2026
Accepted: 14 May. 2026
Published: 31 May. 2026

ಸಾರಾಂಶ (Abstract)

ಈ ಅಧ್ಯಯನವು ಕೃತಕ ಬುದ್ಧಿಮತ್ತೆಯು (AI) ಸಮಕಾಲೀನ ಸಮಾಜದ ರಚನೆ ಮತ್ತು ಕಾರ್ಯನಿರ್ವಹಣೆಯನ್ನು ಹೇಗೆ ಬದಲಿಸುತ್ತಿದೆ ಎಂಬುದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ತಂತ್ರಜ್ಞಾನವು ಕೇವಲ ಯಾಂತ್ರಿಕ ಸಾಧನವಾಗಿ ಉಳಿಯದೆ, ಮಾನವ ಸಂವಹನ, ಉದ್ಯೋಗ ಮಾರುಕಟ್ಟೆ, ಸಾಮಾಜಿಕ ಸ್ತರವಿನ್ಯಾಸ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲೆ ಆಳವಾದ ಪ್ರಭಾವ ಬೀರುತ್ತಿದೆ. ಈ ಪ್ರಬಂಧವು AI ತರುತ್ತಿರುವ ಸಕಾರಾತ್ಮಕ ಬದಲಾವಣೆಗಳು (ಉದಾಹರಣೆಗೆ: ದಕ್ಷತೆ, ಶಿಕ್ಷಣದಲ್ಲಿ ಸುಧಾರಣೆ) ಮತ್ತು ಸವಾಲುಗಳನ್ನು (ಉದಾಹರಣೆಗೆ: ಡಿಜಿಟಲ್ ವಿಭಜನೆ, ಗೌಪ್ಯತೆಯ ಉಲ್ಲಂಘನೆ, ನಿರುದ್ಯೋಗದ ಭೀತಿ) ಸಮತೋಲಿತವಾಗಿ ಚರ್ಚಿಸುತ್ತದೆ. ಅಂತಿಮವಾಗಿ, ತಾಂತ್ರಿಕ ಪ್ರಗತಿಯು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಕಾಪಾಡುವಲ್ಲಿ ಹೇಗೆ ಪೂರಕವಾಗಿರಬೇಕು ಎಂಬ ಸಂಶೋಧನಾತ್ಮಕ ಒಳನೋಟವನ್ನು ಇದು ನೀಡುತ್ತದೆ.

ಪ್ರಮುಖ ಪದಗಳು: *ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ, ಸಾಮಾಜಿಕ ಮೌಲ್ಯಗಳು, ಪರಿವರ್ತನೆಗಳು*

ಪೀಠಿಕೆ

"ಮಾನವ ಇತಿಹಾಸದ ಪ್ರತಿ ಹಂತದಲ್ಲೂ ತಂತ್ರಜ್ಞಾನವು ಸಮಾಜವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ." ಕೈಗಾರಿಕಾ ಕ್ರಾಂತಿಯು ಸಮಾಜವನ್ನು ಕೃಷಿ ಆಧಾರಿತ ವ್ಯವಸ್ಥೆಯಿಂದ ನಗರೀಕರಣದತ್ತ ಕೊಂಡೊಯ್ದರೆ, ಇಂದಿನ 'ಕೃತಕ ಬುದ್ಧಿಮತ್ತೆ' (Artificial Intelligence) ಕ್ರಾಂತಿಯು ಸಮಾಜವನ್ನು ಡಿಜಿಟಲ್ ಯುಗದ ಹೊಸ ಆಯಾಮಕ್ಕೆ ತಳ್ಳುತ್ತಿದೆ. ಸಮಾಜಶಾಸ್ತ್ರೀಯವಾಗಿ ಹೇಳುವುದಾದರೆ, ಸಾಮಾಜಿಕ ಪರಿವರ್ತನೆಯು ಸಮಾಜದ ರಚನೆ, ಮೌಲ್ಯಗಳು ಮತ್ತು ನಡವಳಿಕೆಯಲ್ಲಿ ಕಂಡುಬರುವ ಗಮನಾರ್ಹ ಬದಲಾವಣೆಯಾಗಿದೆ. ಕೃತಕ ಬುದ್ಧಿಮತ್ತೆ (Artificial Intelligence - AI) ಇಂದು ಕೇವಲ ತಾಂತ್ರಿಕ ಆವಿಷ್ಕಾರವಾಗಿ ಉಳಿದಿಲ್ಲ; ಇದು 21ನೇ ಶತಮಾನದ ಸಾಮಾಜಿಕ ಬದಲಾವಣೆಯ ಪ್ರಬಲ ಎಂಜಿನ್ ಆಗಿ ಹೊರಹೊಮ್ಮಿದೆ. ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ನೋಡಿದಾಗ, AI ಮಾನವ ಸಂಬಂಧಗಳು, ಉದ್ಯೋಗ ಮಾರುಕಟ್ಟೆ, ಶಿಕ್ಷಣ ಮತ್ತು ಸಂಸ್ಕೃತಿಯ ಸ್ವರೂಪವನ್ನೇ ಬದಲಿಸುತ್ತಿದೆ. ಈ ಅಧ್ಯಯನವು ಕೃತಕ ಬುದ್ಧಿಮತ್ತೆಯು ಸಮಕಾಲೀನ ಸಮಾಜದ ರಚನೆ ಮತ್ತು ಕಾರ್ಯನಿರ್ವಹಣೆಯನ್ನು ಹೇಗೆ ಬದಲಿಸುತ್ತಿದೆ ಎಂಬುದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ತಂತ್ರಜ್ಞಾನವು ಕೇವಲ ಯಾಂತ್ರಿಕ ಸಾಧನವಾಗಿ ಉಳಿಯದೆ, ಮಾನವ ಸಂವಹನ, ಉದ್ಯೋಗ ಮಾರುಕಟ್ಟೆ, ಸಾಮಾಜಿಕ ಸ್ತರವಿನ್ಯಾಸ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲೆ ಆಳವಾದ ಪ್ರಭಾವ ಬೀರುತ್ತಿದೆ. ಈ ಲೇಖನವು AI ತರುತ್ತಿರುವ ಸಕಾರಾತ್ಮಕ ಬದಲಾವಣೆಗಳು ಮತ್ತು ಅದರಿಂದ ಉಂಟಾಗಬಹುದಾದ ಡಿಜಿಟಲ್ ವಿಭಜನೆ ಹಾಗೂ ಗೌಪ್ಯತೆಯ ಸವಾಲುಗಳನ್ನು ಸಮತೋಲಿತವಾಗಿ ಚರ್ಚಿಸುತ್ತದೆ. ಅಂತಿಮವಾಗಿ, ಈ ತಾಂತ್ರಿಕ ಪ್ರಗತಿಯು ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಕಾಪಾಡುವಲ್ಲಿ ಹೇಗೆ ಪೂರಕವಾಗಿರಬೇಕು ಎಂಬ ಸಂಶೋಧನಾತ್ಮಕ ಒಳನೋಟವನ್ನು ಇದು ನೀಡುತ್ತದೆ

ಅಧ್ಯಯನದ ಉದ್ದೇಶಗಳು

★ ಕೃತಕ ಬುದ್ಧಿಮತ್ತೆಯು ಸಮಾಜದ ಸಾಂಪ್ರದಾಯಿಕ ಸಂವಹನ ಮತ್ತು ಮಾನವ ಸಂಬಂಧಗಳನ್ನು ಹೇಗೆ ಬದಲಾಯಿಸುತ್ತಿದೆ ಎಂದು ವಿಶ್ಲೇಷಿಸುವುದು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
Dr. Suresh Sankannavar.S , Lecturer, Dept of Sociology, GFGC Kundagol

How to cite this article:
Suresh Sankannavar.S, & Rashmi G M. (2026). ಸಾಮಾಜಿಕ ಪರಿವರ್ತನೆಯಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ: ಒಂದು ಸಮಾಜಶಾಸ್ತ್ರೀಯ ಅಧ್ಯಯನ . . Journal of Research & Development, 18(5(IV)), 143–145. https://doi.org/10.5281/zenodo.20995479

Quick Response Code:
Website: https://jrdrvb.org/
DOI: 10.5281/zenodo.20995479
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

★ ಉದ್ಯೋಗ ಮಾರುಕಟ್ಟೆ ಮತ್ತು ಆರ್ಥಿಕ ಸ್ತರವಿನ್ಯಾಸದ ಮೇಲೆ AI ಬೀರುತ್ತಿರುವ ಧನಾತ್ಮಕ ಹಾಗೂ ಋಣಾತ್ಮಕ ಪರಿಣಾಮಗಳನ್ನು ಅಧ್ಯಯನ ಮಾಡುವುದು.

★ ತಂತ್ರಜ್ಞಾನದ ಲಭ್ಯತೆಯ ಆಧಾರದ ಮೇಲೆ ಸಮಾಜದಲ್ಲಿ ಸೃಷ್ಟಿಯಾಗುತ್ತಿರುವ ಹೊಸ ಡಿಜಿಟಲ್ ಅಸಮಾನತೆಗಳನ್ನು ಗುರುತಿಸುವುದು.

★ ಸಾಮಾಜಿಕ ಮೌಲ್ಯಗಳು, ನೈತಿಕತೆ ಮತ್ತು ಜನರ ಜೀವನಶೈಲಿಯಲ್ಲಿ AI ತರುತ್ತಿರುವ ರಚನಾತ್ಮಕ ಪರಿವರ್ತನೆಗಳನ್ನು ಅಭ್ಯಸಿಸುವುದು.

ಸಾಮಾಜಿಕ ಪರಿವರ್ತನೆಯಲ್ಲಿ AI ವಹಿಸುತ್ತಿರುವ ಪಾತ್ರವನ್ನು ವಿವಿಧ ಆಯಾಮಗಳಲ್ಲಿನ ವಿಶ್ಲೇಷಣೆ.

ಮಾನವ ಸಮಾಜವು ಕೃಷಿ ಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿಗಳನ್ನು ದಾಟಿ ಇಂದು 'ಮಾಹಿತಿ ಯುಗ'ದಲ್ಲಿ ಬದುಕುತ್ತಿದೆ. ಈ ಹಂತದಲ್ಲಿ ಕೃತಕ ಬುದ್ಧಿಮತ್ತೆಯು "ನಾಲ್ಕನೇ ಕೈಗಾರಿಕಾ ಕ್ರಾಂತಿ"ಯ ಕೇಂದ್ರಬಿಂದುವಾಗಿದೆ. ಸಮಾಜಶಾಸ್ತ್ರಜ್ಞ ಎಮಿಲಿ ಡರ್ಖೈಮ್ ಅವರ 'ಸಾಮಾಜಿಕ ಸಂಹತಿ' (Social Solidarity) ಸಿದ್ಧಾಂತದಂತೆ, ಇಂದು ಸಮಾಜವು ಡಿಜಿಟಲ್ ನೆಟ್ವರ್ಕ್‌ಗಳ ಮೂಲಕ ಪರಸ್ಪರ ಅವಲಂಬಿತವಾಗಿದೆ. ಹಿಂದೆ ಮನುಷ್ಯರು ನೇರವಾಗಿ ಭೇಟಿಯಾಗಿ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು, ಆದರೆ ಇಂದು ಕೃತಕ ಬುದ್ಧಿಮತ್ತೆ ಮತ್ತು ಅಲ್ಗಾರಿದಮ್ಗಳು ನಮ್ಮ ಸಂವಹನದ ನಡುವೆ ಮಧ್ಯವರ್ತಿಗಳಂತೆ ಕೆಲಸ ಮಾಡುತ್ತಿವೆ. ನಾವು ಯಾರೊಂದಿಗೆ ಮಾತನಾಡಬೇಕು ಅಥವಾ ಏನನ್ನು ನೋಡಬೇಕು ಎಂಬುದನ್ನು ಯಂತ್ರಗಳೇ ನಿರ್ಧರಿಸುತ್ತಿರುವುದರಿಂದ, ಮನುಷ್ಯರ ನಡುವಿನ ನೈಜ ಸಂಬಂಧಗಳು ಕೇವಲ ಮೊಬೈಲ್ ಪರದೆಯ ಮೆಸೇಜ್ಗಳಿಗೆ ಸೀಮಿತವಾಗುತ್ತಿವೆ. ಈಗ ನಮಗೆ ಸಮಸ್ಯೆ ಎದುರಾದಾಗ ಮೊದಲು ಸ್ಪಂದಿಸುವುದು ಮನುಷ್ಯರಲ್ಲ, ಬದಲಾಗಿ ಭಾವನೆಗಳಿಲ್ಲದ ಚಾಟ್ಬಾಟ್ಗಳು. ಈ ಯಂತ್ರಗಳಿಗೆ ಮನುಷ್ಯರ ನೋವು, ನಗು ಅಥವಾ ಸಂಕಟದ ಆಳ ಅರ್ಥವಾಗುವುದಿಲ್ಲ, ಇದರಿಂದಾಗಿ ಎದುರಿಗಿರುವವರ ಪರಿಸ್ಥಿತಿಯನ್ನು ಕಂಡು ಮಿಡಿಯುವ 'ಅನುಕಂಪ' (Empathy) ಎಂಬ ಮಾನವೀಯ ಗುಣವು ಸಮಾಜದಲ್ಲಿ ಕ್ಷೀಣಿಸುತ್ತಿದೆ. ಸಂವಹನವು ತಾಂತ್ರಿಕವಾಗಿ ವೇಗವಾಗಿದೆಯಾದರೂ, ಅದರಲ್ಲಿರಬೇಕಾದ ಜೀವಂತಿಕೆ ಮತ್ತು ಆತ್ಮೀಯತೆ ಮಾಯವಾಗುತ್ತಿದೆ. ಮನುಷ್ಯರು ಸಾವಿರಾರು ಜನರೊಂದಿಗೆ ಆನ್ಲೈನ್ನಲ್ಲಿ ಸಂಪರ್ಕದಲ್ಲಿದ್ದರೂ ಮಾನಸಿಕವಾಗಿ ಒಂಟಿಯಾಗುತ್ತಿದ್ದಾರೆ ಮತ್ತು ನಮ್ಮ ಸಂಬಂಧಗಳು ಯಾಂತ್ರಿಕವಾಗುತ್ತಿವೆ. ಈ ಬದಲಾವಣೆಯು ಸಮಾಜದ ಸಾಂಪ್ರದಾಯಿಕ ಕೌಟುಂಬಿಕ ಮತ್ತು ಸ್ನೇಹದ ಬಂಧಗಳನ್ನು ಸಡಿಲಗೊಳಿಸಿ, ಮನುಷ್ಯರನ್ನು ಭಾವನಾತ್ಮಕವಾಗಿ ಪರಸ್ಪರ ದೂರ ಮಾಡುತ್ತಿದೆ. ಅಂತಿಮವಾಗಿ, AI ಸಂವಹನವನ್ನು ಸುಲಭಗೊಳಿಸಿದರೂ ಮನುಷ್ಯರ ನಡುವಿನ ನೈಜ ಪ್ರೀತಿ ಮತ್ತು ಭಾವನಾತ್ಮಕ ಬೆಂಬಲಕ್ಕೆ ಪರ್ಯಾಯವಾಗಲು ಸಾಧ್ಯವಿಲ್ಲ. ಮಾನವ ಸಂಬಂಧಗಳು ಮುಖಾಮುಖಿ ಸಂವಹನದ ಮೇಲೆ ನಿಂತಿವೆ. ಆದರೆ ಂಖ ಇದನ್ನು ಬದಲಿಸುತ್ತಿದೆ. ವರ್ಚುವಲ್ ಜಗತ್ತಿನಲ್ಲಿ ಜನರು ಹೆಚ್ಚು ಕಾಲ ಕಳೆಯುತ್ತಿರುವುದರಿಂದ, ಭೌತಿಕ ಸಮುದಾಯದ (Physical Community) ಕಲ್ಪನೆ ಕ್ಷೀಣಿಸುತ್ತಿದೆ.

ಕೃತಕ ಬುದ್ಧಿಮತ್ತೆಯು ಇಂದಿನ ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿದ್ದು, ಇದು ಆರ್ಥಿಕ ಸ್ತರವಿನ್ಯಾಸದ ಮೇಲೆ ಆಳವಾದ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಬೀರುತ್ತಿದೆ. ಧನಾತ್ಮಕವಾಗಿ ನೋಡುವುದಾದರೆ, AI ತಂತ್ರಜ್ಞಾನವು ದತ್ತಾಂಶ ವಿಜ್ಞಾನ ಮತ್ತು ಯಾಂತ್ರಿಕ ಕಲಿಕೆಯಂತಹ ಕ್ಷೇತ್ರಗಳಲ್ಲಿ ಅತ್ಯಾಧುನಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಆರ್ಥಿಕತೆಗೆ ಹೊಸ ವೇಗವನ್ನು ನೀಡುತ್ತಿದೆ. ಇದು ಕೆಲಸದ ಸ್ಥಳಗಳಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೆ, ಪುನರಾವರ್ತಿತ ಕೆಲಸಗಳಿಂದ ಮನುಷ್ಯನಿಗೆ ಮುಕ್ತಿ ನೀಡಿ ಸೃಜನಾತ್ಮಕ ಚಿಂತನೆಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡುತ್ತಿದೆ. ಆದರೆ, ಮತ್ತೊಂದೆಡೆ ಈ ತಾಂತ್ರಿಕ ಪ್ರಗತಿಯು ಸಾಂಪ್ರದಾಯಿಕ ಕಾರ್ಮಿಕ ವಲಯದಲ್ಲಿ ಉದ್ಯೋಗ ಕಡಿತದ ಭೀತಿಯನ್ನು ಮೂಡಿಸಿರುವುದು ಸಾಮಾಜಿಕ ಕಳವಳಕ್ಕೆ ಕಾರಣವಾಗಿದೆ. ವಿಶೇಷವಾಗಿ ಉತ್ಪಾದನಾ ಮತ್ತು ಸೇವಾ ವಲಯದ ಕೆಳಹಂತದ ಕೆಲಸಗಳನ್ನು AI ಆಕ್ರಮಿಸಿಕೊಳ್ಳುತ್ತಿರುವುದರಿಂದ, ಸಾಮಾನ್ಯ ಕಾರ್ಮಿಕರು ಜೀವನೋಪಾಯಕ್ಕಾಗಿ ಪರದಾಡುವಂತಾಗಿದೆ. ಈ ಪ್ರಕ್ರಿಯೆಯು ತಾಂತ್ರಿಕ ಕೌಶಲ್ಯ ಹೊಂದಿದ ಶ್ರೀಮಂತ ವರ್ಗ ಮತ್ತು ಕೌಶಲ್ಯರಹಿತ ಬಡ ವರ್ಗದ ನಡುವಿನ ಆರ್ಥಿಕ ಕಂದಕವನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಸಮಾಜಶಾಸ್ತ್ರೀಯವಾಗಿ ಗಮನಿಸಿದರೆ, ಇದು ಡಿಜಿಟಲ್ ವಿಭಜನೆಯನ್ನು ಸೃಷ್ಟಿಸಿ ಸಮಾಜದ ಆರ್ಥಿಕ ಸ್ತರವಿನ್ಯಾಸದಲ್ಲಿ ಅಸಮಾನತೆಯನ್ನು ತೀವ್ರಗೊಳಿಸುತ್ತಿದೆ. ಉನ್ನತ ತಂತ್ರಜ್ಞಾನದ ಮೇಲೆ ಹಿಡಿತ ಸಾಧಿಸಿದ ಕಂಪನಿಗಳು ಸಂಪತ್ತನ್ನು ಕೇಂದ್ರೀಕರಿಸಿಕೊಳ್ಳುತ್ತಿದ್ದರೆ, ಸಾಮಾನ್ಯ ಉದ್ಯೋಗಿಗಳು ಮಾರುಕಟ್ಟೆಯಲ್ಲಿ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಬದಲಾವಣೆಯು ಕೇವಲ ಆರ್ಥಿಕತೆಯ ಮೇಲೆ ಮಾತ್ರವಲ್ಲದೆ, ವ್ಯಕ್ತಿಯ ಸಾಮಾಜಿಕ ಗೌರವ ಮತ್ತು ವರ್ಗದ ಸ್ಥಾನಮಾನದ ಮೇಲೆಯೂ ನೇರ ಪ್ರಭಾವ ಬೀರುತ್ತಿದೆ. ಶಿಕ್ಷಣ ಮತ್ತು ತರಬೇತಿಯಲ್ಲಿನ ಕೊರತೆಯು ಹಿಂದುಳಿದ ವರ್ಗಗಳನ್ನು ತಾಂತ್ರಿಕ ಯುಗದಲ್ಲಿ ಮತ್ತಷ್ಟು ಮೂಲೆಗುಂಪು ಮಾಡುವ ಅಪಾಯವಿದೆ. ಆದ್ದರಿಂದ, ಂಖ ತಂತ್ರಜ್ಞಾನದ ಲಾಭಗಳು ಕೇವಲ ಒಂದು ವರ್ಗಕ್ಕೆ ಸೀಮಿತವಾಗದೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತಾಗಬೇಕು. ಸರ್ಕಾರಗಳು ಮರು–ಕೌಶಲ್ಯ (Re-skilling) ಯೋಜನೆಗಳ ಮೂಲಕ ಕಾರ್ಮಿಕರನ್ನು ಸಜ್ಜುಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ತಂತ್ರಜ್ಞಾನವು ಮಾನವ ಶ್ರಮಕ್ಕೆ ಪೂರಕವಾಗಿರಬೇಕೇ ಹೊರತು ಅದು ಮಾನವನ ಅಸ್ತಿತ್ವಕ್ಕೆ ಸವಾಲಾಗಬಾರದು ಎಂಬುದು ಸಮಾಜಶಾಸ್ತ್ರೀಯ ಚಿಂತನೆಯಾಗಿದೆ. ಕೃತಕ ಬುದ್ಧಿಮತ್ತೆಯು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಸಮಾನ ಆರ್ಥಿಕ ಹಂಚಿಕೆಗೆ ದಾರಿಯಾಗುವಂತೆ ನೀತಿಗಳನ್ನು ರೂಪಿಸಬೇಕಿದೆ.

ಕೃತಕ ಬುದ್ಧಿಮತ್ತೆಯು ತಂತ್ರಜ್ಞಾನದ ಲಭ್ಯತೆಯ ಆಧಾರದ ಮೇಲೆ ಸಮಾಜದಲ್ಲಿ ಹೊಸ ಮಾದರಿಯ ಡಿಜಿಟಲ್ ಅಸಮಾನತೆಗಳನ್ನು ಸೃಷ್ಟಿಸುತ್ತಿದ್ದು, ಇದು ಶ್ರೀಮಂತ ಮತ್ತು ಬಡ ವರ್ಗಗಳ ನಡುವಿನ ಕಂದಕವನ್ನು ಮತ್ತಷ್ಟು ಆಳಗೊಳಿಸುತ್ತಿದೆ. ತಾಂತ್ರಿಕ ಸೌಲಭ್ಯಗಳನ್ನು ಹೊಂದಿರುವ ಸಮುದಾಯಗಳು ಜ್ಞಾನ ಮತ್ತು ಅಧಿಕಾರದ ಮೇಲೆ ಏಕಸ್ವಾಮ್ಯ ಸಾಧಿಸುತ್ತಿದ್ದರೆ, ತಾಂತ್ರಿಕವಾಗಿ ಹಿಂದುಳಿದವರು ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಈ ಡಿಜಿಟಲ್ ಶ್ರೇಣೀಕರಣವು ಕೇವಲ ಆರ್ಥಿಕತೆಗೆ ಸೀಮಿತವಾಗದೆ, ಸಮಾಜದ ಮೂಲಭೂತ ಮೌಲ್ಯಗಳಾದ ಗೌಪ್ಯತೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಮೇಲೆಯೂ ಗಂಭೀರ ಪರಿಣಾಮ ಬೀರುತ್ತಿದೆ. AI ಅಲ್ಗಾರಿದಮ್ಗಳಲ್ಲಿ ಅಡಗಿರುವ ಪೂರ್ವಾಗ್ರಹಗಳು ಅರಿವಿಲ್ಲದೆಯೇ ಜಾತೀಯತೆ ಅಥವಾ ಲಿಂಗ ತಾರತಮ್ಯದಂತಹ ಸಾಮಾಜಿಕ ಅನಿಷ್ಟಗಳನ್ನು ತಾಂತ್ರಿಕ ರೂಪದಲ್ಲಿ ಮುಂದುವರಿಸುವ ಅಪಾಯವನ್ನು ಹೊಂದಿವೆ. ಮನುಷ್ಯರ ನಡುವಿನ ನೈಜ ಸಂವಹನ ಮತ್ತು ಅನುಕಂಪದ ಮೌಲ್ಯಗಳು

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಯಾಂತ್ರೀಕರಣಗೊಳ್ಳುತ್ತಿದ್ದು, ಇದು ಸಾಮಾಜಿಕ ಸಂಬಂಧಗಳ ಸ್ವರೂಪವನ್ನೇ ಬದಲಿಸುತ್ತಿದೆ. ದತ್ತಾಂಶದ ಮೇಲಿನ ಹಸ್ತಕ್ಷೇಪವು ವ್ಯಕ್ತಿಯ ಖಾಸಗಿತನವನ್ನು ಭೇದಿಸುವ ಮೂಲಕ ನೈತಿಕ ಸಂಘರ್ಷಗಳಿಗೆ ಕಾರಣವಾಗುತ್ತಿದೆ. ಡಿಜಿಟಲ್ ಸಾಕ್ಷರತೆಯ ಕೊರತೆಯು ತಾಂತ್ರಿಕವಾಗಿ ಹಿಂದುಳಿದ ವರ್ಗಗಳನ್ನು ಮುಖ್ಯವಾಹಿನಿಯಿಂದ ದೂರವಿಟ್ಟು, ಸಮಾಜದಲ್ಲಿ ಹೊಸ ಬಗೆಯ ಶೋಷಣೆಗೆ ದಾರಿ ಮಾಡಿಕೊಡುತ್ತಿದೆ. ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ನೋಡಿದಾಗ, ಈ ತಾಂತ್ರಿಕ ಬದಲಾವಣೆಯು ಸಾಂಪ್ರದಾಯಿಕ ನ್ಯಾಯ ಮತ್ತು ಸಮಾನತೆಯ ಪರಿಕಲ್ಪನೆಗಳಿಗೆ ಸವಾಲು ಒಡ್ಡುತ್ತಿದೆ. ಅಲ್ಗಾರಿದಮ್ಗಳ ನಿರ್ಧಾರಗಳು ಮನುಷ್ಯನ ವಿವೇಚನಾ ಶಕ್ತಿಯನ್ನು ಮಬ್ಬುಗೊಳಿಸುತ್ತಿರುವುದು ಸಾಮಾಜಿಕ ಮೌಲ್ಯಗಳ ಅವನತಿಗೆ ಸಾಕ್ಷಿಯಾಗಿದೆ. ತಂತ್ರಜ್ಞಾನವು ಕೇವಲ ಒಂದು ವರ್ಗದ ಹಿತಾಸಕ್ತಿಯನ್ನು ಕಾಪಾಡುವ ಸಾಧನವಾಗಬಾರದು ಎಂಬುದು ಈ ಅಧ್ಯಯನದ ಪ್ರಮುಖ ಕಾಳಜಿಯಾಗಿದೆ. ಆದ್ದರಿಂದ, ಡಿಜಿಟಲ್ ವಿಭಜನೆಯನ್ನು ಹೋಗಲಾಡಿಸಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ಮೂಲಕ ಸಾಮಾಜಿಕ ಸಮತೋಲನವನ್ನು ಕಾಯ್ದುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. AI ಯುಗದಲ್ಲಿ ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುತ್ತಲೇ ತಾಂತ್ರಿಕ ಪ್ರಗತಿಯನ್ನು ಸಾಧಿಸುವುದು ಸಮಾಜದ ಮುಂದಿರುವ ದೊಡ್ಡ ಸವಾಲಾಗಿದೆ.

ಕೃತಕ ಬುದ್ಧಿಮತ್ತೆಯು ಕೇವಲ ತಾಂತ್ರಿಕ ಆವಿಷ್ಕಾರವಾಗಿ ಉಳಿಯದೆ, ಜನರ ಸಾಮಾಜಿಕ ಮೌಲ್ಯಗಳು, ನೈತಿಕತೆ ಮತ್ತು ಜೀವನಶೈಲಿಯಲ್ಲಿ ಆಳವಾದ ರಚನಾತ್ಮಕ ಬದಲಾವಣೆಗಳನ್ನು ಪ್ರೇರೇಪಿಸುತ್ತಿದೆ. ಆಧುನಿಕ ಜೀವನಶೈಲಿಯಲ್ಲಿ AI ಆಧಾರಿತ ಉಪಕರಣಗಳು ಮನುಷ್ಯನ ದೈನಂದಿನ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದು, ಇದು ವ್ಯಕ್ತಿಗತ ಸ್ವತಂತ್ರ ನಿರ್ಧಾರಗಳಿಗಿಂತ ಅಲ್ಗಾರಿದಮ್ಗಳ ಶಿಫಾರಸುಗಳ ಮೇಲೆಯೇ ಹೆಚ್ಚು ಅವಲಂಬಿತವಾಗುವಂತೆ ಮಾಡುತ್ತಿದೆ. ನೈತಿಕ ದೃಷ್ಟಿಕೋನದಿಂದ ನೋಡಿದಾಗ, ದತ್ತಾಂಶದ ಗೌಪ್ಯತೆ ಮತ್ತು ಮಾಹಿತಿ ಸೋರಿಕೆಯು ವ್ಯಕ್ತಿಯ ಖಾಸಗಿತನದ ಮೂಲಭೂತ ಹಕ್ಕಿಗೆ ಸವಾಲೊಡ್ಡುತ್ತಿದ್ದು, ನೈತಿಕ ಹೊಣೆಗಾರಿಕೆಯ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದೆ. ಸಾಮಾಜಿಕ ಸಂಬಂಧಗಳಲ್ಲಿ ಮಾನವೀಯ ಸಂವೇದನೆಗಳ ಬದಲಿಗೆ ಯಾಂತ್ರಿಕ ಸಂವಹನಗಳು ಹೆಚ್ಚಾಗುತ್ತಿರುವುದು ಸಾಂಪ್ರದಾಯಿಕ ಕೌಟುಂಬಿಕ ಮತ್ತು ಸಾಮಾಜಿಕ ಮೌಲ್ಯಗಳ ಅವನತಿಗೆ ಕಾರಣವಾಗುತ್ತಿದೆ. AI ವ್ಯವಸ್ಥೆಗಳಲ್ಲಿ ಅಡಗಿರಬಹುದಾದ ತಾಂತ್ರಿಕ ಪೂರ್ವಾಗ್ರಹಗಳು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಸಮಾನತೆಗಳನ್ನು ಮತ್ತಷ್ಟು ತೀವ್ರಗೊಳಿಸಿ, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿರೂಪಗೊಳಿಸುವ ಅಪಾಯವನ್ನು ಹೊಂದಿವೆ. ಜನರ ಆಲೋಚನಾ ಕ್ರಮವು ದತ್ತಾಂಶ ಆಧಾರಿತವಾಗಿ ಬದಲಾಗುತ್ತಿರುವುದರಿಂದ, ಸೃಜನಶೀಲತೆ ಮತ್ತು ವಿವೇಚನಾ ಶಕ್ತಿಯು ಯಾಂತ್ರಿಕ ಪ್ರಕ್ರಿಯೆಗಳಿಗೆ ಮಣಿಯುತ್ತಿದೆ. ಶ್ರಮದ ಗೌರವ ಮತ್ತು ಕೆಲಸದ ಸಂಸ್ಕೃತಿಯಲ್ಲಿ AI ತಂದಿರುವ ಬದಲಾವಣೆಗಳು ಮನುಷ್ಯನ ಸಾಮಾಜಿಕ ಅಸ್ತಿತ್ವವನ್ನೇ ಮರುರೂಪಿಸುತ್ತಿವೆ. ಡಿಜಿಟಲ್ ಜಗತ್ತಿನಲ್ಲಿ ನೈತಿಕತೆಯ ವ್ಯಾಖ್ಯಾನಗಳು ಬದಲಾಗುತ್ತಿದ್ದು, ತಾಂತ್ರಿಕ ಸರಿ–ತಪ್ಪುಗಳ ನಡುವೆ ಮಾನವೀಯ ಮೌಲ್ಯಗಳು ನಗಣ್ಯವಾಗುತ್ತಿವೆ. ಅಂತಿಮವಾಗಿ, ಈ ರಚನಾತ್ಮಕ ಪರಿವರ್ತನೆಗಳು ಸಮಾಜವನ್ನು ಹೆಚ್ಚು ತಾಂತ್ರಿಕವಾಗಿ ಸುಸಜ್ಜಿತಗೊಳಿಸಿದರೂ, ಸಾಂಸ್ಕೃತಿಕ ಬೇರುಗಳು ಮತ್ತು ನೈತಿಕ ಚೌಕಟ್ಟುಗಳನ್ನು ಶಿಥಿಲಗೊಳಿಸುತ್ತಿರುವುದು ಈ ಸಮಾಜಶಾಸ್ತ್ರೀಯ ಅಧ್ಯಯನದ ಪ್ರಮುಖ ಕಾಳಜಿಯಾಗಿದೆ.

ಉಪಸಂಹಾರ (Conclusion)

ಒಟ್ಟಾರೆಯಾಗಿ ಹೇಳುವುದಾದರೆ, ಕೃತಕ ಬುದ್ಧಿಮತ್ತೆಯು ಕೇವಲ ತಾಂತ್ರಿಕ ಆವಿಷ್ಕಾರವಲ್ಲ; ಇದು ಮಾನವ ಸಮಾಜದ ರಚನೆ, ಮೌಲ್ಯಗಳು ಮತ್ತು ಬದುಕು ನಡೆಸುವ ಕ್ರಮವನ್ನೇ ಬುಡಮೇಲು ಮಾಡುತ್ತಿರುವ ಒಂದು ಪ್ರಬಲ ಸಾಮಾಜಿಕ ಶಕ್ತಿಯಾಗಿದೆ. ಈ 'ನಾಲ್ಕನೇ ಕೈಗಾರಿಕಾ ಕ್ರಾಂತಿ'ಯು ಆರ್ಥಿಕ ಪ್ರಗತಿ ಮತ್ತು ಉತ್ಪಾದಕತೆಯ ಹೊಸ ದಿಗಂತಗಳನ್ನು ತೆರೆದಿದೆಯಾದರೂ, ಅದು ತಂದಿರುವ ಡಿಜಿಟಲ್ ಅಸಮಾನತೆ ಮತ್ತು ಉದ್ಯೋಗ ನಷ್ಟದ ಭೀತಿಯು ಸಮಾಜದ ಕೆಳಹಂತದ ಜನರ ಬದುಕನ್ನು ಅಸ್ಥಿರಗೊಳಿಸಿದೆ. ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ನೋಡಿದಾಗ, ಮಾನವ ಸಂಬಂಧಗಳ ಯಾಂತ್ರೀಕರಣ ಮತ್ತು ಸಾಮಾಜಿಕ ಮೌಲ್ಯಗಳ ಕುಸಿತವು ಒಂದು ಸಂಕೀರ್ಣ ಸವಾಲಾಗಿ ಪರಿಣಮಿಸಿದೆ. "ತಂತ್ರಜ್ಞಾನವು ಮನುಷ್ಯನ ಸೇವಕನಾಗಬೇಕೇ ಹೊರತು ಯಜಮಾನನಾಗಬಾರದು." ತಂತ್ರಜ್ಞಾನವು ಮನುಷ್ಯನಿಗೆ ಪೂರಕವಾಗಿರಬೇಕೇ ಹೊರತು ಅವನ ವಿವೇಚನಾ ಶಕ್ತಿ ಅಥವಾ ಜೀವನೋಪಾಯಕ್ಕೆ ಸಂಚಕಾರವಾಗಬಾರದು. AI ತರುವ ಬದಲಾವಣೆಗಳು ಸಮಾಜದ ಎಲ್ಲಾ ಸ್ತರಗಳಿಗೂ ಸಮಾನವಾಗಿ ತಲುಪುವಂತಾಗಲು ಸರ್ಕಾರಗಳು ಮತ್ತು ನೀತಿ ನಿರೂಪಕರು ನೈತಿಕ ಚೌಕಟ್ಟುಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ. ಅಂತಿಮವಾಗಿ, ಕೃತಕ ಬುದ್ಧಿಮತ್ತೆಯ ವೇಗಕ್ಕೆ ಮಾನವೀಯ ಸಂವೇದನೆ, ಅನುಕಂಪ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಬೆಸೆದಾಗ ಮಾತ್ರ ಒಂದು ಸುಸ್ಥಿರ ಮತ್ತು ಸಮಾನ ಸಮಾಜದ ನಿರ್ಮಾಣ ಸಾಧ್ಯ. ತಾಂತ್ರಿಕ ಕ್ರಾಂತಿಯ ನಡುವೆಯೂ ಮನುಷ್ಯ ತನ್ನ ಅಸ್ಮಿತೆ ಮತ್ತು ನೈತಿಕತೆಯನ್ನು ಉಳಿಸಿಕೊಳ್ಳುವುದೇ ಈ ಕಾಲಘಟ್ಟದ ಅತ್ಯಂತ ದೊಡ್ಡ ಯಶಸ್ಸಾಗಲಿದೆ. ಕೃತಕ ಬುದ್ಧಿಮತ್ತೆಯು ಸಾಮಾಜಿಕ ಪರಿವರ್ತನೆಯ ಒಂದು ಅನಿವಾರ್ಯ ಅಂಗವಾಗಿದೆ. ಇದು ಸಮಾಜದ ಪ್ರಗತಿಗೆ ಅಗಾಧ ಅವಕಾಶಗಳನ್ನು ನೀಡುತ್ತದೆ, ಆದರೆ ಅದರೊಂದಿಗೆ ಬರುವ ಸಾಮಾಜಿಕ ಅಸಮಾನತೆ ಮತ್ತು ನೈತಿಕ ಬಿಕ್ಕಟ್ಟುಗಳನ್ನು ನಾವು ಎಚ್ಚರಿಕೆಯಿಂದ ನಿರ್ವಹಿಸಬೇಕಿದೆ.

ಆಧಾರಗ್ರಂಥಗಳು (Bibliography / References)

1. ಎಮಿಲಿ ಡರ್ಖೈಮ್ (ಇಟುಟಜ ಆಣಡಿಇಗಜುಟ) – The Division of Labour in Society. (ಸಾಮಾಜಿಕ ಸಂಹತಿ ಮತ್ತು ಬದಲಾವಣೆಯ ಸಿದ್ಧಾಂತ).
2. ಕ್ಯಾಸ್ಟೆಲ್ಸ್, ಮ್ಯಾನುಯೆಲ್ (Manuel Castells) – The Rise of the Network Society. (ಮಾಹಿತಿ ಯುಗದ ಸಾಮಾಜಿಕ ರಚನೆಯ ಬಗ್ಗೆ).
3. ಭಾರತ ಸರ್ಕಾರದ ನೀತಿ ಆಯೋಗ (NITI Aayog) – National Strategy for Artificial Intelligence Discussion Paper. (ಭಾರತೀಯ ಸಮಾಜದ ಮೇಲೆ ಂಖ ಪ್ರಭಾವದ ಕುರಿತ ವರದಿಗಳು).
4. ವಿಶ್ವ ಆರ್ಥಿಕ ವೇದಿಕೆ (World Economic Forum) – The Future of Jobs Report. (ಉದ್ಯೋಗ ಮಾರುಕಟ್ಟೆಯ ಬದಲಾವಣೆಗಳ ದತ್ತಾಂಶ).
5. ಪ್ರದೀಪ್ ಕುಮಾರ್ ಮಿಶ್ರಾ (Pradeep Kumar Misra): Educational Technology in India.
6. Yojana (ಯೋಜನಾ): ಭಾರತ ಸರ್ಕಾರದ ಪ್ರಕಟಣೆ, 'ಡಿಜಿಟಲ್ ಇಂಡಿಯಾ' ಮತ್ತು AI ಕುರಿತ ವಿಶೇಷ ಸಂಚಿಕೆಗಳು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಚನ್ನಬಸವಣ್ಣನವರ ಪ್ರಸಾದಿಸ್ಥಲದ ಪರಿಕಲ್ಪನೆ:

ಡಾ. ಬಾಬು ಅ. ಬೆಣ್ಣಿ.
ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ,
ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಧಾರವಾಡ–580008.
Gmail: babuarbenni97@gmail.com

Manuscript ID:
JRD -2026-180536
ISSN: 2230-9578
Volume 18
Issue 5(IV)
Pp. 146-147
April- 2026
Submitted: 18 Apr. 2026
Revised: 29 Apr.2026
Accepted: 16 May. 2026
Published: 31 May. 2026

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಮುನ್ನಡೆಸಿದ ಅನುಭವ ಮಂಟಪದ ಚರ್ಚಾ ಸಭೆ ಹಾಗೂ ಸಮಗ್ರ ಕ್ರಾಂತಿಯಲ್ಲಿ ಸಮರ್ಪಣ ಮನೋಭಾವದಿಂದ ದಿಡಿದ ಶರಣರಲ್ಲಿ ವಯಸ್ಸಿನಿಂದ ಚೆನ್ನಬಸವಣ್ಣನವರೇ ಎಲ್ಲರಿಗಿಂತಲೂ ಚಿಕ್ಕವರಾಗಿದ್ದರು. ವಯಸ್ಸಿನಿಂದ ಅವರು ಚಿಕ್ಕವರಾಗಿದ್ದರೇ ವಿನಃ ಅಭಿಪ್ರಾಯ, ವಿಚಾರದಿಂದ ದೊಡ್ಡವರಾಗಿದ್ದರು. ಬಸವಣ್ಣ, ಪ್ರಭುದೇವ, ಸಿದ್ಧರಾಮರಂಥ ಅತಿರಥ–ಮಹಾರಥರ ಜೊತೆ 'ಬೆಳಗು ಹಳಚಿದಂತೆ' ಇವರು ನಡೆಸಿದ ಚರ್ಚೆ ಆ ಹಿರಿಯರಿಂದ ಸ್ವೀಕೃತವಾದ ಅವರ ಅಭಿಪ್ರಾಯಗಳನ್ನು ನೆನೆದದಾಗ ಇವರ ವ್ಯಕ್ತಿತ್ವ ರೂಪ ನಮಗೆ ಗೊತ್ತಾಗುತ್ತದೆ.

ಪ್ರಭುದೇವರ ದೃಷ್ಟಿಯಲ್ಲಿ– ಚೆನ್ನಬಸವಣ್ಣ ಅವಿರಳಜ್ಞಾನಿ, ಸ್ವಯಂಭುಜ್ಞಾನಿ, ಬಸವಣ್ಣನವರ ಅಭಿಪ್ರಾಯದ ಪ್ರಕಾರ– ಜನ್ಮತಃ ಜ್ಞಾನಪರಿಮಳಭರಿತ, ಅಕ್ಕಮಹಾದೇವಿ ಪ್ರಕಾರ–ಸಮ್ಯಗ್ ಜ್ಞಾನಯೆಂದು ಸಂಬೋಧಿಸಿದ್ದಾಳೆ. ಮಹಾಜ್ಞಾನಿಯಾಗುವುದರ ಜೊತೆಗೆ ಷಟಸ್ಥಲಜ್ಞಾನಿಇಗಳೂ ಆಗಿದ್ದರು. ಬಸವಣ್ಣ– ಷಡಸ್ಥಲಮೂರ್ತಿಯಾಗಿ ಬಂದೆಯಲ್ಲಾ ಚೆನ್ನಬಸವಣ್ಣ, ಮರುಳಶಂಕರದೇವ– ಷಡುಸ್ಥಲಬ್ರಹ್ಮಿ ಚೆನ್ನಬಸವಣ್ಣ, ಮಗ್ಗೆಯ ಮಾಯಿದೇವ–ಷಟಸ್ಥಲಧೀರ, ವಿರೂಪಾಕ್ಷ ಪಂಡಿತ– ಷಟಸ್ಥಲ ಮಾರ್ಗಮಂ ತಿಳಿಪಿ ಪ್ರಾಣಲಿಂಗದ ನೆಲೆಯನರುಹಿಕೊಟ್ಟ..... ಚೆನ್ನಬಸವೇಶಂಗೆ ಶರಣು ಹೀಗೆ ಇತ್ಯಾದಿ ವಿವಿಧ ವಚನಕಾರರು ಹಾಗೂ ಕವಿಗಳ ಹೇಳಿಕೆಗಳನ್ನು ಗಮನಿಸಿದಾಗ ಇವರ ವ್ಯಕ್ತಿತ್ವದ ಅರಿವಾಗುತ್ತದೆ.

ತಾವು ಪ್ರತಿಪಾದಿಸಿದ ಸಮನ್ವಯ ಷಟಸ್ಥಲ ಸಿದ್ಧಾಂತವನ್ನು ಯಶಸ್ವಿ ರೀತಿಯಲ್ಲಿ ಸಾಧಿಸಲು ಅಪರ್ಣ ವಿಧಾನದ ಮೂಲಕ ಪದಾರ್ಥವನ್ನು ಪ್ರಸಾದವಾಗಿಸುವ, ಅಂಗಭೋಗವನ್ನು ಲಿಂಗಭೋಗವಾಗಿಸುವ ವಿನೂತನ ವಿಧಾನವೊಂದನ್ನು ಇವರು ತಮ್ಮ ಸಿದ್ಧಾಂತಕ್ಕೆ ಅಳವಡಿಸಿದರು. ಅಲ್ಲಮಪ್ರಭುದೇವ–"ಪ್ರಸಾದದ ಹಾದಿಯನೆಲ್ಲರಿಗೆ ತೋರಿ ಮಹಾಪ್ರಸಾದದ ಬೆಳವಿಗೆಯ ಮಾಡಿದನು ಗುಹೇಶ್ವರನ ಚೆನ್ನಬದವಣ್ಣ" ಎಂದಿದ್ದಾನೆ. ಸಿದ್ಧರಾಮ–"ಅಪರ್ಣದ ಭೇದವ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಲ್ಲಿ ಚೆನ್ನಬಸವಣ್ಣ ಬಲ್ಲ" ಉರಿಲಿಂಗಪೆದ್ದಿಯಂತೂ "ಪ್ರಸಾದದ ಸ್ಥಲಕುಲವನು ನಿಮ್ಮ ಪ್ರಸಾದಿ ಚೆನ್ನಬಸವಣ್ಣನೊಬ್ಬಂಗಲ್ಲದೆ ಮತ್ತಾರಿಗೂ ಅರಿಯಬಾರದಯ್ಯ" ಎಂದು ಖಚಿತವಾಣಿಯಲ್ಲಿ ಸ್ಪಷ್ಟಪಡಿಸಿದ್ದಾನೆ. ಚೆನ್ನಬಸವಣ್ಣನವರು ತೋರಿದ ಪ್ರಸಾದದ ದಾರಿಪ್ರಸಾದಿ ಸ್ಥಲವಾಯಿತು. ಅಲ್ಲಿಯೇ ನಿಂತು ಉಳಿದೆಲ್ಲ ಸ್ಥಲಗಳ ಕ್ರಿಯೆಯನ್ನು ಸಮನ್ವಯಗೊಳಿಸಿಕೊಂಡಂತೆ ಕಾಣುತ್ತದೆ. ಆದ್ದರಿಂದಲೇ ಇವರ ಸಮಕಾಲೀನ ಶರಣರು ಚೆನ್ನಬಸವಣ್ಣನವರನ್ನು– "ಪ್ರಸಾದಿಸ್ಥಲವನಿಂಬುಗೊಂಡವನೆಂದದು" ವರ್ಣಿಸಿದ್ದಾರೆ. ಬಸವಣ್ಣ– "ಪ್ರಸಾದವೇ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ.....ಚೆನ್ನಬಸವಣ್ಣ", ಸಿದ್ಧರಾಮ–"ಸರ್ವಕ್ಕೆ ಚೈತನ್ಯನಾದ ನಮ್ಮ ಚೆನ್ನಬಸವಣ್ಣನೆಂಬ ಅಚ್ಚಪ್ರಸಾದಿ", ಡಕ್ಕೆಯ ಬೊಮ್ಮಣ್ಣ–"ಪ್ರಸಾದಿಸ್ಥಲ ಚೆನನ್ನಬಸವಣ್ಣಂಗಾಯಿತ್ತು", ಗುಬ್ಬಿಯ ಮಲ್ಲಣ್ಣ–"ವಿಮಲಪ್ರಸಾದಾಂಗಿಯಹ ಚೆನ್ನಬಸವೇಶ" ಹೀಗೆ ಚೆನ್ನಬಸವಣ್ಣ ಪ್ರಸಾದಿಸ್ಥಲ ನಿರ್ಮಾತೃವಾಗಿದ್ದಾನೆ.

ಇವರ ವಚನಗಳಲ್ಲಿ ಇಷ್ಟಲಿಂಗಾನುಸಂಧಾನದ ಮೂಲಕ ಕಾಯವನ್ನು ಪ್ರಸಾದಕಾಯವಾಗಿಸುವ, ಪ್ರಾಣಲಿಂಗಾನುಸಂಧಾನದ ಮೂಲಕ ಪ್ರಕಾಶಕಾಯವನ್ನು ಆಕಾಶಕಾಯವಾಗಿಸುವ, ಭಾವಲಿಂಗಾನು ಸಂಧಾನದ ಮೂಲಕ ಪ್ರಕಾಶಕಾಯವನ್ನು ಆಕಾಶಕಾಯವಾಗಿಸುವ ವಿವರ ಎಳೆಎಳೆಯಾಗಿ ನಿರೂಪಿತಗೊಂಡಿರುವುದು ಕಂಡುಬರುತ್ತದೆ.ಇವರ ವಚನಗಳಲ್ಲಿ ಇಷ್ಟಲಿಂಗಾನುಸಂಧಾನದ ಮೂಲಕ ಕಾಯವನ್ನು ಪ್ರಸಾದಕಾಯವಾಗಿಸುವ,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಬಾಬು ಅ. ಬೆಣ್ಣಿ. ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ–580008.

How to cite this article:
ಡಾ. ಬಾಬು ಅ. ಬೆಣ್ಣಿ., *(2026). ಚನ್ನಬಸವಣ್ಣನವರ ಪ್ರಸಾದಿಸ್ಥಲದ ಪರಿಕಲ್ಪನೆ: Journal of Research & Development, 18(5(IV)), 146–147. https://doi.org/10.5281/zenodo.20995723*

Quick Response Code:
Website: https://jrdrvb.org/
DOI: 10.5281/zenodo.20995723
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಪ್ರಾಣಲಿಂಗಾನುಸಂಧಾನದ ಮೂಲಕ ಪ್ರಕಾಶಕಾಯವನ್ನು ಆಕಾಶಕಾಯವಾಗಿಸುವ, ಭಾವಲಿಂಗಾನು ಸಂಧಾನದ ಮೂಲಕ ಪ್ರಕಾಶಕಾಯವನ್ನು ಆಕಾಶಕಾಯವಾಗಿಸುವ ವಿವರ ಎಳೆಎಳೆಯಾಗಿ ನಿರೂಪಿತಗೊಂಡಿರುವುದು ಕಂಡುಬರುತ್ತದೆ. ಕನ್ನಡದ ಇತರ ಸಾಹಿತ್ಯ ರೂಪಗಳಂತೆಯೇ ವಚನರೂಪ ಸಹಿತ ಕಾಲದ ಕರೆಗೆ ಓಗೊಟ್ಟು ಶರಣ ಹೃದಯದ ನಾಜಸೊಲ್ಲಾಗಿ ಹೊರ ಹೊಮ್ಮಿ ಬಂದ ಸಾಹಿತ್ಯ ರೂಪ.

ಚನ್ನಬಸವಣ್ಣನವರು ಪ್ರಸಾದಿಸ್ಥಲವನ್ನು ಈ ಕೆಳಗಿನಂತೆ ಹೇಳಿದ್ದಾರೆ:

1. ಪ್ರಸಾದಿಯ ಜ್ಞಾನಿಸ್ಥಲ
2. ಪ್ರಸಾದಿಯ ಪ್ರಸಾದಿಸ್ಥಲ
3. ಪ್ರಸಾದಿಯ ಭಕ್ತಿಸ್ಥಲ
4. ಪ್ರಸಾದಿಯ ಮಹೇಶ್ವರಸ್ಥಲ
5. ಪ್ರಸಾದಿಯ ಪ್ರಾಣಲಿಂಗಿಸ್ಥಲ
6. ಪ್ರಸಾದಿಯ ಶರಣಸ್ಥಲ
7. ಪ್ರಸಾದಿಯ ಐಕ್ಯಸ್ಥಲ

ಶಿವನಿಗೆ ಅರ್ಪಿತವಾದ ಪ್ರತಿಯೊಂದು ವಸ್ತು, ಅರಿವು ಮತ್ತು ಅನುಭವವೇ ಪ್ರಸಾದ. ಸಿದ್ಧ, ಶುದ್ಧ ಪ್ರಸಿದ್ಧ ಪ್ರಸಾದಗಳ ವಿವರಣೆಯನ್ನು ವಚನಗಳಲ್ಲಿ ನೀಡಿದ್ದಾರೆ. ಅಂಗ, ಮನ, ಪ್ರಾಣಗಳನ್ನು ಲಿಂಗಕ್ಕೆ ಪ್ರಸಾದವಾಗಿ ಹೊಂದುವುದು. ಅಂಗಕ್ಕೆ ಆಚಾರವಿಟ್ಟಲ್ಲಿ, ಆ ಲಿಂಗಕ್ಕೆ ಅಂಗವೆ ಅರ್ಪಿತ, ಪ್ರಾಣಕ್ಕೆ ಪ್ರಸಾದದ ಸಾಧ್ಯವಾದಲ್ಲಿ, ಆ ಲಿಂಗಕ್ಕೆ ಆ ಪ್ರಾಣವೇ ಅರ್ಪಿತ. ಕೇವಲ ಬಾಹ್ಯ ಪದಾರ್ಥಗಳಲ್ಲದೇ, ಆತ್ಮಜ್ಞಾನ ಮತ್ತು ನಿಷ್ಕಲ್ಮಷ ಮನಸ್ಸಿನಿಂದ ಕೂಡಿರುವ ಅರಿವೇ ನಿಜವಾದ ಪ್ರಸಾದ. ಸಾಧಕನ ಮನದ ಕತ್ತಲೆಯನ್ನು ದೂರಮಾಡಲು ಗುರುಬೇಕು, ಭ್ರಮೆಯನ್ನು ಕಳೆಯಲು ಶಿವಬೇಕು, ಹಾಗೆಯೇ ದೇಹವನ್ನು ಅಮಲ (ಪವಿತ್ರ) ಮಾಡಲು ಪ್ರಸಾದ ಬೇಕು. ಪ್ರಸಾದ ಸೇವನೆಯು ಕೇವಲ ಒಂದು ಕ್ರಿಯೆಯಲ್ಲ, ಅದು ಸದಾಚಾರದಿಂದ ಕೂಡಿದ ಜೀವನದ ಒಂದು ಭಾಗವಾಗಿದೆ.

ಅಂಗಪ್ರಸಾದಿ ಆತ್ಮದ್ರೋಹಿ
ಲಿಂಗಪ್ರಸಾದಿ ಲಿಂಗದ್ರೋಹಿ
ಜಂಗಮ ಪ್ರಸಾದಿ ಜಂಗಮದ್ರೋಹಿ
ಎಂಬುದಾಗಿ ಭಾವದಿಂದ ಪ್ರಸಾದವ ಕೊಂಡು
ಅನುಭಾವದಿಂದತಿಗಳೆದಡೆ ಅದು ಪ್ರಸಾದವಲ್ಲ
ಮಾಂಸ, ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಪ್ರಸಾದ ಸಂಪತ್ತ ಬಸವಣ್ಣನೆ ಬಲ್ಲ

ಅರ್ಪಿತ ಅರ್ಪಿತವೆನ್ನುತ್ತಿಹರೆಲ್ಲ ಅರ್ಪಿತವಾವುದೆಂದು ಹೇಲಿರಯ್ಯ?
ಕಾರ್ಯಾರ್ಪಿತವವೆಂಬಿರೆ ಅಳಿವಿನೊಳಗಾಯಿತ್ತು
ಕಾಯಾರ್ಪಿತವೆಂಬಿರೆ ಭ್ರಮೆಗೊಳಗಾಯಿತ್ತು
ಜಿಹ್ವಾರ್ಪಿತವೆಂಬಿರೆ ರುಚಿಯೊಳಗಾಯಿತ್ತು
ಸರ್ವವೂ ಶಿವನಾಜ್ಞೆಯೊಳಗೆಂಬಿರೆ ಭವಬಂಂಧನ ಬಿಡದು ಅರ್ಪಿಸಲೇಬೇಕು, ಅರ್ಪಿಸಿದಲ್ಲದೆ ಪ್ರಸಾದವಾಗದು,
ಅರ್ಪಿತದ ಮರ್ಮ ಸಕೀಲನು ಕೂಡಲಚೆನ್ನಸಂಗಾ ನಿಮ್ಮ ಶರಣ ಬಲ್ಲ

ಅರಮನೆಯ ಕೂಳನಾದಡೆಯು ತಮ್ಮುದರದ ಕುದಿಹಕ್ಕೆ ಲಿಂಗಾರ್ಪಿತವವೆಂದಡೆ ಅದು ಲಿಂಗಾರ್ಪಿತವಲ್ಲ ಅನರ್ಪಿತ, ಅದೆಂತೆಂದಡೆ ಅರ್ಪಿತಂಚ ಗುರೋರ್ವಾಕ್ಯಂ ಕಿಲ್ಬಿಷಸ್ಯ ಮನೋರ್ಪಿತಂ ಅನರ್ಪಿತಸ್ಯ ಭುಂಜಿಯಾನ್ ರೌರವಂ ನರಕಂ ವ್ರಜೇ ಎಂಬುದಾಗಿ ತನ್ನ ಒಡಲಕಕ್ಕುಲತೆಗೆ ಆಚಾರವವನನುಸರಿಸಿ ಭವಿಶೈವ ದೈವ ತಿಥಿವಾರಂಗಳ ಹೆಸರಿನಲ್ಲಿ ಅಟ್ಟಿ ಕೂಳತಂದು ತಮ್ಮ ಇಷ್ಟಲಿಂಗಕ್ಕೆ ಕೊಟ್ಟು ಹೊಟ್ಟೆಯ ಹೊರೆವ ಆಚಾರಭ್ರಷ್ಟ ಪಂಚಮಹಾಪಾತಕರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ ಪ್ರಸಾದವಿಲ್ಲವಾಗಿ ಮುಕ್ತಿಯಿಲ್ಲ, ಮುಂದೆ ಅಘೋರ ನರಕವನುಂಬರು ಇದನರಿದು ನಮ್ಮ ಬಸವಣ್ಣನು ತನುವಿನಲ್ಲಿ ಆಚಾರಸ್ವಾಯತವಾಗಿ, ಮನದಲ್ಲಿ ಅರಿವು ಸಾಹಿತ್ಯವಾಗಿ ಪ್ರಾಣದಲ್ಲಿ ಪ್ರಸಾದ ಸಾಹಿತ್ಯವಾಗಿ ಇಂತೀ ತನು–ಮನ–ಪ್ರಾಣಂಗಳಲ್ಲಿ ಸತ್ಯ ಸದಾಚಾರವಲ್ಲದೆ ಮತ್ತೊಂದನರಿಯದ ಭಕ್ತನು ಭವಿಶೈವ ದೈವ ತಿಥಿ ಮಾಟ ಕೂಟಂಗಳ ಮನದಲ್ಲಿ ನೆನೆಯ ತನುವಿನಲ್ಲಿ ಬೆರಸ ಭಾವದಲ್ಲಿ ಬಗೆಗೊಳ್ಳ ಏಕಲಿಂಗ ನಿಷ್ಠಾಪರನು ಪಂಚಾಚಾರಯುಕ್ತನು ವೀರಶೈ ಸಂಪನ್ನ ಸರ್ವಾಂಗಲಿಂಗಿ ಸಂಗನಬಸವಣ್ಣನು ಈ ಅನುವ ಎನಗೆ ಅರುಹಿಸಿ ತೋರಿದ ಕಾರಣ ನಾನು ಬದುಕಿದೆನು ಕಾಣಾ ಕೂಡಲಚೆನ್ನಸಂಗಮದೇವಾ.

ಆಕರ ಗ್ರಂಥಗಳು:

1. ಅಷ್ಟಾವರಣ ವಚನಗಳು–ಎಳಮಲೆಯ ಗುರುಶಾಂತ ದೇವರು, ಸಂ: ಡಾ.ವೀರಣ್ಣ ರಾಜೂರ, ಪ್ರಕಾಶನ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, 1983 (ಪ್ರ.ಆ)
2. ಏಕೋತ್ತರ ಶತಸ್ಥಲ –ಸಿದ್ಧಲಿಂಗ, ಸಂ.ಫ. ಗು. ಹಳಕಟ್ಟಿ, ಪ್ರ: ಶಿವಾನುಭವ ಗ್ರಂಥಮಾಲೆ ವಿಜಾಪೂರ (ಪ್ರ.ಆ)
3. ಚೆನ್ನಬಸವಣ್ಣನವರ ಷಡುದ್ಧಲದ ನಿರ್ಣಯ, ಸಂ: ಡಾ.ಎಂ.ಎಂ.ಕಲಬುರ್ಗಿ ಪ್ರಕಾಶನ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, 1990 (ಪ್ರ.ಆ)
4. ಪ್ರಸಾದಿ ಸ್ಥಲದ ವಚನಗಳು ಸಂ: ಡಾ.ಎಂ.ಎಸ್.ಸುಂಕಾಪೂರ, ಪ್ರಕಾಶನ: ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. 1977 (ಪ್ರ.ಆ)
5. ಚೆನ್ನಬಸವಣ್ಣನವರ ವಚನಸಂಪುಟ, ಸಂ: ಡಾ.ಬಿ.ವ್ಹಿ.ಮಲ್ಲಾಪುರ. ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1993.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಕರನಿರಾಕರಣ ಚಳುವಳಿಗೆ ರಂಗನಾಥ ದಿವಾಕರ ಅವರ ಕೊಡುಗೆ

ಡಾ.ಚಂಪಕ್ಕ ಕಲ್ಲೇದೇವರ
ಇತಿಹಾಸ ಉಪನ್ಯಾಸಕರು
ಕೆ.ಎಸ್.ಎಸ್ ಕಾಲೇಜ ಹುಬ್ಬಳ್ಳಿ

Manuscript ID:
JRD -2026-180537
ISSN: 2230-9578
Volume 18
Issue 5(IV)
Pp. 148-149
April- 2026
Submitted: 15 Apr. 2026
Revised: 27 Apr.2026
Accepted: 15 May. 2026
Published: 31 May. 2026

ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಘಟನೆಗಳಲ್ಲಿ ರಾಷ್ಟ್ರೀಯ ನಾಯಕರೊಂದಿಗೆ ಕರ್ನಾಟಕದ ಇತರ ನಾಯಕರು ಭಾಗವಹಿಸಿ ಹಲವಾರು ಚಾರಿತ್ರಿಕ ಘಟನೆಗಳಿಗೆ ಸಾಕ್ಷಿಯಾಗಿದ್ದಾರೆ. ಅವರ ಸ್ಥಳೀಯ ಪ್ರದೇಶದ ಚಳುವಳಿಗೆ ಮುಂದಾಳತ್ವ ವಹಿಸಿ ಭಾರತ ಸ್ವಾತಂತ್ರ್ಯ ಪಡೆಯಲು ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಅಂತಹ ನಾಯಕರಲ್ಲಿ ರಂಗನಾಥ ದಿವಾಕರರು ಒಬ್ಬರಾಗಿದ್ದಾರೆ. ಶಿರಸಿ ಸಿದ್ದಾಪುರ ಅಂಕೋಲಾ ಮತ್ತು ಹಿರೇಕೆರೂರುಗಳಲ್ಲಿ ನಡೆದ ಕರನಿರಾಕರಣೆ ಚಳುವಳಿಯ ಮುಂದಾಳತ್ವ ವಹಿಸಿ ಚಳುವಳಿಯನ್ನು ಯಶಸ್ವಿಯಗಿ ಮುನ್ನಡೆಸಿದರು.

ರಂಗನಾಥ ದಿವಾಕರರು 30–9–1894 ರಲ್ಲಿ ಧಾರವಾಡ ಮದಿಹಾಳದಲ್ಲಿ ಜನಿಸಿದರು. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯಲ್ಲಿ ಪೊರೈಸಿ 1916 ರಲ್ಲಿ ಪುಣೆ ಫರ್ಗುಸನ್ ಕಾಲೇಜಿನಲ್ಲಿ ಇಂಗ್ಲೀಷ ಅನರ್ಸ್ ಪದವಿ ಪದೆದರು. 1921 ಎಂ.ಎ, ಎಲ್.ಎಲ್.ಬಿ ಪದವಿ ಪದೆದರು. 1921 ರಲ್ಲಿ ಕರ್ಮವೀರ ಪತ್ರಿಕೆ ಅರಂಭಿಸಿದರು. ಧಾರವಾಡ ಹುಬ್ಬಳ್ಳಿಗೆ ಗಾಂಧೀಜಿ ಬೇಟಿ ನೀಡಿದ ಕಾಲದಲ್ಲಿ ಧಾರವಾಡದಲ್ಲಿ ರಾಷ್ಟ್ರೀಯ ಶಾಲೆ ಅರಂಭಿಸಿ ಅದ್ಯಾಪಕರಾಗಿ ಸೇವೆ ಸಲ್ಲಿಸುವದಾಗಿ ಗಾಂಧೀಜಿಯವರಿಗೆ ಮಾತು ಕೊಟ್ಟಿದ್ದರಿಂದ ಅಧ್ಯಾಪಕ ವೃತ್ತಿಗೆ ಮರಳಿದರು. 1921 ರಲ್ಲಿ ಮಹಾತ್ಮ ಗಾಂಧೀಜಿಯವರ ಹಾಗೂ ತಿಲಕರ ಸಲಹೆಯಂತೆ ಸ್ವಾತಂತ್ರ್ಯ ಚಳುವಳಿಗೆ ಭಾಗವಹಿಸಿರು.

1930ರ ಕಾಲಕ್ಕೆ ಸಿದ್ದಾಪುರ ತಾಲೂಕಿನ ಜನತೆಯ ಸ್ಥಿತಿಯ ಮುಖ್ಯವಾಗಿ ರೈತರ ಸ್ಥಿತಿ ಕಂಗೆಟಿತ್ತು, ಸರ್ಕಾರದ ಅರಣ್ಯ ಕಾಯ್ದೆಯ ಧೊರಣೆ, ಕೊಲಿಕಾರ ಅಭಾವ, ಕಾಡಾನೆದಾಳಿ, ಹಂದಿ ಮಂಗಗಳ ದಾಳಿ ಮತ್ತು ಕೋಳೆರೋಗ ಇತ್ಯಾದಿಗಳಿಂದ ರೈತರ ಪರಿಸ್ಥಿತಿ ದುಸ್ಥಿತಿ ತಲುಪಿತ್ತು. ಸಿದ್ದಾಪುರ ತಾಲೂಕಿನ ಜನತೆ ಬ್ರಿಟಿಷ ಸರ್ಕಾರದ ವಿರುದ್ದ ಕರನಿರಾಕರಣ ಚಳುವಳಿಯ ಜವಾಬ್ದಾರಿಯನ್ನು ಹೊತ್ತುಕೊಂಡರು. ದಿವಾಕರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅದ್ಯಕ್ಷರಾಗಿದ್ದಾಗ ಅವರ ಸಾಧನೆಯ ಶಿಖರ ಕಾಲ. ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಸಿದ್ದಾಪುರ, ಅಂಕೋಲ, ತಾಲ್ಲೂಕುಗಳಲ್ಲಿ ಮತ್ತು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕುಗಳಲ್ಲಿ ಕರನಿರಾಕರಣ ಚಳುವಳಿಯನ್ನು ಸಂಘಟಸಬೇಕೆಂದು ಕರ್ನಾಟಕ ಸತ್ಯಾಗ್ರಹ ಮಂಡಳವು ನಿರ್ಣಯಿಸಿ ಆ ಸಂಘಟನೆಯ ನೇತೃತ್ವವನ್ನು ದಿವಾಕರರಿಗೆ ವಹಿಸತು. ದಿವಾಕರರು ಉತ್ತರಕನ್ನಡ ಜಿಲ್ಲೆಗೆ ಆಗಮಿಸಿ ಅಂಕೋಲಾ ತಾಲೂಕಿನ ಸೂರ್ವೆಯ ಕಳಶದೇವರ ದೇವಾಸ್ಥಾನದ ಪ್ರಾಂಗಣದಲ್ಲಿ ಸಭೆ ಕರೆದರು. ಉಪ್ಪಿನ ಸತ್ಯಾಗ್ರಹ, ಜಂಗಲ ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ, ಪಾನ ಪ್ರತಿಬಂದ, ಗ್ರಾಮಪಂಚಾಯತಿಗಳ ಸಂಘಟನೆ ಇವುಗಳಿಗೆ ಅಂಕೋಲಾ ಜನರು ಹೆಸರುಗಳಿಸಿದ್ದರು. "ತ್ಯಾಗ ವೃತ್ತಿಯನ್ನು ಪರಾಕಾಷ್ಠೆಯ ಮಟ್ಟದಲ್ಲಿ ವ್ಯಕ್ತಪಡಿಸಲು ಸಮರ್ಥರಾದ ಜನರೇ ಈ ಅಸ್ತ್ರವನ್ನು ಎತ್ತಬಲ್ಲರು ಎಂದು ನಾಡವರನ್ನು ಹುರುದುಂಬಿಸಿದರು. ಆದರಿಂದ ಪ್ರೇರೇತರಾದ" ನಾಡವರ ಸ್ತ್ರೀ ಪುರುಷರು ಕರನಿರಾಕರಣದ ಯಜ್ಞಕುಂಡದಲ್ಲಿ ಸರ್ವಸ್ವವನ್ನು ಬಲಿದಾನ ಮಾಡುವ ಪ್ರತಿಜ್ಞೆ ಸ್ವೀಕರಿಸಲು ಮುಂದೆಬಂದರು. ಆ ಸಭೆಯಲ್ಲಿಯೇ **"ಕರನಿರಾಕರಣ ಆಂದೋಲನ ಬಿಜಾರೋಪಣವಾಯಿತು".** ನಾಡವರು ಮಾಡಿದ ಪ್ರತಿಜ್ಞೆಯಂತೆ ನಡೆದು ತೋರಿಸಿ ಅಪ್ರತಿಮ ಚರಿತ್ರೆ ನಿರ್ಮಿಸಿದರು. ದಿವಾಕರರಿಂದ ನೇಮಿಸಲ್ಪಟ್ಟ ದ.ಪ. ಕರಮರಕರ ಹಾಗೂ ಬಾಸ್ಗೊಡ ಗ್ರಾಮ ನಾಯಕರು ಚಳುವಳಿ ಮುನ್ನಡಿಸಿದರು. 1932 ದಿವಾಕರರು ಶಿರಸಿ ಸಿದ್ದಾಪುರಗಳ ಕಾನೂನ ಭಂಗ ಚಳುವಳಿಯನ್ನು ಬೆಂಬಲಿಸಿ ಕರ್ಮವೀರ ಪತ್ರಿಕೆಯಲ್ಲಿ ಬರೆದರೆಂಬ ಕಾರಣಕ್ಕೆ ಅವರಿಗೆ ಮೂರು ವರ್ಷಗಳ ಕಾಲ ಜೈಲುವಾಸ ಅನುಭವಿಸಿ ಅನಾರೋಗ್ಯ ಕಾರಣದಿಂದ ಬಿಡುಗಡೆಯಾದರು.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಚಂಪಕ್ಕ ಕಲ್ಲೇದೇವರ ಇತಿಹಾಸ ಉಪನ್ಯಾಸಕರುಕೆ.ಎಸ್.ಎಸ್ ಕಾಲೇಜ ಹುಬ್ಬಳ್ಳಿ

How to cite this article:
ಡಾ.ಚಂಪಕ್ಕ ಕಲ್ಲೇದೇವರ *(2026). ಕರನಿರಾಕರಣ ಚಳುವಳಿಗೆ ರಂಗನಾಥ ದಿವಾಕರ ಅವರ ಕೊಡುಗೆ. Journal of Research & Development, 18(5(IV)), 148–149.* https://doi.org/10.5281/zenodo.20995874

Quick Response Code:
Website:
https://jrdrvb.org/
DOI:
10.5281/zenodo.20995874
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

1932 ರಲ್ಲಿ ಚಳುವಳಿ ಆರಂಭವಾದಾಗ ದಿವಾಕರರು ಕೆ.ಪಿ.ಸಿ.ಸಿ ಅಧ್ಯಕ್ಷರಾಗಿದ್ದರು. ಕರನಿರಾಕರಣ ಚಳುವಳಿಯ ಪ್ರಮುಖ ಸಂಘಟಕರಾಗಿ ಸರ್ಕಾರ ಬಂಧಿಸುವ ಮೋದಲೇ ಜನರಿಗೆ ಸಲಹೆ ನೀಡಲು ಭೂಗತರಾಗಿ ಶಿರಸಿ ಸಿದ್ದಾಪುರಕ್ಕೆ ಹೋಗಿದ್ದರು, ಗಾಡಿಯಲ್ಲಿ ಹೋಗುತ್ತಿದ್ದಾಗ ಪೊಲೀಸರು ಹಿಂಬಾಲಿಸಿ ಕಾರ್ಯಾಚರಣೆ ನಡೆಸಿದರು. ಚಾಣಾಕ್ಷತೆಯಿಂದ ಪೊಲೀಸರ ಕಣ್ಣು ತಪ್ಪಿಸಿ ಊರೂರು ಸುತ್ತಿದರು. ದಿವಾಕರರು ತಾವು ಅಂದುಕೊಂಡ ಗ್ರಾಮಗಳಿಗೆ ಬೇಟಿನೀಡಿ ಅಲ್ಲಿಯ ಜನತೆಗೆ ಮಾಹಿತಿ ನೀಡಿದರು. ಬೀಳಗಿಯಲ್ಲಿ ದಿವಾಕರು 70 ಕಾರ್ಯಕರ್ತರನ್ನು ಬೇಟಿಯಾದರು ಗುಪ್ತ ಸಭೆಗಳ ನಡೆದವು ಸಭೆಯಲ್ಲಿ ಚಳುವಳಿಯನ್ನು ಕೈಗೊಳ್ಳಲು ಪ್ರತಿಜ್ಞೆ ಮಾಡಿದರು. **"ಒಪ್ಪಿದೆ ನೀವು ಕರನಿರಾಕರಣೆ ಮಾಡಿರಿ ನಾವು ನಿಮ್ಮ ಜೊತೆ ಇರುತ್ತೇವೆ."** ಎಂದು ದಿವಾಕರರು ಬೆಂಬಲವನ್ನು ಸೂಚಿಸಿದರು. ಕಾಂಗ್ರೆಸ್ಸಿನ ಮುಖಂಡರು ನಾಳೆ ಸೆರೆಮನೆಗೆ ಸೇರಿದರೆ ಜೊತೆಗಿದ್ದವರು ಯಾವುದಕ್ಕೂ ಹೇದರದೆ ಸತ್ಯಾಗ್ರಹವನ್ನು ಮುಂದುವರೆಸಬೇಕೆಂದು ಎಂದು ಜನತೆಗೆ ದಿವಾಕರ ಅವರು ದೈರ್ಯ ಹೇಳಿದರು.

ದಿವಾಕರ ಅವರು ಗಾಂಧಿಯವರ ಅಹಿಂಸಾ ತತ್ವವನ್ನು ನಾಡವರಲ್ಲಿ ಮೂಡಿಸಿದರು. ಡಿ ಪಿ ಕರಮರಕರ ಅವರನ್ನು ಅಂದೋಲನ ಮುಖ್ಯಸ್ಥರನ್ನಾಗಿ ನೇಮಿಸಿದರು. ಒಂದೊಂದು ಶಿಬಿರಕ್ಕೆ ಒಬ್ಬೊಬ್ಬರನ್ನು ಸಂಚಾಲಕರನ್ನಾಗಿ ನೇಮಿಸಿ ಶಿಬಿರಕ್ಕೆ ಸಂಬಂಧಿಸಿದ ಲೆಕ್ಕಪತ್ರ ಸಮಾಚಾರ ಕಳಿಸುವುದು, ಮಾರ್ಚ 8 1931 ರಂದು ಹುಬ್ಬಳ್ಳಿಯಲ್ಲಿ ಕರನಿರಾಕರಣ ಕಾರ್ಯಕರ್ತರು ದಿವಾಕರ ಅವರೋಂದಿಗೆ ಕರವನ್ನು ಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಪ್ರಕಟಣೆ ಹೊರಡಿಸಿದರು. ಗಾಂಧಿ – ಇರ್ವಿನ್ ಸಂಧಾನದ ಫಲದಿಂದ ಶಿರಸಿ ಸಿದ್ದಾಪುರ ಹಿರೇಕೆರೂರು ತಾಲೂಕಿನವರು ಕರವನ್ನು ಕಡಿಮೆಗೊಳಿಸಿ ಕಟ್ಟಬೇಕೆಂದು ತಿರ್ಮಾನಿಸಲಾಯಿತು. ಈ ತಿರ್ಮಾನದ ವಿಷಯಗಳನ್ನು ಮಹಾತ್ಮ ಗಾಂಧಿ, ನೆಹರು ಪಟೇಲರನ್ನು ಕಂಡು ಶಿರಸಿ ಸಿದ್ದಾಪುರ ಸ್ಥಿತಿಗಳನ್ನು ತಿಳಿಸಿದರು, ದಿವಾಕರರು ಮುಂಬೈ ಕೌನ್ಸಿಲ್ ಬೇಟಿ ನೀಡಿ ಮನವಿ ಮಾಡಿದರು. ಕಮೀಷನರ್ ಹಿರೇಕೆರೂರ ತಾಲೂಕಿನ ರೈತರಿಗೆ ಮಾತ್ರ ಕೆಲವು ಸವಲತ್ತು ಕೊಟ್ಟರು ಏಪ್ರೀಲ್ 9 ರಂದು ಡಬ್ಲ್ಯು ಡಬ್ಲ್ಯು ಸ್ಮಾರ್ಟ್ ಮತ್ತು ದಿವಾಕರ ನಡುವೆ ಒಪ್ಪಂದ ಏರ್ಪಟ್ಟಿತ್ತು ಈ ಒಪ್ಪಂದವು **"ಸ್ಮಾರ್ಟ್ ದಿವಾಕರ ಒಪ್ಪಂದ"** ಎಂದು ಪ್ರಸಿದ್ದಿಯನ್ನು ಪಡೆಯಿತು. ತೋಟದಲ್ಲಿ ಬೆಳೆಯುವ ಬೆಳೆಗಳಿಗೆ ಎರಡು ಕಂತುಗಳಲ್ಲಿ ಕರ ನೀಡುವುದು, ರೈತರ ಮೇಲೆ ಮೊಕದ್ದಮೆ ದಂಡ ವಿಧಿಸುವುದನ್ನು ನಿಲ್ಲಿಸಲು ಒಪ್ಪಂದವಾಯಿತು. ದಿವಾಕರರು ಶಿರಸಿ ಸಿದ್ದಾಪುರ ತಾಲೂಕಗಳಲ್ಲಿ ಕರನಿರಾಕರಣ ಚಳುವಳಿ ನಿಲ್ಲಿಸುತ್ತಾರೆ.

- **ರೈತರ ಪರಿಹಾರ ನಿಧಿ ಸಂಗ್ರಹ**

ಮೇ 26 ಮತ್ತು 27 1931 ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು ಹುಕ್ಕೇರಿಯಲ್ಲಿ ನಡೆಯಿತು. ಶಿರಿಸಿ ಸಿದ್ದಾಪುರ ರೈತರ ಆರ್ಥಿಕ ಪರಿಸ್ಥಿತಿ ದುಸ್ಥಿತಿಗೆ ಒಳಗಾಗಿದ್ದರು. ಮಹಾತ್ಮ ಗಾಂಧಿಯವರು ಜಮಾನ್‌ಲಾಲ್‌ರಿಗೆ ಇಲ್ಲಿಯ ಪರಿಸ್ಥಿತಿಯ ವಿವರ ತಮಗೆ ನೇರವಾಗಿ ತಿಳಿಸಲು ಹೇಳಿದ್ದರು, ಕೆ.ಪಿ.ಸಿ.ಸಿಯ ಅದ್ಯಕ್ಷರಾಗಿದ್ದ ಕಾರ್ನಾಡ್ ಸದಾಶಿವರಾದರು. ಕಾರ್ಯದರ್ಶಿಗಳಾಗಿ ದಿವಾಕರ ಹಾಗೂ ಆರ್. ಎಸ್. ಹುಕ್ಕೆರಿಕರ ನೇಮಕವಾದರು. ಜೂನ್ 26 ರಂದು ಕರ್ನಾಟಕದಾದ್ಯಂತ ರ್ಯತರ ಪರಿಹಾರ ನಿಧಿ ಸಂಗ್ರಹಿಸುವ ದಿನವನ್ನಾಗಿ ಆಚರಿಸಬೇಕೆಂದು ಆದೇಶಿಸಲಾಯಿತು, ಇದೆ ಸಭೆಯಲ್ಲಿ 700 ರೂಪಾಯಿ ಪರಿಹಾರ ನಿಧಿಗೆ ಸಂಗ್ರಹವಾದವು ಒಟ್ಟು 16 ಪರಿಹಾರ ನಿಧಿ ಕೇಂದ್ರ ಸ್ಥಾಪಿಸಿ 400 ಕುಟುಂಬಗಳಿಗೆ 4 ತಿಂಗಳ ಆಹಾರವನ್ನು ಒದಗಿಸುವ ಯೋಜನೆ ಪರಿಹಾರ ಕಾರ್ಯ ಕೈಗೊಳ್ಳಲಾಯಿತು.

- **ಹಿರೇಕೆರೂರ ತಾಲೂಕ ರೈತ ಚಳುವಳಿ**

1930ರಲ್ಲಿ ಸರದಾರ ವೀರನಗೌಡರಿಗೆ ಸರದಾರ ಎನ್ನುವ ಬಿರದು ಬಂದದ್ದು ಹಿರೇಕೆರೂರನಲ್ಲಿ ನಡೆದ ಕರನಿರಾಕರಣ ಚಳುವಳಿಯ ನಂತರ ಚಳುವಳಿಯ ಯೋಜಕರು ಇವರು ಆಗಿದ್ದರು. ಬಾರ್ಡೊಲಿ ಸತ್ಯಾಗ್ರಹ ಕಣ್ಣಾರೆ ಕಂಡ ಇವರು ಅದೇರೀತಿ ಹಿರೇಕೆರೂರನಲ್ಲಿ ರೈತರನ್ನು ಸಂಘಟಿಸಿ ಹೋರಾಟ ಮಾಡಿದರು ಕೆ.ಪಿ.ಸಿ.ಸಿ ಅದ್ಯಕ್ಷರಾಗಿದ್ದ ದಿವಾಕರ ಅವರ ಸಲಹೆ ಪಡೆದರು. ತಾಲೂಕಿನ ಹಿರಿಯರಾದ ಟಿ.ಆರ್. ನೇಸ್ವಿ, ಕೆ. ಎಫ್. ಪಾಟೀಲ, ಗುದ್ಲೆಪ್ಪ ಹಳ್ಳಿಕೇರಿಯವರು ಸಹಾಯ ಪಡೆದು ತಾಲೂಕಿನಾದ್ಯಾಂತ ಸಂಚರಿಸಿದರು. 1931 ಜನೆವರಿ 6 ರಂದು ವೀರನಗೌಡರು ಹಂಸಬಾವಿಯಲ್ಲಿ ಕರನಿರಾಕರಣ ಚಳುವಳಿ ಹೂಡಿದರು. ಸರ್ಕಾರದ ಗಮನ ಸೆಳೆದರು. 1932 ಜನೆವರಿ 4ರಂದು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಪ್ರಮುಖರನ್ನು ಬಂಧಿಸಲಾಯಿತು. ಧಾರವಾಡದಲ್ಲಿ ಸವಿನಯ ಕಾನೂನ ಭಂಗ ಚಳುವಳಿಯ ಕುರಿತು ಚರ್ಚಿಸಲಾಯಿತು. ದಿವಾಕರರು ಶಿರಸಿ, ಸಿದ್ದಾಪುರ ಮತ್ತು ಅಂಕೋಲೆಗೆ ಹೊರಟರು.

ಪರಾಮರ್ಶನ ಗ್ರಂಥಗಳು :

1) ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಸಂಪುಟ–2 ಮೂಲ – ತರಾಚಂದ
ಕನ್ನಡಕ್ಕೆ –ಉ–ಊ–ದಿಕ್ಷಿತ
2) ಸೆರೆಯ ಮರೆಯಲ್ಲಿ – ಆರ್.ಆರ್.ದಿವಾಕರ
3) ಕರ ನಿರಾಕರಣೆ ವೀರಕಥೆ – ಆರ್.ಆರ್.ದಿವಾಕರ
4) ಸಂಯುಕ್ತ ಕರ್ನಾಟಕ ಕಾರ್ಯಲಯ – ಹುಬ್ಬಳ್ಳಿ
5) ಕರ್ಮವೀರ ದಿವಾಕರ – ಮೂಲ ಆರ್.ಕೆ ಜೋಶಿ.
– ಇಂಗ್ಲೀಷ–ಪ್ರೋ. ಎಲ್.ಎಸ್.ಶೇಷಗಿರಿರಾವ್
6) ಸ್ವಾತಮತ್ರ್ಯ ಸಂಗ್ರಾಮದ ಸ್ಮೃತಿಗಳು – ಸೂರ್ಯನಾಥ ಕಾಮತ್
7) ಸಮಗ್ರ ಕನಾಟಕ ಚರಿತ್ರೆ – ಪಾಲಕ್ಷ
8) ಕರ್ನಾಟಕ ಸಂಕ್ಷಿಪ್ತ ಇತಿಹಾಸ – ಸೂರ್ಯನ್ನಾಥ ಕಾಮತ್,1973
M.C.C ಪಬ್ಲೀಕೇಶನ್ ಹುಬ್ಬಳ್ಳಿ
9) ಕಾಂಗ್ರೇಸ ರನ್ನ ಮಹೋತ್ಸವ – ಸಂಪಾದನೆ ಆರ್.ಆರ್.ದಿವಾಕರ
ಲೋಲ ಶಕ್ಷಣ ಟ್ರಸ್ಟ್ ಹುಬ್ಬಳಿ
9) ರಂಗನಥ ದಿವಾಕರ – ಮನೋಜ್ ಪಾಟೀಲ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಪ್ರಜಾಪ್ರಭುತ್ವ ಮತ್ತು ನಾಗರಿಕ ಸಮಾಜ

ಡಾ.ಸುರೇಶ. ಹೆಚ್.ಎನ್
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಾವಣಗೆರೆ
Email:sureshhn2011@gmail.com

Manuscript ID:
JRD -2026-180538
ISSN: 2230-9578
Volume 18
Issue 5(IV)
Pp. 150-152
April- 2026

Submitted: 20 Apr. 2026
Revised: 30 Apr.2026
Accepted: 16 May. 2026
Published: 31 May. 2026

ಸಾರಾಂಶ

ಭಾರತ ತನ್ನದೇ ಆದ ಸಂಸ್ಥೆಗಳು ಮತ್ತು ಕಾನೂನುಗಳನ್ನು ಹೊಂದಿರುವ ಪ್ರಜಾಸತ್ತಾತ್ಮಕ ರಾಜ್ಯವು ರಾಷ್ಟ್ರದ ಅಭಿವೃದ್ಧಿಯ ಕಲ್ಪನೆಯನ್ನು ವ್ಯಕ್ತಪಡಿಸುವಲ್ಲಿ ಮತ್ತು ಅದರ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಗಳ ಹಾದಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ರಾಜ್ಯ ಪದ್ಧತಿಗಳ ನಿರಾಕಾರ ಸ್ವರೂಪವನ್ನು ವಿರೋಧಿಸುವ ಸಾಮಾಜಿಕ ವ್ಯವಸ್ಥೆಯಿಂದ ಆತಂಕದಿಂದ ಕೂಡಿದೆ. ವ್ಯಕ್ತಿಯು ತನ್ನ ಸಾಮಾಜಿಕ ಜೀವನದಲ್ಲಿ ಸ್ಥಾಪಿಸಿಕೊಂಡಿರುವ ಸಂಘದ ಜಾಲಗಳಲ್ಲಿ ಒಟ್ಟಿಗೆ ಸೇರಿ ರಾಜ್ಯದ ಕ್ರೂರ ಶಕ್ತಿಯನ್ನು ಸವಾಲು ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಆದರೆ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೇಯಲ್ಲಿ ನಾಗರಿಕ ಸಮಾಜ ಅನೇಕ ಸವಾಲುಗಳನ್ನು ಎದುರಿಸುತ್ತವೆ. ಈ ಹಿನ್ನಲೆಯಲ್ಲಿ ನಾಗರಿಕರ ಅಗತ್ಯತೆಗಳೇನು? ನಾಗರಿಕ ಸಮಾನ ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣಗಳೇನು ಎನ್ನುವುದನ್ನು ಕಂಡುಕೊಂಡು ಪರಿಹಾರ ಹುಡುವ ಪ್ರಯತ್ನವನ್ನು ಈ ಲೇಖನದ ಮೂಲಕ ಮಾಡಲಾಗಿದೆ.

ಪದಗಳು: *ರಾಜ್ಯ, ಪ್ರಜಾಪ್ರಭುತ್ವ, ನಾಗರಿಕ ಸಮಾಜ, ಸಂಸ್ಥೆಗಳು,*

ಪೀಠಿಕೆ

ತನ್ನದೇ ಆದ ಸಂಸ್ಥೆಗಳು (ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ) ಮತ್ತು ಕಾನೂನುಗಳನ್ನು ಹೊಂದಿರುವ ಪ್ರಜಾಸತ್ತಾತ್ಮಕ ಭಾರತೀಯ ರಾಜ್ಯವು ದೇಶದ ಅಭಿವೃದ್ಧಿ ಕಲ್ಪನೆಯನ್ನು ವ್ಯಕ್ತಪಡಿಸುವಲ್ಲಿ ಮತ್ತು ಅದರ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಗಳ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಭಾರತದ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳುವುದು, ಭಾರತದಲ್ಲಿನ ಆಧುನಿಕ ರಾಜ್ಯದ ವಿಕಸನ, ಅದರ ಪ್ರಸ್ತುತ ಸ್ಥಿತಿ ಮತ್ತು ಭವಿಷ್ಯದ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು. ಇದರ ಜೊತೆಗೆ ಅಷ್ಟೇ ಮುಖ್ಯವಾದ ಭಾಗವೆಂದರೆ ಭಾರತದ ನಾಗರಿಕ ಸಮಾಜದ ಹೊರಹೊಮ್ಮುವಿಕೆ ಮತ್ತು ರಾಜ್ಯದೊಂದಿಗಿನ ಅದರ ವಿವಾದಾತ್ಮಕ ಮತ್ತು ಸಮಾಧಾನಕರ ಸಂಬಂಧಗಳನ್ನು ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶವಾಗಿದೆ. ಒಟ್ಟಾರೆ ಈ ಅಧ್ಯಯನದ ಉದ್ದೇಶವೆಂದರೆ, ಭಾರತಲ್ಲಿನ ಆಧುನಿಕ ಪ್ರಜಾಪ್ರಭುತ್ವ ರಾಜ್ಯ ಅದರ ಸಂಸ್ಥೆಗಳು, ಕಾನೂನುಗಳು ಮತ್ತು ನೀತಿಗಳು ಮತ್ತು ನಾಗರಿಕ ಸಮಾದೊಂದಿಗಿನ ಅದರ ಸಂಪರ್ಕದ ಬಗ್ಗೆ ಅರ್ಥಮಾಡಿಕೊಳ್ಳುವುದು.

ಉದ್ದೇಶಗಳು

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕ ಭಾಗವಹಿಸುವಿಕೆ ಕೇವಲ ಮತದಾನಕ್ಕೆ ಮಾತ್ರ ಸೀಮಿತವಾಗಿದ್ದು, ಇತರೆ ವಿಷಯಗಳಲ್ಲಿ ಅತ್ಯಂತ ಕಡಿಮೆ ಇದೆ. ಇದಕ್ಕೆ ಸರ್ಕಾರ ಮತ್ತು ಆಡಳಿತ ಪ್ರಮುಖ ಕಾರಣವಾಗಿದೆ. ಸರ್ಕಾರವು ತನ್ನ ನೀತಿಗಳನ್ನು ನಿರ್ಧರಿಸುವ ಮೊದಲು ಅವುಗಳನ್ನು ಮಾಧ್ಯಮಗಳ ಮೂಲಕ ಮಾಹಿತಿ ನೀಡಿ ಜನರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಅಂತಿಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಆದರೆ ಇದು ಸಾಧ್ಯವಾಗದ ಮಾತಾಗಿದೆ. ಇದಕ್ಕೆ ಕಾರಣಗಳು ಮತ್ತು ಪರಿಹಾರಗಳನ್ನು ಕಂಡುಕೊಳ್ಳುವುದು, ನಾಗರಿಕ ಸಮಾಜದ ಅಗತ್ಯತೆಗಳೇನು ಎನ್ನುವುದನ್ನು ಕಂಡುಕೊಳ್ಳುವುದು, ನಾಗರಿಕ ಸಮಾಜದ ಪಾತ್ರ ಮತ್ತು ಸವಾಲುಗಳೇನು ಎನ್ನುವುದನ್ನು ಕಂಡುಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಸುರೇಶ. ಹೆಚ್.ಎನ್ ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದಾವಣಗೆರೆ

How to cite this article:
ಡಾ.ಸುರೇಶ. ಹೆಚ್.ಎನ್ (2026). ಪ್ರಜಾಪ್ರಭುತ್ವ ಮತ್ತು ನಾಗರಿಕ ಸಮಾಜ Journal of Research & Development, 18(5(IV)), 150–152. https://doi.org/10.5281/zenodo.20995964

Quick Response Code:
Website: https://jrdrvb.org/
DOI: 10.5281/zenodo.20995964
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ನೀತಿ ಅನುಷ್ಠಾನದಲ್ಲಿ ನಾಗರಿಕ ಸಮಾಜ ಮತ್ತು ಜನರ ಭಾಗವಹಿಸುವಿಕೆ

ನಾಗರಿಕ ಸಮಾಜವು ಸಮುದಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು, ಸ್ಥಳೀಯ ಗುಂಪುಗಳು, ನಂಬಿಕೆ ಆಧಾರಿತ ಸಂಸ್ಥೆಗಳು, ವೃತ್ತಿಪರ ಸಂಘಟನೆಗಳು ಹೀಗೆ ವ್ಯಾಪಕ ಶ್ರೇಣಿಯ ಸಂಸ್ಥೆಗಳನ್ನು ಒಳಗೊಂಡಿದೆ. ಇಂತಹ ಸಂಘಟನೆಗಳ ಮೂಲಕ ಸರ್ಕಾರದ ನೀತಿ ಅನುಷ್ಠಾನಗಳಲ್ಲಿ ಅರ್ಜಿಗಳು, ಪ್ರತಿಭಟನೆಗಳು, ಅರಣಿ ಧರಣಿಗಳು ಮತ್ತು ನ್ಯಾಯಾಂಗ ಮೂಲಕ ರಾಜ್ಯದ ಸವಾಲುಗಳನ್ನು ಮಾಡುವ ಸಾಮರ್ಥ್ಯವನ್ನು ಸಂಘಗಳನ್ನು ಹೊಂದಿವೆ. ಇದಕ್ಕೆ ಕಾರಣ ನಾಗರಿಕ ಸಮಾಜದ ಅಗತ್ಯತೆಗಳು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯು ವಿಷಯದಿಂದ ನಾಗರಿಕನಾಗಿ ಸಾಗುತ್ತಾನೆ. ಆದರೆ ನಮ್ಮ ಹಕ್ಕುಗಳನ್ನು ಹೊಂದಿರುವ ನಾಗರಿಕನಿಗಿಂತ ಹೆಚ್ಚು ದುರ್ಬಲ ಮತ್ತು ಅಸಹಾಯಕ ಯಾರೂ ಇಲ್ಲ. ಈ ಸಾಂಕೇತಿಕ ಜಾಗದಲ್ಲಿ, ವ್ಯಕ್ತಿಗಳು ಸಂಘ ಜೀವನದ ಜಾಲಗಳಲ್ಲಿ ಒಟ್ಟಿಗೆ ಸೇರುತ್ತಾರೆ. ಅರ್ಜಿಗಳು, ಪ್ರತಿಭಟನೆಗಳು, ಧರಣಿಗಳು ಮತ್ತು ಅಂತಿಮವಾಗಿ ನ್ಯಾಯಾಂಗ ಚಟುವಟಿಕೆಯ ಮೂಲಕ ರಾಜ್ಯದ ಕ್ರೂರ ಶಕ್ತಿಯನ್ನು ಸವಾಲು ಮಾಡುವ ಸಾಮರ್ಥ್ಯವನ್ನು ಸಂಘಗಳು ಹೊಂದಿವೆ.

ನಾಗರಿಕ ಸಮಾಜದ ಅಗತ್ಯತೆಗಳು:

ನಾಗರಿಕ ಸಮಾಜವು ಬಹುಕ್ಷೇತ್ರವನ್ನು ಒಳಗೊಂಡಿದೆ ಮತ್ತು ಎಲ್ಲಾ ರೀತಿಯ ಸಂಘಟಗಳು ಪ್ರತಿಯೊಂದು ರೀತಿಯ ಸಮಾಜದಲ್ಲಿಯೂ ತಮ್ಮದೇ ಆದ ಸ್ಥಳವನ್ನು ಕಂಡುಕೊಳ್ಳುತ್ತವೆ. ಪ್ರತಿಯೊಂದು ಪ್ರಜಾಪ್ರಭುತ್ವ ಸಂಘವು ಮುಖ್ಯವಾಗಿದೆ, ಆದರೆ ನಾಗರಿಕ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಗುಂಪುಗಳು ಮಾನವ ಯೋಗಕ್ಷೇಮಕ್ಕೆ ಅಗತ್ಯವಾದ ಪೂರ್ವಾಪೇಕ್ಷಿತವಾಗಿದೆ ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ.

ವ್ಯಕ್ತಿ ಮತ್ತು ಸರ್ವವ್ಯಾಪಿ ಮತ್ತು ಸರ್ವಶಕ್ತ ರಾಜ್ಯದ ನಡುವೆ ಇರುವ ಏಕೈಕ ಗೋಳವೆಂದರೆ ನಾಗರಿಕ ಸಮಾಜ.

ಜಗತ್ತಿನ ಪ್ರತಿಯೊಂದು ರಾಜಕೀಯ ಕ್ರಾಂತಿಯು ಜೀವನ ಮತ್ತು ಸ್ವಾತಂತ್ರ್ಯದ ಹಕ್ಕುಗಳೊಂದಿಗೆ ಪ್ರಾರಂಭವಾಗಿದೆ. ಈ ಎರಡು ಹಕ್ಕುಗಳು ಮಾನವರಿಗೆ ನಿರ್ಣಾಯಕವೆಂದು ಅಭಿವೃದ್ಧಿಪಡಿಸಲಾದ ಮತ್ತು ಕ್ರೋಡೀಕರಿಸಲಾದ ಇತರ ಹಕ್ಕುಗಳ ತಿರುಳಾಗಿವೆ.

ಚಿತ್ರಹಿಂಸೆಗೊಳಗಾಗದಿರುವ ಅಥವಾ ಕೊಲ್ಲದಿರುವ ಹಕ್ಕಿನಿಂದ ಹಿಡಿದು, ರಾಜ್ಯದ ಗೂಂಡಾಗಳಿಂದ ಸರಿಯಾದ ಕಾರಣವಿಲ್ಲದೆ ಬಂಧಿಸಲ್ಪಡದಿರುವ ಮತ್ತು ಜೈಲಿನಲ್ಲಿಡಲ್ಪಡದಿರುವ ಹಕ್ಕಿನವರೆಗೆ ಎರಡು ಹಕ್ಕುಗಳು ವಿಸ್ತರಿಸುತ್ತವೆ. ಬದುಕುವ ಹಕ್ಕು ಮೂಲಭೂತ ಹಕ್ಕು, ಆದರೆ ನಾವು ಯಾವುದೇ ಕಾರಣವಿಲ್ಲದೆ ಜೈಲಿನಲ್ಲಿರಿಸಲ್ಪಟ್ಟರೆ ನಮ್ಮ ಜೀವನವು ಏನು ಅರ್ಥವಾಗುವುದಿಲ್ಲ.

ಸಾಮಾಜಿಕ ಮಾಧ್ಯಮ, ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆಯ ಯುಗವು ನಾಗರಿಕ ಸ್ವಾತಂತ್ರ್ಯಗಳು, ಉತ್ತಮ ಶಿಕ್ಷಣ ವ್ಯವಸ್ಥೆಗಳು ಮತ್ತು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಹಣವನ್ನು ಸಂಗ್ರಹಿಸುವಂತಹ ವಿಷಯಗಳ ಕುರಿತು ಪ್ರಚಾರ ಮಾಡುವ ಗುಂಪುಗಳು ಮತ್ತು ಸಂಸ್ಥೆಗಳಿಗೆ ಮತ್ತಷ್ಟು ಉತ್ತೇಜನ ನೀಡುವ ಸಾಧ್ಯತೆಯಿದೆ.

ಸಂವಿಧಾನದ ೧೯ನೇ ವಿಧಿಯು ವಾಕ್ ಸ್ವಾತಂತ್ರ್ಯದ ಭಾಗವಾಗಿ ಪ್ರತಿಭಟಿಸುವ ಪ್ರಜಾಸತ್ತಾತ್ಮಕ ಹಕ್ಕನ್ನು ಒದಗಿಸುತ್ತದೆ. ಚಟುವಟಿಕೆಯಲ್ಲಿ ಭಾಗವಹಿಸುವ ಹಕ್ಕನ್ನು ರಾಜಕೀಯ ಮತ್ತು ಚುನಾವಣೆಗಳಿಗೆ ಸೀಮಿತಗೊಳಿಸಬಾರದು. ಈ ಹಕ್ಕಿಲ್ಲದೆ, ಪ್ರಜಾಪ್ರಭುತ್ವವು ಭ್ರಮೆಯಾಗುತ್ತದೆ. ಆದ್ದರಿಂದ ನಾಗರಿಕ ಸಮಾಜವನ್ನು ರಾಜ್ಯದಿಂದ ಸ್ವತಂತ್ರವಾಗಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ನಾಗರಿಕರು ತಮ್ಮ ಪ್ರತಿನಿಧಿಗಳ ಕೆಲಸವನ್ನು ಪರಿಶೀಲಿಸುವ ಹಕ್ಕನ್ನು ಹೊಂದಿದ್ದಾರೆ. ನಾಗರಿಕ ಸ್ವಾತಂತ್ರ್ಯಗಳ ಉಲ್ಲಂಘನೆ ಮತ್ತು ನಾಗರಿಕರಿಗೆ ಸಮಂಜಸವಾದ ಜೀವನ ಮಟ್ಟವನ್ನು ಒದಗಿಸುವಲ್ಲಿ ಸರ್ಕಾರಗಳ ವೈಫಲ್ಯಗಳಂತಹ ಕೃತ್ಯಗಳನ್ನು ಪ್ರಚಾರ ಮಾಡಲು ಪ್ರಯತ್ನಿಸುತ್ತಾರೆ.

ನಾಗರಿಕ ಸಮಾಜದ ಪಾತ್ರ

ನಾಗರಿಕರಿಗೆ ಆರೋಗ್ಯ ರಕ್ಷಣೆ ಒದಗಿಸುವ ಸರ್ಕಾರದ ಪ್ರಯತ್ನಕ್ಕೆ ಪೂರಕವಾಗಿ ಮತ್ತು ಮಕ್ಕಳು ಮತ್ತು ತಾಯಿಯ ಅಪೌಷ್ಟಿಕತೆಯಂತಹ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವುದು.

ಹಲವಾರು ಸರ್ಕಾರೇತರ ಸಂಸ್ಥೆಗಳು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಕಳೆದ ೨೫ ವರ್ಷಗಳಲ್ಲಿ ಭಾರತದಲ್ಲಿ ಸಾಮಾಜಿಕ ಕಳಕಳಿಯುಳ್ಳ ಹಲವಾರು ಸರ್ಕಾರೇತರ ಸಂಸ್ಥೆಗಳು ಪರಿಸರ ಸಂರಕ್ಷಣೆಯ ಕ್ಷೇತ್ರದಲ್ಲಿ ಸಕ್ರಿಯವಾಗಿವೆ.

ಭ್ರಷ್ಟಾಚಾರದ ದುಷ್ಪರಿಣಾಮಗಳ ಬಗ್ಗೆ ನಾಗರಿಕರಿಗೆ ಶಿಕ್ಷಣ ನೀಡುವಲ್ಲಿ, ಅವರ ಜಾಗೃತಿ ಮಟ್ಟವನ್ನು ಹೆಚ್ಚಿಸುವಲ್ಲಿ ಮತ್ತು ಅವರಿಗೆ ಧ್ವನಿ ನೀಡುವ ಮೂಲಕ ಅವರ ಭಾಗವಹಿಸುವಿಕೆಯನ್ನು ಭದ್ರಪಡಿಸುವಲ್ಲಿ ನಾಗರಿಕ ಸಮಾಜ ಪ್ರಮುಖ ಪಾತ್ರವಹಿಸುತ್ತದೆ.

ನಾಗರೀಕ ಸಮಾಜದ ಸವಾಲುಗಳು

- **ಹೊಸ ತಂತ್ರಜ್ಞಾನಗಳ ಸಂಪರ್ಕದ ಮೂಲಕ ಡಿಜಿಟಲ್ ಹಕ್ಕುಗಳಿಗೆ ನಿರಂತರ ಅಪಾಯಗಳು:** ಸಾಮಾನ್ಯ ದತ್ತಾಂಸ ಸಂರಕ್ಷಣಾ ನಿಯಂತ್ರಣ ಅಳವಡಿಕೆಯು ಡಿಜಿಟಲ್ ಹಕ್ಕುಗಳ ವಿಷಯದಲ್ಲಿ ಸರಿಯಾದ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದ್ದರೂ, ನಾಗರಿಕ ಸಮಾಜ ಮತ್ತು ಸರ್ಕಾರಗಳು ಬಳಸುವ ಬಯೋಮೆಟ್ರಿಕ್ ಡೇಟಾಬೇಸ್‌ಗಳಂತಹ ಹೊಸ ತಂತ್ರಜ್ಞಾನಗಳ ಹೊರಹೊಮ್ಮುಕೆಯು ಸೂಕ್ಷ್ಮ ದತ್ತಾಂಶಗಳನ್ನು ಸಂಗ್ರಹಿಸಲು ಮತ್ತು ಬಳಸಲು ಮಾನದಂಡಗಳು ಅಥವಾ ಮಾರ್ಗಸೂಚಿಗಳ ಕೊರತೆಯನ್ನು ಬಹಿರಂಗಪಡಿಸುತ್ತದೆ. ಇದಕ್ಕೆ ಹಚ್ಚುವರಿಯಾಗಿ, ಹ್ಯಾಕರ್‌ಗಳು ವಿಶ್ವದ ವ್ಯಕ್ತಿಗಳಿಂದ ವೈಯಕ್ತಿಕ, ಹಣಕಾಸು ಮ್ತು ಅನುವಂಶಿಕ ಡೇಟಾವನ್ನು ಸಂಗ್ರಹಿಸುವ ದತ್ತಿ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಇತರ ಲಾಭರಹಿತ ಸಂಸ್ಥೆಗಳನ್ನು ಗುರಿಯಾಗಿಸಲು ಪ್ರಾರಂಭಿಸಿರುವುದರಿಂದ ನಾಗರಿಕ ಸಮಾಜ ವಲಯದ ಮೇಲೆ ಸೈಬರ್ ಭದ್ರತಾ ಬೆದರಿಕೆಗಳು ಹೆಚ್ಚಾಗಿ ಕಂಡುಬರುತ್ತಿವೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

- **ಸಂಸ್ಕೃತಿV/S ಸಂವಿಧಾನವಾದ**: ವಾಸ್ತವವಾಗಿ, ಮೂಲಭೂತವಾಗಿ ಕಾನೂನು ನಿಯಮದ ಉಲ್ಲಂಘನೆಯಾಗಿದೆ ಮತ್ತು ಕಾನೂನು ನಿಯಮದ ಮರಳುವಿಕೆಗಾಗಿ ಹೋರಾಡುವ ಜವಾಬ್ದಾರಿ ನಾಗರಿಕ ಸಮಾಜದ ಹೆಗಲ ಮೇಲೆ ಬಿದ್ದಿದೆ. ಹಿಂದುತ್ವವು ಹಿಂದೂ ಧರ್ಮದ ರಾಜಕೀಯ ಅಭಿವ್ಯಕ್ತಿಯಾಗಿದ್ದು, ಅಲ್ಲಿ ಹಿಂದೂ ಧರ್ಮವನ್ನು ಧರ್ಮವಲ್ಲ "ಜೀವನ ವಿಧಾನ" ಎಂದು ಸಮರ್ಥಿಸಲಾಗುತ್ತದೆ. ಈ ಬೆಳವಣಿಗೆಯ ಸಂಯೋಜನೆಯು :ಸಂಸ್ಕೃತಿ"ಯ ಮೇಲಿನ ನಿಷ್ಠೆಯನ್ನು ಸಂವಿಧಾನದ ಮೇಲಿನ ನಿಷ್ಠೆಯನ್ನು ಮೀರಿಸುವ ಪರಿಸ್ಥಿತಿಗೆ ಕಾರಣವಾಗಿದೆ, ಅಂದರೆ, ರಾಜ್ಯದ ಕ್ರಮದ ಸಿಂಧುತ್ವವನ್ನು ನಿರ್ಣಯಿಸುವ ಮಾನದಂಡ. ಕಾನೂನಿನ ನಿಯಮಗಳು ಬದಲಾಗುತ್ತಿರುವುದರಿಂದ ನಾವು ಸಮಾಜವನ್ನು ಕಳೆದುಕೊಳ್ಳುವ ಅಪಾಯದಲ್ಲಿದ್ದೇವೆ.
- ಭಾರತದಲ್ಲಿ ನಾಗರಿಕ ಸಮಾಜಗಳು ಹಣಕಾಸಿನ ಕೊರತೆ ಮತ್ತು ವಿದೇಶಿ ದಾನಿಗಳ ಮೇಲಿನ ಅವಲಂಬನೆ. ಇವುಗಳನ್ನು ಬಿಗಿಗೊಳಿಸುವ ನಿಯಂತ್ರಕ ವಾತಾವರಣದಿಂದ, ವಿಶೇಷವಾಗಿ ವಿದೇಶಿ ನಿಧಿಗೆ ಸಂಬಂಧಿಸಿದಂತೆ ಉಲ್ಬಣಗೊಳಿಸಲಾಗುತ್ತದೆ.
- **ಬಾಹ್ಯದಾನಿಗಳ ಮೇಲಿನ ಅವಲಂಬನೆ:** ವಿದೇಶಿ ಮತ್ತು ಅಂತರರಾಷ್ಟ್ರೀಯ ನಿಧಿಯ ಮೇಲಿನ ಅತಿಯಾದ ಅವಲಂಭನೆಯು ಅವಲಂಬನೆಯನ್ನು ಸೃಷ್ಟಿಸುತ್ತದೆ ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆ ಮತ್ತು ಮಾಲೀಕತ್ವವನ್ನು ದುರ್ಬಲಗೊಳಿಸುತ್ತದೆ.
- **ಸರ್ಕಾರ ಮತ್ತು ನಾಗರಿಕ ಸಮಾಜ ಸಂಸ್ಥೆಗಳ ಸಂಬಂಧಗಳು:** ಅಧಿಕಾರಶಾಹಿ ಅಡೆತಡೆಗಳು, ಪರಿಣಾಮಕಾರಿ ಸಹಯೋಗದ ಕೊರತೆ ಮತ್ತು ಸರ್ಕಾರದ ಅತಿಯಾದ ಮನೋಭಾವದಿಂದಾಗಿ ಸರ್ಕಾರದೊಂದಿಗಿನ ಪಾಲುದಾರಿಕೆಗಳು ಹೆಚ್ಚಾಗಿ ಒತ್ತಡಕ್ಕೊಳಗಾಗುತ್ತೆ.

ನಾಗರಿಕ ಸಮಾಜದ ಜವಾಬ್ದಾರಿಗಳು

ಸಂವಿಧಾನವನ್ನು ರಕ್ಷಿಸುವುದು : ಈ ಸನ್ನಿವೇಶದಲ್ಲಿ ಪ್ರತಿಭಟನಾ ಚಳುವಳಿಗಳ ಮೂಲಕ ಸಂವಿಧಾನವನ್ನು ರಕ್ಷಿಸುವ ಜವಾಬ್ದಾರಿ ನಾಗರಿಕ ಸಮಾಜದ ಹೆಗಲಮೇಲೆ ಬಿದ್ದಿದೆ. ಹಲವಾರು ಪ್ರತಿಭಟನಾ ಚಳುವಳಿಗಳಲ್ಲಿ, ನಾಗರಿಕ ಸಮಾಜವು ತನ್ನ ಗಾಂಧಿವಾದಿ ಸಂಪ್ರದಾಯದ ಅಹಿಂಸಾತ್ಮಕ ಪ್ರತಿಬಿಂಬನೆ ಮತ್ತು ನಾಗರಿಕ ಅಸಹಕಾರಕ್ಕೆ ಮರಳಿದೆ. ಭಾರತದ ಸಂವಿಧಾನಕ್ಕೆ ನಿಜವಾದ ನಂಬಿಕೆ ಮತ್ತು ನಿಷ್ಠೆಯನ್ನು ಹೊಂದಿರುವುದು ಚುನಾಯಿತ ಪ್ರತಿನಿಧಿಗಳ ಸಾಂವಿಧಾನಿಕ ಕರ್ತವ್ಯವಾಗಿದ್ದರೂ, ಅವರು ಸಂವಿಧಾನವನ್ನು ನಿರ್ಲಕ್ಷಿಸುತ್ತಾರೆ. ಬದಲಾಗಿ, ನಾಗರಿಕ ಸಮಾಜವು ಸಂವಿಧಾನವನ್ನು ರಕ್ಷಿಸಲು ಹೆಜ್ಜೆ ಹಾಕುತ್ತದೆ.

ಉಪಸಂಹಾರ

ನಾಗರಿಕ ಸಮಾಜವು ಪ್ರಜಾಪ್ರಭುತ್ವದ ಬೆನ್ನೆಲುಬಾಗಿದೆ. ಪ್ರಜಾಪ್ರಭುತ್ವವು ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಗಳ ಮೇಲೆ ಮಾತ್ರ ಸುತ್ತುವುದಿಲ್ಲ. ಬದಲಾಗಿ ನಾಗರಿಕರ ಹಕ್ಕುಗಳನ್ನು ಹೇಗೆ ರಕ್ಷಿಸಲಾಗುತ್ತದೆ ಎಂಬುದನ್ನು ತೋರಿಸುತ್ತದೆ. ನಾಘರಿಕ ಸಮಾಜವು ಗಾಂಧಿಜೀಯವರ ಸ್ವಯಂಸೇವಕ ಸಂಪ್ರದಾಯದಿಂದ ತನ್ನ ಶಕ್ತಿಯನ್ನು ಪಡೆದುಕೊಂಡಿದೆ, ಆದರೆ ಇಂದು, ಅದು ತನ್ನನ್ನು ತಾನು ವಿವಿಧ ರೀತಿಯ ಕ್ರಿಯಾಶೀಲತೆಯಲ್ಲಿ ವ್ಯಕ್ತಪಡಿಸುತ್ತದೆ.

ನಾಗರಿಕ ಸಮಾಜವು ಔಪಚಾರಿಕ ಮತ್ತು ಅನೌಪಚಾರಿಕ ಘಟಕಗಳನ್ನು ಉಲ್ಲೇಖಿಸುತ್ತದೆ ಮತ್ತು ಖಾಸಗಿವಲಯ, ಮಾಧ್ಯಮ, ಎನ್.ಜಿ.ಒಗಳು, ವೃತ್ತಿಪರ ಸಂಘಗಳು ಮತ್ತು ಜೀವನದ ವಿವಿಧ ಹಂತಗಳ ಜನರ ಅನೌಪಚಾರಿಕ ಗುಂಪುಗಳನ್ನು ಒಳಗೊಂಡಿದೆ. ರಾಜ್ಯದ ಮತದ ರಾಜಕೀಯವನ್ನು ಮಾತ್ರವಲ್ಲದೆ ಧ್ವನಿಯ ರಾಜಕೀಯದ ಅಭಿವ್ಯಕ್ತಿಯನ್ನು ಗೌರವಿಸಬೇಕು.

ಅಕರ ಗ್ರಂಥಗಳು

1. Aggeborn, L., Lajevardi, N., & Nyman, P. (2021)Disentangling the Impact of Civil Association Membership on Political Participation: Evidence from Swedish Panel Data, *British Journal of Political Science* 51(4): 1773–1781.
2. Ahlquist, J. S. & Levi, M. (2014) *In the Interest of Others: Organizations and Social Activism* . Princeton: Princeton University Press.
3. Allern, E. H. & Bale, T. (2012) Political Parties and Interest Groups: Disentangling Complex Relationships,*Party Politics* 18(1): 7–25
4. Alter, C. (1998) Bureaucracy and Democracy in Organizations: Revisiting Feminist Organizations. In Powell, W. W. & Clemens, E. S. (eds.) *Private Action and the Public Good* . New Have: Yale University Press.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಸಾಹಿತ್ಯದಲ್ಲಿ ಹೊಸ ಆಯಾಮ ಸೃಷ್ಟಿಸಿದ "ಎಐ"

ಡಾ. ಕಸ್ತೂರಿ ದಳವಾಯಿ
ಕನ್ನಡ ಸಹ ಪ್ರಾಧ್ಯಾಪಕರು ವಿಭಾಗದ ಮುಖ್ಯಸ್ಥರು,
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ

Manuscript ID:
JRD -2026-180539
ISSN: 2230-9578
Volume 18
Issue 5(IV)
Pp. 153-155
April- 2026
Submitted: 21 Apr. 2026
Revised: 30 Apr.2026
Accepted: 16 May. 2026
Published: 31 May. 2026

ಕೃತಕ ಬುದ್ಧಿಮತ್ತೆ (Artificial Intelligence AI) ಮತ್ತು ಕನ್ನಡ ಸಾಹಿತ್ಯದ ನಡುವಿನ ಸಂಬಂಧವು ಪ್ರಸ್ತುತ ಹೊಸ ಆಯಾಮಗಳನ್ನು ಸೃಷ್ಟಿಸುತ್ತದೆ. 2026ರ ಹೊತ್ತಿಗೆ AI ತಂತ್ರಜ್ಞಾನವು ಕೇವಲ ಭಂಷಂಂತಂರಂ ಸಾಧನವಾಗಿರದೇ ಸೃಜನಶೀಲ ಬರವಣಿಗೆ ವಿಮರ್ಶೆ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರುತ್ತಿದೆ.

1) ಸೃಜನಶೀಲ ಬರವಣಿಗೆ ಮತ್ತು ಎಐ (Creative Writing) :
ಹೊಸ ಬರವಣಿಗೆ ಶೈಲಿ ಎಐ ಉಪಕರಣಗಳನ್ನು ಕಥೆ ಕವನ ಮತ್ತು ಲೇಖನಗಳನ್ನು ಬರೆಯಲು ಸಹಾಯ ಮಾಡುತ್ತಿವೆ. ಇವು ಕಲ್ಪನಾ ಶಕ್ತಿಯನ್ನು ಉತ್ತೇಜಿಸಲು ಸಹ ಲೇಖಕನಾಗಿ ಕಾರ್ಯನಿರ್ವಹಿಸುತ್ತಿವೆ.
ಎ) ಸಿನಿಮಾ ಸಾಹಿತ್ಯ ಕನ್ನಡ ಚಲನ ಚಿತ್ರರಂಗದಲ್ಲಿ ಶೀತರಚನೆ ಮತ್ತು ಸಂಭಂಷಂಣಇಗಂಳ ಸೃಷ್ಟಿಗೆ ಎಐ ಪ್ರಯೋಗಗಳು ಹೆಚ್ಚುತ್ತಿವೆ, ಇದು ಕಡಿಮೆ ಸಮಯದಲ್ಲಿ ಹೆಚ್ಚಿನ ಆಯ್ಕೆ ನೀಡುತ್ತಿದೆ.
ಬಿ) ಚರ್ಚೆ – ಅದಾಗ್ಯೂ ಎಐ ಕೇವಲ ಮಾಹಿತಿಯನ್ನು ಸಂಯೋಜಿಸಬಲ್ಲಿದೆ, ಹೊರತು ಮಾನವ ಸಹಜ ಸೃಜನಶೀಲತೆ ಮತ್ತು ಭಾವನೆಗಳನ್ನು (Creativity) ಸಾಹಿತ್ಯದಲ್ಲಿ ಅಳವಡಿಸಲು ಸಾಧ್ಯವಿಲ್ಲ ಎಂಬ ಚರ್ಚೆಗಳು ಕೇಳಿಬರುತ್ತಿವೆ.

2) ಭಂಷಂಂತಂರಂ ಮತ್ತು ಕನ್ನಡ ಜಾಗತೀಕರಣ :
ವೇಗದ ಅನುವಾದ ಜಾಗತಿಕ ಸಾಹಿತ್ಯವನ್ನು ಕನ್ನಡಕ್ಕೆ ಮತ್ತು ಕನ್ನಡದ ಕೃತಿಗಳನ್ನು ಇತರ ಭಂಷಇಗಂಳಿಗೆ ಅನುವಾದಿಸಲು ಎಐ ತಂತ್ರಜ್ಞಾನವು (ಐಐಒ ಮಾದರಿಗಳು) ಅತ್ಯಂತ ವೇಗವಾಗಿ ಮತ್ತು ನಿಖರವಾಗಿ ಸಹಾಯ ಮಾಡುತ್ತಿದೆ.
• ಡಿಜಿಟಲ್ ಕಂಟೆಂಟ್ – ಅಂತರಜಾಲದಲ್ಲಿ ಕನ್ನಡ ಸಾಹಿತ್ಯದ ಲಭ್ಯತೆಯನ್ನು ಹೆಚ್ಚಿಸಲು ಎಐ ಆಧಾರಿತ ಕಂಟೆಂಟ್ ಜನರೇಟರ್‌ಗಳನ್ನು ಬಳಸಲಾಗುತ್ತಿದೆ.

3) ಸಾಹಿತ್ಯ ಸಂಶೋಧನೆ ಮತ್ತು ವಿಮರ್ಶೆ :
ದತ್ತಾಂಶ ವಿಶಇಜಂಷಂಣಇ – ಹಳೆಯ ಕನ್ನಡ ಕಾವ್ಯಗಳು, ಶಾಸನಗಳು ಮತ್ತು ಕೃತಿಗಳನ್ನು ವಿಶ್ಲೇಷಿಸಲು ಎಐ ಬಳಕೆಯಾಗುತ್ತಿದೆ, ಸಾಹಿತ್ಯ ವಿಮರ್ಶೆಯಲ್ಲಿ ಹೊಸ ಮಾದರಿಗಳನ್ನು ಗುರುತಿಸಲು ಇದು ಸಹಾಯಕಾರಿ.
ವಿಜಿಂಕ್ ಎಐ ಎಂಬ ಹೊಸ ಪರಿಕಲ್ಪನೆಯು ಸಾಹಿತ್ಯಿಕ ಸಂಶೋಧನೆಯಲ್ಲಿ ಸ್ವಯಂ ಚಾಲಿತ ಕಾರ್ಯಗಳನ್ನು ಮಾಡಲು ಸಹಾಯ ಮಾಡುತ್ತಿದೆ, ಇದು ಸಂಶೋಧಕ ಸಮಯವನ್ನು ಉಳಿಸುತ್ತದೆ.

4) ಭಂಷಇಯಂಂ ಪುನರ್ಜನ್ಮ ಡಿಜಿಟಲ್ ರೂಪ :
ತಾಂತ್ರಿಕ ಬಳಕೆ – ಎಐ ಮಾದರಿಗಳಲ್ಲಿ ಕನ್ನಡದ ಬಳಕೆಯನ್ನು ಹೆಚ್ಚಿಸುವುದು (ಬರೆಯುವುದು, ಮಾತನಾಡುವುದು) ಭಂಷಇಯಂಂ ಡಿಜಿಟಲ್ ಬೆಳವಣಿಗೆ ಮುಖ್ಯವಾಗಿದೆ.
ಸಿಂಥೆಟಿಕ್ ಇಂಟಲಿಜಿನ್ಸಿ – ಎಐ ಗಿಂತ ಮುಂದಿನ ತಂತ್ರಜ್ಞಾನ ಸಿಂಥೆಟಿಕ್ ಇಂಟಲಿಜಿನ್ಸಿ (ಖಐ) ಅಥವಾ ಸಂಯೋಜಿತ ಬುದ್ಧಿಮತ್ತೆಯಲ್ಲಿ ಕನ್ನಡದ ಡಿಜಿಟಲ್ ಸಂಶೋಧನಾರಂಗದಲ್ಲಿ ಹೊಸ ಸಂಚಲನ ಮೂಡಿಸುವ ಸಾಧ್ಯತೆಯಿದೆ.

5) ಸವಾಲುಗಳು :
ಎಐ ನಿಂದ ಸೃಷ್ಟಿಯಾದ ಸಾಹಿತ್ಯದ ಹಕ್ಕು ಸ್ವಾಮ್ಯ (ಅಠಿಥಿ ಘಾಡುಝಣ) ಯಾರಿಗೆ ಬೇಕು.
* ಮಾನವ ಕೌಶಲ್ಯ ಮತ್ತು ಎಐ ಸೃಜನಶೀಲತೆಯ ನಡುವಿನ ಸಮತೋಲನ ಒಟ್ಟಾರೆಯಾಗಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಹೊಸ ಆಶಾಕಿರಣವಾಗಿದೆ, ಆದರೆ ಅದರ ಬಳಕೆಯಲ್ಲಿ ಮಾನವನ ವಿವೇಚನೆ

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ಕಸ್ತೂರಿ ದಳವಾಯಿ. ಕನ್ನಡ ಸಹ ಪ್ರಾಧ್ಯಾಪಕರು ವಿಭಾಗದ ಮುಖ್ಯಸ್ಥರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ

How to cite this article:
ಡಾ. ಕಸ್ತೂರಿ ದಳವಾಯಿ *(2026). ಸಾಹಿತ್ಯದಲ್ಲಿ ಹೊಸ ಆಯಾಮ ಸೃಷ್ಟಿಸಿದ "ಎಐ" Journal of Research & Development, 18(5(IV)), 153–155. https://doi.org/10.5281/zenodo.20996184.*

Quick Response Code:
Website: https://jrdrvb.org/
DOI: 10.5281/zenodo.20996184
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ತುಂಬಾ ಮುಖ್ಯವಾಗಿದೆ.
ಪ್ರಸ್ತುತ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಇಂಜನೀಯರಿಂಗ್, ವೈದ್ಯಕೀಯ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಬಳಕೆ ಆಗುತ್ತಿದೆ, ಸಾಹಿತ್ಯ ಸೃಷ್ಟಿ, ಭಂಷಂಂತಂರಂದಂ: ಇದು ಹೊಸ ಆಯಾಮ ಸೃಷ್ಟಿಸುತ್ತಿದೆ ಎಂದು ಐಟಿ ಕಂಪನಿ ಮುಖ್ಯಸ್ಥ 'ಸಂಕೇತ ಪಾಟೀಲ' ಅಭಿಪ್ರಾಯ.
ಕೃತಕ ಬುದ್ಧಿಮತ್ತೆ ಸವಾಲು ಮತ್ತು ಅವಕಾಶ ತಾಂತ್ರಿಕ ಗೋಷ್ಠಿಯಲ್ಲಿ ಸಾಹಿತ್ಯ ಸೃಷ್ಟಿ ಮತ್ತು ಭಂಷಂಂತಂರಂ ಮೇಲೆ ಎಐ ಪ್ರಭಾವ ಕುರಿತು ಮಾತನಾಡಿದ ಅವರು "ಕೃತಕ ಬುದ್ಧಿಮತ್ತೆಯು" ಕವಿತೆಗಳನ್ನು ಮತ್ತು ಕಥೆಗಳನ್ನು ಬರೆಯಬಲ್ಲದು, ಆದರೆ ಮನಂಂಷಂಚಿ ಸಹಜವಾದ ನೋವು, ನಲಿವು ಮತ್ತು ಅನುಭವದ ಆಳ ತಂತ್ರಜ್ಞಾನ ತಂತ್ರಜ್ಞಾನಕ್ಕೆ ಅಸಾಧ್ಯ, ಎಐ ಕೇವಲ ದತ್ತಾಂಶಗಳನ್ನು ಸಂಸ್ಕರಿಸುತ್ತದೆ, ಉತಂಖಭಿಷಂಜಿ ಕವನ ಹಾಗೂ ಕಾದಂಬರಿ ಬರೆಯಲಾಗದು ಎಂದು ಹೇಳಬಹುದು.
"ಎಐ" ಶಿಕ್ಷಣ ಉದ್ಯೋಗ ಹಾಗೂ ಭವಿಷಂಚಿದಂ ಬದುಕು ಕುರಿತು ಸಂಚಯ ರಾಷ್ಟ್ರೀಯ ಸಾಹಿತ್ಯ ಡಿಜಟಲೀಕರಣ ಸಂಸ್ಥೆ ಸಂಚಾಲಕ, ಎಚ್.ಎಲ್. ಓಂಪ್ರಕಾಶ ಮಾತನಾಡಿ, ಕೃತಕ ಬುದ್ಧಿಮತ್ತೆಯಲ್ಲಿ ಕೇವಲ ತಂತ್ರಜ್ಞಾನವಾಗಿ ಉಳಿದಿಲ್ಲಾ, ಒಳ್ಳೆಯ ಹಾಗೂ ಕೆಟ್ಟ ಎರಡೂ ಕಾರ್ಯಗಳಿಗೂ ಎಐ ಬಳಸಲಾಗುತ್ತಿದೆ. ಆದರೆ ಈ ತಂತ್ರಜ್ಞಾನವನ್ನು ಸಮಾಜದ ಒಳತಿಗಾಗಿ ಇರಬೇಕೆಂದರು.
ಐಐಟಿ ಪ್ರೊ. ಎಸ್.ಎಂ. ಶಿವಪ್ರಸಾದ ಎಐ ಮಾನವ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಮಹತ್ವದ ಪರಿವರ್ತನೆ ತಂದಿದೆ. ಇದರಿಂದ ಉದ್ಯೋಗಾವಕಾಶ ನಶಿಸುವುದಿಲ್ಲಾ. ಆದರೆ ಉದ್ಯೋಗಗಳ ಸ್ವರೂಪ ಬದಲಾಗುವುದು ನಿತ್ಯ ಜೀವನದಲ್ಲಿ ಎಲ್ಲರು ಎಐ ಬಳಸುವುದನ್ನು ಕಲಿಯಬೇಕು, ಎಐ ತಾಂತ್ರಿಕ ಸಾಧನವು ಮಾನವ ಜೀವನದಲ್ಲಿ ಅನೇಕ ಬದಲಾವಣೆ ತರುತ್ತಿದೆ, ಅದರ ಮೂಲಕ ಸಮಾಜದಲ್ಲಿ ಪ್ರಗತಿ ತರಲು ಸಾಧ್ಯ.
ಕೃತಕ ಬುದ್ಧಿಮತ್ತೆ ಕನ್ನಡ ಸಾಹಿತ್ಯದ ನಡುವಿನ ಸಂಬಂಧವು ಪ್ರಸ್ತುತ ಹೊಸ ಆಯಾಮಗಳನ್ನು ಸೃಷ್ಟಿಸುತ್ತದೆ. 2026ರ ಹೊತ್ತಿಗೆ ತಂತ್ರಜ್ಞಾನವು ಕೇವಲ ಭಂಷಂಂತಂರಂದಂ ಸಾಧನವಾಗಿರದೆ ಸೃಜನಶೀಲ ಬರವಣಿಗೆಯಲ್ಲಿ ಹಸ್ತಕ್ಷೇಪ ಮಾಡುತ್ತಿದೆ.
* ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಎಲ್ಲವನ್ನು ಬದಲಾಯಿಸುತ್ತೆ ಎಂದು ಎಚ್ಚರಿಕೆ ಕೊಡಲಾಗುತ್ತದೆ, ಇನ್ನೂ ಕೆಲವೇ ವಂಷಂಜಗಂಳಲ್ಲಿ ಬಹುತೇಕ ಉದ್ಯೋಗಗಳನ್ನು ಎಐ ಕಸಿಯಲಿದೆ ಎಂಬ ಆತಂಕವು ಎದುರಾಗಿದೆ.
ಆದರೆ ಎಐ ಎಷಇಜಿಂ ಮುಂದುವರೆದರೂ ಪುಸ್ತಕಗಳನ್ನು ಬದಲಾಯಸಲು ಅದಕ್ಕೆ ಯಾವುದೇ ಅವಕಾಶವಿಲ್ಲಾ ಎಂದು ಉತ್ತರಖಂಡ ಮುಖ್ಯಮಂತ್ರಿ ಪಂಂಷಂಖರಂಸಿಂಗ್ ಧಾಮಿ ಹೇಳಿದ್ದಾರೆ. ಪುಸ್ತಕಗಳು ಕೇವಲ ಜ್ಞಾನದ ಮೂಲವೆಲ್ಲಾ ಅವು ಚಿಂತನೆ ತಿಳುವಳಿಕೆ ಮತ್ತು ಕಲಿಕೆಯ ಆಳವಾದ ಪ್ರಕ್ರಿಯೆ ಎಂದಿದ್ದಾರೆ. ಎಐ ಎಷಇಜಿಂ ಮುಂದುವರೆದರೂ ಪುಸ್ತಕಗಳನ್ನು ಬದಲಿಸಲು ಆಗಲ್ಲಾ ಈ ಸಾಂಸ್ಕೃತಿಕ ಸಂಪತ್ತು ಭವಿಷಂಚಿದಂ ಪೀಳಿಗೆಗೆ ಲಭ್ಯವಾಗುವಂತೆ ನೋಡಿಕೊಳ್ಳಲು ಸದರ ಸ್ಥಳೀಯ ಉಪ ಭಂಷಇಗಂಳ ಡಿಜಟಲೀಕರಣಕ್ಕೆ ಆದ್ಯತೆ ನೀಡುತ್ತದೆ.
ಇತಿಹಾಸ ಬರೆಯುವುದು ಸತ್ಯ, ದೃಷ್ಟಿಕೋನ ಮತ್ತು ಪ್ರಾಮಾಣಿಕತೆಯ ಅಗತ್ಯವಿರುವ ಗಂಭೀರ ಜವಾಬ್ದಾರಿ ಯಾವುದೇ ಸಂದರ್ಭದಲ್ಲಿ ಹೂಗುಚ್ಚದ ಬದಲಿಗೆ ಪುಸ್ತಕವನ್ನು ನೀಡಿ ಈ ಅಭ್ಯಾಸವು ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಉತ್ತೇಜಿಸುವುದು ಮಾತ್ರವಲ್ಲದೇ ಬರಹಗಾರರಿಗೆ ಸ್ಫೂರ್ತಿ ನೀಡುತ್ತದೆ.
ಭಂಷಇ, ಸಂಸ್ಕೃತಿ ಮತ್ತು ಪದ್ಧತಿಗಳು ಕೇವಲ ಅಭಿವ್ಯಕ್ತಿಯ ಸಾಧನೆಗಳೆಲ್ಲಾ ಅವು ನಮ್ಮ ಗುರುತು ಮತ್ತು ಪರಂಪರೆಯ ಅಡಿಪಾಯ ವಿದ್ಯಾರ್ಥಿಗಳು ಸ್ಥಳೀಯ ಭಂಷಇಗಂಳಲ್ಲಿ ಸಾಹಿತ್ಯ ಮತ್ತು ವಿಷಂಯಂಂವನ್ನು ಉತ್ತೇಜಿಸಲು ಬರವಣಿಗೆ ಹಾಡುಗಳು, ಸಂಶೋಧನೆ ಮತ್ತು ಡಿಜಿಟಲ್ ಸೇರಿದಂತೆ ಸ್ಥಳೀಯ ಭಂಷಇಗಂಳಲ್ಲಿ ವಿಷಂಯಂಂಗಂಳನ್ನು ಉತ್ಪಾದಿಸುವ ಯುವ ಕಂಟೆಂಟ್ ಕ್ರಿಯೇಟರಗಳನ್ನು ಪ್ರೋತ್ಸಾಹಿಸಲು ಸರಕಾರ ಮುಂದಾಗಿದೆ.

ಸಿನಿಮಾ ಸಾಹಿತ್ಯ ಮತ್ತು ಎಐ ಪ್ರಯೋಗ :

ಸಂಗೀತವು ಸಿನಿಮಾದ ಅವಿಭಾಜ್ಯ ಅಂಗ ಅದು ಕನ್ನಡ ಸಿನಿಮಾಕ್ಕೂ ಸಹ ಅನೇಕ ಚಲನಚಿತ್ರಗಳು ಹಾಡುಗಳಿಂದ ಪ್ರೇಕ್ಷಕರ ಮನಸೆಳೆದಿದೆ, ಇವು ಗೀತರಚನಕಾರರು ಸಂಯೋಜಕರು ಮತ್ತು ಗಾಯಕರು ಸೃಜನಶೀಲ ಸಹಯೋಗವಾಗಿದೆ.
ಇತ್ತೀಚಿನ ವಂಷಂಜಗಂಳಲ್ಲಿ ಎಲ್ಲಾ ಕ್ಷೇತ್ರಕ್ಕೂ ಕಾಲಿಡುವಂತೆ ಸಿನಿಮಾಗಳಲ್ಲಿ ಕೂಡಾ ಸಾಹಿತ್ಯ, ಸಂಗೀತ ಕ್ಷೇತ್ರಕ್ಕೂ ಕಾಲಿಟ್ಟಿದೆ.
ಕಡಿಮೆ ಬಜೆಟನ ಚಿತ್ರಗಳಲ್ಲಿ ಇತ್ತೀಚಿಗೆ ಸಾಹಿತ್ಯ ಬರೆಯಲು "ಎಐ" ನೆರವು ಬಳಸಲಾಗುತ್ತದೆ.
ನೀವು ಸಾಹಿತ್ಯವನ್ನು ಪಡೆದ ನಂತರ ಅದನ್ನು ನಿರೂಪಿಸಲು ಅದು ಸಾವಿರಾರು ರಾಗಗಳನ್ನು ನೀಡುತ್ತದೆ. ನಿಮಗೆ ಪಂಂರಂಂಷಂ ಅಥವಾ ಮಹಿಳಾ ಗಾಯಕರು ಬೇಕೇ ಎಂದು ಸಹ ಅದು ಕೇಳುತ್ತದೆ, ನೀವು ಬಟನ್ ಒತ್ತಿದಾಗ ಎಐ ಆಧಾರಿತ ಗಾಯಕರು ಎಐ ಚಾಲಿತ ಸಾಹಿತ್ಯದಿಂದ ಎಐ ಸಂಯೋಜಿತ ಸಂಗೀತದಿಂದ ಎಐ ಆಧಾರಿತ ಹಾಡನ್ನು ಹಾಡಿ ತೋರಿಸುತ್ತದೆ.
ಕನ್ನಡದ ಪ್ರಸಿದ್ಧ ಸಂಗೀತ ಸಂಯೋಜಕ, ನಟ ಮತ್ತು ನಿರ್ದೇಶಕ ವಿ. ಮನೋಹರ ಇದು ಟ್ರೆಂಡ್ ಹೀಗಿಯೇ ಮುಂದುವರೆದರೆ ಮುಂಬರುವ ದಿನಗಳಲ್ಲಿ ಗಾಯಕರು ಮತ್ತು ಸಂಗೀತಗಾರರಿಗೆ ಅವಕಾಶ ಕಡಿಮೆ ಮತ್ತು ಕೆಲಸವಿರುವುದಿಲ್ಲ. ಆದರೆ ಎಐ ಗಾಯನ ಸಂಗೀತ ಯಶಸ್ವಿಯಾಗದಿರಬಹುದು ಕೆಲವು ವಂಷಂಜಗಂಳ ಹಿಂದೆ ಡಬ್ಬಿಂಗಗೆ ಅವಕಾಶವಿತ್ತು ಜನರು ತಾವು ಇಷಂಜಿ\ಡುವ ಯಾವುದೇ ಭಂಷಇಯಂಂ: ಚಲನಚಿತ್ರಗಳನ್ನು ವೀಕ್ಷಿಸಬಹುದು.
ಆದರೆ ಮೂಲ ಭಂಷಇಯಂಂ: ಚಿತ್ರ ನೋಡಲು ಹೆಚ್ಚು ಇಷಂಜಿವಾಗುವುದರಿಂದ ಡಬ್ಬಿಂಗ್ ಎಲ್ಲರಿಗೂ ಹಿಡಿಸದೇ ಇರಬಹುದು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕನ್ನಡ ಸಾಹಿತ್ಯ ಬಿಕ್ಕಟ್ಟಿಗೆ ಸಿಲುಕಿ ಒಂದೊಮ್ಮೆ ಪ್ರತಿರೋಧ ಒಡ್ಡುತ್ತಿದ್ದ ಕನ್ನಡ ಸಾಹಿತ್ಯ ಇಂದು ಮೌನವಾಗಿದೆ. ಕನ್ನಡಿಗರೆಲ್ಲರು ವಿದ್ವಾಂಸರ ಚಿಂತನೆಯಾಗಿದೆ.

ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಏಟೆಂಟಿಕ್ ಎಐ ಹೊಸ ಪರಿಕಲ್ಪನೆ ಮಹತ್ವ ಪಡೆಯುತ್ತಿದೆ, ಮಧು ವೈ. ಎನ್. ಅವರ ಲೇಖನದಲ್ಲಿ ಏಟಿಂಟಿಕ್ ಎಐ ಎಂದರೇನು, ಅದು ಸಾಮಾನ್ಯ ಎಐಗಿಂತ ಹೇಗೆ ವಿಭಿನ್ನ ಮತ್ತು ಭವಿಷಂಚಿದಂ ಅದು ಹೇಗೆ ಕ್ಷೇತ್ರವನ್ನು ಬದಲಾಯಿಸಬಹುದು ಎಂಬುದನ್ನು ವಿವರಿಸಲಾಗಿದೆ.

ಕನ್ನಡದ ಬೆಳವಣಿಗಾಗಿ ಎಐ ಯನ್ನು ಬಳಸಲು ಹಮ್ಮಿಕೊಂಡಿರುವ ಯೋಜನೆಗಳು :

ಶಿಕ್ಷಣ ಮತ್ತು ಭಂಷಂ ಬಳಕೆಯಲ್ಲಿ ಉದ್ಯೋಗ ಹಾಗೂ ತಮ್ಮ ವೃತ್ತಿಗಳಲ್ಲಿ ಹಿಂದುಳಿದ ವರ್ಗದವರನ್ನು ಸೇರಿಸಿ ಎಲ್ಲರಿಗೂ ಸಮಾನಾವಕಾಶ ಮತ್ತು ಸೇರ್ಪಡೆ ಕಲ್ಪಿಸುವುದಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ವಿಶಇಂಷಂವಾಗಿ ವಿಕಲಚೇತನ ನಾಗರಿಕರಿಗೆ ಅದರಲ್ಲೂ ದೃಷ್ಟಿ ವಿಕಲಚೇತನರಿಗೆ ಜ್ಞಾನವನ್ನು ಸುಲಭವಾಗಿ ತಲುಪಿಸಲು ಎಐ ಚಾಲಿತ ಅಲೆಕ್ಸಾ ಸಹಾಯಕ ಸಾಧನಗಳನ್ನು ವಿತರಿಸಲಾಗುತ್ತಿದೆ, ಈ ಎಐ ಸಾಧನಗಳು ಅವರಿಗೆ ಮಾಹಿತಿಯನ್ನು ಧ್ವನಿಯ ಮೂಲಕ ಒದಗಿಸುತ್ತವೆ.

ತಂತ್ರಜ್ಞಾನವನ್ನು ಈಗಾಗಲೇ ಕರ್ನಾಟಕ ಸರಕಾರ ಆರು ಯೋಜನೆಗಳಲ್ಲಿ ಅಳವಡಿಸಿ ಎಐ ಶಿಕ್ಷಣ, ಉದ್ಯೋಗ ಹಾಗೂ ಭವಿಷಂಚಿದಂ ಬದುಕು ಕುರಿತು ಸಂಚಯ ರಾಷ್ಟ್ರೀಯ ಸಾಹಿತ್ಯ ಡಿಜಟಲೀಕರಣ ಸಂಸ್ಥೆ ಕೃತಕ ಬುದ್ಧಿಮತ್ತೆಯು ಕೇವಲ ತಂತ್ರಜ್ಞಾನವಾಗಿ ಉಳಿದಿಲ್ಲಾ, ಒಳ್ಳೆಯ ಹಾಗೂ ಕೆಟ್ಟ ಎರಡು ಕಾರ್ಯಗಳಿಗೆ ಎಐ ಬಳಸಲಾಗುತ್ತಿದೆ. ಸಾಹಿತ್ಯ ಹೊರತಾಗಿಲ್ಲಾ, ಈ ತಂತ್ರಜ್ಞಾನವನ್ನು ಸಮಾಜದ ಒಳತಿಗಾಗಿ ಬಳಸಬೇಕು.

ಎ) ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಧರ್ಮ ಪರಂಪರೆ.

ಬಿ) ವಚನ ಸಾಹಿತ್ಯ ಮತ್ತು ಪರಿಸರ ಚಿಂತನೆಗಳು.

ಸಿ) ತತ್ವಪದ ಸಾಹಿತ್ಯದಲ್ಲಿ ಮಾನವ ಜೀವನ ದರ್ಶನ.

ಡಿ) ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು.

ಇ) ಕನ್ನಡ ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆಯ ಪ್ರಭಾವ ಪ್ರೇರೇಣೆಗಳು.

ಎಫ್) ಎಐ ಮತ್ತು ಕಟ್ಟಡ ಸಾಹಿತ್ಯದ ಹೊಸ ಚಿಂತನೆಗಳು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ವಚನಕಾರರು ನಿರ್ವಚಿಸಿರುವ ಅಖಂಡ ಪರಿಸರ ಸ್ವಾಸ್ಥ್ಯ:ಎಲ್ಲ ಕಾಲದ ತುರ್ತು.

ಡಾ.ಯಶಸ್ವಿನಿ. ಆರ್
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.
Email:yashudhanvi25@gmail.com

Manuscript ID:
JRD -2026-180540
ISSN: 2230-9578
Volume 18
Issue 5(IV)
Pp. 156-159
April- 2026

Submitted: 21 Apr. 2026
Revised: 30 Apr.2026
Accepted: 16 May. 2026
Published: 31 May. 2026

ಮನುಷ್ಯನ ಅಸಹನೆ,ಅಹಮಿಕೆ,ಅತಿಯಾಸೆಗಳು ಎಲ್ಲ ಕಾಲದಲ್ಲಿಯೂ ಸಂಘರ್ಷಗಳನ್ನು ಸೃಷ್ಟಿಸಿವೆ.ಇವು ಮಾನವಲೋಕದ ಸಂಬಂಧಗಳನ್ನು ಕಂಗೆಡಿಸುವುದರ ಜೊತೆಗೆ ಇತರ ಸಹಜೀವಿಗಳನ್ನೂ,ಪರಿಸರವನ್ನೂ ಬಾಧಿಸಿವೆ ಎಂಬುದು ನಮಗೆ ತಿಳಿದಿರುವ ವಾಸ್ತವ. ಮನುಷ್ಯ ಇಂತಹ ಸಮಸ್ಯಾತ್ಮಕ ಗುಣಗಳನ್ನು ದಾಟುವ ಬಗೆ ಹೇಗೆ ?ಎಂಬ ಹುಡುಕಾಟದಲ್ಲಿ ವಚನಕಾರರು ಪ್ರತಿಪಾದಿಸುವ ಅಂತರಂಗ ಶುದ್ಧಿಯ ಪರಿಕಲ್ಪನೆ ಜೈವಿಕವಾಗಿ,ಸಾಮಾಜಿಕವಾಗಿ,ಧಾರ್ಮಿಕವಾಗಿ, ಆರ್ಥಿಕವಾಗಿ ಮತ್ತಿತರ ನೆಲೆಗಳಲ್ಲಿ ಮಾನವರು ಸಹಿಷ್ಣುತೆಯಿಂದ ಬಾಳುವ ಅಖಂಡ ಜೀವನಕ್ರಮವಾಗಿ ಕಂಡುಬರುತ್ತದೆ. ಮನುಷ್ಯ ತನ್ನ ಒಳ-ಹೊರಗಿನಲ್ಲಿ ಹೊಂದುವ ನುಡಿ ನಡೆಗಳು ಅವನ ಮತ್ತು ಸುತ್ತಲಿನ ಎಲ್ಲ ಜೀವ ವ್ಯವಸ್ಥೆ ಜೊತೆಗೇ ಆತನೇ ರೂಪಿಸಿಕೊಂಡಿರುವ ಹಲವು ವ್ಯವಸ್ಥೆಗಳನ್ನು ಪ್ರಭಾವಿಸಬಲ್ಲವು.ಈ ನಿಟ್ಟಿನಲ್ಲಿ ವಚನಕಾರರು ಪ್ರತಿಪಾದಿಸುವ ಪರಿಸರ ಸ್ವಾಸ್ಥ್ಯ ವಿಶಾಲಾರ್ಥದಲ್ಲಿ ಮನುಷ್ಯರ ಮನದ ಒಳಿತಿನ ಆಲೋಚನೆಯಲ್ಲಿ ಅಡಗಿರುವ ಎಲ್ಲ ಸಕಾರಾತ್ಮಕ ಅಂಶಗಳನ್ನೂ ಒಳಗೊಂಡು ಎಲ್ಲ ಕಾಲದ ತುರ್ತಾಗಿ ಕಾಣುತ್ತದೆ.

ಅಖಂಡ ಪರಿಸರದ ಕಾಳಜಿಯುಳ್ಳ ಅಭಿವ್ಯಕ್ತಿ:

ಇಂದು ಮನುಷ್ಯನೇ ಪರಿಸರದ ಕೇಂದ್ರ ಎಂಬ ಏಕಮುಖ ಧೋರಣೆ,ಭ್ರಮೆಯಲ್ಲಿ ಪ್ರಕೃತಿ ಸಹಜವಾಗಿಯೇ ತನ್ನೆಲ್ಲಾ ಜೀವಿಗಳಿಗೂ ನೀಡಿರುವ ಸ್ವಾತಂತ್ರ್ಯ, ಸಮಾನತೆಯು ಗೌಣವಾಗಿಬಿಟ್ಟಿದೆ. ವಿಕಾಸ,ಅಭಿವೃದ್ಧಿಯ ಹೆಸರಿನಲ್ಲಿ ಅನಾಹುತಗಳೇ ಎದುರಾಗುತ್ತಿವೆ.ಇವು ಪರಿಸರ ಅಸಮತೋಲನವನ್ನು ಹೇಗೆ ಸೃಷ್ಟಿಸಿವೆಯೋ ಹಾಗೆಯೇ ಮನುಷ್ಯರ ಬದುಕನ್ನೂ ವಿಭಜಿಸಿವೆ.ಸೇತುವೆಯ ಹಾಗೆ ಜೀವವ್ಯವಸ್ಥೆಯನ್ನು ಬೆಸೆದಿರುವ ಪ್ರಕೃತಿಯ ಮೇಲೂ ಅಸಹನೀಯ ಒತ್ತಡ ಬೀಳುತ್ತಿದೆ.ನಮ್ಮ ಕನ್ನಡ ಸಾಹಿತ್ಯ ಪರಂಪರೆ ಪ್ರಕೃತಿಯೊಂದಿಗೇ ಬೆಸೆದುಕೊಂಡಿರುವ ಬದುಕನ್ನು ಪ್ರೀತಿ,ಗೌರವದಿಂದ ಕಂಡಿದೆ.ನಂದಿಸೇನ ಪ್ರವರ ಮುನಿಗೆ ಸಂಬಂಧಿಸಿದಂತೆ ಇರುವ ಶ್ರವಣಬೆಳಗೊಳದ ಶಾಸನದಲ್ಲಿ ಉಲ್ಲೇಖವಾಗುವ ಕಾಮನಬಿಲ್ಲು, ಮಂಜು ವರ್ಣನೆಗಳು,ಪಂಪನಾದಿಯಾಗಿ ನವೋದಯ ಸಾಹಿತ್ಯದವರೆಗೆ ಪ್ರತಿಪಾದಿಸುವ ವಿಷಯ, ಉದ್ದೇಶಗಳೇನೇ ಇರಲಿ ಪರಿಸರವನ್ನು ತಮ್ಮ ಲೋಕಗ್ರಹಿಕೆಯ ಒಂದು ಮುಖ್ಯ ಭಾಗವಾಗಿಸಿಕೊಂಡಿವೆ.ವಚನಕಾರರ ಅಭಿವ್ಯಕ್ತಿಯಲ್ಲೂ ಪ್ರಕೃತಿ, ಪ್ರಾಣಿ,ಪಕ್ಷಿ ಲೋಕದ ಹಲಬಗೆಯ ವಿಚಾರಗಳು ಸೇರಿವೆ.ಅಕ್ಕ ವಚನಗಳಲ್ಲಿ ಗಿಳಿ,ಹಂಸ,ಪ್ರಾಣಿ, ಸಸ್ಯಜಗತ್ತಿನಲ್ಲಿ ಚನ್ನಮಲ್ಲಿಕಾರ್ಜುನನ ಸುಳಿವಿಗಾಗಿ ಆಕೆ ಹುಡುಕುವ,ಪರಿತಪಿಸುವ ಬಗೆ ಪ್ರಶಾಂತ ಸುಂದರ ಜಗತ್ತಿನಲ್ಲಿ ತನ್ನ ನಂಬಿಕೆಯ ನೆಲೆಯನ್ನು ಕಂಡುಕೊಳ್ಳುವುದು ಮತ್ತು ತನ್ನ ಜೊತೆಗೇ ಇರುವ ಮಾತಿಲ್ಲದ ಆದರೆ ಮಹತ್ವವಿರುವ ಜೀವಗಳನ್ನು ಗುರುತಿಸುವುದೂ ಆಗಿದೆ.

Quick Response Code:
Website:
https://jrdrvb.org/
DOI:
10.5281/zenodo.20996324
OPEN ACCESS

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ.ಯಶಸ್ವಿನಿ. ಆರ್ ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.

How to cite this article:
ಡಾ.ಯಶಸ್ವಿನಿ. ಆರ್ *(2026).* **ವಚನಕಾರರು ನಿರ್ವಚಿಸಿರುವ ಅಖಂಡ ಪರಿಸರ ಸ್ವಾಸ್ಥ್ಯ:ಎಲ್ಲ ಕಾಲದ ತುರ್ತು.** *Journal of Research & Development, 18(5(IV)), 156–159.*
https://doi.org/10.5281/zenodo.20996324

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಸಹಜೀವಿಗಳಲ್ಲಿ ಇರುವ ಸ್ನೇಹ,ಮುಗ್ಧತೆಯನ್ನು ಮರೆತು ನಡೆಯುವ ಮನುಷ್ಯರ ರೀತಿಯನ್ನು ಬಸವಣ್ಣನವರ ಈ ವಚನ ಮನಮುಟ್ಟಿಸುತ್ತದೆ.ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು, ಕೊಂದಹರು ಎಂಬುದನರಿಯದೇ ಬೆಂದೊಡಲ ಹೊರೆಯಹೋಯಿತ್ತು,ಕೊಂದವರುಳಿದರೇ ಕೂಡಲಸಂಗಮದೇವಾ ಎಂಬ ಪ್ರಶ್ನೆಯನ್ನು ಇಡುತ್ತದೆ. ಪ್ರಕೃತಿಯ ಸಕಲ ಜೀವಿಗಳಿಗೂ ಒಂದಿಲ್ಲೊಂದು ದಿನ ಸಾವು ನಿಶ್ಚಿತ ಆದರೆ ಈ ನಡುವಿನ ಮನುಷ್ಯ ಸಂಯಮದ ಬಾಳು ಬಸವಣ್ಣನವರಿಗೆ ಮುಖ್ಯವಾಗಿ ಕಂಡಿದೆ.ಅಲ್ಲಮಪ್ರಭುವಿನ ವಚನಗಳಲ್ಲಿಯೂ ಪ್ರಾಣಿ ಪಕ್ಷಿ ರೂಪಕಗಳು ಗಂಭೀರಾರ್ಥ ಪ್ರತಿಪಾದನೆಯ ಸಂಕೇತಗಳಾಗಿ ದುಡಿಯುತ್ತವೆ.ಹಂಸ ಆತ್ಮವನ್ನು ಸಂಕೇತಿಸುವ ರೀತಿ ಒಂದು ಸಣ್ಣ ಉದಾಹರಣೆ. ಚಂದ್ರ,ಸೂರ್ಯ,ನದಿ,ಬೆಟ್ಟ, ಸಮುದ್ರ,ನದಿ,ಕಾಡು,ಮೃಗ ಪಕ್ಷಿ,ಮಣ್ಣು,ಕದಳಿಯಿಂದ ಮೊದಲಾಗಿ ಅನೇಕ ಸಸ್ಯವರ್ಗ ಒಟ್ಟಂದದಲ್ಲಿ ಪರಿಸರದ ಒಳ -ಹೊರಗಿನ ಒಡಲೂ ಬೆರೆತ ನೋಟ,ವಿಚಾರ ಅನೇಕ ವಚನಕಾರರದ್ದು. ಸುತ್ತಲ ಪ್ರಕೃತಿಯನ್ನು, ಅದರ ರೀತಿ ನೀತಿಯನ್ನು ಸಂವೇದನಾಶೀಲವಾಗಿ ಗ್ರಹಿಸುವ ಮನಸ್ಸಿಗೆ ಪರಿಸರ ಕಾಳಜಿಯನ್ನು ಬದುಕಿನ ಅವಿಭಾಜ್ಯ ಜವಾಬ್ದಾರಿಯಾಗಿ ಸ್ವೀಕರಿಸಲು ಸಾಧ್ಯವಾಗುತ್ತದೆ.

ಮಾತು-ಮನಸ್ಸು-ನಡೆಯ ತ್ರಿವಿಧ ಸ್ವಾಸ್ಥ್ಯದ ಪರಿಸರ:

ಅಂತರಂಗ ಶುದ್ಧಿ ಬಹಿರಂಗದ ಪರಿಸರವನ್ನು ಪ್ರಭಾವಿಸಬಲ್ಲದು.ಮನಃಶುದ್ಧಿ ಸುಲಭವಲ್ಲ ಆದರೆ ಸಾಧ್ಯವಾಗಬಹುದಾದ ಪ್ರಯತ್ನ ಇದನ್ನು ತಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಪರಿಸರ ವಿಮರ್ಶೆಯೊಂದಿಗೆ ವಚನಕಾರರು ಪ್ರತಿಪಾದಿಸುತ್ತಲೇ ಬಂದವರು.ಲೋಕದ ಡೊಂಕ ನೀವೇಕೆ ತಿದ್ದುವಿರಿ?ಮೊದಲು ನಿಮ್ಮ ನಿಮ್ಮ ತನು, ಮನವನ್ನು ಸಂತೈಸಿಕೊಳ್ಳಿ ಎನ್ನುವ ಬಸವಣ್ಣ,ಕಳವು ಮಾಡದ,ಕೊಲ್ಲದ, ಅನ್ಯರಿಗೆ ಅಸಹ್ಯಪಡದ,ಮುನಿಯದ ತನ್ನನ್ನು ಮಾತ್ರ ಮುಖ್ಯವೆಂದುಕೊಳ್ಳದ ಸಹಿಷ್ಣುತೆಯೇ ಅಂತರಂಗ ಬಹಿರಂಗಗಳೆರಡರ ಶುದ್ಧಿ ಎಂದಿರುವರು. 'ಮನವೇ ಸರ್ಪ,ತನು ಹೇಳಿಗೆ;ಹಾವಿನೊಡತನ ಹುದುವಾಳಿಗೆ¡' ಎಂದು ಮನಸ್ಸನ್ನು ಹರಿವ ಸರ್ಪಕ್ಕೂ,ಅದನ್ನು ಹೊತ್ತ ದೇಹವನ್ನು ಹಾವಿನ ಬುಟ್ಟಿಗೂ ಹೋಲಿಸುವ ಬಸವಣ್ಣನವರು ಚಿತ್ತದ ಹಾದಿ ಹರಿದಂತೆಲ್ಲಾ ವಿಚಲಿತಗೊಳ್ಳುವ ಅಪಾಯವನ್ನು ಕುರಿತು ಎಚ್ಚರಿಸುತ್ತಾರೆ.ಕ್ಷಮೆ,ದಯೆ,ಶಾಂತಿ,ಸೈರಣೆಯಿರುವ ಮನವೇ ಪರಿಶುದ್ಧ, ಪರಿಮಳ ಎನ್ನುವರು ಅಕ್ಕಮಹಾದೇವಿ.ಕರಣಂಗಳ ಚೇಷ್ಟೆಗೆ ಮನವೇ ಮೂಲವೆಂಬುದೂ ಆಕೆಯ ನಿಲುವು. ಮನದ ಮಿತಿಗೆ ಇನ್ನೊಂದನ್ನು ದೂರುವ ಎಲ್ಲರಿಗೂ ಅಲ್ಲಮಪ್ರಭು ಹೆಣ್ಣು,ಹೊನ್ನು,ಮಣ್ಣು ಮಾಯೆಯಲ್ಲ ನಿಜಾರ್ಥದಲ್ಲಿ ಮನದ ಅತಿಯಾಸೆಯೇ ಎಲ್ಲ ನೋವುಗಳ ಮೂಲವೆಂದು ಗುರುತಿಸುತ್ತಾರೆ.ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ ?ಎಂದಿರುವರು ಆಯ್ದಕ್ಕಿ ಲಕ್ಕಮ್ಮ.ಹೆಣ್ಣಿನಾಸೆ,ಹೊನ್ನಿನಾಸೆ ,ಮಣ್ಣಿನಾಸೆ ಬಿಟ್ಟವನದು ಸತ್ಯದಮಾರ್ಗ ಎಂದಿದ್ದಾರೆ ಸಿದ್ಧರಾಮ.

ತನ್ನ ಕಾಯಕಕ್ಕೆ ತನು -ಮನವನ್ನು ಅರ್ಪಿಸಿದ ಜೀವಕ್ಕೆ ಸ್ವತಃ ಆತ ನೆಚ್ಚುವ ದೇವರ ಹಂಗೂ ಇಲ್ಲ,ಸಮಚಿತ್ತವನ್ನು ಕಾಯ್ದುಕೊಂಡು ಬದುಕು ಸವೆಸಬೇಕಾದ ಅನಿವಾರ್ಯತೆಯನ್ನು ಆನಂದದಿಂದಲೇ ಸ್ವೀಕರಿಸಬೇಕೆಂಬ ನಿಲುವು,ನಮ್ಮ ಬದುಕಿನ ಹೊಣೆ ಹೊರೆಯನ್ನು ನಾವು ಹೊರಬೇಕು ಎಂಬ ವಿಚಾರ ಲದ್ದೆಯ ಸೋಮಣ್ಣನದು.

"ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು
ಒಕ್ಕುದ ಹಾರೈಸಿ,ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು,ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಯಿ,ಇದಕ್ಕಾ ದೇವರ ಹಂಗೇಕೆ

ಭಾಪು ಲದ್ದೆಯ ಸೋಮಾ.೧

ಮನುಷ್ಯ ಮನಸ್ಸಿನ ವಿವೇಕವನ್ನು ಮರೆಸುವ ಸೆಳೆತಗಳನ್ನು ವಚನಕಾರರು ಗುರುತಿಸಿಕೊಳ್ಳುತ್ತಲೇ ಚಿತ್ತ ಸ್ವಾಸ್ಥ್ಯದ ಅಂತರಂಗದ ಪರಿಸರ ಮಾತು,ಕೃತಿಗಳಲ್ಲಿ ಪ್ರತಿಫಲಿತವಾಗುವುದನ್ನು ಕಂಡುಕೊಂಡವರು.ಮಾತು,ಮನಸ್ಸು,ನಡೆಯ ಸಾಮರಸ್ಯ ಬದುಕನ್ನು ಸುಧಾರಿಸಬಲ್ಲುದು

ಸ್ವಸ್ಥ ರಾಜಕೀಯ ಪರಿಸರ:

ಆಳುವ-ಆಳಿಸಿಕೊಳ್ಳುವ ಸಂಬಂಧಾಂತರದಲ್ಲಿ ಒಂದು ಆರೋಗ್ಯಕರ ಜಾಗೃತಿ ಅಪೇಕ್ಷಣೀಯ.ಆದರೆ ಆಳುವವರ ಸಂಗ್ರಹಪ್ರಿಯ ಮನಸ್ಸು,ಅಧಿಕಾರ ಸುಖ ಸೌಲಭ್ಯಗಳು ಶಾಶ್ವತವೆಂಬ ಭ್ರಮೆ ವ್ಯವಸ್ಥೆಯ ಹದವನ್ನು ಕೆಡಿಸಿಬಿಡುತ್ತವೆ." ರಾಜರಿಗೆ ದರ್ಪಬಂದರೆ ಪ್ರಜೆಗಳಿಗೆ ದುಃಖ ಹೆಚ್ಚುವುದು, ಧರ್ಮವಿಲ್ಲದ ಅಧಿಕಾರ ನೆರಳಿಲ್ಲದ ಮರದಂತೆ" ಅಂದಿರುವ ಚೆನ್ನಬಸವಣ್ಣ.ಪಟ್ಟ,ರಾಜ್ಯ,ವೈಭವ ಮಣ್ಣಾಗುವಾಗ ಚನ್ನಮಲ್ಲಿಕಾರ್ಜುನನ ದಾಸ್ಯವೇ ತನಗೆ ಸರ್ವ ಸುಖ ಅಂದುಕೊಂಡ ಅಕ್ಕಮಹಾದೇವಿಯವರ ವಚನವೊಂದು ಹೀಗಿದೆ:

"ಆವ ವಿದ್ಯೆಯ ಕಲಿತಡೇನು
ಸಾವ ವಿದ್ಯೆ ಬೆನ್ನಬಿಡದು
ಅಶನವ ತೊರೆದಡೇನು
ವ್ಯಸನವ ಮರೆದಡೇನು
ಉಸುರ ಹಿಡಿದಡೇನು
ಬಸುರ ಕಟ್ಟಿದಡೇನು
ಚೆನ್ನಮಲ್ಲಿಕಾರ್ಜುನದೇವಯ್ಯಾ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು"೨

ಏನ ಗಳಿಸಿದರೂ ತೊರೆದು ಹೊರಡಬೇಕಾದ ಮಿತಿಯಿದೆ,ನಾವು ನಿಂತ ನೆಲವೆಲ್ಲಾ ಎಚ್ಚರದ ಕಣ್ಣು ನಮ್ಮನ್ನು ಗಮನಿಸುವ ಶಕ್ತಿ ಎಂಬರಿವು ಮೂಡಿದರೆ ಕಾಯಕದಲ್ಲಿ ಕದಿಯಲಾರರು, ದೊರೆತ ಯಾವುದೇ ಅವಕಾಶವನ್ನು ದುರ್ಬಳಕೆ ಮಾಡಲಾರರು.

ಕೆಲವೊಮ್ಮೆ ಇಟ್ಟ ನಂಬಿಕೆ, ಕೊಟ್ಟ ಮಹತ್ವಗಳೂ ಸಂದರ್ಭಾನುಸಾರ,ಅನುಕೂಲಸಿಂಧುವಾಗಿ ಬದಲಾಗಿಬಿಡುತ್ತವೆ. ಇದು ಮನುಷ್ಯ ಜಗತ್ತಿನಲ್ಲಿ ಆಗುವಂತಹುದೇ, ಇಲ್ಲಿ ದೊರೆತ ಮಹತ್ವವೇನೂ ಶಾಶ್ವತವಲ್ಲ,ಜನರೇ ಪೂಜಿಸುವ ದೇವರ ಬಗೆಗೇ ಅವರ ಮನ ದೃಢವಲ್ಲ.

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು
ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರು ಬೀದಿಯ ದೂಳ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ
ಕೂಡಲಸಂಗಮದೇವಾ
ವಂದನೆಯ ಮರೆದು ನಿಂದಿಸುತ್ತಿದ್ದರು.೩

ಬಸವಣ್ಣ ನವರು ರಾಜನೆನಿಸಿಕೊಂಡವನ ಬಾಳೂ ಕೊನೆಮುಟ್ಟಿದಾಗ ನಿಜದ ನೆಲೆ ಕಾಣುವ ಬಗೆಯನ್ನು ಅತ್ಯಂತ ಸೂಕ್ಷ್ಮವಾಗಿ ವಿವೇಚಿಸಿದ್ದಾರೆ.

"ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರರಯ್ಯಾ ನೆಲನಾಳ್ವನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲಾ ನೋಡಯ್ಯಾ" ಎನ್ನುವ ಮೂಲಕ ಬಸವಣ್ಣ ಅಧಿಕಾರ ಮತ್ತದರ ಮೌಲ್ಯ ಕಾಲಮಿತಿಗೆ ಒಳಪಡುವಂತಹುದು,ಇದ್ದಾಗ ಮೆರೆಯುವವರು ಮರೆಯಬಾರದು ಈ ಎಲ್ಲದರ ಆಚೆಗೆ ವಿವೇಕವನ್ನು ಕಾಯ್ದುಕೊಳ್ಳುವುದು ಮುಖ್ಯವೆಂದು. ಅಶಾಶ್ವತ ಅಧಿಕಾರವೆಂದರಿತೂ ಬಲ-ಬಲಾತ್ಕಾರ, ಹಿಂಸೆ ಅಹಂಕಾರ,ಅತ್ಯಾಸೆಗಳಲ್ಲಿ ಮುಳುಗಿರುವ ಎಲ್ಲ ಕಾಲದ ಆಡಳಿತಕ್ಕೆ ವಚನಕಾರರ ಅಧಿಕಾರ ಮಹತ್ವ ನಿರಾಕರಣೆಯೇ ದಿಟ್ಟ ಉತ್ತರ. ಜನರ ಬದುಕನ್ನು ಎಲ್ಲ ನೆಲೆಯಲ್ಲೂ ಪ್ರಭಾವಿಸುವ ರಾಜ್ಯ-ಅಧಿಕಾರದ ಪರಿಸರ ಧರ್ಮ,ವಿವೇಕ,ಜವಾಬ್ದಾರಿಯನ್ನು ಒಳಗೊಳ್ಳುವುದು ವಚನಕಾರರಿಗೆ ಮುಖ್ಯವೆನಿಸಿದೆ.

ಅರಿವು-ವೈಚಾರಿಕ ಸ್ವಾಸ್ಥ್ಯಕ್ಕೆ ಮಹತ್ವ:

ಅರಿವು ಶಾಸ್ತ್ರಬದ್ಧ,ಪ್ರಮಾಣಸಿದ್ಧ ಸ್ವರೂಪದ್ದಲ್ಲ.ಅದರ ಅನುಭೂತಿ ಒಂದು ಅವಿರತ ಧ್ಯಾನ,ಬರಿಯ ಮಾತಲ್ಲ, ಮುಖವಾಡವಲ್ಲ, ಅದೊಂದು ನಿರಂತರ ಹುಡುಕಾಟ ವಚನಕಾರರಿಗೆ.

"ಅಜ್ಞಾನವೆಂಬ ತೊಟ್ಟಿಲೊಳಗೆ
ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದಶಾಸ್ತ್ರವೆಂಬ ನೇಣಕಟ್ಟಿ
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ
ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು ನೇಣು ಹರಿದು
ಜೋಗುಳ ನಿಂದಲ್ಲದೆ
ಗುಹೇಶ್ವರ ಲಿಂಗವ ಕಾಣಬಾರದು".೪

ಅಲ್ಲಮನ ಈ ವಚನದಲ್ಲಿ ಶಿಶುವನ್ನು ಸ್ವತಂತ್ರ ಕಲಿಕೆಯ ಅವಕಾಶವನ್ನು ಹೊತ್ತ ಜೀವವಾಗಿ ಕಂಡರೆ ಸುತ್ತಲೂ ತುಂಬಿದ ಅಜ್ಞಾನ,ಈಗಾಗಲೇ ಸಿದ್ಧಮಾದರಿ ಗಳಲ್ಲಿ ನಿಂತಿರುವ ಒಂದು ನೆಲೆಯ ವಿಚಾರಗಳನ್ನೇ ಮತ್ತೆ ಮತ್ತೆ ಮನತುಂಬುವ ಪ್ರಯತ್ನ ಜೋಗುಳವಿದ್ದಂತೆ, ಕೇಳುವ ಮಗು ನಿದ್ದೆಗೆ ಜಾರುವಂತೆ,ಮತ್ತೆ ಮತ್ತೆ ಅದೇ ಜ್ಞಾನದ ಹೇರಿಕೆಗೆ ಒಳಗಾದವ ತನ್ನ ಒಳಗನ್ನು ಕಂಡುಕೊಳ್ಳಲಾರ.ಅರಿವು ಸಾಮಾನ್ಯವಲ್ಲ.ಕುರುಹುಗಳಲ್ಲಿ ಕಾಣುವುದಲ್ಲ,ಚರ್ವಿತ ಚರ್ವಣವೆಂಬಂತಲ್ಲ."ಅರಿದೊಡೆ ಶರಣ,ಮರೆದೊಡೆ ಮಾನವ"ಎನ್ನುವ ಉರಿಲಿಂಗದೇವ.ಅರಿವಿನಲ್ಲೇ ಗುರು,ಲಿಂಗ,ಜಂಗಮವನ್ನು ಕಾಣುವ ಬಸವಣ್ಣನವರು,"ತನ್ನ ತಾನರಿದವಂಗೆ ಅರಿವೇ ಗುರು" ಎಂಬುದನ್ನು ಪ್ರತಿಪಾದಿಸಿದ ಮುಕ್ತಾಯಕ್ಕ,"ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ,ಕಾಮಿನಿ ನಿನ್ನವಳಲ್ಲ,ಅವು ಜಗಕ್ಕಿಕ್ಕಿದ ವಿಧಿ.ನಿನ್ನ ಒಡವೆ ಎಂಬುದು ಜ್ಞಾನರತ್ನ ಎನ್ನುವ ಅಲ್ಲಮಪ್ರಭುಗಳು ಅರಿವೆಂಬ ಬೆಳಕು ಪಸರಿಸುವ ವಿವಿಧ ನೆಲೆಗಳನ್ನು ಶೋಧಿಸಿದವರು.ಅರಿವು ಒಳಗಿನಿಂದ ಸ್ವ ಪ್ರಕಾಶದಂತೆ ಹೊಳೆದು ಬಂದಲ್ಲಿ,ಸದಾ ಚಲನಶೀಲ, ನಾವೀನ್ಯತೆಯ ಜೊತೆ ನಿಲ್ಲುವಲ್ಲಿ ಒಂದು ಸಾರ್ಥಕ ಅನುಭವವಿರುತ್ತದೆ ಎಂದು ಭಾವಿಸಲಾಗಿದೆ.ಅರಿವಿನ ಸ್ವಸ್ಥತೆ ಎಲ್ಲರ ಇರವಿನ ಸ್ವಸ್ಥತೆಯನ್ನು ಕಾಯಬಲ್ಲುದು.

ಅಸಂಗ್ರಹ ತತ್ವ:ಆರ್ಥಿಕ ಪರಿಸರದಲ್ಲಿ ಸ್ವಸ್ಥ ಮನದ ಅಗತ್ಯತೆಯ ಪ್ರತಿಪಾದನೆ

ಸಂಪತ್ತು,ಸೌಲಭ್ಯಗಳನ್ನು ಅನುಭವಿಸುವ ವ್ಯಕ್ತಿ ತಾನು ಅಳಿದರೂ ತನ್ನ ಕಿರಿಯ ಪೀಳಿಗೆಗಳೂ ಅನುಭವಿಸಲಿ ಎಂಬಾಸೆಯಲ್ಲಿ ಕೂಡಿಡುತ್ತಲೇ ಸಾಗುವ ಅನರ್ಥ ಮಾರ್ಗ ಶರಣಧರ್ಮಕ್ಕೆ ಹೊಂದುವುದಿಲ್ಲ.ಮನುಷ್ಯರಲ್ಲಿ ಸಮಾನತೆಯ ಸೇತುವೆಗಳನ್ನು ಕಟ್ಟಬಯಸಿದ ಶರಣರು ದಾಸೋಹ,ಕಾಯಕ,ದೃಢ ಭಕ್ತಿಯಲ್ಲಿ ನಂಬಿಕೆ ಇಟ್ಟವರು. "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ,ನಾಳೆಂಗೆ ಬೇಕೆಂದೆನಾದಡೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ"ಎಂದಿರುವ ಬಸವಣ್ಣ ತನ್ನ ಕಾಲಕ್ಕೆ ಒಂದು ದೊಡ್ಡ ಸಮಾಜಮುಖಿ ಮೌಲ್ಯವನ್ನು ಸಮರ್ಥಿಸಿದವರು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

'ಈಸಕ್ಕಿಯಾಸೆ ನಮಗೇಕೆ?' ಎಂಬ ಪ್ರಶ್ನೆಯಿಡುವ ಆಯ್ದಕ್ಕಿ ಲಕ್ಕಮ್ಮ ಅಂದಂದಿನ ಬದುಕನ್ನು ನಂಬಿದವರು,ತನ್ನಂತೆ ಪರರ ಬಗೆದವರು.

ಕಾಲದ ಕರೆಗೆ ಓಗೊಡಬೇಕಾದ ಮನುಷ್ಯರು ತಮ್ಮ ಸುತ್ತಲಿನ ವೇದನೆ,ಸಂಕಟಗಳ ಜೊತೆಗೆ ಕಿವುಡಾಗಿ, ಕುರುಡಾಗಿ ಬದುಕುವ ಬದಲು ಇದ್ದಷ್ಟು ಕಾಲ ಅಸ್ಥಿರ ಬದುಕಿಗಾಗಿ ಬಡಿದಾಟವನ್ನು ಬದಿಗಿಡಬೇಕು ಎಂಬ ನಂಬಿಕೆಯ ಬದುಕು ಶರಣರದ್ದು.ಇದು ಎಂದೂ ನಾವು ನೆನಪಿಡಬೇಕಾದ ಜೀವನಕ್ರಮ.ವ್ಯಕ್ತಿಯಿಂದ ವಿಶ್ವದವರೆಗೆ ಸಿಗುವ ಸಂಪತ್ತೆನ್ನೆಲ್ಲಾ ಸೂರೆಗೊಳ್ಳಬೇಕು,ಸಂಗ್ರಹಿಸಿಬಿಡಬೇಕು ಎಂಬ ದುರಾಸೆ ವ್ಯಾಪಿಸುತ್ತಿರುವ ದಿನಮಾನಗಳಲ್ಲಿ ಶರಣ ಧರ್ಮ ರೂಪಿಸಿದ ಈ ಆರೋಗ್ಯಕರ ಆರ್ಥಿಕ ಪರಿಸರ ಒಂದು ಮಾದರಿ.

ವ್ಯಕ್ತಿ,ಪ್ರಕೃತಿ,ಸಮಾಜ,ಧರ್ಮ ,ಭಕ್ತಿ,ಅರಿವು ,ಆಚಾರ,ಅರ್ಥ,ಆಳ್ವಿಕೆ ನಂಬಿಕೆ,ಧ್ಯಾನ ಹೀಗೆ ಹಲಬಗೆಯ ಅಖಂಡ ಪರಿಸರದ ಆಯಾಮಗಳಲ್ಲಿ ವಿಚಾರ ಮಥನ ಮಾಡಿದವರು ವಚನಕಾರರು.ಈ ಪರಿಸರದ ಅಖಂಡತೆಯಲ್ಲಿ ಲೋಕವನ್ನು ಗ್ರಹಿಸುವ ಅವರ ಪ್ರಯತ್ನ ಮಹತ್ವದ್ದು.ಅಂದಂದಿನ ತುರ್ತುಗಳಿಗೆ ಬಿಡಿಯಾಗಿ ಬದುಕನ್ನು ಒಡೆದುನೋಡುವ ಯಾವುದೇ ಧಾವಂತಕ್ಕೆ ಇವರ ಸಾವಧಾನ,ಅಂತಃಕರಣಗಳು ದೂರ ನಿಲ್ಲುತ್ತವೆ.

ವಿಷಮ ಪರಿಸರವನ್ನು ಖಂಡಿಸಿ,ಎಲ್ಲ ನೆಲೆಯ ಮನುಷ್ಯರು ಮತ್ತವರ ವಿಚಾರಗಳನ್ನು ಸಹಿಷ್ಣುತೆಯಿಂದ ಕಂಡು ಭಕ್ತಿಯ ಮುಖ್ಯಮಾರ್ಗದಲ್ಲಿ ಅವರು ಸುಧಾರಿಸಲು ಯತ್ನಿಸಿದ ವ್ಯವಸ್ಥೆ ಜೀವಪರವಾದುದು.ಅರಿವು ಆಚಾರವು ಹದಗೆಟ್ಟ ದಿನಗಳಲ್ಲಿ ,ಅಧಿಕಾರ ಲಾಲಸೆ,ಬಲಪ್ರಯೋಗದ ಮೇಲಾಟಗಳನ್ನು ಕಾಣುತ್ತಿರುವ ಸಂದರ್ಭದಲ್ಲಿ,ನೆಲೆ ನಿಂತ ನೆಲವನ್ನೇ ಮರೆತ ಹುಂಬ ಧೋರಣೆಗಳು ಬಲಿಯುತ್ತಿರುವ ದಿನಗಳಲ್ಲಿ ನಮ್ಮ ಸಂವೇದನೆಗಳನ್ನು ಸೂಕ್ಷ್ಮಗೊಳಿಸಿಕೊಳ್ಳಬಹುದಾದ ಓದಿನ ಆಯ್ಕೆಗಳಲ್ಲಿ ವಚನ ವಿಚಾರಗಳು ಮುಖ್ಯವಾಗುತ್ತವೆ.

ಅಂತಃಕರಣ ಶುದ್ಧಿಯ ಮನುಷ್ಯ ಸಂಬಂಧಗಳನ್ನು ಒಳಗೊಂಡ,ಕಾಯಕವನ್ನು ದೇವರೆಂದು ಅಥವಾ ಕಾಯಕದ ಅರಿವು,ನಿಷ್ಠೆಯ ಆಚಾರವೇ ದೇವರನ್ನು ಕಂಡುಕೊಳ್ಳುವ ಮಾರ್ಗವೆಂದು ಸೃಷ್ಟಿಯ ಅಖಂಡ ಲಯವನ್ನು ಗೌರವ,ಶ್ರದ್ಧೆ ಪ್ರೀತಿಗಳಿಂದ ಕಂಡ ವಚನ ಪರಿಸರ ದರ್ಶನ ನಮ್ಮ ಇಂದಿನ ತುರ್ತಾಗಿ ಕಾಣುತ್ತದೆ.

ಕೊನೆಟಿಪ್ಪಣಿ:

೧.ರಂಜಾನ್ ದರ್ಗಾ,ವಚನ ಬೆಳಕು,ಪು.ಸಂ.15

೨.ಓ.ಎಲ್.ನಾಗಭೂಷಣಸ್ವಾಮಿ,ವಚನ ಸಾವಿರ,ಪು.ಸಂ.45

೩. ರಂಜಾನ್ ದರ್ಗಾ,ವಚನ ಬೆಳಕು,ಪು.ಸಂ.49.

೪.ಡಾ.ಎಲ್.ಬಸವರಾಜು,ಅಲ್ಲಮನ ವಚನಚಂದ್ರಿಕೆ,ಪು.ವ.ಸಂ.460

ಪರಾಮರ್ಶನ:

1.ಡಾ.ಚೇತನಸೋಮೇಶ್ವರ(2015),ಮಾನವ್ಯ,
ಆಕೃತಿ ಆಶಯ ಪಬ್ಲಿಕೇಷನ್ಸ್,ಮಂಗಳೂರು.

2.ರಂಜಾನ್ ದರ್ಗಾ(2018),ವಚನ ಬೆಳಕು,ಲಡಾಯಿ ಪ್ರಕಾಶನ,ಗದಗ.

3.ಓ.ಎಲ್.ನಾಗಭೂಷಣಸ್ವಾಮಿ(2004),ವಚನಸಾವಿರ,ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ.

4.ಡಾ.ಎಲ್.ಬಸವರಾಜು (2014),ಅಲ್ಲಮನ ವಚನಚಂದ್ರಿಕೆ,ಅಭಿಮಾನಿ ಪ್ರಕಾಶನ,ಬೆಂಗಳೂರು.

5.ಗಿರಡ್ಡಿ ಗೋವಿಂದರಾಜ(1997),ವಚನ ವಿನ್ಯಾಸ, ಮನೋಹರ ಗ್ರಂಥ ಮಾಲಾ,ಧಾರವಾಡ.

6.ಸಂ.ಡಾ.ಸಿ.ಬಿ.ಹೊನ್ನುಸಿದ್ಧಾರ್ಥ(1976),ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ(ಪರಿಷ್ಕೃತ ಆವೃತ್ತಿ)ಸಂಪುಟ-೩,ಭಾಗ-೧,ಕನ್ನಡಅಧ್ಯಯನಕೇಂದ್ರ,ಬೆಂಗಳೂರು ವಿಶ್ವವಿದ್ಯಾಲಯ,ಜ್ಞಾನಭಾರತಿ, ಬೆಂಗಳೂರು.

7.ಡಾ. ಎಂ.ಎಂ.ಕಲಬುರ್ಗಿ(1993),ಬಸವಣ್ಣನವರ ಸಮಗ್ರ ವಚನಗಳು, ಸಂ.೧,ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಧರ್ಮ ಪರಂಪರೆ

ಭಾರತಿ ಎಸ್.ಎನ್,
ನೋಂದಣಿ ಸಂಖ್ಯೆ; 2022ಏಂ004
ಪಿಎಚ್ ಡಿ. ಸಂಶೋಧನಾ ವಿದ್ಯಾರ್ಥಿ,
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

Manuscript ID:
JRD -2026-180541
ISSN: 2230-9578
Volume 18
Issue 5(IV)
Pp. 160-162
April- 2026
Submitted: 19 Apr. 2026
Revised: 30 Apr.2026
Accepted: 17 May. 2026
Published: 31 May. 2026

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಧರ್ಮವನ್ನು ವಸ್ತುವಾಗಿಸಿಕೊಂಡು ಅದಕ್ಕೆ ಮೊದಲ ಆದ್ಯತೆ ಕೊಟ್ಟು ಕಾವ್ಯ ರಚಿಸಿರುವುದು ನಮಗೆ ತಿಳಿದಿರುವ ಸಂಗತಿ. ಪಂಪ ರನ್ನರು ಜೈನಧರ್ಮಕ್ಕೆ ಸೇರಿದವರೆಂದೂ, ವಚನಕಾರರು ವೀರಶೈವಧರ್ಮಕ್ಕೆ ಸೇರಿದವರೆಂದೂ, ಕುಮಾರವ್ಯಾಸನು ವೈಧಿಕ ಧರ್ಮದ ಆರಾಧಕನೆಂದೂ ಗುರುತಿಸಲಾಗಿದೆ. ಇಂದಿನ ಸಂದರ್ಭದಲ್ಲಿ ಧರ್ಮ ಮತ್ತು ಧಾರ್ಮಿಕತೆಗಳು ಒಂದೇ ಎಂದು ಹೇಳಲಾಗುವುದಿಲ್ಲ. ಧರ್ಮವು ಒಂದು ಸಂಸ್ಥೆಯಾಗಿ, ಸಂಘಟನೆಯಾಗಿ ಬೆಳೆಯುತ್ತಾ ಬಂದಿದೆ. ಆದರೆ ಅಂತಹ ಸಂಸ್ಥೆಯಲ್ಲಿ ಧಾರ್ಮಿಕತೆ ಕಡಿಮೆ ಆಗುತ್ತಿದೆ. ಧಾರ್ಮಿಕತೆ ಎನ್ನುವುದು ಒಂದು ಮನೋಧರ್ಮವಾಗಿದ್ದು ಜನಮಾನಸದಲ್ಲಿ ಜಡ್ಡುಗಟ್ಟಿದ ಧರ್ಮವನ್ನು ಸೃಜನಶೀಲತೆಯ ಮೂಲಮಂತ್ರದಿಂದ ಸಂವೇದನೆಯ ಭಾಗವಾಗಿ ಅನಾವರಣಗೊಳಿಸಬೇಕಾಗಿದೆ. ದೇವರ ಬಗೆಗಿನ ಕಲ್ಪನೆಯೇ ಬೇರೆ ರೀತಿಯಲ್ಲಿ ದುರ್ಬಳಕೆಯಾಗುತ್ತಿರುವ ಈ ಸನ್ನಿವೇಶದಲ್ಲಿ ಬೌದ್ಧಧರ್ಮ ಬಹಳ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ. ಆದರೆ ಜೈನಧರ್ಮ ದೇವರ ಬಗೆಗೆ ಏನೂ ಹೇಳುವುದಿಲ್ಲ ಎಂಬುದನ್ನು ಈ ಹಿಂದಿನ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಜೈನಧರ್ಮವು ನಮ್ಮ ಕಾವ್ಯಗಳಲ್ಲಿ ತೀರ್ಥಂಕರರ ಸ್ಥಿತಿಯನ್ನು ತೋರಿಸಿತೇ ವಿನಾ ದೇವರ ಸಾಕ್ಷಾತ್ಕಾರವನ್ನು ತೋರಿಸಲಿಲ್ಲ. ಅದೇ ರೀತಿ ವಡ್ಡಾರಾಧನೆ, ಆದಿಪುರಾಣ, ಅಜಿತತೀರ್ಥಂಕರ ಪುರಾಣ, ಯಶೋಧರ ಚರಿತೆ, ಮುಂತಾದ ಕಾವ್ಯಗಳೂ ಜೈನಧರ್ಮವನ್ನು ವಸ್ತುವಾಗಿಸಿಕೊಂಡು ರಚನೆಯಾಗಿದ್ದು, ಇಲ್ಲಿ ದೈವಸಾಕ್ಷಾತ್ಕಾರಕ್ಕೆ ಬದಲಾಗಿ ಆತ್ಮಶುದ್ಧಿ, ಅಹಿಂಸೆಗಳನ್ನು ಪ್ರತಿಪಾದಿಸಿದವು.

ನಮ್ಮ ಕನ್ನಡ ಸಾಹಿತ್ಯಕ್ಕೆ ಬಹುದುಡ್ಡ ಮಹಾಕಾವ್ಯ ಪರಂಪರೆ ಇದೆ. ಅದರಂತೆ ಪ್ರಾಚೀನ ಕನ್ನಡ ಸಾಹಿತ್ಯದ ಬಹುಪಾಲು ಕೃತಿಗಳು ಮಹಾಕಾವ್ಯಗಳೇ ಆಗಿದ್ದು, ಪಂಪ, ರನ್ನ, ಕುಮಾರವ್ಯಾಸರಷ್ಟೇ ಅಲ್ಲದೆ ಇಡೀ ವಚನ ಪರಂಪರೆಯನ್ನೇ ಒಂದು ಮಹಾಕಾವ್ಯ ಎನ್ನಲಾಗಿದೆ. ನಮ್ಮ ಹಿಂದಿನ ಕವಿಗಳಲ್ಲೊಬ್ಬನಾದ ಪಂಪ ಕವಿಯು ಮಹಾಭಾರತ ಕಟ್ಟುವ ಸಂದರ್ಭದಲ್ಲಿ ತನ್ನ ವಿಕ್ರಮಾರ್ಜುನ ವಿಜಯ ಕೃತಿಗೆ ವಸ್ತುವನ್ನು ವ್ಯಾಸಭಾರತದಿಂದ ಆರಿಸಿ ತನ್ನದೇ ಆದ ರೀತಿಯಲ್ಲಿ ಮಹಾಭಾರತವನ್ನು ರಚಿಸಿದ್ದಾನೆ. ಅದೇ ರೀತಿ ಜಿನಸೇನನ ಪೂರ್ವಪುರಾಣದಿಂದ ಆದಿಪುರಾಣವನ್ನು ರಚಿಸಿದನು. ಪಂಪನ ವಿಕ್ರಮಾರ್ಜುನ ವಿಜಯದ ಹದಿಮೂರು ,ಹದಿನಾಲ್ಕನೇ ಆಶ್ವಾಸಗಳನ್ನು ಆಧರಿಸಿ ರನ್ನನು ಗದಾಯುದ್ಧ ಕೃತಿ ರಚಿಸಿರುವುದು ಪರಂಪರೆಯ ಕೊಡುಗೆ ಎಂದರೆ ತಪ್ಪಾಗುವುದಿಲ್ಲ. ನಮ್ಮ ಪರಂಪರೆ ಎಂದರೆ ಅದರ ಏಕರೂಪ ಚಿಂತನಾರೂಪ ಒಂದೇ ಎಂದು ಭಾವಿಸುವಂತಿಲ್ಲ. ನಮ್ಮಲ್ಲಿ ಅನೇಕ ಪರಂಪರೆಗಳಿದ್ದು ಅವುಗಳ ಚಿಂತನೆ ಮತ್ತು ಸಂವೇದನಾ ಧಾರೆಗಳು ಬೇರೆ ಬೇರೆ ಆಗಿವೆ. ಆ ರೀತಿಯ ಪರಂಪರೆಗಳಲ್ಲಿ ಸಂಘರ್ಷದ ಪರಂಪರೆ, ಸಾಮರಸ್ಯದ ಪರಂಪರೆ, ಯುದ್ಧ ಪರಂಪರೆ, ಶಾಂತಿ ಪರಂಪರೆ, ಧಾರ್ಮಿಕ ಪರಂಪರೆ, ನಾಸ್ತಿಕ ಪರಂಪರೆ, ಇನ್ನೂ ಮುಂತಾದವುಗಳನ್ನು ನೋಡಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಈ ಪರಂಪರೆಗಳು ಒಂದರೊಳಗೊಂದು ಮಾತನಾಡುತ್ತಾ ಬೇರೆ ದಾರಿ ಹಿಡಿದಿರುವುದು ಪ್ರಸ್ತುತ ನಮ್ಮ ಕಣ್ಣ ಮುಂದಿದೆ. ಉದಾಹರಣೆಗೆ ಅಮೇರಿಕಾ, ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧ. ಹಾಗಾಗಿ ನಮ್ಮ ಇಂದಿನ ಕಟು ವಾಸ್ತವಗಳ ನಡುವೆ ನಿಂತು ಹಿಂದಿನ ಪರಂಪರೆಯಲ್ಲಿ ಏಕಸೂತ್ರ ಹುಡುಕಿ ಎಲ್ಲವೂ ಶ್ರೇಷ್ಠ ಎಂದು ಸಾರುವುದಕ್ಕಿಂತ ವಾಸ್ತವಕ್ಕೆ ಮುಖಾಮುಖಿಯಾಗುವುದು ಮುಖ್ಯ. ನಮ್ಮ ಮಹಾಕವಿಗಳೂ ಕೂಡ ಮುಖಾಮುಖಿ ಅನುಸಂಧಾನಗಳನ್ನು ನಡೆಸಿರುವುದನ್ನು ಕಾನಬಹುದಾಗಿದೆ. ನಮ್ಮದು ಧಾರ್ಮಿಕ ಪರಂಪರೆ ದೇಶವೆಂದು ಹೇಳುವಲ್ಲಿ ಧರ್ಮಧರ್ಮಗಳ ನಡುವೆ ಅಮಾನವೀಯ ಸಂಘರ್ಷಗಳು ನಡೆಯುತ್ತಿವೆ. ಪುಣ್ಯ ನೆಲವೆಂದು ಕರೆಯುವ ಕಡೆ ಪಾಪದ ಬೀಜಗಳು ಬೆಳೆಯುತ್ತಿವೆ. ಮನುಷ್ಯ–ಮನುಷ್ಯರ ನಡುವೆ ವಿಷದ ಹುತ್ತಗಳು ಬುಸುಗುಡುತ್ತಿವೆ. ಈ ವಿಷಾನುಭವ ಇವತ್ತಿನದಲ್ಲ, ಅದಕ್ಕೊಂದು ಪರಂಪರೆಯಿದೆ ಎನ್ನುವುದು ಸ್ಪಷ್ಟವಾಗುತ್ತದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಭಾರತಿ ಎಸ್.ಎನ್, ನೋಂದಣಿ ಸಂಖ್ಯೆ; 2022ಏಂ004 ಪಿಎಚ್ ಡಿ. ಸಂಶೋಧನಾ ವಿದ್ಯಾರ್ಥಿ,
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

How to cite this article:
ಭಾರತಿ ಎಸ್.ಎನ್,(*2026*) *ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಧರ್ಮ ಪರಂಪರೆ. Journal of Research & Development, 18(5(IV)), 160–162.* https://doi.org/10.5281/zenodo.20996375

Quick Response Code:
Website: https://jrdrvb.org/
DOI: 10.5281/zenodo.20996375
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಇಲ್ಲಿ ಬರಗೂರು ರಾಮಚಂದ್ರಪ್ಪ ಅವರು ಎಲ್ಲದನ್ನೂ, ಎಲ್ಲರನ್ನೂ, ಮಾನವ ಧರ್ಮ, ಮಾನವೀಯತೆಯ ಧರ್ಮ, ಕರುಳಿನ ಧರ್ಮ, ಮನಸ್ಸಿಗಂಟಿದ ಧರ್ಮ ಇನ್ನೂ ಮುಂತಾದ ನೆಲೆಯಲ್ಲಿ ನೋಡುತ್ತಾರೆ. ಯಾವುದೇ ದೇವರಿರಲಿ, ಧರ್ಮವಿರಲಿ, ಇಲ್ಲಿ ಜಾತಿ, ಅಂತಸ್ತು, ಆಚರಣೆ, ವಿಚಾರಗಳು ಮುಖ್ಯ ಅಲ್ಲ, ವಿವೇಚನೆ, ವಿವೇಕ, ಮೌಢ್ಯ ಮುಕ್ತವಾದ ಪರಂಪರೆಯನ್ನು ಮುಖ್ಯವಾಗಿಸಿ ಹಲವಾರು ಪ್ರಾಚೀನ ಕವಿಗಳು ಮತ್ತು ಅವರ ಕೃತಿಗಳನ್ನು ಕುರಿತು ಚರ್ಚಿಸಿದ್ದಾರೆ. ಇದಕ್ಕೆ ಶಾಸನಗಳು, ಧಾರ್ಮಿಕ ಕಾವ್ಯಗಳು/ವ್ಯಕ್ತಿಗಳು, ಚಾರಿತ್ರಿಕ ಕೃತಿಗಳು ಹಾಗೂ ಹೊಸಗನ್ನಡ ಸಾಹಿತ್ಯವೂ ಹೊರತಾಗಿಲ್ಲ. ಅದು ಸಾಹಿತ್ಯಿಕವಾಗಿರಲಿ, ರಾಜಕೀಯವಾಗಿರಲಿ, ಒಟ್ಟಾರೆ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಮಾನವೀಯ ಧರ್ಮವನ್ನು ಸಮಾಜದಲ್ಲಿ ಬಿತ್ತುವ ಕೆಲಸವನ್ನು ತಮ್ಮ ಬದುಕಿನಲ್ಲಿ, ಬರಹಗಳಲ್ಲಿ, ಮತ್ತು ಸಿನಿಮಾಗಳ ಮೂಲಕ ಮಾಡುತ್ತಿದ್ದಾರೆ.

ನಮ್ಮ ಸಂಶೋಧನೆಯು ಸಂಸ್ಕೃತಿಯನ್ನು ಶೋಧಿಸುತ್ತಾ ಪರಂಪರೆಯನ್ನು ಕಟ್ಟಿಕೊಡುವ ಕೆಲಸವನ್ನು ಮಾಡುತ್ತಾ ಬಂದಿದೆ. ಆದರೆ ಇಂದು ಪರಂಪರೆಯಲ್ಲಿದ್ದೂ ಆ ಪರಂಪರೆಯನ್ನು ಮೀರುವುದು ಹೇಗೆ ಎಂಬುದನ್ನು ಬರಗೂರರು ಕೆಲವು ಪ್ರಾಚೀನ ಕೃತಿಗಳನ್ನು ಅಧ್ಯಯನಕ್ಕೊಳಪಡಿಸಿ ತೋರಿಸಿಕೊಟ್ಟಿದ್ದಾರೆ.

ಮೊದಲಿಗೆ ಕವಿರಾಜ ಮಾರ್ಗ ಕೃತಿಯಲ್ಲಿ ಬರುವ 'ಕಾವೇರಿಯಿಂದಮಾ ಗೋದಾವರಿವರೆಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ಮಾತಿನಲ್ಲಿ 'ಕನ್ನಡದೊಳ್ ಭಾವಿಸಿದ' ಎಂದರೆ ಅದು ಬುದ್ಧಿಗೆ ಸಂಬಂಧಿಸಿದ್ದಲ್ಲ, ಪ್ರಜ್ಞೆಗೆ ಸಂಬಂಧಿಸಿದ್ದು. ಎಂದರೆ ಮನುಷ್ಯನ ಆಂತರಂಗಿಕ ಭಾವನೆಗೆ ಸಂಬಂಧಿಸಿದ್ದಾಗಿದೆ. ಕುವೆಂಪುರವರು ಹೇಳುವಂತೆ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇ' ಎಂಬಂತೆ. ಈ ಜನಪದಂ ಎಂಬ ಮಾತನ್ನು ಜನಪದದ ಮೂಲಕ ಗುರುತಿಸುತ್ತಾರೆ. ಈ ಹಿಂದಿನ ಓದು, ವಿಮರ್ಶೆಗಳು ಕವಿರಾಜಮಾರ್ಗದ ಈ ಪದ್ಯದಲ್ಲಿ ಕನ್ನಡ ನಾಡಿನ ಎಲ್ಲೆಯನ್ನು, ಮಾತ್ರ ಗುರುತುಸುವ ಕೆಲಸ ಮಾಡಿದ್ದು ಆ ಪರಂಪರೆಯ ಹೊರತಾಗಿಯೂ 'ಭಾವಿಸಿದ' ಅಂದರೆ ಆಂತರಂಗಿಕ ಸಂವೇದನೆ, 'ಜನಪದಂ' ಎಂದರೆ ಜಾನಪದಕ್ಕೆ ಸಂಬಂಧಿಸಿದ್ದು ಎಂಬ ಹೊಸ ವಾಖ್ಯಾನವನ್ನು ಕೊಡುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಕಾಣುವ ಒಂದು ಪ್ರಮುಖ ಗುಣಲಕ್ಷಣವೆಂದರೆ ವಿವಿಧ ಕಾಲಘಟ್ಟಗಳಲ್ಲಿ ಕವಿಗಳು ಕಂಡ ಮನುಷ್ಯನ ಕಲ್ಪನೆ/ಪರಂಪರೆಯ ಪ್ರಜ್ಞೆ ಶಾಸನ ಸಾಹಿತ್ಯದಿಂದ ಹಿಡಿದು ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ಇತ್ಯಾದಿಗಳಿಂದ ಆರಂಭವಾಗಿ ಆಧುನಿಕ ಸಾಹಿತ್ಯದವರೆಗೂ ಮುಂದುವರೆದಿರುವುದನ್ನು ಕಾಣಬಹುದಾಗಿದೆ. ಎಲ್ಲಾ ಕಾಲದಲ್ಲಿಯೂ ಆಯಾಯ ಕಾಲದ ಗುಣಲಕ್ಷಣಗಳನ್ನು ಪ್ರತಿನಿಧಿಸುವ ಸಾಹಿತ್ಯ ಶಾಸನಗಳು ರಚನೆಯಾಗುವುದು ಸಾಮಾನ್ಯ ಸಂಗತಿ. ಊದಾಹರಣೆಗೆ ಏಳನೇ ಶತಮಾನದ ಬಾದಾಮಿ ಶಸನದ ಒಂದು ಪದ್ಯ ಹೀಗಿದೆ,

'ಸಾದುಗೆ ಸಾದು ಮಾಧುರ್ಯಂಗೆ ಮಾಧುರ್ಯನ್
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ.'

ಇಲ್ಲಿ ರಾಜನ ವ್ಯಕ್ತಿತ್ವವನ್ನು ಹೊಗಳಿರುವುದಷ್ಟೇ ಅಲ್ಲ, ಆ ಕಾಲದ ಆದರ್ಶ ಮನುಷ್ಯ ಧರ್ಮ ಎಂದು ಹೇಳಿದ್ದರೂ, ಅದೇ ಆ ಕಾಲದ ಮನುಷ್ಯನ ಕಲ್ಪನೆಯೆಂದು ಹೇಳಬಹುದಾಗಿದೆ. ಏಕೆಂದರೆ ಅಂದಿನ ಊಳಿಗಮಾನ್ಯ ಪ್ರಭುತ್ವದಲ್ಲಿ ಪ್ರಜೆಗಳಿಗೆ ಪ್ರಭುವೇ ದೇವರು/ದೇವರಿಗೆ ಸಮಾನ. ಆತನ ಗುಣಗಳೇ ಆದರ್ಶ ದಾರಿದೀಪ. ರಾಜನೆ ಮಹಾಮಾನವ ಎಂಬ ನಂಬಿಕೆಯಿದ್ದ ಕಾಲದಲ್ಲಿ ಇದು ಸಹಜವೂ ಹೌದು. ರಾಜರಿಂದಲೇ ಹಾಕಿಸಲ್ಪಡುವ ಶಾಸನದಲ್ಲಿ ಕೆತ್ತಿದ ರಾಜನ ಗುಣವನ್ನು ಪ್ರಶಂಸೆಯನ್ನಾಗಿ ಪರಿಗಣಿಸಿ ಊಳಿಗಮಾನ್ಯ ಪ್ರಭುತ್ವವನ್ನು ಮೀರಿ ಪ್ರಜಾಪ್ರಭುತ್ವದ ನೆಲೆಯಲ್ಲಿ ನಿಂತು ನೋಡಿದಾಗ ಈ ಪದ್ಯ ಸ್ವಪ್ರಂಶೆಯ ಸಾಧನವಾಗಿ ಕಾಣುತ್ತದೆ. ಎಂದು ಬರಗೂರರು ಅಭಿಪ್ರಾಯ ಪಡುತ್ತಾರೆ.

ನಾವು ಏಕಕಾಲದಲ್ಲಿ ಪಂಪ–ರನ್ನಾದಿಗಳನ್ನು, ವಚನಕಾರರನ್ನೂ, ಕೀರ್ತನಾಕಾರರನ್ನೂ ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶರನ್ನು ಓದುತ್ತಾ ಒಳಗೊಳ್ಳುವುದಲ್ಲದೆ ಕುವೆಂಪು, ಬೇಂದ್ರೆ, ಕಾರಂತರಾದಿಯಾಗಿ ನಮ್ಮೆದುರು ಬದುಕಿರುವ ಬರಹಗಾರರನ್ನೂ ಓದುತ್ತೇವೆ. ಒಳಗೊಳ್ಳುತ್ತೇವೆ. "ಏಕಕಾಲಕ್ಕೆ ಹತ್ತಾರು ಶತಮಾನಗಳ ವಸ್ತು ವಿನ್ಯಾಸಗಳನ್ನು ಒಳಗೊಳ್ಳುತ್ತಾ, ಮೀರುತ್ತಾ ವರ್ತಮಾನಕ್ಕೆ ಅರ್ಥತರುತ್ತೇವೆ. ಕುವೆಂಪು ಕಾಲದಲ್ಲಿ ನಿಂತು ಪಂಪನ ಕಾಲವನ್ನು ನೋಡುತ್ತೇವೆ. ಕಾರಂತರ ಪ್ರದೇಶದಲ್ಲಿ ನಿಂತು ಬೇಂದ್ರೆಯವರ ಭಾಷೆಯನ್ನು ಅಭ್ಯಾಸ ಮಾಡುತ್ತೇವೆ. ವಿಭಿನ್ನ ಕಾಲ–ದೇಶ ಪ್ರದೇಶಗಳಲ್ಲಿ ಏಕಕಾಲಕ್ಕೆ ಸಂಚರಿಸುವ ಸಂವೇದನಾ ಶಕ್ತಿ ಓದುಗನಿಗೂ ಬೇಕು. ಲೇಖಕನಿಗೂ ಬೇಕು. ವಿಮರ್ಶಕನಿಗೂ ಬೇಕಾಗುತ್ತದೆ.

ಪಂಪ ಹತ್ತನೆ ಶತಮಾನದ ಸಂಸ್ಕೃತಿ ಸಾಹಿತ್ಯಗಳ ಪ್ರತಿನಿಧಿ. ಆತನ ಲೌಕಿಕ ಕೃತಿಯಾದ ವಿಕ್ರಮಾರ್ಜುನ ವಿಜಯದಲ್ಲಿ 'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್ಗಾರಮಾದ ಮಾನಿಸರೇ ಮಾನಿಸರ್' ಎಂಬ ಆದರ್ಶ ಮಾನವನ ಕಲ್ಪನೆಯನ್ನು ಪ್ರಸ್ತುತ ಪಡಿಸಿದರೂ, ಆತ ಮನುಷ್ಯನ ಎಲ್ಲಾ ಅತ್ಯುತ್ತಮ ಗುಣಗಳನ್ನು ಒಬ್ಬನಲ್ಲೇ ಕಾಣದೆ, ಒಬ್ಬೊಬ್ಬರಲ್ಲಿ ಒಂದೊಂದು ಪ್ರಮುಖ ಗುಣಗಳನ್ನು ಗುರುತಿಸುತ್ತಾನೆ, ಇಲ್ಲಿ ಪ್ರಮುಖವಾಗಿ ಗುರುತಿಸುವ ಅಂಶವೆಂದರೆ ಒಬ್ಬ ವ್ಯಕ್ತಿಯಲ್ಲಿ ಪರಿಪೂರ್ಣತೆಯನ್ನು ಕಾಣುವ ಪರಂಪರಾಗತ ವ್ಯವಸ್ಥೆಗೆ ವಿರುದ್ಧವಾಗಿ ಏಕವ್ಯಕ್ತಿ ಶಕ್ತಿಯ ಊಳಿಗಮಾನ್ಯ ವ್ಯವಸ್ಥೆಯ ಬದಲಾಗಿ ಸಮೂಹಪ್ರಜ್ಞೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಪಂಪ ಮಾಡಿದ್ದಾನೆ. ಉದಾ:– ಛಲದೊಳ್ ದುರ್ಯೋಧನಂ –ನನ್ನಿಯೊಳ್ ಇನತನಯಮ್, ಗಂಡಿನೊಳ್ ಭೀಮಸೇನಂ ಹೀಗೆ ಹೇಳುವಲ್ಲಿ [1]ಪರಿಪೂರ್ಣ ವ್ಯಕಿಯೊಬ್ಬನ ಪ್ರತಿಪಾದನೆಗೆ ಬದಲಾಗಿ ವ್ಯಕ್ತಿಗಳ ಒಕ್ಕೂಟದಲ್ಲಿ ಪರಿಪೂರ್ಣತೆಯನ್ನು ಕಾಣುವ ಪ್ರಯತ್ನ ಮಾಡಲಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿನ ಪಂಚತಂತ್ರ ಕೃತಿಯಲ್ಲಿನ ಒಂದು ಘಟನೆಯನ್ನು ಸಮಕಾಲೀನಗೊಳಿಸುವ ಚಿಂತನೆ ಬರಗೂರರ ಗ್ರಹಿಕೆಯಲ್ಲಿ ಬಿಂಬಿತವಾಗಿರುವುದನ್ನು ನೋಡಬಹುದಾಗಿದೆ. ಪ್ರಸ್ತುತ ಕೃತಿಯಲ್ಲಿ ಕಷ್ಟಕ್ಕೆ ಸಿಲುಕಿದ ಮೃಗರಾಜನಿಗೆ ಸಹಾಯ ಮಾಡುವ ಬಗ್ಗೆ ಕರಟಕ ಮತ್ತು ದಮನಕರಲ್ಲಿ ಚರ್ಚೆ ನಡೆದು, ಕರಟಕ ಹೀಗೆ ಹೇಳುತ್ತಾನೆ, 'ಉದರಭರಣ ಮಾತ್ರ ಮೆಪ್ಪಂತೆ ರಾಜಾನುಸೇವಂಗೆಯ್ದಿರ್ಪೆವು' ಎಂದು ಹೇಳುವಲ್ಲಿ ರಾಜನಿಗೆ ಸೇವೆ ಮಾಡುವ ಉತ್ಸಾಹವೇನು ನನಗೆ ಇಲ್ಲ, ಆದರೆ ಹೊಟ್ಟೆ ಪಾಡಿಗಾಗಿ ಮಾತ್ರ ನಾವು ರಾಜನ ಸೇವೆ ಮಾಡುತ್ತಿದ್ದೇವೆ ಎಂದು ಕರಟಕ ಹೇಳುತ್ತಾನೆ. ಮೃಗರಾಜನ ಸ್ನೇಹ ಬೆಳೆಸಬೇಕೆಂದು ಸಂಜೀವಕನನ್ನು ಒತ್ತಾಯಿಸಿದಾಗ "ಸೇವಾವೃತ್ತಿ ಕಷ್ಟಂ, ರಾಜಸೇವೆಯೆಂಬುದು ಜೀವನೋಪಾಯಕ್ಕೆ ಕಾರಣ" ಎಂದು ಹೇಳುವುದಲ್ಲದೆ ಇಂತು ಲಘು ತರಮಪ್ಪ ಸೇವೆಯಿಂ ತನ್ನಿಚ್ಚೆಯೊಳ್ ಬರ್ದುಂಕುವ ಶುನಕಂ ಲೇಸೆಂದು ವಿದ್ವಾಂಸರ್ ಪೇಳ್ವರ್" ಅಂದರೆ ರಾಜಸೇವೆಗಿಂತ ತನ್ನಿಷ್ಟಕ್ಕೆ ತಾನು ಸ್ವತಂತ್ರವಾಗಿ ಬದುಕುವ ನಾಯಿಯೇ ಉತ್ತಮ ಎಂಬ ಮಾತು ಇಲ್ಲಿನ ಅಂತರಂಗದ ಧ್ವನಿಯಾಗಿದೆ. ಈ ಮಾತು ಕೇವಲ ಪಾತ್ರವೊಂದರ ಬಾಯಲ್ಲಿ ಬರುವ ಮಾತಷ್ಟೆ ಆಗಿರದೆ ಆ ಕಾಲದ ಒಳದನಿಯಾಗಿ ಇದಕ್ಕೊಂದು ಮಹತ್ವದ ಸ್ಥಾನವಿದೆ.

ಮುಂದುವರೆದು ಅದೇ ಕೃತಿಯಲ್ಲಿ ಅದೇ ಸಂದಂರ್ಭದಲ್ಲಿ ಸಂಜೀವಕ ಹೇಳುವ ಇನ್ನೊಂದು ಮಾತನ್ನು ಉದಾಹರಿಸಬಹುದಾಗಿದೆ. 'ಅರಸಿಂಗೆ ಹಿತವ ಮಾಡುವಾತಂ ಪ್ರಜೆಗೆ ಹಗೆಯಹನು– ಪ್ರಜೆಗೆ ಹಿತವ ಮಾಡುವಾತನ್ ಅರಸುಗಳ್ ಕೈಪಿಡಿಯರು' ಎಂಬ ಮಾತುಗಳು ಊಳಿಗಮಾನ್ಯ ಪರಂಪರೆಯಲ್ಲಿನ ವ್ಯವಸ್ಥೆಯಲ್ಲಿ ಆಳವಾಗಿ ಬೇರುಬಿಟ್ಟಿದ್ದ ಕಾಲಘಟ್ಟದಲ್ಲಿ ವರ್ಗಪ್ರಜ್ಞೆಯು ಈ ರೀತಿಯಾಗಿ

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಧ್ವನಿಯೆತ್ತುತ್ತಿರುವುದು ಒಂದು ಉತ್ತಮ ಬೆಳವಣಿಗೆ ಆಗುತ್ತದೆ. ಹೀಗೆ ಪರಮ ವಿಧೇಯತೆಯ ವಾತಾವರಣದಲ್ಲೂ ವ್ಯವಸ್ಥೆಯನ್ನು ಪ್ರಶ್ನಿಸುವ ಪ್ರವೃತ್ತಿ ಸಂಜೀವಕನ ಪಾತ್ರದ ಮೂಲಕ ವ್ಯಕ್ತವಾಗಿದೆ. ಈ ರೀತಿಯ ಸರ್ವಾಧಿಕಾರಿ ಪ್ರಭುತ್ವ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಮುಂದುವರೆದಿರುವುದು ವಿಷಾದವೇ ಸರಿ.

ಮತ್ತೊಬ್ಬ ಪ್ರಮುಖ ಪ್ರಾಚೀನ ಕವಿ ರನ್ನ. ಈತನ ಕೃತಿ ಸಾಹಸಭೀಮ ವಿಜಯ ಅಥವಾ ಗದಾಯುದ್ಧ. ಈ ಕೃತಿಯನ್ನು ಕುರಿತಂತೆ ಬರಗೂರು ರಾಮಚಂದ್ರಪ್ಪನವರು 'ಯುದ್ಧಪರವಲ್ಲದ ರನ್ನನ ಗದಾಯುದ್ಧ' ಎಂಬ ಲೇಖನದಲ್ಲಿ ಈ ಕೃತಿಯನ್ನು ವಿಭಿನ್ನ ಆಯಾಮಗಳಲ್ಲಿ ವಿಮರ್ಶಿಸಿದ್ದಾರೆ. ಗದಾಯುದ್ಧ ಕೃತಿ ಕುರಿತು ವಿಮರ್ಶಾ ಲೋಕದಲ್ಲಿ ಅದೊಂದು ರಸಾತ್ಮಕ ಕಾವ್ಯವೆಂದು, ಇದರ ವಸ್ತು ಯುದ್ಧ ಎಂದು ಆಸ್ವಾದಿಸಿದವರೇ ಹೆಚ್ಚು. ಹೆಸರೇ ಸೂಚಿಸುವಂತೆ 'ವಸ್ತುಯುದ್ಧಮೆನಿಸಲ್ ಪೇಳ್ದಾ ಗದಾಯುದ್ಧಮಂ' ಎಂಬಂತೆ. ಕಾವ್ಯದ ವಸ್ತು ಯುದ್ಧ ಎಂದು ದೃಢಪಡಿಸಿದ್ದರೂ ಕಾವ್ಯನುಭವದ ನೆಲೆಯಲ್ಲಿ ಇದು ಯುದ್ಧ ಪರವಾಗಿದೆಯೇ? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಬರಗೂರು "ಗದಾಯುದ್ಧದ ವಸ್ತು ಯುದ್ಧದ ಪರಿಣಾಮವೇ ಹೊರತು ನೇರ ಯುದ್ಧವಲ್ಲ"[4] ಎಂಬ ತೀರ್ಮಾನಕ್ಕೆ ಬರುತ್ತಾರೆ. ಹಾಗೂ ದ್ರೌಪದಿ ಮತ್ತು ಭೀಮ ಇಬ್ಬರಿಗಷ್ಟೇ ಯುದ್ಧ ಬೇಕಾಗಿದೆ, ಉಳಿದವರೆಲ್ಲಾ ಶಾತಿಪರವಾಗಿದ್ದಾರೆಂದು ಸಮರ್ಥಿಸಿ ಅದಕ್ಕೆ ಹಲವು ಸನ್ನಿವೇಶಗಳನ್ನು ಉದಾಹರಿಸುತ್ತಾರೆ. ಇಲ್ಲಿ ಯಾರೂ ಯುದ್ಧ ಮಾಡುವುದನ್ನು ಬಯಸುತ್ತಿಲ್ಲ. ಯುದ್ಧದಲ್ಲಿ ಸಾಕಷ್ಟು ಸಾವು – ನೋವುಗಳು ಸಂಭವಿಸಿವೆ. ಧರ್ಮರಾಜನು ಇನ್ನಷ್ಟು ಸಾವು ನೋವುಗಳನ್ನು ನೋಡುವ ಮನಸ್ಥಿತಿಯವನಲ್ಲ, ಹಾಗಾಗಿ ಈ ರೀತಿ ಘೋಷಿಸುತ್ತಾನೆ. ನನ್ನ ಐದು ಜನ ಸಹೋದರರಲ್ಲಿ ಒಬ್ಬ ಸತ್ತರೂ ನಾನು ಅಗ್ನಿಗಾಹುತಿಯಾಗುತ್ತೇನೆಂದು ಪ್ರತಿಜ್ಞೆ ಮಾಡಿ ಇರುವ ಜೀವಗಳನ್ನು ಹಾಗೆಯೇ ಉಳಿಸಿಕೊಳ್ಳುವ ಒತ್ತಾಸೆಯಲ್ಲಿದ್ದಾನೆ.

ದೃತರಾಷ್ಟ್ರ ಮತ್ತು ಗಾಂಧಾರಿಗೆ ಎಲ್ಲಾ 100 ಜನ ಮಕ್ಕಳು ಮರಣ ಹೊಂದಿದ್ದಾರೆ ಈತನೊಬ್ಬನಾದರೂ ನಮಗೆ ಬದುಕಲಿ ಎಂಬ ಇಚ್ಛೆ ಹಾಗಾಗಿ ಅವರು ಹೀಗೆ ಹೇಳುತ್ತಾರೆ.

'ಸಮರ ವ್ಯಾಪಾರಂ ಮಾ
ಣ್ದು ಮಗನೆ ನಿಜ ಶಿಬಿರದತ್ತ ಬಿಜಯಂಗೆಯ್ ಸ
ತ್ತ ಮಗಂದಿರ್ ಸತ್ತರ್ ನೀ
ನೆಮಗುಳ್ಳೊಡೆ ಸಾಲ್ಪುದವರನಿಂ ತಂದಪೆವೇ?'

ಮುಂದುವರಿದು ಶರಶೆಯ್ಯೆಯ ಮೇಲಿದ್ದ ಭೀಷ್ಮ ಧೃತರಾಷ್ಟ್ರನಿಗೆ ಪತ್ರ ಬರೆದು ಕಳುಹಿಸುವ ಸನ್ನಿವೇಶವೊಂದಿದೆ. ಸಂಧಿಗೆ ಒಪ್ಪಿಸುವಂತೆ ಭೀಷ್ಮ 'ಸಂಧಿ ಪರ' ಪತ್ರ ಬರೆಯುತ್ತಾನೆ. ಹೆಣಗಳ ರಾಶಿ, ರಕ್ತದ ಕೆಸರು, ಮುರಿದ ರಥಗಳು, ಚೆಲಪಿಲ್ಲಿಯಾದ ಆಯುಧಗಳು, ಹೀಗೆ ರಣರಂಗದ ಒಂದು ಕಡೆ ಶರಶೆಯ್ಯೆ ಮೇಲಿದ್ದ ಭೀಷ್ಮ ಬರೆದ ಪತ್ರ ಈ ರೀತಿ ಇದೆ.

'ಶರವೊಂದಂ ತೆಗೆದು ನಿಜೋ
ದರದಿಂ ಲೆಕ್ಕಣಿಕೆ ಮಾಡಿ ಗಜಮದಮಸಿಯಂ
ತರಿಸಿ ಪತಾಕಾ ಪಟದೊಳ್
ಬರೆದಟ್ಟಿದನಂದ ನೃಪತಿಗಾ ಸಿಂಧುಸುತಂ'

ಭೀಷ್ಮನು ತನ್ನ ಹೊಟ್ಟೆಯಿಂದಲೇ ಬಾಣವೊಂದನ್ನು ತೆಗೆದು ಲೇಖನಿ ಮಾಡಿಕೊಂಡು ಆನೆಯ ಮದೋದಕವನ್ನು ಮಸಿ ಮಾಡಿಕೊಂಡು ರಥದ ಬಾವುಟವನ್ನು ಪತ್ರ ಮಾಡಿಕೊಳ್ಳುವುದರಲ್ಲಿ ಬಾಣ ಆನೆ ಮತ್ತು ಪತಾಕೆಗಳು ಯುದ್ಧ ಮತ್ತು ಸಾರ್ವಭೌಮತ್ವದ ಸಾಧನ ಸಂಕೇತಗಳಾಗಿದ್ದು, ಈಗ ಅವುಗಳು ತಮ್ಮ ಮೂಲಾರ್ಥವನ್ನು ಕಳೆದುಕೊಂಡು ಸಂಧಿಪರ ಸಾಧನಗಳಾಗಿವೆ. ತನ್ನ ಹೊಟ್ಟೆಯಲ್ಲಿದ್ದ ಬಾಣವನ್ನು ಇರಿದು ತೆಗೆದು ಲೇಖನಿ ಮಾಡಿಕೊಳ್ಳುವ ಕ್ರಿಯೆ ಯುದ್ಧದಿಂದುಂಟಾದ ಹಿಂಸ್ರಕ ಸ್ಥಿತಿಯನ್ನು ಸೂಚಿಸುತ್ತದೆ. ಈ ಸ್ಥಿತಿಯಿಂದಲೇ ಸಂಧಿಯ ಒತ್ತಾಯಕ್ಕೆ ಈ ಬಾಣ ಬಳಕೆಯಾಗುತ್ತದೆ ಹೊಟ್ಟೆಯಿಂದ ಕಿತ್ತು ತೆಗೆಯುವ ವರೆಗೆ ಯುದ್ಧದ ಸಾಧನವಾಗಿದ್ದ ಬಾಣ ಈಗ ಸಂಧಿಯ ಸಾಧನವಾದ ಲೇಖನಿಯಾಗಿದೆ. ಅಮಲು ಬರಿಸುವ ಮದೋದಕವು ಅರಿವಿನ ಮಸಿಯಾಗಿದೆ. ಸಾರ್ವಭೌಮತ್ವದ ಸಂಕೇತವಾದ ಪತಾಕೆಯು ಕೇವಲ ಪತ್ರವಾಗುತ್ತದೆ. ಹೀಗೆ ಈ ಪದ್ಯದ ಮೂಲಕ ಯುದ್ಧದಿಂದಾದ ಭೀಕರತೆಯನ್ನು ಚಿತ್ರಿಸುವುದರೊಂದಿಗೆ ಕೊನೆಯಲ್ಲಿ ಮಾನವ ಮೌಲ್ಯವಾದ ಶಾಂತಿಪರತೆಯು ಸಂವೇದನೆಯ ಪ್ರತಿಪಾದನೆಯ ಪ್ರತೀಕವಾಗಿ ಮೂಡಿಬಂದಿದೆ. ಸರ್ವಾಧಿಕಾರಿ ಪ್ರಭುತ್ವದ ಪರಂಪರೆಯ ಯುದ್ಧಕ್ಕೆ ಬದಲಾಗಿ ಸಾಮರಸ್ಯ ಧರ್ಮವನ್ನು ಎತ್ತಿ ಹಿಡಿದಿದೆ. ಹೀಗಾಗಿ ಪ್ರಸ್ತುತ ಕಾವ್ಯದಲ್ಲಿ ದ್ರೌಪದಿ ಮತ್ತು ಭೀಮ ಇವರಿಬ್ಬರು ಯುದ್ಧಕ್ಕೆ ಸಿದ್ಧವಾದ ಮನಸ್ಥಿತಿಯುಳ್ಳವರು. ಪೂರ್ಣ ಕೃತಿಯನ್ನು ಅವಲೋಕಿಸಿದಾಗ ಯುದ್ಧ ಪರವಾದ ಪಾತ್ರಗಳ ಸಂಖ್ಯೆ ಎರಡು ಮಾತ್ರ ಸಂಖ್ಯೆ ಮಾತ್ರದಿಂದಲೆ ಕಾವ್ಯಧ್ವನಿಯನ್ನು ನಿರ್ಧರಿಸಲಾಗದು. ಈ ಸಾಮಾನ್ಯ ತಿಳುವಳಿಕೆಯಿಂದ ಕಾವ್ಯವನ್ನು ನಿರ್ಣಯಿಸಬೇಕಾಗುತ್ತದೆ. ಈ ಮೂಲಕ ಗದಾಯುದ್ಧ ಕೃತಿ ಕುರಿತ ಇದುವರೆಗಿನ ವಿಮರ್ಶೆಗಳೆಲ್ಲಾ ವಸ್ತು ಯುದ್ಧ ಹಾಗೂ ಇಲ್ಲಿ ಬಿಂಬಿತವಾಗಿರುವುದು ವೀರರಸ ಅಥವಾ ರೌದ್ರರಸ ಎಂಬ ನೆಲೆಯಲ್ಲಿ ಸುತ್ತುತ್ತಿದ್ದು ಮೊದಲ ಬಾರಿಗೆ ಬರಗೂರರು ಈ ಪರಂರೆಯನ್ನು ಛಿದ್ರಗೊಳಿಸಿ ಈ ಕೃತಿ ಯುದ್ಧಪರವಲ್ಲ ಮತ್ತು ಇದು ಶಾಂತಿಪರವಾಗಿರುವುದರಿಂದ ಇಲ್ಲಿರುವುದು ಶಾಂತರಸ ಎಂಬ ತೀರ್ಮಾನಕ್ಕೆ ಬರುತ್ತಾರೆ.

, ಭೌಗೋಳಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಭಾಷಿಕವಾಗಿ ಒಂದು ಪರಂಪರೆಯಿದೆ. ಅದನ್ನು ಕವಿಗಳು, ಸಾಹಿತಿಗಳು, ನಮ್ಮ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಧಾರ್ಮಿಕವಾಗಿ ವಿಮರ್ಶಕರು, ತತ್ವಪದಕಾರರು, ವಚನಕಾರರು, ಕೀರ್ತನಕಾರರು, ತಮ್ಮದೇ ಆದ ರೀತಿಯಲ್ಲಿ ಓದಿ, ಅರ್ಥೈಸಿದ್ದಾರೆ. ಕೆಲವೊಮ್ಮೆ ಅನುಸಂಧಾನದ ಜೊತೆ ಮುಖಾಮುಖಿಯಾಗಿಸಿದ್ದಾರೆ. ಅದೊಂದು ರೀತಿಯ ಸಾಂಪ್ರದಾಯಿಕ ಓದು. ಒಂದೊಂದು ಕಾಲಘಟ್ಟದಲ್ಲಿ ಒಬ್ಬೊಬ್ಬರು ತಮ್ಮದೆ ಆದ ಸಾಹಿತ್ಯಿಕ ಮಾಧ್ಯಮದ ಮೂಲಕ ಆ ಪರಂಪರೆಗೆ ಮುಖಾಮುಖಿಯಾಗಿ, ಯಾವುದು ಎಷ್ಟು ಸರಿ, ಯಾವುದರ ಮೂಲಕ ಸಾಮಾಜಿಕ ಬದಲಾವಣೆ ಮಾಡಲು ಸಾಧ್ಯವೋ ಅದನ್ನು ಮಾಡುವಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ನಮ್ಮ ಸಮಾಜಕ್ಕೆ ಅಂಟಿದ ಧರ್ಮಾಂಧತೆಯ ಮೌಢ್ಯವನ್ನು ತೊಳೆದು ಆ ಕತ್ತಲ ಕೂಪದಿಂದ ಹೊರತಂದು ವೈಚಾರಿಕತೆಯೆಂಬ ಜ್ಞಾನದ ಬೆಳಕು ತೋರಿಸಲು ಬಹಳಷ್ಟು ಜನ ಶ್ರಮಪಟ್ಟಿದ್ದಾರೆ. ಅದರಲ್ಲಿ ಬರಗೂರು ರಾಮಚಂದ್ರಪ್ಪನವರೂ ಒಬ್ಬರು. ಪ್ರಮುಖವಾಗಿ ಬರೆಯುವುದೇ ಬಂಡಾಯವೆಂದು ಸಾರಿ , ಅಂಚಿಗೆ ತಳ್ಳಲ್ಪಟ್ಟವರಿಗೆ ಸಾಮಾಜಿಕವಾಗಿ, ಸಾಹಿತ್ಯಿಕವಾಗಿ, ಒಂದು ನೆಲೆ ಒದಗಿಸಲು ಅವಿರತ ಶ್ರಮಿಸಿದ್ದಾರೆ. ಈ ಹಿಂದಿನ ಕೆಲವು ಜಡ ಸಂಪ್ರದಾಯವನ್ನು ಬುಡಮೇಲು ಮಾಡಲು, ಸಮಾಜವನ್ನು ಒಂದು ಆರೋಗ್ಯಕರವಾದ ರೀತಿಯಲ್ಲಿ ಬದಲಾಯಿಸುವ ಆಶಯವೊತ್ತು ಸಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಓದು ಹೇಗಿರಬೇಕು ಎಂಬುದನ್ನು ಕೆಲವು ಕವಿಗಳು, ಕೃತಿಗಳನ್ನು ಉದಾಹರಣೆಯಾಗಿಟ್ಟುಕೊಂಡು ಹಳೆಯ ಜಡ್ಡು ಸಂಪ್ರದಾಯಕ್ಕೆ ಸೆಡ್ಡು ಹೊಡೆದು ಕೆಲವೊಂದು ಪರಂಪರಾಗತ ಓದನ್ನು ಬೇರೊಂದು ರೀತಿಯ ಅಧ್ಯಯನಕ್ಕೊಳಪಡಿಸುವ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯಕ್ಕಷ್ಟೇ ಅಲ್ಲದೆ ಆಧುನಿಕ ಕನ್ನಡ ಸಾಹಿತ್ಯಕ್ಕೂ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು:

ಡಾ. ರೆಹಮಾನ ಆಯ್
ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ,
ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಧಾರವಾಡ–580008.
Email- rahimangorajanal28@gmail.com

Manuscript ID:
JRD -2026-180542
ISSN: 2230-9578
Volume 18
Issue 5(IV)
Pp. 163-167
April- 2026
Submitted: 20 Apr. 2026
Revised: 30 Apr.2026
Accepted: 17 May. 2026
Published: 31 May. 2026

- **ಪ್ರಸ್ತಾವನೆ:**

ಹೊಸಗನ್ನಡ ಸಾಹಿತ್ಯದಲ್ಲಿ ಕಥೆ, ನಾಟಕ, ಕಾದಂಬರಿ, ಪ್ರಬಂಧ, ಪ್ರವಾಸ, ಆತ್ಮಕಥೆ, ಜೀವನ ಚರಿತ್ರೆ, ಸಂಶೋಧನೆ, ವಿಮರ್ಶೆ ಹೀಗೆಯೇ ಕಾವ್ಯವು ಪ್ರಸಿದ್ಧವಾಗಿದೆ. ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳನ್ನು ಅಧ್ಯಯನದ ಮುಖಾಂತರ ಅರಿಯಬಹುದಾಗಿದೆ. ಕಾವ್ಯದಲ್ಲಿ ಮಹಿಳೆಯರ ಸೌಂದರ್ಯ, ಸ್ಥಾನ–ಮಾನಗಳು, ಸಮಸ್ಯೆಗಳು, ಕಾರಣಗಳು, ಪರಿಹಾರಗಳನ್ನು ತಿಳಿಯಬಹುದಾಗಿದೆ. ಮಹಿಳೆಯ ಸ್ವಾತಂತ್ರ್ಯ, ಸಮಾನತೆ, ನೋವು–ನಲಿವುಗಳು, ಆರ್ಥಿಕ ಸ್ಥಿತಿ, ರಾಜಕೀಯ ನಿಲುವು, ಶಿಕ್ಷಣ, ಉದ್ಯೋಗ ಮುಂತಾದ ಅಂಶಗಳು ತಿಳಿಯಬಹುದಾಗಿದೆ. ಹೀಗೆ ಮಹಿಳಾ ಪರ ಚಿಂತನೆಗಳನ್ನು ಮಹಿಳಾ ಸಬಲೀಕರಣ, ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಸಮೃದ್ಧಿಯ ಯೋಜನೆಗಳು, ಕುಟುಂಬ, ಸಂಬಂಧಗಳು, ಸ್ನೇಹಿತರು, ಸಮಾಜ, ಎಲ್ಲಾ ಕಡೆಯಿಂದಲೂ ಪ್ರೋತ್ಸಾಹ ದೊರೆಯಬೇಕು. ಮಹಿಳೆಯರ ಆರೋಗ್ಯ, ಜವಾಬ್ದಾರಿ, ಕರ್ತವ್ಯಗಳು ತುಂಬಾ ಅತ್ಯುತ್ತಮವಾದ ಕಾರ್ಯವಾಗಿದೆ. ಹೀಗೆ ಮಹಿಳೆಯರು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಹಗಲು, ರಾತ್ರಿ ಪ್ರಯತ್ನ ಪಡುತ್ತಾರೆ.

"ನಿನ್ನ ಬೆಳಕಿನ ದಾರಿ–ನಿನ್ನ ಬೆಳಕಿನ ದಾರಿಯಿಂದಲಾಂ ಕೆಲಸಾರಿ, ತಿರಿತಿರಿದು ಬಯಲಿನಲ್ಲಿ, ಗೂಡಿಂದ ಕಳಿದೊಡಂ ಬಯಗಿನಲ್ಲಿ ಎರಗದಿರೆ. ನಿನ್ನ ನಿಡುನೀಡದಲ್ಲಿ! ಮೂಗುತಿಯ ತುರಿಮುತ್ತು. ಸಡಲಿ ಕಡಲಲಿ ಬಿತ್ತು!. ಅದರ ತಾಯ್ಸಿಂಪಿಯೊಲ್ಲೆನೆಂದೊಡಂ, ಸಲ್ಲದಿರದೆಂದು ಬಲ್ಲೆ ಕಡಲಿನೆದೆಗೊಳವೆ ಎಲ್ಲೆ?. ನುಡಿಯನ್ನರ್ಥದೊಲೆನ್ನ ನೀನಿರವಿಗೆರೆವೆನ್ನ, ಅಳಿ ಬಳಕೆಗೇಕೆ ಸಂದೆ ಎಡೆಗೊಂಡ, ವಿಷಯಕೇಕಾದೆ ನೊಂದೆ? ಆದೊಡಾಂ ಕೆಡುವೆನೇನರ್ಥದಿಂದೆ? ಬರದ ಹಸಿವೆಯ ಮುಂತೆ, ಕೂಸನಡುವಿಡುವಂತೆ, ಬೇಟಕೆನ್ನೆದೆಯ ತೆತ್ತೆನಾದೊಡಂ. ಕರೆದು ನೀ ಬರವನೊತ್ತೆ, ಬಿಡಿಸದಿರೆ ನನ್ನ ಗಡುವಿಲ್ಲದೊತ್ತೆ?"[1]. ಹೀಗೆ ರಾಷ್ಟ್ರಕವಿ ಎಂ.ಗೋವಿದಂಪೈ ಅವರು ದಾಂಪತ್ಯ ಜೀವನ, ತಾಯಿ ಮಗುವಿನ ಸಂಬಂಧ, ಬೆಳಕಿನ ದಾರಿಯನ್ನು ಕುರಿತು ವಿವರಿಸಿದ್ದಾರೆ.

ಮಹಿಳಾ ಪರ ಚಿಂತನೆಗಳು:

- **ಮಾಸದ ಕಿರುನಗೆ–ಅಶ್ವಿನಿ.ಡಿ.ಎನ್:**

1. **ಆಲಾಪ:**

ಕವಿಯಿತ್ರಿ ಅಶ್ವಿನಿ.ಡಿ.ಎನ್.ಅವರು ಮಹಿಳೆಯ ಪರಿಸ್ಥಿತಿ ಕುರಿತು ಇಲ್ಲಿ ಚರ್ಚಿಸುತ್ತಾರೆ. ನಾನು (ಹೆಣ್ಣು) ಚಿರುಗುತ್ತಿದೆ ಅವರು ಚಿವುಟಿಬಿಟ್ಟರು. ನಾನು ಬೆಳೆಯುತ್ತಿದೆ. ಅವರು ಹೊಸಕಿ ಬಿಟ್ಟರು ಹೆಣ್ಣು ಂಬುದನವರ ಪತ್ತೆ ಹಚ್ಚಿಸಿಬಿಟ್ಟರು, ಬೇಡ ಎಂದು ತುಳಿದು ಬಿಟ್ಟರು. ಅಮ್ಮನ ಒಡಲಿಗೆ ಬೆಂಕಿ ಹಚ್ಚಿಬಿಟ್ಟರು, ತುಂಡು ಮಾಡಿ ಹೊರಗೆ ಎಳೆದು ಬಿಟ್ಟರು, ಹೆತ್ತತಾಯಿ ಹೆಣ್ಣೆಂಬುದನವರು ಮರೆತುಬಿಟ್ಟರು, ಹೆಣ್ಣು ಮಗು ಮಾತ್ರ ಬೇಡ ಎಂದು ಜರಿದು ಬಿಟ್ಟರು ನನಗೂ ಒಂದು ಮನಸ್ಸ ಇದ್ದುದನ್ನು ಅವರು ಮರೆತು ಹೋದರು, ಜೀವ ತೆಗೆದು ಕಸದ ಬುಟ್ಟಿಗೆ ಎಸೆದರು, ಹೆಣ್ಣು ಜಗದ ಕಣ್ಣೆಂಬುದನ್ನು ತಿಳಿಯದಾದರು. ಮಾನವೀಯತೆಯನ್ನು ಮರೆತು ಅವರು ಮೂಢರಾದರು. ಹೆಣ್ಣು ಮಗುವಿನ ಅಂತ್ಯರ್ಯದ ವಿಚಾರಗಳಿವೆ. ಮಹಿಳೆ ಮಗುವಿಗೆ ಜನ್ಮ ನೀಡುವಾಗ ಭ್ರೂಣದ ಅವಸ್ಥೆಯಲ್ಲಿ ಹೆಣ್ಣು ಮಗುವಿನ ಭಾವನಾತ್ಮಕ ಸಂವೇದನೆಗಳು ಒಳಗೊಂಡಿದೆ.

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Address for correspondence:
ಡಾ. ರೆಹಮಾನ ಆಯ್ ಸಹಾಯಕ ಪ್ರಾಧ್ಯಾಪಕರು. ಕನ್ನಡ ವಿಭಾಗ, ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ–580008.

How to cite this article:
ಡಾ. ರೆಹಮಾನ ಆಯ್ *(2026) ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು: Journal of Research & Development, 18(5(IV)), 163–167.* https://doi.org/10.5281/zenodo.20996408

Quick Response Code:
Website: https://jrdrvb.org/
DOI: 10.5281/zenodo.20996408
OPEN ACCESS

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

- **ಬಾಲ್ಯದ ನೆನಪು:**

ಬಾಲ್ಯದ ಜೀವನ ನಮ್ಮೂರಿನಲ್ಲಿ ಇದ್ದಾಗ ಮತ್ತೆ ನಾ ಮಗುವಾಗುವೆ ಬಾಲ್ಯದ ನೆನಪಾದಾಗ ಚಿಕ್ಕವಳಿದ್ದಾಗ ಮರಕೋತಿಯೂ, ಕುಂಟೆ ಬಿಲ್ಲೆಯ ಓಟ, ಐಸ್ಪೆಸ್ಟಗಳು ಅಡಗಿಸಿಕೊಂಡು ತಿಂದ್ದದು, ಮನಸ್ಸಿನಲ್ಲಿ ಆ ನೆನಪುಗಳು ಬೆಚ್ಚಗೆ ಕುಳಿತಿವೆ. ವಸಂತಮಾಸದಲ್ಲಿ ಕದ್ದು ತಿಂದ ಮಾವು ಮರೆತು ತಿಂದ ಬೇವು, ಜಾಲಿಯಗಿಡದ ಬೇಲಿಯನ್ನು ಹಾರಿ ಮಾಡಿಕೊಂಡ ನೋವುಗಳು, ಗಾಯಗಳು ನೆನಪಿನಲ್ಲಿ ಜೋಲಿ ಹೊಡೆಯುತ್ತಿವೆ ಬಿಟ್ಟು ಕೊಡದೆ ತಾವು, ಹಸಿವಿನ ಹಂಬಲವು ಏನೆಲ್ಲ ಮಾಡಿಸುವ ಬಾಲ್ಯದ ನೆನಪು ಸವಿ ನೆನಪಾಗಿವೆ. ಅಮ್ಮನ ಕೈತುತ್ತು, ಅಪ್ಪನ ಸಿಹಿ ಮುತ್ತು, ಮಗಳಿಗೆ ಜೀವನದಲ್ಲಿ ಮರೆಯಲಾಗದು, ಅಜ್ಜ, ಅಜ್ಜಿ, ಎತ್ತಿಟ್ಟು ಕೊಟ್ಟ ಬ್ರೆಡು, ಬಿಸ್ಕತ್ತು, ತಿನ್ನಬೇಕೆ ಎನಿಸುವುದು, ಪುರುಸೊತ್ತು ಮಾಡಿಕೊಂಡು ಮಗುವಾಗುವ ಆಸೆಯಿದೆ. ಗಣೇಶನ ಚತುರ್ಥಿಯಲ್ಲಿ ಮನೆಮನೆ ಸುತ್ತಿ ಮಳೆರಾಯನ ಮಾಡಿ ಚಂದಾಗಿಂದಾವೆತ್ತಿ ಗಣಪನ ಕೂಡ್ಸಿ ಚರುಪಂಚಿತಿಂದು, ಸಿಹಿ ದಿನಿಸುಗಳನ್ನು ಹೋಳಿಗೆ ತಿಂದು, ಹೊಳೆಯಲ್ಲಿ ಮಿಂದು ಸ್ನಾನ ಮಾಡಿ ಕುಣಿದದ್ದೆ ನೆನಪಿದೆ ಕಣ್ಣಂಚಲಿಂದು ಕವಿಯಿತ್ರಿಯು ತಾವು ಮತ್ತೆ ಮಗುವಾಗುವೆ ಬಾಲ್ಯದ ನೆನಪಾದಾಗ ಎಂದು ಈ ಬಾಲ್ಯದ ನೆನಪು ಕಾವ್ಯದಲ್ಲಿ ಸ್ಮರಿಸಿಕೊಳ್ಳುತ್ತಾರೆ.

"ಹುಚ್ಚುಕೋಡಿ ಮನಸ್ಸು–ಹುಚ್ಚು ಕೋಡಿಯ ಹಾಗೆ, ಹರಿಯುತಿಹ ಮನವೇ, ಕಡಿವಾಣವನೇಕೆ ಕಳಚಿದೆ? ಈ ಬದುಕು ಶೃಂಗಾರಕೆ ಅವನೋವುಬೇಕೆಬೇಕು ಬಿಗುಮಾನದಾಭರಣವನೇಕೆ ಧರಿಸಿದೆ? ಸ್ವಾತಂತ್ರ್ಯವ ನೀ ಬಯಸಿದ್ದು ತಪ್ಪಲ್ಲಾ, ಸ್ವೇಚ್ಛಾಚಾರದ ಹಾದಿ, ಹಿಡಿಯದಿರಲಿ ಬದುಕು ಜೀವನ ಸಾಗರದಿ ದಿಕ್ಕು ತಪ್ಪಿದ ದೋಣಿಯಾಗದಿರು ನೀ, ಯಾವ ಕಾರಣಕ್ಕೂ ಸ್ವಚ್ಛಂದದಾಗ ಸದಿ ಹಾರುತಿಹ, ಹಕ್ಕಿಗೂ ಗೊಡೆಂಬುದೊಂದಿದೆ, ನೀ ಎಷ್ಟೇ ದೊಡ್ಡವಳಾದರೂ, ಬಳಲಿದ ನಿನ್ನೆದೆಗೆ ನೆಮ್ಮದಿಯ ಆಸರೆಯು ಬೇಕಿದೆ ಅರಿತು ಮುಂದಡಿಯಿರಿಸು, ಓ ನನ್ನ ಚಂದನದ ಮನವೇ ಹೃದಯಕೆ ಮೆಟ್ಟಿಕೊಂಡಿರುವ, ಅಹಂನ ಧೂಳನೆಂದು ಒರೆಸುವೆ? ಅಲ್ಲಿ ಕಾಣುವುದು ಬರೀ, ನಿನ್ನವನೊಲವಿನದೇ ನಗುವೆ, ಅವನ ಮನಸ್ಸಿನ ಮನೆಗೆ, ಮರು ಗೃಹ ಪ್ರವೇಶ ಮಾಡಿಬಿಡು, ಮರಳಿ ನೀ ಮನೆಗೋದ ಖುಷಿಯ, ಸಂಭ್ರಮಾಚರಣೆಗೆ ನಿನ್ನೀ, ಆತ್ಮೀಯ ಮನವ, ಆಮಂತ್ರಿಸುವುದ ಮಾತ್ರ ಮರೆಯದಿರು"[2]. ಹೀಗೆ ಯೌವನಾವಸ್ಥೆ ಮಹಿಳೆಯ ಮನದಾಳದ ಮಾತುಗಳು ಇಲ್ಲಿ ಕಂಡು ಬರುತ್ತದೆ.

- **ಒಲವು:**

ಹದಿಹರೆಯದ ಅವಸ್ಥೆಯಲ್ಲಿ ಒಲವಿನ ಚಿಗುರು ಮೂಡುತ್ತದೆ. ಈ ಮನವು ಬೇಡಿದೆ ನಿನ್ನ ಒಲವು ಕೊಟ್ಟು ಬಿಡು ಬಿಡದೆ ಕಾಪಾಡುವೆನು ನನ್ನಿಡೀ ಜೀವನವೂ ಮುಡುಪಾಗಿಡುವೆ. ನನ್ನ ಮೊದಲ ಪ್ರೀತಿಯು ಈ ಪ್ರೀತಿ ರೀತಿಯು, ಅನುರಾಗ ಬಂಧನವು ಈ ಮನಕೆ ಚಂದವು ನೀ ಎಂದು ಕವಿಯಿತ್ರಿಯು ವಿವರಿಸುತ್ತಾರೆ. ತಮ್ಮ ಎಲ್ಲಾ ಆಸೆಗಳನ್ನು ನಿನ್ನ ಅಡಿಗೆ ಇರಿಸಿರುವ ಭಾವನೆಯು ಇಷ್ಟೇಲಕ್ಕೆ ಕಾರಣವಾಗಿದೆ, ಬಾ ನನ್ನ ಸ್ವೀಕರಿಸು ಈ ಬಾಳನ್ನು ಉದ್ದರಿಸು ಎಂಬನಲ್ಲಿಯ ಪ್ರೀತಿಯ ಮಾತುಗಳಿವೆ. ಈ ಕಣ್ಣ ಭಾವಗಳ, ಭಾವಕಿರೋ ಮಿಡಿತಗಳು ತುಡಿತಗಳ ಆಸೆಯ ಹಂಬಲವು ಅರಿಯೋ ನೀ ಜಾದುಗಾರ, ಮುದ್ದಿನ ಸಾಹುಕಾರ ಎಂದು ನಲ್ಲನ ಪ್ರೀತಿಯದೆ ಭಾವನೆಗಳು, ಪರಿಕಲ್ಪನೆಯೊಂದಿಗೆ ಒಲವಿನ ಪಯಣವನ್ನು ಕಾಣಬಹುದಾಗಿದೆ.

- **ಕಂದ:**

ಮಗುವಿನೊಂದಿಗೆ ತಾಯಿಯ ಸಂಭಾಷಣೆ ಮನಸ್ಸಿಗೆ ಮುದವನ್ನು ನೀಡುತ್ತದೆ. ಮಗುವಿನ ರೀತಿಯ ಭಾವವನ್ನು ಸೋಸುವ ನಿನ್ನ ಮುಖಭಾಷೆ ಹಿತವೀ ತಾಯ ಹೃದಯಕ್ಕೆ ಅಕ್ಕರೆಯ ಮುದ್ದು ಮಗು ಆಗಿರುವೆ ತಾಯಿ ತನ್ನ ಮಗುವಿನೋದಿಗೆ ಕಳೆಯುವ ಸಮಯ ನಿನಗೆಂದೇ ತೊದಲ ಮಾತುಗಳನ್ನು ಆಡಲು ಕಲಿತವಳು ಚುಚಿಪಿಚ್ಚಿ ಕಚಿ ಪಿಚ್ಚಿ, ಓನು ಆಕೆ, ಮಮ್ಮು, ಜಿಜ್ಜಿಗಿಂತ ಸ್ವಚ್ಛ ಕನ್ನಡ ಬೇಕೆ ಜಗವೆಲ್ಲವನ್ನು ನೋಡಲು ಹಾಲ್ಗಲ್ಲದ ಕಂದ ನಿನಗೆ, ನಾ ಹೇಳೋ ಕನ್ನಡ ಪಾಠವನ್ನು ನನ್ನಮ್ಮನಿಂದ ನನಗೆ ಬಂದ ಬಳುವಳಿ ಕಣೋ ಪುಟ್ಟಾ ಎಂದು ತನ್ನ ತಾಯಿಯ ನೆನಪುಗಳು ಮರುಕಳಿಸುವೆ. "ತಾಯ್ತನ–ತಾಯ್ತನದ ಕಾಗುಣಿತಕೆ, ರೂವಾರಿ ನೀನು ನೀ ಬರುವ ಮೊದಲು ಈ ಜೀವನದಿ ಶುದ್ಧ ಅಲೆಮಾರಿ ನಾನು ಒಡಲಲ್ಲಿ ನೀ ಮಿಡಿದ ಮೊದಲ ಕ್ಷಣ ಬಡಿದೆಬ್ಬಿಸಿತು, ನನ್ನೊಳಗಣ ಹೆಣ್ತನ ನೀ ನನ್ನೊಳಗಡಗಿದ ಸಂಭ್ರಮವ ನೊಗೆ ಮೊಗೆದು ಸಿರಿಯುಂಡವಳು ನಾನು ಮರೆಯಲಾರೆನು ಆ ಮೃದು ಮಧುರ ಭಾವ, ಎದೆಗವಚಿಕೊಂಡ ಆ ಸಿಹಿಯ ಅನುಭವ ಅಮ್ಮನ ಪಟ್ಟ ನೀಡಿದ ಮೊದಲ ಮುದ್ದು ಕಂದಮ್ಮ ನೀನು, ಸುಖದಿಂದಿರು ಕಂದ ಇರೋವರೆಗೂ ಭೂಮಿ ನಾನು"[3]. ಹೀಗೆ ತಾಯ್ತನದ ಭಾವನೆಗಳು ಅನುಭವಿಸಿದ ಪ್ರೀತಿಯ ಮಧುರ ಕ್ಷಣಗಳು ಕಂದ ಜನ್ಮವನ್ನು ಪಡೆದಾಗ ಇರುವ ಪರಿಸ್ಥಿಯನ್ನು ಕಾಣಬಹುದು.

- **ಸೂಕ್ಷ್ಮ ದೃಷ್ಟಿ–ಶಾಂತಾ ಕುಂಟನಿ (ಶಕುಂತಲಾ):**

ಸೌಂದರ್ಯದಾ–ಶಕ್ತಿ (ಅಂತರಂಗದಾ ಕನಸು –ಒಳಮನಸ್ಸು) ಸೌಂದರ್ಯವು ಪ್ರಮುಖವಾದ ಆಸಕ್ತಿಯ ವಿಷಯವಾಗಿದೆ. ಹುಬ್ಬನ್ನೆ ಬಾಗಿಸಿ ರೆಪ್ಪೆಗಳನ್ನು ಜೋಡಿಸಿ ತೆಲಾಡುತ್ತ ನಿದಿರೆ ಎಂಬ ಮನವನ್ನು ಮಲಗಿಸಿ ಶಾಂತತೆಯಲ್ಲಿ ಓಲಾಡುತ್ತಿದೆ. ಜೊಂಪಾದ ನಿದಿರೆ ಜಾರಿ ಲಾಲಿಯಾ ಹಾಡಿಸಿ, ಹರಿಪಾದಕ್ಕೆ ಶಾಂತದಿ ಎನ್ನನು ಸೇರಿಸಿ ಎನ್ನುತ್ತಾ ದೇವರ ಆರಾಧನೆಯನ್ನು ಮಾಡಿದಂತಾಗಿದೆ. ಮನದಲ್ಲಿ ನೆನೆಯುತಿಹ ಆಕಾಶ ಭೂಮಿಗಳ ನಾನುಂಟು, ನೀವುಂಟು ಒಂದಾಗೆ ಮಾತುಗಳು ಆಡಿದಂತೆ ತೋರುತ್ತವೆ. ಬರಿದಾಗೊ ಮನದಲ್ಲಿ ತಮಯ್ಯ ಕನಸುಗಳ ತೆರೆದಿಟ್ಟು ಆಕಾಶಕ್ಕೆ ತಾವಿಟ್ಟೆವು ಏಣಿಗಳು ಎಂದು ಮನಸ್ಸಿನ ವಿಚಾರಧಾರೆಗಳಿವೆ. ಮನವನ್ನೇ ಬಿಗಿಹಿಡಿದು ಕಟ್ಟಿ ಸೈ ಬಳ್ಳಿಗಳೆ ಆತ್ಮ ಸೌಂದರ್ಯದ ಸಂಗಾತಿಯ ನೋವುಗಳು ಬಳ್ಳಿಯ ಒಳಗೆಯೇ ಬಾಡಿದಾ ಹೂವುಗಳಾ ಸೌಂದರ್ಯದ ಮಾತನ್ನು ಆಲಿಸಿದ ಕರ್ಣಗಳೇ ಅಲ್ಲಿ ಸತ್ಯವನ್ನು ಅರಿಯಬೇಕೆಂಬ ಅಭಿಲಾಷೆಯಿದೆ.

- **ನನ್ನ ಜನ್ಮ:**

ಎಷ್ಟು ಸಾರಿ ಜನ್ಮ ಪಡೆದರು ಬರಲಿಲ ನಿನ್ನಪಾದಕ್ಕೆ ಹೂಲ್ಲಾಗಿ, ಹುಳುವಾಗಿ ಹುಟ್ಟಿಬರುವೆ. ಹುಲಿಯಾಗಿ ಹುಟ್ಟಿ ಹೆಣ್ಣಾಗಿ ಬಂದೆ ನನ್ನನ್ನೆ ನಾನು ನಿನ್ನಲ್ಲಿ ಕಂಡೆ, ಬಂದಷ್ಟು ಸಲವು ಬರದೆಂದು ಕೊಂಡೆ ಬಂದಿಲ್ಲಿ ನಿಂದು ನಿನದೆಂದು ಕೊಂಬೆ ಕಲ್ಲಾಗಿ ನಿಂತಾಗಿ, ಉಳಿಯಾಗಿ ಬಡಿವೆ, ಜನ್ಮ ಬಂದಷ್ಟು ಬರಲಿ ಎನ್ನ ಕರ್ಮದ ಫಲವು ಹೇಗೆಯೋ ಇರಲಿ ಸಂಗತಿಯನ್ನು ಇಡುವೆ ಸಂಸಾರದೊಳವೆ, ಸಂಸಾರದೊಳು ಬಂದ ಜನ್ಮವಿದು ಸಾರ್ಥಕವಾಗಲೆನಗೆ, ನಾನಿಲ್ಲಿ ಬಂದುದಕೆ ಪತಿಯನ್ನು ತರುವೆ ಎಂದು ಕವಿಯಿತ್ರಿ ಶಾಂತಾ ಕುಂಟಿನಿ ಹೇಳುತ್ತಾರೆ. ಮಹಿಳೆಯ ದೇವರ ಆರಾಧನೆಯೊಂದಿಗೆ ಸಂಸಾರ, ಪತಿರಾಯ ಜೀವನ ವೈಶಿಷ್ಟ್ಯಗಳನ್ನು ಕುರಿತು ವಿವರಿಸಿದ್ದಾರೆ. ಜೀವನದಲ್ಲಿ ಬಂದ ಸಂಗತಿಗಳೆಲ್ಲದ್ದಕ್ಕೂ ನಾ ನಿನ್ನ ಬರುವೆ ಮರುಕಳಿಸಿ ಎಲ್ಲವನ್ನು ಶ್ರೀಹರಿಗೆ ಇಡುವೆ ಎಂಬ ಮನೋಭಾವನೆಯನ್ನು ನೋಡಬಹುದಾಗಿದೆ.

"ಕಾಣದ ಲೋಕ–ಕಾಣದ ಲೋಕಕೇ ಮನಸಿನಾ ಆಕಳಿಕೆ ಹೃದಯದಾ ಭಾವಕ್ಕೆ ಹಾಕುವೇ ಕಾಣಿಕೆ ಹೃದಯದ ಕೊಂಡಿಯ ಕಳಚಲು ಇಲ್ಲಿ ಮನಸ್ಸಿನ ಭಾವಕೆ ಹೊಂದಿಕೆ, ಹೃದಯದ ಈಶ್ವರಿಯೂ ಮನಸ್ಸಿನ ಮಹಲಿನಲ್ಲಿ ಕಷ್ಟಕ್ಕೆ ಸಿಲುಕಿದ ಕಾಮನೆಯೊಳಗೆ ಬಲಿಯೂ ಪುರುಷನಲೀ, ಹಾಗೆಯೇ ಮಲಗಿದೆ ಭೂಮಿಯು ಕೂಡಾ ಯಾರೋ ಅಳಿಸುತ್ತಾ ಭಾವನೆಗಳನೇ ಹಂಚದೆ ಭುವಿಯೂ, ಬೆಂಕಿ ಮಳೆಯೂ ಕಾರುತ್ತಾ"[4]. ಹೀಗೆ ಮಹಿಳೆಯ ಮನಸ್ಸಿನ ಭಾವನಾಲೋಕದ ವಿಚಾರವನ್ನು ನೋಡಬಹುದಾಗಿದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

- **ಮನಸ ಮೋಡ:**

ಮನಸ್ಸು ಮೋಡವಾಗಿ ಚಲಿಸಲಿಲ್ಲ, ಕರಗಲಿಲ್ಲ, ಅದರಿಂದ ಹನಿಯೂ ಬೀಳದೆ ಪರಿಸ್ಥಿತಿ ಎದುರಾಗಿದೆ. ಇದು ವರವೊ ಶಾಪವೊ ಬಂದ ಪರಿಯು ನೆಡೆಯುವ ಸ್ಥಿತಿಯು ತಿಳಿಯಬಹುದಾಗಿದೆ. ಕನಸು ಕಣ್ಣ ಚಿತ್ರ ತುಂಬಿ ಬರೆಯದಾಗಿದೆ. ಮನಕ್ಕೆ ಧೂಳ ಆವರಿಸಿ ತುಂಬಿಕೊಂಡಿದೆ. ಉಸಿರಾಡಲು ಈಗ ಗಾಳಿಯು ಬೇಕಾಗಿದೆ. ಶಾಂತಿಯಿಂದ ಶುಭ್ರವಾಗಲೆನ್ನ ರೂಪವು ಕಾಣದಾಗಿದೆ. ಸೌಂದರ್ಯವು ಲೋಕದಲ್ಲಿ ರೂಪದಿಂದ ಕಾಣಬೇಕೆಂಬ ಹಂಬಲವಾಗಿದೆ. ಮನಸ್ಸು ಎಂಬ ಹಕ್ಕಿಯು ಆಕಾಶದಲ್ಲಿ ತೇಲದಾಗಿದೆ. ಜಡ ಬಡಿದು ತಟಸ್ಥವಾಗಿ ನಿಂತಂತಾಗಿದೆ ಮನಸ್ಸು ಹಕ್ಕಿಯಾಗಿ ಹಾರಾಡದ ತನ್ನ ಚಲನವಲನದ ರೆಕ್ಕೆಪುಕ್ಕವನ್ನು ಬಿಡಿಸದಂತೆ ಮೌನಿಯಾಗಿದೆ, ಕಾರಣ ಏನೆಂದು ತಿಳಿಯದಾಗಿದೆ. ಮನಸ್ಸು ಹೀಗೇಕೆ ಎಂದು ತಲ್ಲಣವಾಗಿದೆ. ಮನಸ್ಸು ಆ ಜಡತ್ವದಿಂದ ಹೊರ ಬರಲು ದಿವ್ಯ ಶಕ್ತಿಯೊಂದು ಬೇಡಿ ಕುಳಿತಿದೆ. ಕಾಯ್ದು ಕುಳಿತಿಹೆ ಆ ಹೃದಯದ ಒಳಗಣದ ಭಾವನೆಗಳಲ್ಲಿ ಕುದಿಯುತ್ತಲೆ ಆವಿಯಾಗಿದೆ. ಆ ಆವಿಯಾದ ಹೊಗೆಯು ಮುಗಿಲು ಮುಟ್ಟಲು ಅದನ್ನು ಅರಿಯಲು ದನಿಯು ಇಂದು ಕಟ್ಟಿದಂತೆ ಎಂಬ ಭಾವನೆ ಆವರಿಸಿದೆ.

- **ಜೀವನ:**

ಬಿಡುವುದನ್ನು ಹಿಡಿಯುವುದನ್ನು ಬಿಡಬೇಕು ಹಿಡಿಯಬೇಕು ಅರಿತು ಹಿಡಿಯಬೇಕು ನೀನು ಜೀವನದ ಮಾರ್ಗವನ್ನು ಎಂಬ ಆಶಯವಿದೆ. ನಿನ್ನೆ ಎಂಬುದು ನೆನೆಯಬೇಕು, ನಾಳೆ ಎಂಬುದು ಮರಿಯಬೇಕೊ ನಿನ್ನ ನಾಳೆ, ನಾಳೆ ನಿನ್ನೆ ಎಂಬುದು ತಿಳಿಯುತ ನೀನು ನೋಡಬೇಕು ಆಲೋಚನೆಯಿಂದ ಭವಿಷ್ಯದ ಕಡೆಗೆ ಯೋಜನೆಯನ್ನು ರೂಪಿಸಬೇಕಾಗಿದೆ. ಜೀವನದಲ್ಲಿ ಸತ್ಯವನ್ನು ನಡೆಯುವ ಪ್ರಸಂಗವನ್ನು ಕಾಣಬೇಕು. ಸುಳ್ಳನ್ನು ಕುಣಿಯುತ್ತಿರುವನ್ನು ನೋಡಬೇಕು. ನೀ ಎಂದು ಕವಿಯಿತ್ರಿಯು ಜೀವನದ ದರ್ಶನವನ್ನು ಪರಿಚಯಿಸುತ್ತಾರೆ. ಸಮಸ್ಯೆಗಳು ಸಂಕಟಗಳನ್ನು ಸೋಲನ್ನು ನೀ ನೂಕಬೇಕು ಆಚೆಗೆ, ಧೈರ್ಯದಿಂದ ಮುಂದೆ ಸಾಗಬೇಕು, ಸತ್ಯ ಸುಳ್ಳು ಎರಡು ನೀ ತಿಳಿಯಬೇಕು ಅದರ ಪರಿಣಾಮವನ್ನು ಅರಿಯಬೇಕಾಗಿದೆ. ಸೋಲನ್ನು ನೂಕಬೇಕು, ಗೆಲುವನ್ನು ಬರುವವರೆಗೆ ಕಾಯಬೇಕೆಂಬ ಹಂಬಲ ಹೆಚ್ಚಾಗಿದೆ. ಜೀವನದಲ್ಲಿ ಸೋಲು ಗೆಲುವುಗಳು ಎರಡು ಬಂದರು ಅವಕ್ಕೆ ನಾವು ಬಾಗಬೇಕೆಂಬ ಹೊಂದಾಣಿಕೆಯಿದೆ. "ನನ್ನಿನಿಯಾ–ನನ್ನಾ ಎಂದರೆ ನನ್ನಿನಿಯಾ, ನಾನು ಎಂದರೆ ಆತ್ಮೀಯಾ ನನ್ನನ್ನೆಂದಿಗು ಬಿಟ್ಟಿರಲಾರನು, ಅವನಿಲ್ಲದೆ ನಾನಿಲ್ಲೆನಯ್ಯಾ, ಅಹಂಕಾರದ ನಾ ನಾನಲ್ಲ ಅಹಂಕಾರದೊಳೊ ನಾನಿಲ್ಲ ನಾನು ಎಂದರೆ ನನ್ನಲ್ಲೆಲ್ಲಾ ಅಹಂನ್ನೆ ಕಾಣುವರಿಲ್ಲೇಲ್ಲಾ, ನಾನು ಎಂದರೆ ಆ ಶಕ್ತಿ ನನ್ನೊಳು ಬಂದಿವೆ ಆಸಕ್ತಿ ಸಂತಸಗೊಳ್ಳಲು ಅವನೇ ಎಲ್ಲ, ನನ್ನೊಳಗಿರುವನು ಎಂಬ ಭಕ್ತಿ ಆತ್ಮ ಎಂಬ ಸೌಂದರ್ಯ, ತುಂಬಿದೆ ಅದರೊಳು ಆಂತರ್ಯ ಶಾಂತನೆಂಬೀಗುಣಗಳನಿರಿಸಿ ಆತ್ಮಕ್ಕೆ ತುಂಬಿದ ಮಾಧುರ್ಯ"[5]. ಹೀಗೆ ಇನಿಯನ ನೆನಪಿನಲ್ಲಿ ಮಹಿಳೆಯ ಭಾವನೆಗಳು ಅನಾವರಣಗೊಂಡಿವೆ.

- **ಡಾ.ಸಬಿತಾ ಮರಕಿಣಿ– ಹೆಸರಿಡದ ಕವನ ಸಂಕಲನ:**
- **ಆಸೆಗಳು:**

ಮಹಿಳೆಯ ಮನಸ್ಸಿನ ಭಾವನೆಗಳು, ಆಸೆಗಳು, ಕನಸ್ಸುಗಳು ಹಲವು ಇರುತ್ತವೆ. ಆಸೆಗಳು ದಿನಕ್ಕೆ ಪ್ರತಿಯೊಂದು ಸಾರಿಯು ತೆರೆಯಂತೆ ಬಂದು ಅಪ್ಪಳಿಸುತ್ತಿವೆ. ಆಸೆ, ಆಕಾಂಕ್ಷೆಗಳು ಜೀವನದ ಉಸಿರಾಗಿದೆ, ಮರುಳಗಾಡಂತೆ ಆಗಿವೆ. ಆಸೆಯಿದ್ದರೆ ಬದುಕು ಚಿಗುರು ಪಡೆಯುತ್ತದೆ. ಅರ್ಥದೊಂದಿಗೆ ಸಮಯವನ್ನು ದೂಡಿತು. ಆಸೆಗಳು ಗೋಪುರ ಕಟ್ಟಿತು ಏರಲಾರದೆ ನೆಲಕ್ಕೆ ಬಿದ್ದಿತು, ಚಿಂತೆಯಿರಲಿ ವಂಚನೆಯಿರಲಿ ಸತ್ಯದಿಂದ ಲೋಕದಲ್ಲಿ ಬಾಳಿ ಬದುಕಬೇಕು, ವಯಸ್ಸು ಆದಂತೆ ಜೀವನದಲ್ಲಿ ಆಸೆಗಳನ್ನು ಕನಸುಗಳನ್ನು ಬಿಡಬೇಕು, ಬದುಕ್ಕಿದ್ದೇ ಬಾಳೆಂಬುದು ತೃಪ್ತಿಯಿರಬೇಕು ಎಂಬ ಆಶಯವನ್ನು ವಿವರಿಸುತ್ತಾರೆ.

- **ಭಾವನೆಗಳು:**

ತಂಗಾಳಿ ಬೀಸಿದಾಗ ಮನಸ್ಸಿನಲ್ಲಿ ಭಾವನೆಗಳು ತೆರೆಗಳಿದ್ದಂತೆ ಹೊರಚಿಮ್ಮುತ್ತಿದ್ದವು, ಸಾಗರದ ತೆರೆಗಳು ಭೂಮಿಗೆ ಬಂದು ಅಪ್ಪಳಿಸುತ್ತಿದ್ದವು. ಅವು ಕುಣಿದು ಕುಪ್ಪಳಿಸಿ ಹೂವಾಗಿ ಅರಳಿ ಪರಿಮಳ ಎಲ್ಲೆಡೆ ಸೂಸುತ್ತಾ ಹಾವಂತೆ ಹರಿದು ಹೊರಲಾಡತೊಡಗಿದವು ಪ್ರಕೃತಿಯಲ್ಲಿ ಕೋಗಿಲೆಯ ಕೂಗುವಿಕೆಗೆ ಮನಗೆದ್ದಾಯಿತು. ಕಾಗೆಯ ಕೂಗುವಿಕೆಗೆ ಮನಗೆದ್ದಾಯಿತು. ಕಾಗೆಯ ಕೂಗುವಿಕೆಗೆ ಮುಂಜಾನೆಯ ಬೆಳಕಾಯಿತು ಅಂಬಾ ಎನ್ನುವ ಕರುವಿನ ಧ್ವನಿಯಿಂದ ಹಸುವಿನ ಕೆಚ್ಚಲಲಿ ಹಾಲುಕ್ಕಿತು ತಾಯಿ–ಮಗುವಿನ ಅವಿನಾಭಾವ ಸಂಬಂಧವು ಕಾಣಬಹುದಾಗಿದೆ. ಸೃಷ್ಟಿಯ ಸೊಬಗು ಸೊಗಸೆಲ್ಲ ದೃಷ್ಟಿಯಲ್ಲಿ ಹೊಸತನದ ಹುಮ್ಮಸ್ಸು ಕಾಯಕ, ಕಾರ್ಯದಲ್ಲಿ ಚೆನ್ನಾಗಿವೆ. ಸೂರ್ಯ, ಚಂದ್ರರು, ಬೆಳಕು ಕಾಮನಬಿಲ್ಲು, ನಕ್ಷತ್ರಗಳ ದೀಪಗಳು, ಬಾನಂಗಳದಲ್ಲಿ ಬೆಳದಿಂಗಳು ಚೆಲ್ಲಿವೆ, ಭೂಮಿಗೆ ಹಾಲನ್ನು ಚೆಲ್ಲಿ ಬೆಳಕು ನೀಡಿವೆ. ಹಚ್ಚ ಹಸುರಿನ ಸಸ್ಯಗಳು, ಗದ್ದೆಯಲ್ಲಿನ ಫಸಲುಗಳು ಕಾಡಿನ ಹಸಿರು ಗಿಡ, ಮರಗಳು ಹತ್ತಿರನು ತೊಡುಗೆಯನ್ನು ತೊಟ್ಟಿವೆ, ಅದು ನೆನೆದು ಹೋಯಿತೆಂಬಂತೆ ಕಣ್ಣಿಗೆ ಪ್ರಕೃತಿಯಲ್ಲಿ ಕಂಡು ಬರುತ್ತದೆ. ಮನದೊಳಗೆ ಪಕ್ಷಿಗಳ ಕಲರವ ಕೇಕೆಗಳು, ಚಿಲಿಪಿಲಿ ರಾಗಗಳು ಮೊಳಗುತ್ತಿವೆ. ಆಕಾಶದ ಮೋಡಕ್ಕೆ ಎತ್ತರವಾಗಿ ಮುತ್ತನಿಟ್ಟವು ಗಿರಿಶಿಖರಗಳು ಹೀಗೆ ಪರಿಸರದ ರಮ್ಯಯವಾದ ಸೊಬಗಾಗಿದೆ ಮಹಿಳೆಯರ ಭಾವನೆಯು ತುಂಬಿ ಬಂದು ಹೊಸ ಚೈತನ್ಯವನ್ನು ತಂದಿದೆ. ಮಳೆಯು ಹನಿಯಾಗಿ ಧಾರೆಯೆರೆದಾಗ ಭೂತಾಯಿಯ ಮಡಿಲಲ್ಲಿ ನದಿಯು ಕುಣಿದು ಸಾಗರಕ್ಕೆ ಸೆರಗಿನಲ್ಲಿ ಮರೆಯಾದವು ಮೋಡಗಳಲ್ಲಿ ಚಿತ್ತಾರದ ಬಣ್ಣಗಳು ಇವೆ, ಗಿಡಗಳಲ್ಲಿ ನೂರೆಂಟು ಹೂವುಗಳು ಅರಳಿವೆ ಎಲ್ಲವು ಸುಂದರವು ಸೌಂದರ್ಯವು ಎಣಿಕೆಯಿಲ್ಲದ ರಾಶಿಯಾಗಿವೆ. ಹೀಗೆ ಉಕ್ಕಿಹರಿತ್ತಿವೆ, ರಾಶಿಯ ಭಾವಗಳು ಭಾಷೆಯಾಗಿ ರೂಪಗೊಂಡಿವೆ. " ಬದುಕು–ಬದುಕಲ್ಲವೇ ನಮಗೆ ಬಂಗಾರ ಬದುಕದಿದ್ದರೆ ಬೇಕೆ ಸಿಂಗಾರ ಬದುಕು ಬಾಳಲರಿತವನೆ ಶ್ರೇಷ್ಠ ಬದುಕಲರಿಯದವನು ಕೆಟ್ಟ ಮನಸಿದ್ದು ಮಾಡಬೇಕು ಸೃಷ್ಟಿ, ಮನಸಾರೆ ಪ್ರೀತಿಯನ್ನು ತೋರಬೇಕು ಮನದಲ್ಲಿ ಮೂಡಿರಲು ಮದ, ಮತ್ಸರ, ಮುನಿಸುಗಳು, ಮೂಢತನಗಳೆ ಉತ್ತರ ಬದುಕಲಯರಿಯದವ ಹೇಡಿ ಬದುಕು ದೂಷಿಸುವವ ರಣ ಹೇಡಿ ಬದುಕ ಮೆರೆಯಲು ಎಂದೆ, ಕುಡಿತ, ಕುಣಿತ ಬಹುವಿಧದ ಮೋಡಿಗಳು ಬದುಕಲಾರವೆಂದು ಮೃಗಪಕ್ಷಿಗಳಲಿಲ್ಲ ಶ್ವಾನ ಬದುಕನ್ನು ತಾನೆಂದು ಹಳಿಯಲಿಲ್ಲ ಪಶುಪಕ್ಷಿ ಪ್ರಾಣಿಗಳಲ್ಲಿ ಯಾವುದಿದೆ ನೋಡಿ ಬದುಕು ಬೇಡವೆಂಬ ಗೋಳಾಟ ಹೊಯ್ಯುವರು. ಬದುಕಬೇಕು ನಾವಿಲ್ಲಿ ಹದವಾಗಬೇಕು ಬವಣೆ ಬೇಗುದಿಗಳೆಲ್ಲಾ ಸುಡಬೇಕು ಕನಸು ನನಸುಗಳೆಲ್ಲಾ ಭಸ್ಮವಾಗಬೇಕು ಮನ ಕಾರ್ಯಗಳಿಗಾಗಿ ಮೀಸಲಿಡಬೇಕು. ಬಾಳಿನಲ್ಲಿ ಬಂದದ್ದು ದೊರಕಿದ್ದು ನಮಗೆ ಉಂಡದ್ದು, ಉಟ್ಟದ್ದು ನಮ್ಮ ಪಾಲಿನದು. ಕಂಡ ಕಂಡವರನ್ನು ಹೀಗೈವದೇಕೆ? ಸಮಯ ಬಂದಾಗ ನಾವೆಲ್ಲ ಹಾವೆಂಬೆವಲ್ಲಾ ನನ್ನದೆಂಬುದೆ ಇಲ್ಲ ನಾನೇ ಇಲ್ಲ, ನಾವೆಲ್ಲ ಬಂದದ್ದು ಈ ಜಗಕ್ಕೆ ಗಳಿಗೆಗಾಗಿ, ಜಗವು ನಮ್ಮದಲ್ಲ ಜನರೂ ನಮಗಿಲ್ಲ ಗಳಿಗೆ ನಿಮಿಷಗಳೆಣಿಕೆ ಮಾಡಬೇಕು"[6]. ಹೀಗೆ ಬದುಕಿನಲ್ಲಿ ಮನಸ್ಸು ಗೋಳಾಟ ಕನಸು ಕಾರ್ಯಗಳು, ಸಮಯದ ಮಹತ್ವವನ್ನು ಕಾಣಬಹುದಾಗಿದೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

- **ವೇದನೆ:**

ಹೃದಯವು ಎತ್ತಲಾರದಷ್ಟು ಹೊರಲಾರದಷ್ಟು ಹೃದಯ ಭಾರವಾಗಿತ್ತು ಕಾರಣ ಒಳಗೆ ನೋವು ತುಂಬಿತ್ತು. ನೋವು ಹೇಳಲಾರದಷ್ಟು, ಕೇಳಬಾರದಷ್ಟು, ಒಳಗೆ ಸಿಕ್ಕಿಕೊಂಡಿತ್ತು. ಹೃದಯಕ್ಕೆ ವೇದನೆ ಹೆಚ್ಚಾಗಿತ್ತು. ಎದೆಯಲ್ಲಿ ಕಲ್ಲಿನಂತೆ ಬೇಗುದಿಯು ಹೆಪ್ಪುಗಟ್ಟಿತ್ತು. ಕಣ್ಣು ತೆರೆದಿಟ್ಟಾಗಲು ಕಾಣದೆ ಕುರುಡಾಗಿತ್ತು. ಮನಸ್ಸು ಶೂನ್ಯವೆನಿಸಿತ್ತು ಮನವು ಹೊರಗೆಲ್ಲ ಅಲೆದಾಡಿ ಬಂದು, ಸುಸ್ತಾಗಿ ಒಳಸೇರುತ್ತಿತ್ತು. ಮೂಕವಾಗಿರುವ ಮನವು ಹಲವಾರು ಮಾತುಗಳನ್ನು ಜಪಿಸಿತ್ತು ಮಾತನಾಡಿತ್ತು. ಅದು ಹೊರಬಾರದೆ ಒಳಗೆ ಚಡಪಡಿಸುತ್ತಿತ್ತು ಕೊನೆಗೆ ಒಮ್ಮೆ ಎದೆಯು ಕರಗಿ ನೀರಾಗಿ ಹನಿಯಾಗಿ ಧಾವಿಸಿತು. ಕಣ್ಣೀರ ಧಾರೆಯು ಅಮೃತಧಾರೆಯಾಗಿ ಹರಿಯ ತೊಡಗಿತ್ತು. ಕೊನೆಗೆ ಶಾಂತವಾಯಿತು. ಮನವು ದುಗುಡವನು ತೊರೆದು ನೆಮ್ಮದಿ, ಶಾಂತಿ, ಸಂತೃಪ್ತಿಯು ದೊರೆತಂತೆ ಆಯಿತು.

- **ಶಾಂತಿಯೆಲ್ಲಿ?:**

ಕಾರಣವನ್ನು ಅರಿಯದೆ ಕೊರಗುವ ಮನಕೆ ಶಾಂತಿಯು ದೊರೆಯದು ಎಂದೆಂದೂ ಎಂದು ಕವಿಯಿತ್ರಿ ಡಾ.ಸಬಿತಾ ಮರಕಿಣಿಯವರು ಅಭಿಪ್ರಾಯ ಪಡುತ್ತಾರೆ. ಮಹಿಳೆಯರು ಯೋಚಿಸಿ ಮಾಡುವ ಕಾರ್ಯವನ್ನು ಪೂರ್ಣಗೊಳಿಸಲು ಮನಸ್ಸು ಶಾಂತಿಗೆ ಹಂಬಲಿಸುವ ಫಲಿಸುವವವರೆಗೂ ಬೆದರದಿರು ಎಂಬ ಧೈರ್ಯವನ್ನು ಪಡೆಯುತ್ತಾರೆ. ತನ್ನಯ ಕಷ್ಟಕ್ಕೆ ಕೊರಗುವ ಮರಗುವ ಮನಕೆ ಶಾಂತಿಯು ದೊರೆಯದು ಎಂದೆಂದೂ ಎಂಬ ಅಭಿಪ್ರಾಯವಿದೆ. ಜೀವನದಲ್ಲಿ ತಿಳಿಯಬೇಕು ಕಷ್ಟವನ್ನು ಪರರಾ ಸಂಕಷ್ಟವನ್ನು ಎಂಬ ಆಶಯವಿದೆ. ಅದನ್ನು ತಿಳಿದರೆ ನಿನ್ನೆಯ ಮನವು ಮರುಕದಲ್ಲಿ ಮುಳುಗಿ ಏಳುವುದು ಎಂಬ ಸತ್ಯವು ಗೋಚರಿಸುತ್ತದೆ. ಜೀವನದಲ್ಲಿ ಐಸಿರಿಯನು ಬಯಸೂತ ಕಾಲವನ್ನು ನೀಗಲು ಶಾಂತಿಯು ಬೆದರಿ ನಿಲ್ಲದೆಯೇ ಶಾಂತಿಗಾಗಿ, ಸುಖಕ್ಕಾಗಿ ಮನವು ಬಯಸಿದೆ. ದಾನವನ್ನು ಮಾಡುವ ಮಹಿಳೆಯರು ಧೀರರು, ದಾನಿಗಳು ಕಾರ್ಯವನ್ನು ನಡೆಸುತ ಬಾರೈ ಜೀವನ ರಥವಾ ಧೈರ್ಯದಿಂದ ಮುಂದೆ ಸಾಗಿಬರಲಿ ಲೋಕದಲ್ಲಿ ಆಗುತ್ತಿರುವ ಕಲ್ಮಶದ ಕಾರ್ಯವನ್ನು ನೆನೆಯದೆಯೆ ಮನವು, ನಿಷ್ಕಲ್ಮಶ ಮನವನು ಬೆಳೆಸುತಲೀ ಉತ್ತಮ ಸಂಸಾರವನು ಪಡೆಯುವಂತಾಗಲಿ. ಹೀಗೆ ಮಹಿಳೆಯರು ಒಳ್ಳೆಯ ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯದ ಪಾಲಿನೊಂದಿಗೆ ಸಾಗುವೆ ಮುಂದೂ ನಾವೆಂದೆಂದೂ ಜೀವನದ ರಥವಾ ದೂಡುತಲಿ ಮುಂದೆ ಸಾಗಬೇಕಿದೆಂಬ ಅಭಿಲಾಷೆಯಿದೆ.

"ನಾನು ಹೇಳಿದ್ದನ್ನು, ನೀನು ಅರ್ಥಮಾಡಿಕೊಳ್ಳಲಿಲ್ಲ ನಿನಗೆ ಅರ್ಥವಾಗುವಂತಹ ಶಬ್ದಗಳನ್ನು ನಾನು ಬಳಸಲಿಲ್ಲ. ಅರ್ಥ ಮಾಡಿಕೊಳ್ಳಬೇಕೆಂಬ ಇಚ್ಛೆಯೂ ನಿನಗಿರಲಿ ಅದಕ್ಕೆ ನಿನಗೆ ಅಪಾರ್ಥ ಕಲ್ಪನೆಯಾಯ್ತು, ಮುಂದಕ್ಕೆ ನನಗೂ ನಿನಗೂ ಜಗಳ ತಂದಿತ್ತು ಮಾತು ಮುರಿದಿತ್ತು. ಕ್ರೋಧ, ಆಕ್ರೋಶದಲ್ಲಿ ಮನವ ಕೆಡಿಸಿತ್ತು. ಮನಸ್ಸು ಮನಸ್ಸಿನ ನಡುಕೆಯಲಿ ಬಿರುಕು ಬಿಟ್ಟಿತ್ತು. ಅದೇ ಆಳವಾಗಿ, ಕಂದಕವಾಯಿತು. ಅದರ ದಾಟುವ ಶಕ್ತಿಯಿಲ್ಲದೆ ನಾನು ನೀನು ಕೊರಗುತ್ತಿದ್ದೇವೆ. ದ್ವೇಷವನ್ನು ಗೋರಿಗೂ ಒಯ್ಯುತ್ತಿದ್ದೇವೆ. ಅಲ್ಲೆ ಮಣ್ಣು ಮಾಡುತ್ತೇವೆಯೇ, ಮುಂದೊಯ್ಯುತ್ತೇವೆಯೇ ನೋಡಬೇಕು. ಅಂತರಾಳದಲ್ಲಿ ಹುಗಿದು ಚಿಗುರಿಸುತ್ತೇವೆಯೇ ಯಾರು ತಿಳಿಸಬೇಕು"[7]. ಹೀಗೆ ಮಹಿಳೆಯರು ಸಂಸಾರದಲ್ಲಿ ಜೀವನದಲ್ಲಿ ಅರ್ಥ, ಅಪಾರ್ಥಗಳಿಂದ ಆದ ಅನಾಹುತಗಳನ್ನು ಕವಿಯಿತ್ರಿ ತಿಳಿಸುತ್ತಾರೆ.

ವಿಶ್ವಕವಿ ಕುವೆಂಪು–114–ಡಾ.ಭೇರ್ಯ ರಾಜಕುಮಾರ್–ತಾಯಿ ಹೇಮಾ ಕೆ.ಎಸ್.ಜೋಗಿ:

ತಾಯಿಯು ಮಗುವನ್ನು ನವಮಾಸ ಗರ್ಭದಲ್ಲಿ ಹೊತ್ತು, ಅಲೇವ ವೇದನೆಯಲ್ಲೂ ಮಗುವಿಗೆ ಜನ್ಮವಿತ್ತು ತಾಯಿಯ ಪ್ರೀತಿಯನ್ನು ನೀಡಿದಳು ಪೊರೆಯುವಳು ಸಾಕಿ ಸಲುಹುವಳು ಸಂಸಾರ ಸಂಸ್ಕೃತಿಯನ್ನು ನಿನಗೆ ನೀಡುವಳು ಜೀವನವನೆ ನಿನಗಾಗಿ ಸಮರ್ಪಿಸುವಳು. ಕೈತುತ್ತನ್ನು ತಿನಿಸಿ ಎತ್ತಿ ಮುದ್ದಾಡುವಳು, ಮಮತೆಯನ್ನು ಧಾರೆ ಎರೆವಳು ಮಗುವಿನ ನಗುವಿನಲ್ಲಿ ತನ್ನ ನೋವನ್ನು ಮರೆಯುವಳು ಅತ್ತರೆ ಅಳುವಳು, ನಕ್ಕರೆ ಅವಳು ಕೂಡಾ ನಗುವಳು ಬೆಳೆದ ಮೇಲೆ ಸ್ವಾರ್ಥವನ್ನು ಪಡೆಯುವೇ ಮಗುವೇ ಹೆತ್ತತಾಯಿಯೇ ನಿನಗೆ ಹೊರೆಯಾಗುವಳು. ಅರಳು ಮರಳು ನೆಪದಲ್ಲಿ ತಾಯಿ ಆಶ್ರಮದ ಪಾಲು ಆಗುವಳು ಜನ್ಮ ನೀಡಿದ ತಾಯಿ ವೃದ್ಧಾಶ್ರಮದ ಪಾಲು ಆಗುವಳು ತಾಯಿಯನು ಮನೆಯಿಂದ ಹೊರ ನೂಕಿದರು, ಹರಸುವಳು ಆಕೆ ನಿನಗೆ "ನೀ ಖುಷಿಯಾಗಿರು" ಹೆತ್ತ ತಾಯಿಯನ್ನು ಹತ್ತು ಹಲವಾರು ಬಗೆಯಾಗಿ ನೋಯಿಸದಿರು ತಾಯಿ ಕಣ್ಣಿಗೆ ಕಾಣುವ ದೇವಿಯೆಂದು ಪೂಜಿಸುತ್ತಿರು ಎಂದು ಲೇಖಕಿ ಹೇಮಾ ಅವರ ಅಭಿಪ್ರಾಯವಾಗಿದೆ.

- **ಮಾತು: ಮೌನಗಳೊಳಗೆ–ಖಜೀಜಾ ಸುಝಾನ್, ಚಿಕ್ಕಮಂಗಳೂರು:**

ಭಾವನೆಗಳಿಗೆ ಧಕ್ಕೆಯಾದಾಗ ಕೋಪವು ಬಂಧನಗಳನ್ನು ಅನುಬಂಧಗಳನ್ನು ಮರೆಸಲು ಪ್ರತಿರೋಧವನ್ನು ತೋರುತ್ತದೆ. ಮಾತು ಪರಿಹಾರವನ್ನು ಪಡೆಯಲು ಮೌನವನ್ನು ಸರಿಸಲು ಪ್ರಯತ್ನಿಸುತ್ತದೆ. ಮಾತಿನದೆ ಕೊನೆಗೆ ಸಾಮ್ರಾಜ್ಯವೇ ರಾಜ್ಯದ ಆಡಳಿತ ಮಾಡುತ್ತಿದೆ. ಮಾತಿನ ಪ್ರಗತಿಯಲಿ ಸೋಲುಂಡ ಮೌನ ಸ್ಥಿಮಿತವಲ್ಲ ಮಾತಿಂದ ಸರಿಯಲು ಯತ್ನಿಸುತ್ತಿದೆ. ಮೌನದ ತಾಣವು ಶಾಂತಿಯನ್ನು ಪಡೆಯಲು ಹವಣಿಸುತ್ತಿದೆ. ಕೋಪದಲ್ಲಿ ಮಾತಿಗೆ ಮಾತು ಸೇರಿ ಒಳಗೆ ನಾನಾರ್ಥಗಳು ಬಂದು ಚಾಡಿಯ ಸರಪಳಿಯು ಸತ್ಯದ ಅನಾವರಣದಿಂದ ಕಳೆಯಲು ಸಂಬಂಧಗಳ ಕಚಗುಳಿ ಉಳಿದಿದೆ. ಬರಿಯ ಮೌನ ನೆನಪುಗಳಲ್ಲಿ ಆವರಿಸಿದೆ. ಒಂದು ಕ್ಷಣದ ಕೋಪ ಏನೆಲ್ಲ ಆವಾಂತರ ಮೂಡಿಸುತ್ತದೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

"ಸಂಬಂಧ–ಶ್ರೀಮತಿ ನಿರ್ಮಲಾ ಉದಯಕುಮಾರ್ ದ.ಕ.ಜಿಲ್ಲೆ:

ನಂಬಿಕೆಯ ಕಂಬದಲ್ಲಿ, ಸಂಬಂಧದ ಸೌಧ ಅನುಮಾನದ ಅವಮಾನದ ಕೋಟೆ ಸುತ್ತಮುತ್ತ ಕಟ್ಟುಪಾಡು ಹೊಣೆಗಾರಿಕೆ, ಬೆಲೆ ತೆರಬೇಕಾದಿತು. ಸುಖ ಸಂತೋಷಕ್ಕಾಗಿ ಹೆಣ್ಣುಗಳು ಮಾತ್ರ ಪ್ರೀತಿ ವಿಶ್ವಾಸದಿಂದ ಕಟ್ಟಬೇಕು ಸಂಬಂಧದ ಗೂಡು. ಆಳ್ತನ ಸುಳ್ಳಗಳ ಕಟ್ಟಲು ಹೊರಟರೆ ಉಸಿರುಗಟ್ಟಿಸುವ ಬಂಧ, ತ್ಯಾಗಮಯ ಬದಕೊಂದು ಇರಲಿ ಸ್ನೇಹ, ಪ್ರೀತಿ, ತನ್ನಂತೆಯೇ ಅವಳು ಅನ್ನುವ ರೀತಿ, ಭಾವನೆಗಳಿಗೆ ಬೀಗ ಹಾಕಿ, ಆಳುವರು ಇನ್ಯಾರೋ ಸ್ವತಂತ್ರದ ನಾಡಿನಲ್ಲಿ, ನಿರಾಳವಾಗಿ ಬದುಕಲು ಬಿಡಿ, ಬಾವಿಗೆ ಬೇಲಿ ಇಲ್ಲ, ದಿಕ್ಕಿಗೆ ಕೊನೆಯಿಲ್ಲ ಬಡತನದ ಬೇಗೆ ಇಳಿದು ಸಿಗಲು ಸ್ನೇಹ ಸಂಬಂಧ"[8]. ಹೀಗೆ ಪ್ರೀತಿ, ಸ್ನೇಹ, ಸಂಬಂಧ, ಭಾವನೆಗಳ ಸ್ವತಂತ್ರ್ಯವನ್ನು ಬದುಕಿನಲ್ಲಿರುವ ಸ್ವರೂಪವನ್ನು ಕಾಣುತ್ತೇವೆ.

- **ಜವಾಬ್ದಾರಿ– ಅಂಜಲಿ ಗುಲ್ವಾಡಿ ಉಡುಪಿ ಜಿಲ್ಲೆ:**

ಮಹಿಳೆಯ ಅಂತರಂಗದ ಭಾವನೆಗಳು ತುಂಬಾ ಇವೆ. ತಾಯಿ ಅಲ್ಲದ ತಾಯಿ ನಾನು ನನ್ನದಲ್ಲದ ಮಗು ನೀನು ಆದರೂ ಉಣಬಡಿಸಿದೆ. ಹಸಿವಿನ ತುತ್ತು, ಮಮತೆಯ ಮಾತ್ರ ಕಾರಣ ಜವಾಬ್ದಾರಿಯ ಶಿಖರವನ್ನು ಹೊತ್ತು ಹಸಿವೆಗೆ ಮಮತೆಯಿಂದ ಉಣಬಡಿಸಿ ಮುತ್ತು ನೀಡಿ ಜವಾಬ್ದಾರಿಯಿಂದ ತಾಯಿ ಅಲ್ಲದಿದ್ದರು ತಾಯಿಯ ಪ್ರೀತಿಯನ್ನು ನೀಡಿದ ತಾಯಿಯಾಗಿದ್ದಾಳೆ, ಅಂದು ಬೆಚ್ಚನೆಯ ಹಾಸಿಗೆಯನ್ನು ಹುಡುಕುತ್ತಿದ್ದವು, ಕುಂಭ ಕರ್ಣನೆಂಬ ಬಿರುದು ಪಡೆದ ಕಣ್ಣುಗಳು ಇಂದು ಹಾಸಿಗೆಯ ಕೂಗಿ ಕರೆದು ಹೋಗಲಾರದ ಪರಿಸ್ಥಿತಿಯಲ್ಲಿದ್ದವು, ನಿದ್ದೆಗೆಟ್ಟ ಕಣ್ಣುಗಳು ಕಾರಣ ಜವಾಬ್ದಾರಿಯ ಶಿಖರವನ್ನು ಹೊತ್ತು ನಿದ್ರೆಯಗಾಗಿ ಮಲಗದೆ ಇರುವುದು ನಿದ್ರೆ ಬಂದರು ಮಲಗುವುದು ಪರಿಸ್ಥಿತಿಯಿಂದ ನಿದ್ರಾಹೀನತೆಯ ಕೊರತೆಯಾಗಿದೆ ಕಾರಣ ಜವಾಬ್ದಾರಿಯು ಏನೆಲ್ಲ ಮಾಡಿಸುತ್ತದೆ ಎಂಬ ಚಿಂತನೆಗಳು ಇವೆ.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

- **ಮಾಸದ ನೆನಪು–ಎಸ್.ಕೆ.ಈಶ್ವರಿ ಮಡಿಕೇರಿ:**

ಇಂದು ಹಗಲಿನ ಹೊತ್ತು ಪ್ರಾಣವು ಇತ್ತು . ಮೌನದಿ ಕುಳಿತು ಮೂಡಣದ ರವಿಯ ಬೆಳಕನ್ನು ನೋಡುತ್ತಾ ಮನಸ್ಸು ಮೃದುವಾಗಿ ಧ್ಯಾನಿಸುತ ಮನಸ್ಸಿನಲ್ಲಿ ಸೌಮ್ಯ ಭಾವನೆಗಳನ್ನು ತೋರಿ ರಾತ್ರಿಯ ಬರುವ ಸಾವನ್ನು ಅರಿಯದ ಶ್ವಾನದ ದೇಹದಲ್ಲಿ ಈಗ ಇಲ್ಲದಾಯ್ತು, ಪ್ರಾಣ ಎಂದರೆ ಬೆಳಗಿನಿಂದ ಚೆನ್ನಾಗಿದ್ದು ರಾತ್ರಿ ಹೊತ್ತಿನಲ್ಲಿ ಶ್ವಾನವು ಮರಣವನ್ನು ಹೊಂದಿತ್ತು. ಮರುದಿನ ಮುಂಜಾನೆಗೆ ಹೇಳದೆ ಹೋಗಿದೆ ಜೀವ ಹೆಣವಾಗಿ ಬಿದ್ದ ನಿನ್ನ ರೂಪ ನನ್ನ ಮುಂದೆ ಕಾಣುತ್ತಿದೆ. ಆ ಶ್ವಾನದ ನೆನಪು ನಿತ್ಯದ ಬದುಕಿನಲ್ಲಿ ಗಾಂಭೀರ್ಯ ತೋರಿ ಕಂಡು ಬರುತ್ತದೆ. ಸತ್ತಾಗ ಯಾವುದೇ ಸದ್ದಿಲ್ಲದಾಯ್ತು. ಸೇವಕನಾಗಿ ನಿಸ್ವಾರ್ಥ ಸೇವೆಯಲ್ಲಿ ಮುಗಿದೋಯ್ತು. ಆ ಕೊನೆಯ ಘಟ್ಟ ಮನೆಗಿತ್ತು ಅದರ ಬೆಂಬಲ ಮನಸಿಗಿತ್ತು ಪ್ರೀತಿಯ ಸೇವಕನ ಹಂಬಲ ಹೆಚ್ಚಾಗಿದೆ. ಈ ಲೋಕದಲ್ಲಿ ಎಲ್ಲರಿಗೂ ಹುಟ್ಟು ಖಚಿತ ಆದರೂ ಪ್ರತಿ ಜೀವಿಗೂ ಸಾವೆ ಅಂತಿಮ ಪ್ರಯಾಣವಾಗಿದೆ.

"ಉಡುಗೊರೆ–ಸಾವೆ–ಸಿ.ವಾಣಿ ರಾಘವೇಂದ್ರ–ಮೈಸೂರು: ಪ್ರೀತಿಸಿ ಪ್ರೇಮಿಸಿ, ಗಂಡಿನ ಒಲವಿಗೆ ಮರುಳಾಗಿ ಹೆತ್ತವರಿಗೆ ವಂಚಿಸಿ ಮದುವೆಯಾಗಿ, ವರುಷಗಳು ಕಳೆದಂತೆ, ಪ್ರೀತಿಯು ಕರಗಿ ದೂರಾದರು ಪ್ರೀತಿಸಿ ಮದುವೆಯಾದ ಪ್ರೇಮಿಗಳು ನಂತರ ಹೆತ್ತವರೆ ಕಷ್ಟಪಟ್ಟು ಒಂದುಗೂಡಿಸಿದರು. ಪ್ರೀತಿಸಿ–ದೂರಾದ ದಂಪತಿಗಳನ್ನು ಇದು ಜೀವನದ ಉಡುಗೊರೆ ಆಗಿದೆ. ಇಲ್ಲಿಗೆ ಮುಗಿಲಿಲ್ಲ ಇವರ ದೇಶಪ್ರಸಂಗ ಕೊನೆಗೊಂಡು ದಿನ ಜಗಳ ವಿಕೋಪಕ್ಕೆ ಹರಿದು ಕೊಂಬೆಬಿಟ್ಟನು. ಪ್ರೀತಿಸಿ ಮದುವೆಯಾದ ಹೆಂಡತಿಯನ್ನು ಪ್ರೀತಿಸಿ ಹೆತ್ತವರ ತೊರೆದು ಮದುವೆಯಾಗಿದ್ದಕ್ಕೆ, ಸಿಕ್ಕ ಉಡುಗೊರೆ ಆ ಹೆಣ್ಣಿಗೆ ಸಾವೆ.!"[9]. ಹೀಗೆ ಪ್ರೀತಿಸಿ ಮದುವೆಯಾದವರ ಬದುಕಿನ ಚಿತ್ರವನ್ನು ಕಾಣುತ್ತೇವೆ.

- **ಕಾಯುವಿಕೆ–ಚೇತನ ಕುಂಬ್ಳೆ, ಕಾಸರಗೋಡು:**

ನನ್ನ ಎದೆಯ ಬಡಿತ ನಿಲ್ಲುವವರೆಗೂ ನಿನ್ನನ್ನು ಪ್ರೀತಿಸುವೆ ಹುಡುಗಾ ನನ್ನ ಜೀವಕ್ಕಿಂತಲೂ ಮಿಗಿಲಾಗಿ ನನ್ನ ಉಸಿರನ್ನೇ ನಿನ್ನಲ್ಲಿಟ್ಟು ಕೊನೆಯವರೆಗೂ ಜೊತೆಯಲ್ಲಿರುವ ನೆರಳಂತೆ ಎಂದು ಪ್ರಿಯತಮೆಯ ಭಾವನೆಗಳಿವೆ. ಅಂದು ನೀನು ಕೆಲಸದ ನಿಮಿತ್ತ ದೂರದೂರಿಗೆ ಹೊರಟಾಗ, ಕಣ್ಣೀರು ಜಿನುಗಿದರೂ, ಮನ ಮಿಡಿದರೂ ಹೃದಯವ ಕಲ್ಲಾಗಿರಿಸಿದ್ದೆ ಕಾರಣ ನನಗೂ ತಿಳಿದಿದೆ. ಕಣ್ಣಿನಿಂದ ಮರೆಯಾಗಿ ಅದೆಷ್ಟೇ ದೂರ ನೀನಿದ್ದರೂ ನನಗೆ ಕೇಳಿಸುತ್ತಿದೆ. ನಿನ್ನೆದೆಯ ದನಿ ಗೊತ್ತಿದೆ. ನಿನ್ನ ಮನದ ತುಡಿತ, ನನ್ನೊಳಗಿದೆ ನಿನ್ನ ಬಿಸಿಯುಸಿರ ಸ್ಪರ್ಶ, ನಿನ್ನದೇ ಗಂಧ, ನಿನ್ನದೆ ನೆನಪಾಗಿದೆ ನಿನ್ನ ಮೇಲೆ ಹೆಚ್ಚಿನ ನಿರೀಕ್ಷೆಗಳನಿಟ್ಟಿಲ್ಲ. ಕಾರಣ ಹುಸಿಯಾಗದಿರಲೇಂದೇ, ನೀನು ನನ್ನವನೆಂಬ ಅಹಂಕಾರವಿದೆಯಾದರೂ ನಾಡಿನ ಹೆಮ್ಮೆಯೆಂಬುದನ್ನು ಮರೆತಿಲ್ಲ ಹುಡುಗಾ ಎಂದು ಪ್ರೀತಿಯ ತಮ್ಮ ವಿಚಾರಗಳಿವೆ. ಕನಸು ಕಂಗಳ ತುಂಬ ನಿನ್ನ ಬಿಂಬ ಹೊತ್ತು, ನಿನ್ನೂಸಿರಲ್ಲಿ ಉಸಿರಾಗಿ ನಿನ್ನೊಲವಲ್ಲಿ ಲೀನವಾಗಲು ನಾನಿನ್ನು ಕಾಯುತ್ತಿರುವೆ ಹುಡುಗಾ ನಿನಗಾಗಿ ನೀ ಬರುವ ದಾರಿಯತ್ತ, ದೃಷ್ಟಿ ಹರಿಸಿ ಹೀಗೆ ಪ್ರೀತಿಗಾಗಿ ಕಾಯುವಿಕೆಯು ತಾಳ್ಮೆಯ ನಿರ್ಧಾರವಾಗಿದೆ.

ಒಟ್ಟಾರೆಯಾಗಿ ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮಹಿಳಾ ಪರ ಚಿಂತನೆಗಳು ಈ ಮೇಲಿನ ಅಂಶಗಳಂತೆ ವಿಷಯಗಳಂತೆ ಕಂಡು ಬರುತ್ತವೆ. ಮಹಿಳಾ ಸಂವೇದನೆ, ಪ್ರೀತಿ, ಮಮತೆ, ಪ್ರೇಮ, ತಾಯಿತನ, ಜವಾಬ್ದಾರಿ, ನೆನಪು ವೇದನೆಗಳು ಶಾಂತಿ ಮುಂತಾದ ಹತ್ತು ಹಲವಾರು ವಿಷಯಗಳು ಒಳಗೊಂಡಿದೆ. ಮಹಿಳೆಯರ ಸಮಸ್ಯೆಗಳು, ಕಾರಣಗಳು ಪರಿಹಾರಗಳು, ಪ್ರಯೋಜನೆಗಳು, ಭಾವನೆಯ ಅಂತರಂಗದ ನೋವು–ನಲಿವು, ಪ್ರೀತಿಯ ಹಂಬಲವು ಹತ್ತು ಹಲವಾರು ಚಿಂತನೆಗಳು ಸೇರಿಕೊಂಡಿವೆ. ಬದುಕಿನಲ್ಲಿ ಬೆಳಕಿನ ಆಸೆಯೊಂದಿಗೆ ಯಶಸ್ಸು ಪಡೆಯಲು ನಿರಂತರ ಪ್ರಯತ್ನವನ್ನು ಮಹಿಳಾಪರ ಚಿಂತನೆಯ ಅಧ್ಯಯನದಿಂದ ಅರಿಯಬಹದಾಗಿದೆ.

- **ಕೊನೆಯ ಟಿಪ್ಪಣಿಗಳು:**

1. ರಾಷ್ಟ್ರಕವಿ ಎಂ.ಗೋವಿಂದಪೈ, ನಂದಾದೀಪ, ಪು.ಸಂ–15.
2. ಅಶ್ವಿನಿ.ಡಿ.ಎನ್. ಮಾಸದ ಕಿರುನಗೆ, ಪು.ಸಂ.32–33, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. 2018.
3. ಅದೇ ಪು.ಸಂ.72.
4. ಶಾಂತಾ ಕುಂಟಿನಿ(ಶಕುಂತಲಾ) ಸೂಕ್ಷ್ಮ ದೃಷ್ಟಿ ಪು.ಸಂ.23, ಪುತ್ತೂರು ಸಾಹಿತ್ಯವೇದಿಕೆ ಪುತ್ತೂರು.2018.
5. ಅದೇ ಪು.ಸಂ.28.
6. ಡಾ.ಸಬಿತಾ ಮರಕಿಣಿ ಹೆಸರಿಡದ ಕವನ ಸಂಕಲನ ಪು.ಸಂ.149–159 ಸೃಜನ ಪ್ರಕಾಶನ, ಮಂಡ್ಯ.2013.
7. ಅದೇ ಪು.ಸಂ. 154–155.
8. ಡಾ.ಭೇರ್ಯ ರಾಮಕುಮಾರ, ವಿಶ್ವಕವಿ ಕುವೆಂಪು–114, ಪು.ಸಂ.69, ಪ್ರಗತಿಪರ ಪ್ರಕಾಶನ ಕೆ.ಆರ್.ನಗರ.2018.
9. ಅದೇ ಪು.ಸಂ.90.

- **ಆಕರ ಗ್ರಂಥಗಳು:**

1. ರಾಷ್ಟ್ರಕವಿ ಎಂ.ಗೋವಿಂದಪೈ, ನಂದಾದೀಪ, ಕಾವ್ಯಾಲಯ ಪ್ರಕಾಶಕರು ಮೈಸೂರು. 1968.
2. ಅಶ್ವಿನಿ.ಡಿ.ಎನ್. ಮಾಸದ ಕಿರುನಗೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. 2018.
3. ಶಾಂತಾ ಕುಂಟಿನಿ (ಶಕುಂತಲಾ) ಸೂಕ್ಷ್ಮ ದೃಷ್ಟಿ, ಪುತ್ತೂರು ಸಾಹಿತ್ಯವೇದಿಕೆ ಪುತ್ತೂರು.2018.
4. ಡಾ.ಸಬಿತಾ ಮರಕಿಣಿ ಹೆಸರಿಡದ ಕವನ ಸಂಕಲನ, ಸೃಜನ ಪ್ರಕಾಶನ, ಮಂಡ್ಯ.2013.
5. ಡಾ.ಭೇರ್ಯ ರಾಮಕುಮಾರ, ವಿಶ್ವಕವಿ ಕುವೆಂಪು–114, ಪ್ರಗತಿಪರ ಪ್ರಕಾಶನ ಕೆ.ಆರ್.ನಗರ.2018.

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

OriginalArticle

ಅಕ್ಕಮಹಾದೇವಿ ವಚನಗಳಲ್ಲಿ ಸೌಂದರ್ಯ ಪ್ರಜ್ಞೆ

ಡಾ. ಸುಮಂಗಲಾ ಮಟ್ಟಿ [1] ಶ್ರೀ ಕೃಷ್ಣಪ್ಪ ಲಮಾಣಿ [2]
[1,2] ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಸ್.ಎಸ್.ಬಿ ಎಸ್.ಎಸ್.ಎಂ.ಪಿ.ಎಚ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುಂದಗೋಳ

Manuscript ID:
JRD -2026-180543
ISSN: 2230-9578
Volume 18
Issue 5(IV)
Pp. 168-173
April- 2026
Submitted: 20 Apr. 2026
Revised: 30 Apr.2026
Accepted: 17 May. 2026
Published: 31 May. 2026

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ, ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ, ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದು ವಚನಕ್ಕೆ ಕೂಡಲಸಂಗಮದೇವಾ ಮಹದೇವಿಯಕ್ಕನ ಒಂದು ವಚನ ನಿರ್ವಚನ [1]

ಬಸವಣ್ಣನವರ ಈ ವಚನ ಮಹದೇವಿಯಕ್ಕನ ವಚನಗಳ ಶ್ರೇಷ್ಠತೆಯನ್ನು ಸೂಚಿಸುತ್ತದೆ.ಅಕ್ಕನ ವಚನಗಳನ್ನು ಅವಲೋಕನ ಮಡಿದಾಗ ಅವಳ ವಚನಗಳ ಮಹತ್ವ ಅರಿವು ನಮಗಾಗುತ್ತದೆ.೧೨ನೇ ಶತಮಾನದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟ ಮಹಿಳೆಯರು ಅಕ್ಷರಲೋಕದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು.ಪರಿಣಾಮ ಅಕ್ಕನಂತಃ ಕವಯತ್ರಿ ಅಲ್ಲದೆ ವಿಮರ್ಶಕಿ ದೊರೆತಳು ಇದು ಇಂದು ಸಾಮಾನ್ಯ ಮಾತಾಗಿರಬಹುದು ಅಂದು ಒಂದು ಅದ್ಭುತ ಕ್ರಾಂತಿ. ಈ ಕ್ರಾಂತಿಗೆ ವಚನಗಳೇ ಮಾಧ್ಯಮವಾಗಿ ಜನಮನವನ್ನು ಮುಟ್ಟಿತು.ಅಕ್ಕನ ವಚನಗಳು ಇತರ ವಚನಗಳಂತೆ ಪಾದರಚನೆ,ಅಂಕಿತ, ಛಂದಸ್ಸು,ಸರಳಭಾಷೆಗಳಿಂದ ಕೂಡಿವೆ. ಆದರೆ ಆಕೆಯ ವಚನಗಳಲ್ಲಿ ವಿವಿಧ ವಿಭಿನ್ನವಾದ ವೈಶಿಷ್ಟ್ಯಗಳು,ವಿಮರ್ಶಾತ್ಮಕ ಮನೋಭಾವವನ್ನು ಗುರುತಿಸಬಹುದು.ಪ್ರಸ್ತುತ ಕಾವ್ಯ ಸೌಂದರ್ಯ,ನಿಸರ್ಗ ಸೌಂದರ್ಯ ಹಾಗೂ ಶಿವಸೌಂದರ್ಯಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಭಾಷೆ ಪ್ರಮುಖವಾದದ್ದು.ಅಕ್ಕಮಹಾದೇವಿ ತನ್ನ ಭಾವನೆಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಭಾವದ ಭಾಷೆಯನ್ನು ಬಳಸಿಕೊಂಡಿದ್ದಾಳೆ.ಭಾವದ ಭಾಷೆಯೆಂದರೆ ಭಾವುಕತೆ ಅಥವಾ ಭಾವಾವೇಶಗಳಿಲ್ಲದ ಭಾವಗೀತೆಗಳಂತೆ ಸರಳ ಕನ್ನಡದಲ್ಲಿ ವಚನಗಳು ಹೊರಹೊಮ್ಮಿವೆ. ಈ ಮೂಲಕ ವಚನಗಳು ಕನ್ನಡದ ಕಸುವನ್ನು ಹೆಚ್ಚಿಸಿವೆ. ಆಡುನುಡಿ, ಗಾದೆಮಾತು,

Creative Commons (CC BY-NC-SA 4.0)
This is an open access journal, and articles are distributed under the terms of the Creative Commons Attribution-NonCommercial-ShareAlike 4.0 International Public License, which allows others to remix, tweak, and build upon the work noncommercially, as long as appropriate credit is given and the new creations ae licensed under the idential terms.

Quick Response Code:
Website:
https://jrdrvb.org/
DOI:
10.5281/zenodo.20996974
OPEN ACCESS

Address for correspondence:
ಡಾ. ಸುಮಂಗಲಾ ಮಟ್ಟಿ *(ಸಹಾಯಕ ಪ್ರಾಧ್ಯಾಪಕರು) ಶ್ರೀ ಕೃಷ್ಣಪ್ಪ ಲಮಾಣಿ (ಸಹಾಯಕ ಪ್ರಾಧ್ಯಾಪಕರು) ಕನ್ನಡ ವಿಭಾಗ, ಎಸ್.ಎಸ್.ಬಿ ಎಸ್.ಎಸ್.ಎಂ.ಪಿ.ಎಚ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುಂದಗೋಳ*

How to cite this article:
ಡಾ. ಸುಮಂಗಲಾ ಮಟ್ಟಿ & ಶ್ರೀ ಕೃಷ್ಣಪ್ಪ ಲಮಾಣಿ. *(2026)* ***ಅಕ್ಕಮಹಾದೇವಿ ವಚನಗಳಲ್ಲಿ ಸೌಂದರ್ಯ ಪ್ರಜ್ಞೆ***, *Journal of Research & Development, 18(5(IV)), 168–171. https://doi.org/10.5281/zenodo.20996974*

ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ– ೨೩ ಪು ೦೮

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಭಾಷೆ ಪ್ರಮುಖವಾದದ್ದು.ಅಕ್ಕಮಹಾದೇವಿ ತನ್ನ ಭಾವನೆಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಭಾವದ ಭಾಷೆಯನ್ನು ಬಳಸಿಕೊಂಡಿದ್ದಾಳೆ.ಭಾವದ ಭಾಷೆಯೆಂದರೆ ಭಾವುಕತೆ ಅಥವಾ ಭಾವಾವೇಶಗಳಿಲ್ಲದ ಭಾವಗೀತೆಗಳಂತೆ ಸರಳ ಕನ್ನಡದಲ್ಲಿ ವಚನಗಳು ಹೊರಹೊಮ್ಮಿವೆ. ಈ ಮೂಲಕ ವಚನಗಳು ಕನ್ನಡದ ಕಸುವನ್ನು ಹೆಚ್ಚಿಸಿವೆ. ಆಡುನುಡಿ, ಗಾದೆಮಾತು, ನೇರಪ್ರಶ್ನೆಗಳನ್ನು ಬಳಸಿಕೊಂಡು,ಅನುಭಾವ,ಆಧ್ಯಾತ್ಮ,ಯೋಗ,ಮುಕ್ತಿಗಳಂತಹ ಗಹನವಾದ ವಿಷಯಗಳನ್ನೆಲ್ಲ ಸರಳವಾಗಿ ತಿಳಿಸಿದ್ದಾಳೆ.ಅಕ್ಕ ಕೇಳಾ ಅಕ್ಕಯ್ಯಾ ಕೇಳಾ ನಾನೊಂದು ಕನಸ ಕಂಡೆ "ಎಂಬಂತಹ ಹಲವು ವಚನಗಳಲ್ಲಿ ಭಾವಗೀತದ ಸಂಪೂರ್ಣ ಲಕ್ಷಣಗಳು ಸೇರಿಕೊಂಡಿವೆ.ಅಕ್ಕನ ವಚನಗಳು ಸೌಂರ್ಯಕ್ಕೆ ಹೊಸ ಅರ್ಥವಂತಿಕೆಯನ್ನು ಕೊಟ್ಟಿವೆ

ಉಸುರಿನ ಪರಿಮಳವಿರಲು
ಕುಸುಮದ ಹಂಗೆಕಯ್ಯಾ? ಕ್ಷಮೆ ದಯೆ ಶಾಂತಿ ಸೈರಿಣೆಯಿರಲು ಸಮಾಧಿಯ ಹಂಗೆಕಯ್ಯಾ ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ ಚನ್ನಮಲ್ಲಿಕಾರ್ಜುನ[2]

ಉಸಿರೆ ಪರಿಮಳ ,ಗುಣವೇ ಸಮಾಧಿ ಎನ್ನುವ ಅರ್ಥವತ್ತಾದ ಮಾತು ಸಾರ್ವಕಾಲೀಕ ಸತ್ಯ.

ನಡೆಯದ ನುಡಿಗಡಣ,ಮಾಣದ ಕಲಿತನ, ಚಿತ್ರದ ಸತಿಯ ಶೃಂಗಾರವದೇತಕ್ಕೆ ಪ್ರಯೋಜನ? ಎಲೆಯಿಲ್ಲದ ಮರನು,ಜಲವಿಲ್ಲದ ನದಿಯು, ಗುಣಿಯಲ್ಲದ ಅವಗುಣಿಯ ಸಂಗವದೇತಕ್ಕೆ ಪ್ರಯೋಜನ? ದಯವಿಲ್ಲದ ಧರ್ಮವು,ಭಯವಿಲ್ಲದ ಭಕ್ತಿಯು, ನಯವಿಲ್ಲದ ಶಬ್ದವದೇತಕ್ಕೆ ಪ್ರಯೋಜನ ಎನ್ನ ದೇವ ಚೆನ್ನಮಲ್ಲಿಕಾರ್ಜುನ? [3]

''ನಡೆ ಶುಚಿ,ನುಡಿ ಶುಚಿ ಮನ ಶುಚಿ,ಭಾವ ಶುಚಿ. ಇಂತೀ ಪಂಚ ತೀರ್ಥಂಗಳನೊಳಕೊಂಡು ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ [4] ಈ ವಚನಗಳ ಭಾವ ಸತ್ಯವಾದುದು ,ಶಿವಮಯವಾದುದು ಮಾತ್ರ ಸೌಂದರ್ಯದಿಂದ ಕೂಡಿರುತ್ತದೆಂಬ ಜಗದ ಸತ್ಯವನ್ನು ಸಾರುವ ಮೂಲಕ ಚೆಲುವಿಗೆ ಚೆಲುವಾದ ಅರ್ಥವನ್ನು ನೀಡಿದ್ದಾಳೆ ಕನ್ನಡ ಸಾಹಿತ್ಯದ ಇತರೆ ಪ್ರಕಾರಗಳಲ್ಲಿ ಕಂಡುಬರುವಂತೆ ಛಂದೋಬದ್ಧ ರಚನೆ ವಚನಗಳಲ್ಲಿ ಇಲ್ಲವೆಂಬುದು ಒಪ್ಪತಕ್ಕ ಸಂಗತಿಯಾಗಿದೆ.ಆದರೆ ಲಯ,ಪ್ರಾಸ,ಅಲಂಕಾರ,ಪ್ರತಿಮೆಗಳನ್ನು ವಚನಕಾರರು ಭಾವಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ.ಇದಕ್ಕೆ ಅಕ್ಕನ ವಚನಗಳು ಸಾಕ್ಷಿಯಾಗಿವೆ. "ಅಮೇಧ್ಯದ ಮಡಿಕೆ,ಮೂತ್ರದ ಕುಡಿಕೆ, ಎಲುವಿನ ತಡಿಕೆ ಕೀಲಿನ ಹಡಿಕೆ, ಸುಡಲೀ ದೇಹವ ಒಡಲುಡಿಯ ಕೆಡದಿರು ಚೆನ್ನಮಲ್ಲಿಕಾರ್ಜುನನರಿಯದ ಮರುಳೆ "[5]

ಈ ರೀತಿಯ ಹಲವು ವಚನಗಳಲ್ಲಿ ಅಕ್ಕಮಹಾದೇವಿಯು ಕನ್ನಡಕ್ಕೆ ಹೊಂದುವ ನಿಯಮರಹಿತ ಲಯದ ಪ್ರಯೋಗಮಾಡಿದ್ದಾಳೆ." ಒಬ್ಬಂಗೆ ಇಹವುಂಟು ಒಬ್ಬಂಗೆ ಪರವುಂಟು"ಎಂಬಲ್ಲಿ ಆರಂಭದ ಮೂರು ಸಾಲು ಅಂಶಲಯಕ್ಕೆ " ಹಸಿವೆ ನೀನು ನಿಲ್ಲು ನಿಲ್ಲು " ವಚನದ ಆರಂಭದ ಸಾಲುಗಳು ಮೂರು ಮಾತ್ರೆಯ ಲಯ "ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ" ದಲ್ಲಿ ಪಂಚ ಮಾತ್ರೆಯ ಲಯ

[2] ಅದೆ ವ.೮೪ ಪುಟ ೩೬

[3] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ– ೨೪೨ ಪು ೮೫

.ಅದೆ ವ.೨೪೩ ಪುಟ ೮೫

[5] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ– ೨೩ ಪು ೦೮

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಬಳಸಿದ್ದಾಳೆ.ಕೆಲವು ವಚನಗಳಲ್ಲಿ ಎತ್ತಿ ತೋರಿಸುವ ಲಯವಿರದಿದ್ದರೂ ಓದಿದಾಗ ಬುದ್ಧಿಗೆ ಗೋಚರವಾಗದಿದ್ದರೂ ಅನುಭಾವಕ್ಕೆ ಬರುವಂತಹ ಲಯ ಇಲ್ಲಿದೆ.

ಕಾವ್ಯ ಸೌಂದರ್ಯವನ್ನು ದ್ವಿಗುಣಗೊಳಿಸುವ ಮತ್ತೊಂದು ಸಂಗತಿಯೆಂದರೆ ಪ್ರಾಸ.ಅಕ್ಕಮಹಾದೇವಿ ಆದಿ,ಅನು,ಅಂತ್ಯಪ್ರಾಸಗಳನ್ನು ಬಳಸಿ ಓದುಗರ ಮನಮುಟ್ಟುವ ಕಾರ್ಯದಲ್ಲಿ ಯಶಸ್ಸನ್ನು ಸಾಧಿಸಿದ್ದಾಳೆ.ಪ್ರಾಚಿನ ಕಾಲದಿಂದಲೂ ಶಿಷ್ಟ ಮಾತ್ರವಲ್ಲದೆ ಜನಪದ ಸಾಹಿತ್ಯದಲ್ಲೂ ಆದಿಪ್ರಾಸ ತಾನೆ ತಾನಾಗಿ ಕನ್ನಡದಲ್ಲಿ ಮೂಡಿಬಂದಿದೆ.ಆದಿಪ್ರಾಸದಿಂದ ಪ್ರಾಸದ ಇಂಪಿನ ಜೊತೆಜೊತೆಗೆ ಲಯವೂ ಸಾಧಿತವಾಗುತ್ತದೆ.ಅಂಥದನ್ನು ಅಕ್ಕ ಯಥೇಚ್ಛವಾಗಿ ಬಳಸಿದ್ದಾಳೆ.

"ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿಯಿತ್ತೆ? ಸಂದು ಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?"[6] "ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ" "ತನುವ ಬೇಡಿದಡೆ ತನುವ ಕೊಟ್ಟು ಶುದ್ಧವಪ್ಪೆ""ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದಕೊಂಡೆನ್ನ" ಅಕ್ಕನ ಈ ವಚನಗಳು ಆದಿ,ಅನು,ಅಂತ್ಯಪ್ರಾಸಕ್ಕೆ ಉದಾಹರಣೆಯಾಗಿವೆ.

ಅಕ್ಕಮಹಾದೇವಿ ತನ್ನ ವಚನಗಳಲ್ಲಿ ಪ್ರಾಸ,ಲಯ,ಮೊದಲಾದ ಛಂದೋಗುಣಗಳಲ್ಲದೆ ರೂಪಕ ಉಪಮೆ,ಶ್ಲೇಷ,ಪ್ರತಿಮೆಗಳಂತಹ ಅಲಂಕಾರಗಳನ್ನು ಸುಂದರವಾಗಿ ಪ್ರಯೋಗಿಸಿದ್ದಾಳೆ.ಇದರಿಂದ ವಚನಗಳ ಸೌಂದರ್ಯ ವೃದ್ಧಿಸಿವೆ. ಆಕೆ ಬಳಸಿದ ಅಲಂಕಾರಗಳು ಮೇಲಾಭರಣಗಳಂತಿರದೆ ವಚನಗಳೊಂದಿಗೆ ಸಹಜವಾಗಿ ಕೂಡಿಕೊಂಡು ಬಂದಿವೆ. ಇವುಗಳಿಂದ ಅಭಿವ್ಯಕ್ತಿ ಹೇಳತಕ್ಕ ಸಂಗತಿಗಳನ್ನು ಮತ್ತಷ್ಟು ಸ್ಪಷ್ಟವಾಗಿಸಿವೆ.

ನೆಲದ ಮರೆಯ ನಿಧಾನದಂತೆ ಫಲದ ಮರೆಯ ರುಚಿಯಂತೆ ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ ಮರದ ಮರೆಯ ತೇಜದಂತೆ ಭಾವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲವನರಿಯಬಾರದು"[7] ಇಲ್ಲಿ ಉಪಮೆಗಳು ಮಾಲೆಯನ್ನೆ ಹೆಣೆದಿದ್ದಾಳೆ. "ಊರ ಸೀರೆಗೆ ಅಗಸ ತಡೆಗೊಂಬಂತೆ" "ಯಮನ ಕೂಡುವ ಮರುತನಂತೆ"

"ಲೋಕದ ಚೇಷ್ಟೆಗೆ ರವಿ ಭೀಜವಾದಂತೆ" "ಕತ್ತಲೆಯ ಪಾಳಯವ ರವಿ ಹೊಕ್ಕಂತೆ" "ಭಕ್ತಿ ಜ್ಞಾನವೆಂಬುದು ಕಾಕಾಕ್ಷಿಯಂತೆ" "ಎನ್ನ ಪಂಚೇಂದ್ರೀಯಗಳು ಕಬ್ಬುನ ಉಂಡ ನೀರಿನಂತೆ" "ಸರ್ಪನ ಬಾಯ ಕಪ್ಪೆ ನೋಣಕ್ಕೆ ಹಾರುವಂತೆ" "ತೆಕ್ಕೆ ಸಡಿಲಿದ ಜಕ್ಕವಕ್ಕಿಯಂತಾದೆನವ್ವಾ" ಕಲ್ಲತಾಗಿದ ಮಿಟ್ಟೆ ಕೆಲಕ್ಕೆ ಸಾರುವಂತೆ"

ಇಲ್ಲಿ ಪರಂಪರಾಗತ ಉಪಮೆಗಳನ್ನು ಬಳಸದೆ ಜನಸಾಮಾನ್ಯರ ನುಡಿಗಳನ್ನು ಉಪಯೋಗಿಸಿಕೊಂಡು ನೂತನ ಉಪಮೆಗಳನ್ನು ರಚಿಸಿದ್ದಾಳೆ. ಇಂಥ ನೂರಾರು ಉದಾಹರಣೆಗಳನ್ನು ಅಕ್ಕನ ವಚನಗಳಲ್ಲಿ ಕಾಣಬಹುದು.

ಅಲಂಕಾರಗಳ ರಾಣಿಯಾದ ರೂಪಕವನ್ನು ಮನಸೆಳೆಯುವಂತೆ ವಚನದಲ್ಲಿ ಬಳಸಿದ್ದಾಳೆ.

ಅತ್ತೆ ಮಾಯೆ,ಮಾವ ಸಂಸಾರ ಮಾವರು ಮೈದುನರು ಹುಲಿಯಂಥವರು ನಾಲ್ವರು ನಗೆವೆಬ್ಬ ಕೇಳು ಕೆಳದಿ" ಹೀಗೆ ಲೌಕಿಕ ಸಂಸಾರವನ್ನು ತೊರೆದ ಅಕ್ಕ ಆಧ್ಯಾತ್ಮಿಕ ಸಂಸಾರವನ್ನು ರೂಪಕದ ಮೂಲಕ ವಿವರಿಸಿದ್ದಾಳೆ.

"ದಿಗಂಬರವೇ ದಿವ್ಯಾಂಬರವೆನಗೆ" "ನೋಟವಾಭರಣ ಆಲಿಂಗನ ವಸ್ತ್ರ" ಎಂಬ ಅಕ್ಕನ ವಚನ ಸಾಲುಗಳೇ ಆಕೆ ಪ್ರಯೋಗಿಸಿದ ದೃಷ್ಟಾಂತಗಳು ಕನ್ನಡ ಪ್ರಪಂಚಕ್ಕೆ ನೀಡಿದ

[6] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ.೨೦೯ ಪು ೬೧

[7] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ– ೨೯೮ ಪು ೮೦

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಮಹಾಕೊಡುಗೆಗಳಾಗಿವೆ." ಚಂದನವ ಕಡಿದು ಕೊರೆದು ತೇದಡೆ ನೊಂದನೆಂದು ಕಂಪ ಬಿಟ್ಟಿತೆ",ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯಾ","ಹಾಲ ಒಡೆದು ಬೆಣ್ಣೆಯ ನರಸಲುಂಟೆ" ಹಲವು ದೃಷ್ಟಾಂತಾಲಂಕಾರಗಳ ಬಳಕೆಯಾದರೆ" ಚಿಲಿಪಿಲಿ ಎಂದೊಡುವ ಗಿಳಿಗಳಿರಾ!ನೀವು ಕಾಣಿರೇ? ನೀವು ಕಾಣಿರೇ? "ಶ್ಲೇಷಾಲಂಕಾರಕ್ಕೆ ಕಲಶಪ್ರಾಯವಾಗಿದೆ.ಆಕೆಯ ಪ್ರತಿಮೆಯ ಬಳಕೆಯನ್ನು ಮರೆಯಲಾಗದು " ದೃಶ್ಯವಾದ ರವಿಯ ಬೆಳಗು,ಆಕಾಶದ ವಿಸ್ತೀರ್ಣ ."ವಚನದಲ್ಲಿ ಹಗಲೇ ಇರಲಿ ಇರುಳೇ ಇರಲಿ,ಸದಾ ಶಿವನನ್ನು ಕಾಣುತ್ತಿದ್ದೇನೆ ಅವನನ್ನು ಪೂಜಿಸುತ್ತಿದ್ದೇನೆ ಎಂಬ ವಿಷಯವನ್ನು ಸರಳ ಪ್ರತಿಮೆಯ ಮೂಲಕ ಹೇಳಿದ್ದಾಳೆ.

ಇತರ ಸಾಹಿತ್ಯ ಕಾವ್ಯಗಳಲ್ಲಿರುವಂತೆ ಅಕ್ಕಮಹಾದೇವಿಯ ವಚನಗಳಲ್ಲಿ ಕಥನಾತ್ಮಕವಾದ ಒಂದು ಕಥೆ ಇಲ್ಲ.ಆದರೆ ಆಕೆಯ ಇಡೀ ವಚನ ರಚನೆಯನ್ನು ನೋಡಿದಾಗ ಹೋರಾಟದ ಕಥೆ ಕಂಡುಬರುತ್ತದೆ. ಮಾನವ ಜೀವನದ ಒಳಹೊರಗುಗಳನ್ನು ಸೂಕ್ಷ್ಮವಾಗಿ ಕಂಡು,ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾಳೆ.ಹೀಗೆ ಅಭಿವ್ಯಕ್ತಿಸಲು ಪ್ರಾಸ ಲಯಗಳಂತಹ ಅನಿಯಮಿತ ಛಂದ ಹೇರಳವಾದ ಅಲಂಕಾರಗಳ ಪ್ರಯೋಗ ಭಾವನಾತ್ಮಕ,ಕಾವ್ಯಾತ್ಮಕ ಪ್ರಸ್ತುತಿಗಳಲ್ಲಿ ಸಾಹಿತ್ಯಕ ಸೌಂದರ್ಯವನ್ನು ಗುರುತಿಸಬಹುದಾಗಿದೆ.

ಪ್ರಕೃತಿ ಸೌಂದರ್ಯ: ಪ್ರಕೃತಿ ಎಂದರೆ ಸಾಮಾನ್ಯವಾಗಿ ಗಿಡ, ಮರ, ಬಳ್ಳಿಗುಡ್ಡ ,ಬೆಟ್ಟ ,ನದ ,ನದಿ, ಹುಲ್ಲುಕಡ್ಡಿ, ಪ್ರಾಣಿ ,ಪಕ್ಷಿ, ಮಳೆ, ಮೋಡ, ಆಕಾಶ, ನಕ್ಷತ್ರ ,ತಾರೆ,ಸೂರ್ಯ, ಚಂದ್ರ ಮೊದಲಾದವು ಕಣ್ಮುಂದೆ ಹಾದು ಹೋಗುತ್ತವೆ.ಇವಲ್ಲದೆ ಪ್ರಕೃತಿಯೆಂರೆ ದೇವರು, ಶಕ್ತಿ, ವಿಶ್ವ ನಿಯಮ, ಸತ್ವ, ಸಕಲ ಜೀವಿಗಳಿಗೆ ಆದಿ ಎಂದೆಲ್ಲ ಔನ್ನತ್ಯಕ್ಕೆರಿಸಲಾಗಿದೆ. ಇಂಥದನ್ನು ಕಾವ್ಯಗಳಲ್ಲಿ ಬಳಸದ ಸಾಹಿತಿಗಳಾದರು ಇಲ್ಲ. ಪ್ರಕೃತಿ ವರ್ಣನೆಯಲ್ಲಿ "ದರ್ಶನಾನುಭೂತಿ" ಮತ್ತು "ಕಲ್ಪನಾನುಭೂತಿ"ಗಳೆಂಬ ಎರಡು ವಿಧಗಳಿವೆ. "ಕವಿ ಪ್ರಕೃತಿಯನ್ನು ನೇರವಾಗಿ ಕಂಡು ಆ ದರ್ಶನವನ್ನು ಒಂದು ಭಾವಗೀತೆಯಲ್ಲಿ ವರ್ಣಿಸುವುದು ದರ್ಶನಾನುಭೂತಿ.. ಯಾವುದೋ ಒಂದು ಸಂದರ್ಭವನ್ನು ಘಟನೆಯನ್ನು ಚಿತ್ರಿಸುವುದಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಳ್ಳುವುದು ಕಲ್ಪನಾನುಭೂತಿ"[8] ಅಕ್ಕಮಹಾದೇವಿ ವಚನಗಳಲ್ಲಿ ಈ ಎರಡು ವಿಧಾನಗಳು ಸ್ಪಷ್ಟವಾಗಿ ಕಂಡುಬರುತ್ತವೆ.

"ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ
ಅಕ್ಕಿ ಅಡಕಿ ಓಲೆ ತೆಂಗಿನ ಕಾಯ ಕಂಡೆ ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆತೆರೆದನು "[9]ವಚನ 12 ಪುಟ 5

ಇಲ್ಲಿ ಅಕ್ಕಮಹಾದೇವಿ ಕನಸಿನ ವಿವರದೊಂದಿಗೆ ಆಧ್ಯಾತ್ಮಿಕ ಭಾವಪೂರ್ಣ ಅನುಸಂಧಾನವಿದೆ. ಮೇಲೆ ಹೇಳಿದ ಡಾ. ಪ್ರಭು ಶಂಕರ ಅವರ ಮಾತಿನಂತೆ ದರ್ಶನಾನುಭೂತಿ, ಕಲ್ಪನಾ ನುಭೂತಿಗಳ ಸಂಗಮವಾದ ವಚನವು ಭಾವಗೀತಾತ್ಮಕತೆಯಿಂದ ಬೆಳಗಿದೆ.

"ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು "ಎಂಬಲ್ಲಿ ನವಿಲು, ಹಂಸ ,ಕೋಗಿಲೆ, ಚಾಮರಗಳನ್ನು ಹೇಳುವುದಲ್ಲದೆ ಅವುಗಳ ಜೀವನ ಕ್ರಮವನ್ನು ಹತ್ತಿರದಿಂದ ಕಂಡು ಹೋಲಿಕೆಗಾಗಿ ಬಳಸಿದ್ದಾಳೆ .

"ಎಳೆ ನಿಂಬೆ, ಮಾವು, ಮೊದಲಕೆ ,ಹುಳಿನೀರನೆರೆದಮಾರಯ್ಯ ?ದಲ್ಲಿ ಹುಳಿ ,ಸಿಹಿ, ಒಗರ ,ಪರಿಮಳಗಳನ್ನು ಅಡಗಿಸಿಟ್ಟಿರುವ ಸೃಷ್ಟಿಯ ವಿಸ್ಮಯಗಳನ್ನು ಇದೆ ವಚನದ ಮುಂದುವರೆದ

[8] ಕನ್ನಡದಲ್ಲಿ ಭಾವಗೀತೆಗಳು ಡಾ.ಪ್ರಭುಶಂಕರ

[9] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವಚನ ೧೨ ಪುಟ ೫

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

ಭಾಗದಲ್ಲಿ ನೆಲ, ಜಲ, ಆಕಾಶಗಳನ್ನು ಒಗ್ಗೂಡಿಸಿವಿಕೆಗೆ ಬಳಸಿದ್ದಾಳೆ. ಸೂರ್ಯ ಪ್ರಕಾಶ ಆಕಾಶದ ವಿಸ್ತೀರ್ಣ ಎಂಬ ವಚನದಲ್ಲಿ ಹಗಲು ಮತ್ತು ಇರುಳಿನ ನೈಸರ್ಗಿಕ ಆಗುಹೋಗುಗಳಿಗೆ ಕಾರಣೀಭೂತವಾದ ಸೂರ್ಯ, ಆಕಾಶ,, ವಾಯು ಚಂದ್ರ, ನಕ್ಷತ್ರ, ಅಗ್ನಿಗಳನ್ನೇ ಆಯಾ ಅವಧಿಯ ಪೂಜೆಗಳೆಂದು ಹೇಳುವ ಮೂಲಕ ಅವು ಸಕಲ ಜೀವ ರಾಶಿಗಳ ಇರುವಿಕೆಗೆ ಕಾರಣವೆಂದು ಸೂಕ್ಷ್ಮತೆ ಅಕ್ಕ ಹೇಳಿದ್ದಾಳೆ.

ಸಹ್ಯಾದ್ರಿಯ ಅಂಚಿನ ತಪ್ಪಲು ಪ್ರದೇಶ, ಮಲೆನಾಡಿನ ಸೆರಗಿನಲ್ಲಿಯ ಉಡತಡಿ ಗ್ರಾಮದ ನಿಸರ್ಗದ ಮಡಿಲಲ್ಲಿ ಅಕ್ಕಮಹಾದೇವಿ ಹುಟ್ಟಿ ಬೆಳೆದವಳು. ಆ ಕಾರಣದಿಂದ ತನ್ನ ವಚನಗಳಲ್ಲಿ ನಿಸರ್ಗ ಸೌಂದರ್ಯವನ್ನು ನಿರರ್ಗಳವಾಗಿ ಬಿಚ್ಚಿಟ್ಟಿದ್ದಾಳೆ ಈ ರೀತಿ ಪ್ರಕೃತಿಗೆ ಪ್ರತಿಸ್ಪಂದಿಸುವ ವಚನಗಳಲ್ಲಿ ಅವಳ ಸಂವೇದನಾಶೀಲಗುಣವು ಕಂಡು ಬರುತ್ತದೆ.

ಶಿವ ಸೌಂದರ್ಯ :ಸತ್ಯಂ ಶಿವಂ ಸುಂದರಂ ಎಂಬ ಮಾತು ಅಕ್ಕಮಹಾದೇವಿ ವಚನಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಹೇಳಿದಂತಿದೆ. ಶಿವನಲ್ಲಿ ಚೆನ್ನಮಲ್ಲಿಕಾರ್ಜುನನಲ್ಲಿ ಸೌಂದರ್ಯವನ್ನು ಮನಗಂಡು ನಿಸರ್ಗ ಸೌಂದರ್ಯದ ಭಾವತೀವ್ರತೆಯಿಂದ ಕಾವ್ಯ ಸೌಂದರ್ಯದ ಎರಕದಲ್ಲಿ ಅಕ್ಷರಗಳನ್ನು ಜೋಡಿಸಿ ವಚನ ಸಾಹಿತ್ಯವನ್ನು ಔನ್ನತ್ಯಕ್ಕೆರಿಸಿದ್ದಾಳೆ. ಅವಳ ಈ ರೀತಿಯ ವಚನ ರಚನೆ, ಜೀವಂತಿಕೆಯನ್ನು ಮೂಡಿಸುವೆ .

" ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ ಎಡೆಯಿಲ್ಲದ ಕಡೆಇಲ್ಲದ ತೆರಹಿಇಲ್ಲದ ಕುರುಹಿಲ್ಲದ ಚೆಲುವಂಗೆ ನಾನೊಲಿದೆ ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆ ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ"[10]

ಇಲ್ಲಿ ಹುಟ್ಟು ಸಾವುಗಳಿಂದ ಮುಕ್ತನಾದ ನಿರ್ಭಯ ನಿರಾಕಾರ ನಿಸ್ಸೀಮನಾದ ಚೆನ್ನಮಲ್ಲಿಕಾರ್ಜುನಿಗೆ ತಾನು ಒಲಿದಿರುವೆನು ಎಂದಿದ್ದಾಳೆ. ನಿರಾಕಾರನಲ್ಲಿ ಸೌಂದರ್ಯವನ್ನು ಕಂಡು ಆರಾಧಿಸಿ ತನ್ನ ಚೆಲುವ ಎಂದು ಸಂಬೋಧಿಸಿ ಆಧ್ಯಾತ್ಮಿಕ ಪತಿಯನ್ನು ಕೊಂಡಾಡಲು ಅಕ್ಕನಂತ ಸಾಧಕರಿಂದ ಮಾತ್ರ ಸಾಧ್ಯ.

"ಹೊಳೆವ ಕೆಂಜಡೆಗಳ ಮಣಿ ಮುಕುಟದ" "ಹೊಳೆವ ಕೆಂಜಡೆಯ ಮೇಲೆ ಎಳೆವೆಳದಿಂಗಳ"
"ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ" "ಎಲ್ಲರ ಗಂಡರ ಶೃಂಗಾರದ ಪರಿಯಲ್ಲ"

ಎಂಬ ಹಲವು ವಚನಗಳಲ್ಲಿ ಚೆನ್ನಮಲ್ಲಿಕಾರ್ಜುನನ ಚಿಕ್ಕಚಿಕ್ಕ ಜಡೆ ,ಕೆಂಜಡೆ ಸುಲಿಪಲ್ಲ ,ದಂಡಮಾಲೆ ಧರಿಸಿದವ, ಕಿವಿಯಲ್ಲಿ ಆವುಗೆ, ಮಣಿ ಮುಕುಟ, ಪಣಿ ಪಣಿ ಕಂಕಣ ಎಂದು ಹೊಗಳಿದ್ದಾಳೆ .ಎಂದು ಲೌಕಿಕ ಮತ್ತು ಪಾರಮಾರ್ಥ ಎರಡಕ್ಕೂ ಚೆನ್ನಮಲ್ಲಿಕಾರ್ಜುನ ಒಬ್ಬನೇ ಗಂಡನೆಂದು "ಗಂಡ ನೀನು ಹೆಂಡತಿಯಾನು ಮತ್ತೊಬ್ಬರಿಲ್ಲಯ್ಯ" ಎಂದು ಸ್ಪಷ್ಟಪಡಿಸಿದ್ದಾಳೆ.
ಲೋಕದ ಪತಿಯನ್ನೇ ತನ್ನ ಪತಿಯೆಂದು ಅಕ್ಕಮಹಾದೇವಿ ಅವನ ಅಗಲಿಕೆಯ ವಿರಹವನ್ನು "ಚಿಲಿಮಿಲಿ ಎಂದು ಓದುವ ಗಿಳಿಗಳಿರಾ"
"ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು" ಗಳಲ್ಲಿ ಹಸಿವು ತೃಷೆ ನಿದ್ರೆಗಳನ್ನು ತೊರೆದಿರುವುದಾಗಿ ತನ್ನ ಅವಸ್ಥೆಯನ್ನು ಬಿಚ್ಚಿಟ್ಟಿದ್ದಾಳೆ.

ಅಕ್ಕಮಹಾದೇವಿ ಚಾರಿತ್ರಿಕ ಆಧಾರಗಳ ಮೂಲಕ ವೀಕ್ಷಿಸಿದಾಗ ಆಕೆ ತಾರುಣ್ಯಾವಸ್ಥೆಗೆ ಕಾಲಿಡುವ ಮೊದಲೇ ಅನುಭಾವಿಕ ನೆಲೆಯನ್ನೇರಿದ ಆಧ್ಯಾತ್ಮಿಕ ಸಾಧಕಿಯಾಗಿದ್ದಳು. ಶಿವನಲ್ಲಿ ನಿಷ್ಕಾಮ ಪ್ರೇಮ ಹೊಂದಿದ ಅವಳು ಭಕ್ತಿ ವೈರಾಗ್ಯಗಳ ಮೂಲಕ ಒಂದಾದವಳು. ಇದಕ್ಕೆ ಬಲವರ್ಧಕಗಳಾಗಿ ಆಕೆಯ ವಚನಗಳು ಚೆನ್ನಮಲ್ಲಿಕಾರ್ಜುನನನ್ನು ಪತಿಯೆಂದು ವರೆಸಿದ ಅವನ ಸುಂದರತೆಯನ್ನು ಹೊಗಳಿ ಅವನಿಗೆ ಪರಿತಪಿಸಿ ಅವನಲ್ಲಿ ಒಂದಾದದನ್ನು ಮಾರ್ಮಿಕವಾಗಿ ಚಿತ್ರಿಸುವ ಹಲವು ವಚನಗಳಿವೆ.

ಗ್ರಂಥ ಋಣ

[10] ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ ವ□ □ ೨೮೯ □ □ □ □ □ □

Journal of Research and Development
A Multidisciplinary International Level Referred and Double Blind Peer Reviewed, Open Access
ISSN: 2230-9578 | Website: https://jrdrvb.orgVolume-18, Issue-5(IV)| May - 2026

೧.ಶಿವಶರಣೆಯರ ವಚನ ಸಂಪುಟ– ೫ ಸಂ ಡಾ.ವೀರಣ್ಣ ರಾಜೂರ
೨. ಕನ್ನಡದಲ್ಲಿ ಭಾವಗೀತೆಗಳು ಡಾ.ಪ್ರಭುಶಂಕರ